ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಶ್ರೀನಿವಾಸಮೂರ್ತಿ ಪಿ.

ಮಾರ್ಗದರ್ಶಕರು
ಡಾ. ಸಿ.ಟಿ. ಗುರುಪ್ರಸಾದ್
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276

೨೦೧೭

087

ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಶ್ರೀನಿವಾಸಮೂರ್ತಿ ಪಿ.

ಮಾರ್ಗದರ್ಶಕರು
ಡಾ. ಸಿ.ಟಿ. ಗುರುಪ್ರಸಾದ್
ಸಹ ಪ್ರಾಧ್ಯಾಪಕರು

ಸಮಾಜ-ವಿಜ್ಞಾನ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀನಿವಾಸಮೂರ್ತಿ ಪಿ. ಇವರು ಸಾದರಪಡಿಸಿದ **"ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ"** ಎಂಬ ಶೀರ್ಷಿಕೆಯ ಈ ಪಿಎಚ್.ಡಿ. ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಈ ಮಹಾಪ್ರಬಂಧವು ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ.ಸಿ.ಟಿ. ಗುರುಪ್ರಸಾದ್
ಸಹ ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :

ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

"ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ" ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಮಾರ್ಗದರ್ಶಕರಾದ ಡಾ.ಸಿ.ಟಿ. ಗುರುಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸುತ್ತಿದ್ದೇನೆ.

ಪ್ರಸ್ತುತ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ಶ್ರೀನಿವಾಸಮೂರ್ತಿ ಪಿ.

ಶ್ರೀನಿವಾಸಮೂರ್ತಿ ಪಿ.
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 27.09.2017

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ, ಮತ್ತು ತತ್ವ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ತತ್ವ

ಪ್ರಸ್ತಾವನೆ

ಜನಪದ ಮಹಾಕಾವ್ಯಗಳಲ್ಲಿ ಹಸಿವನ್ನು ಅಧ್ಯಯನದ ವಸ್ತುವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಶತಶತಮಾನಗಳ ಹಿಂದಿನಿಂದ ರೂಪುಗೊಂಡ ಈ ಜನಪದ ಮಹಾಕಾವ್ಯಗಳಲ್ಲಿ ಅನಾವರಣಗೊಳಿಸಲಾಗಿರುವ ಹಸಿವು ಮತ್ತು ಬಡತನದ ಧಾರುಣ್ಯತೆಯು ಮಿಥ್ಯಾತ್ಮಕವಾಗಿರದೆ ತಥ್ಯಾತ್ಮಕವಾಗಿ ಇಂದಿಗೂ ನಮ್ಮ ಜನಪದರು ಹಳ್ಳಿಗಳಲ್ಲಿ ಅನುಭವಿಸುತ್ತಿದ್ದಾರೆ. ಪ್ರಸ್ತುತವಾಗಿ ತ್ರಿಕರಣಗಳ ಅರ್ಧಶತಕ ಕಳೆದರೂ ಗ್ರಾಮಗಳಲ್ಲಿನ ಜನಪದರ ಹಸಿವು, ರೋಗ, ದಾಹ, ನರಳಾಟ, ದಾರಿದ್ರ್ಯ, ಬಡತನ, ಕಿತ್ತೊಗೆಯಲು ಸಾಧ್ಯವಾಗುತ್ತಿಲ್ಲ. ಇಂದಿಗೂ ಹಸಿವು ತಾಜಾ ಜೀವಂತಿಕೆಯಿಂದ ಕೂಡಿದೆ. ನಮ್ಮ ಜನಪದ ಮಹಾಕಾವ್ಯಗಳಲ್ಲಿ ಬೇರೆ ಬೇರೆ ಮಜಲುಗಳಲ್ಲಿ ಹಸಿವಿನ ಕಥಾನಕಗಳು ಪಡಿಮೂಡಿರುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದು ಅವುಗಳಿಗೆ ಪರಿಹಾರೋಪಾಯವನ್ನು ಕೂಡ ಸಂಶೋಧನೆ ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಜಾನಪದ ಜಾಗತಿಕ ಮಟ್ಟದಲ್ಲೇ ಮಹತ್ವದ ಸ್ಥಾನ ಪಡೆಯುತಿದೆ. ಇದಕ್ಕೆ ಕಾರಣ ಜಾಗತೀಕರಣದಂತ ಆಧುನಿಕ ಪ್ರಕಾರಗಳಿಂದ ಪ್ರತಿಯೊಂದು ರಾಷ್ಟ್ರವು ತನ್ನದೇ ಆದ ತವಕ-ತಲ್ಲಣಗಳನ್ನು ಅನುಭವಿಸುತ್ತಿದ್ದು ಅದರಲ್ಲಿ ಕೆಲವು ರಾಷ್ಟ್ರಗಳಿಗೆ ಅಸ್ತಿತ್ವ' ಸಾಧಿಸುವ ಅನಿವಾರ್ಯತೆಯಿದ್ದರೆ; ಮತ್ತೆ ಕೆಲವು ರಾಷ್ಟ್ರಗಳಿಗೆ ಅನನ್ಯತೆಯನ್ನು ತೋರ್ಪಡಿಸುವ ಅವಶ್ಯಕತೆಯಿದೆ. ಅದಕ್ಕೆ ಬೇಕಾದ ಸಮರ್ಥ ಶಕ್ತಿ ಪ್ರಸ್ತುತ ಸಮಾಜದಲ್ಲಿ ನಿಚ್ಚಳವಾಗಿ ಕಾಣುತ್ತಿಲ್ಲ. ಹಾಗಾದರೆ ಜಾಗತಿಕ ರಾಷ್ಟ್ರಗಳು ತಮ್ಮ ಅಸ್ತಿತ್ವಕ್ಕೆ ಬೇಕಾದ ಇತಿಹಾಸದ ಬೇರುಗಳನ್ನು, ಅನನ್ಯತೆಗೆ ಬೇಕಾಗಿರುವ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಇಂತಹ ಗುರುತಿಸುವಿಕೆಗೆ ಇರುವ ಮೂಲಮಾತೃಕೆ ಜಾನಪದ' ಆಗಿದೆ ಎಂಬುದು ಗಮನಾರ್ಹ ಸಂಗತಿ. ವಿಶೇಷವೆಂದರೆ ಇಂತಹ ಆಧುನಿಕ ದೃಷ್ಟಿಗೆ ಜಾನಪದದ ಎಲ್ಲ ಪ್ರಕಾರಗಳು ಮಹತ್ವವಾಗಿ ಕಾಣುವುದಿಲ್ಲ. ಬದಲಿಗೆ ಕೆಲವು ಪ್ರಕಾರಗಳು

ಮಾತ್ರ ಮುಖ್ಯವಾಗುತ್ತವೆ. ಈ ದೃಷ್ಟಿಯಿಂದ 'ಜನಪದ ಮಹಾಕಾವ್ಯ' ಅಪಾರವಾದ ಜನಪ್ರಿಯತೆ ಗಳಿಸುತ್ತಿರುವುದನ್ನು ಕಾಣಬಹುದು.

'ಜನಪದ ಮಹಾಕಾವ್ಯದ ಮತ್ತೊಂದು ವಿಶೇಷವೆಂದರೆ, ಇದು ಅಧ್ಯಯನಕಾರರ ದೃಷ್ಟಿಯಿಂದ ಮಾತ್ರ ಮುಖ್ಯವಾಗದೆ; ಇದನ್ನು ಕಟ್ಟಿ ಹಾಡುತ್ತಿರುವ ಶ್ರೀಸಾಮಾನ್ಯರ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಇದಕ್ಕಿರುವ ಪ್ರಮುಖ ಕಾರಣವೆಂದರೆ ಜನಪದ ಮಹಾಕಾವ್ಯದ ಸಂಸ್ಕೃತಿನಿಷ್ಠತೆ. ಜಾನಪದದ ಯಾವುದೇ ಪ್ರಕಾರಗಳಿಗೆ ಇಲ್ಲದಷ್ಟು ಸಂಸ್ಕೃತಿಯೊಂದಿಗಿನ ಸಂಬಂಧ ಜನಪದ ಮಹಾಕಾವ್ಯಗಳಿಗಿರುವುದನ್ನು ಸುಲಭವಾಗಿ ಗುರುತಿಸಬಹುದು. ಇದರಿಂದ ಭವಿಷ್ಯ ಚಿಂತನೆಯ ಚಿಂತಕರಿಗೆ ಪರ್ಯಾಯತೆಗಳ ಪ್ರಬಲ ತಾಣವಾಗಿ, ಜನಸಮುದಾಯಗಳಿಗೆ ಆತ್ಮಗೌರವದ ಸಂಕೇತವಾಗಿ ಜನಪದ ಮಹಾಕಾವ್ಯ ಕಾಣಿಸುತ್ತಿದೆ. ಹಾಗಾಗಿಯೇ ಜನಪದ ಮಹಾಕಾವ್ಯಗಳನ್ನು ಕುರಿತು ಗಂಭೀರ ಅಧ್ಯಯನಗಳನ್ನು ನಡೆಸುವ ದಿಕ್ಕಿನಲ್ಲಿ ಇಂದಿನ ಶಿಸ್ತುಗಳು ಮುಖಮಾಡಿವೆ. ಈ ದೃಷ್ಟಿಯಿಂದ ಇಲ್ಲಿ 'ಕನ್ನಡ ಜನಪದ ಮಹಾಕಾವ್ಯ'ಗಳನ್ನು ಕುರಿತಂತೆ ಸೈದ್ಧಾಂತಿಕ ಅಧ್ಯಯನ ನಡೆಸುವ ಪ್ರಯತ್ನ ಇದಾಗಿದೆ. ನನ್ನ ಅಧ್ಯಯನದ ಮುಖ್ಯ ಸಮಸ್ಯೆ 'ಹಸಿವು'ಆಗಿರುವುದರಿಂದ ಇದರ ಉದ್ದೇಶ ಮತ್ತು ವ್ಯಾಪ್ತಿಯನ್ನು ಪ್ರಮುಖ ಅಂಶಗಳೊಂದಿಗೆ ಇಲ್ಲಿ ಸೂಚಿಸುತ್ತೇನೆ. ನನ್ನ ಆಯ್ಕೆಯ ಸಮಸ್ಯೆ 'ಹಸಿವು'ಆಗಿರುವುದರಿಂದ ಅದು ನಮ್ಮ ಮೌಖಿಕ ಮಹಾಕಾವ್ಯಗಳಲ್ಲಿ ಹೇಗೆ ಅನಾವರಣಗೊಂಡಿದೆ ಎಂಬುವುದನ್ನು ತಿಳಿಸುವುದ್ದಾಗಿರುತ್ತದೆ. ಪ್ರಾಚೀನ ಜನಪದರ ಎಲ್ಲಾ ತಲ್ಲಣಗಳು, ತಳಮಳಗಳು ಇವತ್ತಿನ ನಮ್ಮ ಆಧುನಿಕ ಜನಸಮುದಾಯಗಳ ಸಮಸ್ಯೆಗಳಾಗಿವೆ. ಈ ನೆಲೆಯಲ್ಲಿ ನನ್ನ ಅಧ್ಯಾಯನವನ್ನು ಕೈಗೊಳ್ಳಲಾಗುತ್ತದೆ.

ಅಧ್ಯಯನದ ಉದ್ದೇಶ

೧. ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ನಿರ್ವಚನ, ನಿರೂಪಣೆಯನ್ನು ಕುರಿತಾಗಿ ಚರ್ಚಿಸಲಾಗುವುದು. ಅಲ್ಲದೆ ಜನಪದ ಸಮಾಜದಲ್ಲಿ ಹಸಿವಿನ ಸ್ವರೂಪಗಳೇನು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿವರಿಸುವುದು.

೨. ಹಸಿವಿನ ಪರಿಕಲ್ಪನೆಯು ವಿಸ್ತೃತರೂಪವನ್ನು ಜನಪದರಲ್ಲಿ ಕಾಣುವುದರಿಂದ ಹಸಿವಿನ ಜೀವಂತಿಕೆಗೆ ಪ್ರೇರಕವಾದ ಆಕರಗಳನ್ನು ವಿವರಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೩. ಶ್ರೀಸಾಮಾನ್ಯರು, ಅಬಲೆಯರು, ಶಿಶುಗಳು, ಸಾಮಾಜಿಕ ಸ್ಥಿತಿಗತಿಯಲ್ಲಿ ಹಸಿವಿನಿಂದ ಬಳಲುವ ಪ್ರಸಂಗಗಳು ಕಾವ್ಯಗಳಲ್ಲಿ ವ್ಯಕ್ತವಾಗುತ್ತವೆ. ಆದರೆ ಹಸಿವಿನ ಜರ್ಜರತೆಯು ಶ್ರೀಸಾಮಾನ್ಯರನ್ನು ದಾಸ್ಯಕ್ಕೆ, ಜೀತಕ್ಕೆ ಗುರಿ ಮಾಡಲಾಗಿದೆ. ಇಂತಹ ಆಚರಣೆಗಳಿಗೆ

ಮೂಲ ಪ್ರೇರಕ ಹಸಿವೆಯಿದ್ದು, ಆದ್ದರಿಂದ ಹಸಿವಿನ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಯುವುದು ಪ್ರಮುಖ ಉದ್ದೇಶವಾಗಿದೆ.

೪. ಹಸಿವು ಒಂದು ವಾಸ್ತವವಾದುದು. ಇನ್ನೊಂದು ಅಮೂರ್ತವಾದುದು. ಈ ಎರಡರ ನಡುವಣ ಮನುಷ್ಯನ ಬದುಕಿನ ಸ್ಥಿತಿಗತಿಯನ್ನು ಹಸಿವು ಒಳಗೊಂಡಿರುತ್ತದೆ.

ಮೌಖಿಕ ಕಾವ್ಯಗಳಲ್ಲಿ ತಳ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಂತಾಗಿದೆ. ತಳಸಮುದಾಯಗಳು ಪ್ರಾಚೀನ ಕಾಲದಿಂದ ಸುಧೀರ್ಘವಾಗಿ ಮೌಖಿಕ ಭಾಷೆಯಲ್ಲಿ ಉಳಿಸಿಕೊಂಡು ಬಂದಿದೆ. ಸಮಾಜದಲ್ಲಿ ಅಂಚಿನ ಆಲಕ್ಷಿತ ದಲಿತ ಮತ್ತು ತಳಸ್ತರ ಜನಾಂಗಗಳ ಬದುಕು- ಬವಣೆಯಲ್ಲಿನ ಪಲ್ಲಟಗಳನ್ನು ಹುಡುಕುವುದು. ಬಹುಮುಖ್ಯವಾಗಿ ಹೇಳಬೇಕೆಂದರೆ ಮೌಖಿಕ ಕಾವ್ಯಗಳ ಸಾಂಸ್ಕೃತಿಕ ಅಧ್ಯಯನ ಸರಳವಲ್ಲ. ಬಹುವಿಸ್ತಾರವಾದದ್ದು. ಇಲ್ಲಿ ಒಂದು ಸಮುದಾಯದ ಜೀವನವನ್ನು ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಮೊದಲು ಸಮಸ್ಯೆಗಳು ಮತ್ತು ಪ್ರಶ್ನೆಗಳನ್ನು ಹಾಕಿಕೊಳ್ಳುವುದು ಮುಖ್ಯ. ನನ್ನ ಅಧ್ಯಯನದ ವಿಷಯ "ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ" ಎಂಬುವುದು. ಅಂದರೆ ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಧಾರುಣತೆಯನ್ನು ಹುಡುಕುವುದು. ಮತ್ತೆ ಇವತ್ತಿನ ಜಾಗತಿಕ ಹಸಿವಿಗೆ ಕಾರಣ, ಪರಿಹಾರಗಳನ್ನು ಕಂಡುಕೊಳ್ಳುವುದರ ಬಗ್ಗೆ ನನ್ನ ಅಧ್ಯಯನ.

ನನ್ನ ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಅಂತರ್ ಜಾಲದ ಮೂಲಕ ಸಂಗ್ರಹಿಸುವುದು. ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ವಿದ್ವಾಂಸರ ಜೊತೆ ಚರ್ಚೆಯನ್ನು ಕೈಗೊಳ್ಳುವುದು, ಈ ಒಂದು ಕ್ರಮಕ್ಕೆ ಕ್ಷೇತ್ರಕಾರ್ಯ ಬೇಕಾಗುತ್ತದೆ. ಭಾವಚಿತ್ರಗಳು, ದಾಖಲೆಗಳ ಸಂಗ್ರಹಣೆ, ಇತ್ಯಾದಿ ಮೂಲಕ ಮಾಹಿತಿ ಸಂಗ್ರಹ ಮಾಡುವುದಕ್ಕೆ ಕ್ಷೇತ್ರಕಾರ್ಯ ಬೇಕಾಗುತ್ತದೆ. ಬಹಳ ಮುಖ್ಯವಾಗಿ ನನ್ನ ಅಧ್ಯಯನಕ್ಕೆ ಬೇಕಾಗಿರುವುದು ಜನಪದ ಮಹಾಕಾವ್ಯಗಳ ಸಂಗ್ರಹ ಆಧಾರವಾಗಿದೆ. ನನ್ನ ಅಧ್ಯಯನದ ಶೀರ್ಷಿಕೆಗೆ ಮೂಲ ಆಕರಗಳು ಜನಪದ ಮಹಾಕಾವ್ಯಗಳು. ಈ ಕೃತಿಗಳನ್ನು ಮೂಲವಾಗಿ ಬಳಸಿಕೊಂಡು ಹಸಿವಿನಧಾರುಣತೆಯನ್ನು ಕಂಡುಕೊಳ್ಳುವುದು. ತಾತ್ವಿಕ ವಿಧಾನಗಳ ಮೂಲಕ ವಿಶ್ಲೇಷಣೆ, ವಿವರಣೆ ಹುಡುಕುವಂತ ಪ್ರಯತ್ನ ಇದಾಗಿದೆ. ಜನಪದ ಮಹಾಕಾವ್ಯ ಎನ್ನುವ ಅಂತರ್ ಶಿಸ್ತಿಯ ಅಧ್ಯಯನ ವಿಧಾನದಲ್ಲಿ ಬಹುಶಿಸ್ತಿಯ ಕ್ರಮದಿಂದ ನೋಡುವಂತದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ್ದು ಅಧ್ಯಯನಕ್ಕೆ ಪೂರಕವೆನಿಸಿದ ಪಠ್ಯಗಳನ್ನು ಆಯ್ದುಕೊಂಡಿದೆ. ಮಲೆಮಾದೇಶ್ವರ, ಜುಂಜಪ್ಪ, ಮಂಟೇಸ್ವಾಮಿ, ಮೈಲಾರಲಿಂಗನ

ಕಾವ್ಯಗಳಲ್ಲಿ ಹಸಿವಿನ ಪರಿಕಲ್ಪನೆಗೆ ಸಂಬಂಧಿಸಿದಂತೆ ಚಿತ್ರಣ ಅಥವಾ ಕಥಾ ಆಶಯವನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವು 'ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಸಂಕಥನ' ಎಂಬ ಅಧ್ಯಯನ ವಿಷಯವು ಜಾನಪದ ಅಧ್ಯಯನವಾಗಿದೆ. ಆದರೆ ಸಾಹಿತ್ಯಾತ್ಮಕ ಆಕರಗಳಿಂದ ಜನಪದ ಸಮಾಜದಲ್ಲಿರುವ ಹಸಿವಿನ ಸ್ವರೂಪತೆಯನ್ನು ಅರಿಯಲಾಗುವುದು. ಈ ಹಸಿವಿನ ಪರಿಕಲ್ಪನೆಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿರುವ ಗ್ರಹಿಕೆಗಳು ಸಮಾಜದಲ್ಲಿ ಇವೆ. ಈ ಎಲ್ಲಾ ಕ್ಷೇತ್ರಗಳು ಹಸಿವನ್ನು ಹೇಗೆ ಪರಿಭಾವಿಸಿಕೊಂಡಿವೆ ಅಥವಾ ಹಸಿವು ಮುಕ್ತರಾಗಲು ಜನಪದರು ಅನುಸರಿಸಿದ ಮಾರ್ಗ ಯಾವುದಾಗಿದೆ ಈ ಸವಿಸ್ತಾರತೆಯನ್ನು ಪಡೆದುಕೊಂಡಿರುವ ಹಸಿವು ಸಂಕ್ಷಿಪ್ತವಾದುದ್ದಲ್ಲ, ಹಾಗಾಗಿ ಈ ಪ್ರಸ್ತುತ ಅಧ್ಯಯನವು ಬಹುಶಿಸ್ತೀಯ ಅಧ್ಯಯನ ನೆಲೆಗಳನ್ನು ಅಳವಡಿಸಿಕೊಂಡಿದೆ.

ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ನಿರೂಪಣೆ ಹಾಗೂ ವರ್ತಮಾನ ಸಮಾಜದಲ್ಲಿ ತಾಂಡವಾಡುತ್ತಿರುವ ಬಡತನ, ನಿರುದ್ಯೋಗ, ಅಲೆಮಾರಿ ಬದುಕು ಇವುಗಳೆಲ್ಲಾ ಒಂದಕ್ಕೊಂದು ಸಾಮೀಪ್ಯವನ್ನು ಹೊಂದಿದ್ದು, ಅವುಗಳ ವಿವರಣಾತ್ಮಕ, ವಿಶ್ಲೇಷಣಾತ್ಮಕ ಮತ್ತು ಪ್ರಾಥಮಿಕ ಆಕರಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಇದುವರೆಗಿನ ಅಧ್ಯಯನದ ಸಮೀಕ್ಷೆ

ಪರಂಪರೆಯನ್ನು ಕನ್ನಡ ಅಧ್ಯಯನ ಸಂದರ್ಭದಲ್ಲಿ ಸುಮಾರು ಆರೇಳು ದಶಕದಿಂದಲೂ ಅಧ್ಯಯನ ಮಾಡಿಕೊಂಡು ಬರಲಾಗಿದೆ. ಮೌಖಿಕ ಪರಂಪರೆಯ ಸಾಹಿತ್ಯ ಪ್ರಕಾರಗಳೆಲ್ಲವನ್ನು ಪಶ್ಚಿಮದವರು ಹಾಕಿದ ದಾರಿಯಲ್ಲೇ ನಾವು ಸಂಗ್ರಹ ಮಾಡಿಕೊಂಡು ಬಂದಿದ್ದೇವೆ. ಕಾವ್ಯಗಳು, ಕಥನಗೀತೆಗಳು, ವೀರ ಗೀತೆಗಳು, ಐತಿಹ್ಯ, ಲಾವಣಿ, ಗಾದೆಗಳು ಮತ್ತು ಒಗಟು ಒಡಪುಗಳನ್ನು ಸಂಗ್ರಹಿಸಿಕೊಂಡು ಬರಲಾಗಿದೆ. ಶಿಷ್ಟಸಾಹಿತ್ಯ ಮತ್ತು ಪಾಮರ ಸಾಹಿತ್ಯವೆಂದು ಗುರುತಿಸಿದ ಮೌಖಿಕ ಪರಂಪರೆ ಮಾನವನ ಚಾರಿತ್ರಿಕವನ್ನು ತಿಳಿಸುತ್ತದೆ ಎಂದು ತೀರಾ ಇತ್ತೀಚಿನ ಮಾನವಶಾಸ್ತ್ರಜ್ಞರು ಗುರುತಿಸಿದರು. ಮೌಖಿಕ ಸಾಹಿತ್ಯವು ಮಾನವನ ಪ್ರತಿಯೊಂದು ಹಂತದಲ್ಲಿ ಚಾರಿತ್ರಿಕ, ಸಾಮಾಜಿಕ, ವಿಕಾಸವನ್ನು ತಿಳಿಸುತ್ತದೆ. ಮಲೆಮಾದೇಶ್ವರ, ಮಂಟೇಸ್ವಾಮಿ, ಮತ್ತು ಜುಂಜಪ್ಪನ ಕಾವ್ಯಗಳು, ಸಾಮಾಜಿಕ ವಲಯದ ತೀರಾ ಕೆಳಸ್ತರದ ಜನರ ಬದುಕು ಕ್ರಮವನ್ನು ಪ್ರಧಾನವಾಗಿ ಬಿಂಬಿಸುತ್ತವೆ. ಈ ದೃಷ್ಟಿಯಿಂದ ಮೌಖಿಕ ಸಾಹಿತ್ಯಕ್ಕೆ ಬಹಳ ಮಹತ್ವವಿದೆ ಎಂದು ಹೇಳಬಹುದು.

ಜನಪದ ಮಹಾಕಾವ್ಯಗಳನ್ನು ಕುರಿತಂತೆ ನಡೆಸುತ್ತಿರುವ ಈ ಅಧ್ಯಯನಕ್ಕೆ ಸುಮಾರು ಮೂವತ್ತು ವರ್ಷಗಳ ಹಿಂದಿನ ಅಧ್ಯಯನಗಳ ಹಿನ್ನಲೆಯಿದೆ. ಹಾಗಾಗಿ ಇಲ್ಲಿನ ಆರಂಭಕ್ಕೆ 'ಕನ್ನಡ ಜನಪದ ಮಹಾಕಾವ್ಯ' ಕುರಿತಂತೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡುವುದು ಸೂಕ್ತ. ಆರಂಭದಲ್ಲಿ ಮತಿಘಟ್ಟ ಕೃಷ್ಣಮೂರ್ತಿಯವರು 'ಏಳು ಕೊಳ್ಳದ ಎಲ್ಲಮ್ಮ' ಎಂಬ ಕಾವ್ಯವನ್ನು ಸಂಗ್ರಹಿಸಿರುವುದು ತಿಳಿದುಬರುತ್ತದೆ. ಆ ಕೃತಿಯಲ್ಲಿ ಸವದತ್ತಿ ಎಲ್ಲಮ್ಮನನ್ನು ಕುರಿತಂತೆ ಕೆಲವು ಪ್ರಾಥಮಿಕ ವಿವರಗಳು ಲಭ್ಯವಿವೆ. ಇದರ ನಂತರ ಜಿ.ಶಂಪ ಅವರು ಮಹಾಕಾವ್ಯಗಳ ಅಧ್ಯಯನಕ್ಕೆ ನಾಂದಿ ಹಾಡಿದರೆಂದೇ ಹೇಳಬೇಕು ಅವರು ೧೯೭೭ರಲ್ಲಿ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು'ಎಂಬ ಪಿ.ಎಚ್.ಡಿ ಮಹಾಪ್ರಬಂಧವನ್ನು ಬರೆದರು. ಅದರಲ್ಲಿ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಎಲ್ಲಮ್ಮ ಅವರುಗಳನ್ನು ಕುರಿತಂತೆ ಹಾಡುವ ಹಾಡುಗಳನ್ನು ಹೇಳುವ ಕಥೆಗಳನ್ನು ಸಂಗ್ರಹಿಸಿ, ಅವುಗಳನ್ನು 'ಕಾವ್ಯಸಂಪ್ರದಾಯ' ಗಳೆಂದು ಗುರುತಿಸಿದರು. 'ಜನಪದ ಮಹಾಕಾವ್ಯ' ಎಂಬ ಪರಿಭಾಷೆ ಆಗಿನ್ನೂ ಬಳಕೆಗೆ ಬಂದಿಲ್ಲದಿರುವುದು ಸ್ಪಷ್ಟವಾಗುತ್ತದೆ. ಆದರೂ 'ಕಾವ್ಯ ಸಂಪ್ರದಾಯ'ಎನ್ನುವ ಹೆಸರಿನಲ್ಲೇ ಸಾಂಸ್ಕೃತಿಕ ನಾಯಕ-ನಾಯಕಿಯರ ಕುರಿತು ಕಾವ್ಯಗಳ ವಿಭಿನ್ನ ಪಠ್ಯಗಳನ್ನು ಸಂಗ್ರಹಿಸಿ, ಜೊತೆಗೆ ಇತರೆಯವರು ಸಂಗ್ರಹಿಸಿದ ಪಠ್ಯಗಳನ್ನು ಆಧಾರವಾಗಿಟ್ಟುಕೊಂಡು ಸಂಪ್ರದಾಯಗಳ ಮೂಲ, ಬೆಳವಣಿಗೆ ಹಾಗೂ ಸ್ವರೂಪಗಳನ್ನು ಕುರಿತಂತೆ ಸಾರ್ಥಕವೆನಿಸುವ ಅಧ್ಯಯನ ನಡೆಸಿದ್ದಾರೆ. ಇದು ಮುಂದಿನ ಅಧ್ಯಯನಕಾರರಿಗೆ ಮಹತ್ವದ ಆಕರಗ್ರಂಥವಾಗಿದೆ.

ಜೀ.ಶಂಪ ಅವರು ಸಂಶೋಧನೆ ನಡೆಸಿದ್ದ ಕಾಲಕ್ಕೆ ಮತ್ತೊಂದೆಡೆ ತೀ.ನಂ ಶಂಕರನಾರಾಯಣ ಅವರು 'ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು' ಎಂಬ ವಿಷಯದ ಮೇಲೆ ಸಂಶೋಧನೆ ಕೈಗೊಂಡಿದ್ದರು. ಆಗ ಜುಂಜಪ್ಪನ ಪುರಾಣವನ್ನು ಗದ್ಯ ರೂಪದಲ್ಲಿ ಸಂಗ್ರಹಿಸಿದರು. ಅದು ಉತ್ತರ ಸಂಪ್ರದಾಯ ಎಂದು ಪ್ರಸಿದ್ಧಿ ಪಡೆದಿದೆ. ಹಾಗೆಯೇ ಎತ್ತಯ್ಯ, ಚಿತ್ರದೇವರು, ಕಾಟಮುದೇವರು ಇವೇ ಮೊದಲಾದ ಪುರಾಣಗಳನ್ನು ಸಂಗ್ರಹಿಸಿ, ಅವುಗಳನ್ನು ತಮ್ಮ ಪಿಎಚ್.ಡಿ ಮಹಾಪ್ರಬಂಧದಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾರೆ. ಇಲ್ಲಿ ಜುಂಜಪ್ಪ ಪುರಾಣದ ಪಠ್ಯವನ್ನು ಇತಿಹಾಸಿಕ ಹಾಗೂ ವಿವರಣಾತ್ಮಕ ವಿಧಾನಗಳಿಂದ ವಿವರಿಸಿರುವುದು ಕಂಡುಬರುತ್ತದೆ. ಈ ಪ್ರಯತ್ನದ ನಂತರ ಜೀಶಂಪ ಅವರು ಮತ್ತೆ ಮಂಟೇಸ್ವಾಮಿ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕಾವ್ಯ ಸಂಗ್ರಹ ಕೃತಿಗೆ ಅಧ್ಯಯನ ಯೋಗ ಮುನ್ನುಡಿಯೊಂದನ್ನು ಬರೆದಿದ್ದು, ಕಾವ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ವಿಚಾರಗಳನ್ನು ಹೇಳಲಾಗಿದೆ. ಹಾಗೆಯೇ ಪಿ.ಕೆ. ರಾಜಶೇಖರ್ ಅವರು ಮಾದೇಶ್ವರ ಕಾವ್ಯವನ್ನು ವಿವಿಧ ಗಾಯಕರು ಹಾಡಿದ ಪಠ್ಯಗಳಲ್ಲಿ ಸೂಕ್ತವೆನಿಸಿದ ಭಾಗಗಳನ್ನು ಆಯ್ಕೆಮಾಡಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಈ ಕಾವ್ಯಸಂಗ್ರಹಕ್ಕೂ ಅವರು ಮಹತ್ವಪೂರ್ಣ ಮುನ್ನುಡಿಯನ್ನು ಬರೆದಿದ್ದಾರೆ. ಕನ್ನಡ

ಜನಪದ ಮಹಾಕಾವ್ಯಗಳ ಅಧ್ಯಯನದ ಇತಿಹಾಸದಲ್ಲಿ ಮೇಲಿನ ಎರಡು ಕಾವ್ಯಗಳ ಮುನ್ನುಡಿಗಳಿಗೆ ಪ್ರಮುಖ ಸ್ಥಾನವಿದೆ. ವಿಶೇಷವೆಂದರೆ 'ಜನಪದ ಮಹಾಕಾವ್ಯ' ಎಂಬ ಪರಿಭಾಷೆ ಜೀಶಂಪ ಹಾಗೂ ಪಿ.ಕೆ.ರಾಜಶೇಖರ್ ಅವರು ಸೇರಿ ಸಂಗ್ರಹಿಸಿರುವ ಜನಪದ ಬಸವಪುರಾಣ, ಜನಪದ ಮಹಾಭಾರತ, ಜನಪದ ರಾಮಾಯಣ' ಕಾವ್ಯಗಳು ಪ್ರಕಟಗೊಂಡಿವೆ.

ಈ ಪ್ರಯತ್ನಗಳ ನಂತರ ಎಂ.ಬಿ. ನೇಗಿನಾಳ, ಚಕ್ಕೆರೆ ಶಿವಶಂಕರ್ ಅವರು ಸಂಗ್ರಹಿಸಿರುವ ಮೈಲಾರ ಲಿಂಗನ ಕಾವ್ಯಗಳು ಮಹತ್ವದ ದಾಖಲಾಗಿವೆ. ಒಟ್ಟಾರೆ, ೧೯೭೦-೧೯೯೦ರ ಕಾಲಾವಧಿಯಲ್ಲಿ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ನಡೆದ ಮಹತ್ವದ ಅಧ್ಯಯನಗಳಿವು. ೧೯೯೦ರ ನಂತರ ಜನಪದ ಅಧ್ಯಯನದ ಪ್ರಮುಖ ಗಮನ 'ಜನಪದ ಮಹಾಕಾವ್ಯ'ಗಳ ಕಡೆಗೆ ಹರಿದಿದೆ. ಇಲ್ಲಿ ಮೊದಲಿಗೆ ಉಲ್ಲೇಖಿಸಬಹುದಾದ ಅಧ್ಯಯನವೆಂದರೆ– ಬಿ.ಎಸ್. ಸ್ವಾಮಿಯವರ 'ಮಲೆಯ ಮಾದೇಶ್ವರ: ಒಂದು ಅಧ್ಯಯನ' ಪಿಎಚ್.ಡಿ ಪದವಿಗಾಗಿ ಬರೆದ ಈ ಸಂಶೋಧನಾ ಕೃತಿ ಜನಪದ ಮಹಾಕಾವ್ಯವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದ ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಲ್ಲಿ ಮಲೆಯ ಮಾದೇಶ್ವರನ ಐತಿಹಾಸಿಕತೆ, ಕಾವ್ಯದ ಸಾಹಿತ್ಯಕ ಅಂಶಗಳು, ಸಾಂಸ್ಕೃತಿಕ ಸಂಗತಿಗಳು ಇವೇ ಮೊದಲಾದುವುಗಳನ್ನು ಕುರಿತು ಅಭ್ಯಾಸ ಮಾಡಲಾಗಿದೆ. ಹಾಗೆಯೆ, ಮಾದೇಶ್ವರ ಕಾವ್ಯವನ್ನು ಮಂಟೇಸ್ವಾಮಿ ಕಾವ್ಯದೊಡನೆ ತೌಲನಿಕವಾಗಿಟ್ಟು ನೋಡಲಾಗಿದೆ. ಈ ಕೃತಿಯ ನಂತರ ತೀ.ನಂ. ಶಂಕರನಾರಾಯಣ ಅವರು ಆರ್.ಆರ್.ಸಿ.ಯ ಸಹಯೋಗದಲ್ಲಿ "The epic of Junjappa: Text and Performance"ಎನ್ನುವ ಯೋಜನೆ ಕೈಗೊಂಡು, ಜುಂಜಪ್ಪನ ಕಾವ್ಯವನ್ನು ಪ್ರದರ್ಶನಾತ್ಮಕ ಹಾಗೂ ಅನನ್ಯತೆಯ ದೃಷ್ಟಿಯಿಂದ ಅಧ್ಯಯನ ನಡೆಸಿದ್ದಾರೆ. ಈ ಅಧ್ಯಯನವು ಮೇಲಿನ ಶೀರ್ಷಿಕೆಯಲ್ಲೇ ೧೯೯೪ ರಲ್ಲಿ ಪ್ರಕಟಗೊಂಡಿದೆ. ಜೊತೆಗೆ ೧೯೯೫ ರಲ್ಲಿ ಗುಲ್ಬರ್ಗಾದ ವಿಚಾರ ಸಂಕೀರ್ಣವೊಂದರಲ್ಲಿ ಜನಪದ ಮಹಾಕಾವ್ಯ ಹಾಗೂ ಶಿಷ್ಟ ಮಹಾಕಾವ್ಯಗಳ ತುಲಾನಾತ್ಮಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಪ್ರಬಂದಗಳು ಮಂಡನೆಯಾಗಿವೆ. ಇದೇ ಸಂದರ್ಭದಲ್ಲಿ ಪಿ.ಬಿ. ಶಿವಣ್ಣ ಅವರು ನಡೆಸಿದ "ಕಾಡುಗೊಲ್ಲರ ಇಬ್ಬರು ಸಾಂಸ್ಕೃತಿಕ ವೀರರು" ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಎತ್ತಪ್ಪ ಮತ್ತು ಜುಂಜಪ್ಪ ಅವರ ಕುರಿತಿರುವ ಕಾವ್ಯಗಳನ್ನು ಪುರಾಣಗಳನ್ನು ಸಂಗ್ರಹಿಸಿ; ಅವೆರಡನ್ನು ತುಲನಾತ್ಮಕವಾಗಿ ವಿವೇಚಿಸಿದ್ದಾರೆ. ಹಾಗೆಯೇ ಎಂ.ಎನ್. ವೆಂಕಟೇಶ್ ಅವರ 'ಮೈಲಾರದ ಜಾತ್ರೆಗಳು ಪ್ರದರ್ಶನಾತ್ಮಕ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ 'ಮೈಲಾರಲಿಂಗ ಕಾವ್ಯವು' ಪುನರ್ ಅಭಿನಯಗೊಳ್ಳುವ ಸಂದರ್ಭ ಹಾಗೂ ಸ್ವರೂಪಗಳನ್ನು ಗುರುತಿಸಿದ್ದಾರೆ. ನಂತರ ಎಂ. ಸತೀಶ್ ಅವರು 'ಮಂಟೇಸ್ವಾಮಿ' ಕಾವ್ಯವನ್ನು ಪ್ರತ್ಯೇಕವಾಗಿರಿಸಿಕೊಂಡು ಎಂ.ಫಿಲ್ ನಿಬಂದವನ್ನು

ಸಿದ್ಧಪಡಿಸಿ, ಈ ನಿಬಂಧದಲ್ಲಿ 'ಮಂಟೇಸ್ವಾಮಿ ಕಾವ್ಯದಲ್ಲಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಗತಿ'ಗಳನ್ನು ಕುರಿತು ಚರ್ಚಿಸಿದ್ದಾರೆ.

೧೯೯೬ ರಲ್ಲಿ ಕುವೆಂಪು ವಿ.ವಿ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸಹಯೋಗದಲ್ಲಿ ನಡೆದ "ಕರ್ನಾಟಕ ಜಾನಪದ ಮಹಾಕಾವ್ಯಗಳು" ಕುರಿತ ವಿಚಾರ ಸಂಕಿರಣ ಹಾಗು ಅಲ್ಲಿ ಮಂಡಿತವಾಗಿರುವ ಪ್ರಬಂಧಗಳು ಉಲ್ಲೇಖಾರ್ಹ. ಏಕೆಂದರೆ ಇದು ಜನಪದ ಮಹಾಕಾವ್ಯಗಳ ಸ್ವರೂಪ ಹಾಗೂ ಕರ್ನಾಟಕದ ಜನಪದ ಮಹಾಕಾವ್ಯಗಳ ಪರಿಚಯ ಮಾಡಿಕೊಡುವ ಮಹತ್ವದ ಪ್ರಯತ್ನವಾಗಿದೆ. ಇಲ್ಲಿ ಪ್ರತ್ಯೇಕ ಒಂದೊಂದು ಮಹಾಕಾವ್ಯವನ್ನು ಕುರಿತಂತೆ ವಿದ್ವಾಂಸರು ಅರ್ಥಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇಲ್ಲಿ ಮಂಡನೆಗೊಂಡ ಪ್ರಬಂಧಗಳು ೧೯೯೮ರಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿವೆ. ಇದೇ ಕಾಲಾವಧಿಯಲ್ಲಿ ತೀ.ನಂ. ಶಂಕರನಾರಾಯಣ ಅವರು ಜನಪದ ಮಹಾಕಾವ್ಯ' ಎಂಬ ಕಿರುಹೊತ್ತಿಗೆಯೊಂದನ್ನು ರಚಿಸಿ, ಅದರಲ್ಲಿ ಜನಪದ ಮಹಾಕಾವ್ಯದ ಸ್ವರೂಪ-ಸಾಧ್ಯತೆಗಳನ್ನು ಕುರಿತಂತೆ ವಿಚಾರ ಮಾಡಿದ್ದಾರೆ. ವಿಶೇಷ ಸಂಗತಿ ಎಂದರೆ ಜುಂಜಪ್ಪ ಕಾವ್ಯವನ್ನು ಸಂದರ್ಭ ಮತ್ತು ಪ್ರದರ್ಶನ, ಪಠ್ಯರಚನಾ ಕ್ರಿಯೆ, ಶಿಷ್ಟ-ಜನಪದಗಳ ಸಂಬಂಧಗಳು, ಅನನ್ಯತೆ ದೃಷ್ಟಿ, ಲಿಂಗಭೇದದ ಪ್ರಭಾವ ಮತ್ತು ಪ್ರಕಾರಗಳ ಭಿನ್ನತೆ, ಆಚರಾಣಾತ್ಮಕ ನೆಲೆ, ಐತಿಹಾಸಿಕತೆ ಮತ್ತು ಮೊದಲಾದ ನೆಲೆಗಳಿಂದ ಸ್ಥೂಲ ಅಧ್ಯಯನ ನಡೆಸಿದ್ದಾರೆ. ಹೀಗಾಗಿ ಜುಂಜಪ್ಪನ ಕಾವ್ಯವನ್ನು ಕುರಿತು ಅಧ್ಯಯನ ನಡೆಸುವವರಿಗೆ ಈ ಕೃತಿ ಸೂಕ್ತ ಮಾರ್ಗದರ್ಶಿಯಾಗಬಲ್ಲದು. ಇದೇ ಸ್ವರೂಪದಲ್ಲಿ ೧೯೯೮ರಲ್ಲಿ ಪ್ರಕಟವಾದ ಅಂಬಳಿಕೆ ಹಿರಿಯಣ್ಣನವರ 'ಜನಪದ ಮಹಾಕಾವ್ಯಗಳು' ಇಲ್ಲಿ ದಾಖಲಿಸಬೇಕಾದ ಮತ್ತೊಂದು ಪುಸ್ತಕ. ಪ್ರಸ್ತುತ ಕೃತಿಯಲ್ಲಿ ಹಿರಿಯಣ್ಣನವರು ಜಾಗತಿಕ ಹಾಗೂ ಭಾರತೀಯ ನೆಲೆಯಿಂದ, ವಿಶೇಷವಾಗಿ ಕರ್ನಾಟಕದ ಜನಪದ ಮಹಾಕಾವ್ಯಗಳ ಸ್ವರೂಪ ಕುರಿತು ಚರ್ಚಿಸಿ, ಲಭ್ಯವಿರುವ ಮಹಾಕಾವ್ಯಗಳನ್ನು ಪರಿಚಯಾತ್ಮಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಜೊತೆಗೆ ಈ ಕಾವ್ಯಗಳು ಅಧ್ಯಯನಕ್ಕೊಳಗಾಗಬೇಕಾದ ಕೆಲವು ನೆಲೆಗಳನ್ನು ಸೂಚಿಸಿದ್ದಾರೆ. ಹೂವಿನ ಹಡಗಲಿ ಯಲ್ಲಿ ೧೯೯೮ರಲ್ಲಿ ಜನಪದ ಮಹಾಕಾವ್ಯಗಳ ಕುರಿತಂತೆ ವಿಸ್ತೃತ ಚರ್ಚೆ ನಡೆದಿರುವುದಾಗಿ ತಿಳಿದು ಬರುತ್ತದೆ. ಆದರೂ ಅದರ ಬಗ್ಗೆ ಅಧಿಕೃತ ಪ್ರಬಂಧಗಳು ದೊರೆಯುವುದಿಲ್ಲ. ಇದೇ ಸಂದರ್ಭದಲ್ಲಿ ಅಂಬಳಿಕೆ ಹಿರಿಯಣ್ಣ ಹಾಗೂ ಇತರರ ಸಂಪಾದಕತ್ವದಲ್ಲಿ ಹೊರಬಂದ ಪ್ರಬುದ್ಧ ಕರ್ನಾಟಕ ೭೮-೭೯ರ ವಿಶೇಷ ಸಂಚಿಕೆಯು ಮಲೆಯ ಮಾದೇಶ್ವರನ ಸಂಪ್ರದಾಯ ಹಾಗೂ ಮಹಾಕಾವ್ಯದ ಗಂಭೀರ ಅಧ್ಯಯನಗಳ ಸಂಕಲನವಾಗಿದೆ. ಈ ಸಂಚಿಕೆಯಲ್ಲಿ 'ಮಾದೇಶ್ವರ ಕಾವ್ಯ'ವನ್ನು ಪರಂಪರೆಯ ದೃಷ್ಟಿ, ಪುರಾಣದ ದೃಷ್ಟಿ, ರಚನಾತ್ಮಕ ದೃಷ್ಟಿ, ಇವೇ ಮೊದಲಾದ ದೃಷ್ಟಿಕೋನಗಳಿಂದ ಅಭ್ಯಾಸಿಸಲಾಗಿದೆ. ಮಲೆಯ ಮಾದೇಶ್ವರನ ಕಾವ್ಯ ಹಾಗೂ

ಸಂಪ್ರದಾಯದ ಸಮಗ್ರ ಅಧ್ಯಯನ ಇದಾಗಿದೆ. ಎಂಬುದು ಪ್ರಸ್ತುತ ಪ್ರಯತ್ನದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಇದುವರೆಗಿನ ಅಂದರೆ ಸುಮಾರು ೧೯೫೦ರ ತನಕ ನಡೆದಿರುವ ಅಧ್ಯಯನಗಳ ಸಮೀಕ್ಷೆಯಿಂದ ತಿಳಿದು ಬರುವ ಸಂಗತಿ ಎಂದರೆ ೧೯೭೦-೧೯೫೦ರ ನಂತರ ಜನಪದ ಮಹಾಕಾವ್ಯಗಳ ಪ್ರಕಟಣೆ, ಅಧ್ಯಯನಗಳ ದೃಷ್ಟಿಯಿಂದ ಸುವರ್ಣಕಾಲ ಎನ್ನಬಹುದು. ಏಕೆಂದರೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಜನಪದ ಬುಡಕಟ್ಟು ಹಾಗೂ ಸಾಹಿತ್ಯ ವಿಭಾಗಗಳು 'ಜನಪದ ಮಹಾಕಾವ್ಯಗಳ ಸಂಗ್ರಹ ಹಾಗೂ ಅಧ್ಯಯನಕ್ಕಾಗಿ ಸಾಕಷ್ಟು ಶ್ರಮವಹಿಸಿದವು. ಈ ಸಂದರ್ಭದಲ್ಲಿ ಹಿ.ಚಿ. ಬೋರಲಿಂಗಯ್ಯ, ಕೆ.ಎಂ. ಮೈತ್ರಿ, ಗಂಗಾಧರ ದೈವಜ್ಞ, ಕೇಶವಪ್ರಸಾದ್. ಎ.ಎಸ್. ಪ್ರಭಾಕರ್, ಮಂಜುನಾಥ ಬೇವಿನಕಟ್ಟಿ, ನಾಗೇಶ್. ಎಚ್.ವಿ. ಸ.ಚಿ. ರಮೇಶ್, ರಹಮತ್ ತರೀಕೆರೆ, ವೆಂಕಟೇಶ್ ಇಂದ್ವಾಡಿ, ವಿರೂಪಾಕ್ಷಿ ಪೂಜಾರಹಳ್ಳಿ ಮೊದಲಾದ ವಿದ್ವಾಂಸರ ಅಧ್ಯಯನಗಳು ಉಲ್ಲೇಖಾರ್ಹವಾದವು. ಇವರೆಲ್ಲರ ಪರಿಶ್ರಮದಿಂದಾಗಿ ೧೯೭೭ ರಿಂದ ೨೦೦೧ ರವರೆಗೆ ಸುಮಾರು ೧೫ಕ್ಕೂ ಹೆಚ್ಚಿನ ಜನಪದ ಮಹಾಕಾವ್ಯಗಳು ಪ್ರಕಟಗೊಂಡಿವೆ. ಈ ಸಂದರ್ಭದಲ್ಲಿ ಗುರುತಿಸಲ್ಪಟ್ಟಿರುವ ಮಹಾಕಾವ್ಯಗಳೆಂದರೆ, ಕುಮಾರ ರಾಮ, ಕೃಷ್ಣಗೊಲ್ಲರ ಕಾವ್ಯ, ಸ್ಯಾಸಿ ಚಿನ್ನಮ್ಮ', 'ಮಾಲಿಂಗರಾಯನ ಕಾವ್ಯ', 'ಕಾಳಿಂಗರಾಯನ ಕಾವ್ಯ', 'ಗಾದ್ರಿ ಪಾಲಕನಾಯಕನ ಕಾವ್ಯ', 'ಜಗಳೂರು ಪಾಪನಾಯಕ', 'ಬೋರೆದೇವರ ಕಾವ್ಯ', 'ಮಾರಮ್ಮನ ಕಾವ್ಯ' ಮೊದಲಾದವು. ವಿಶ್ವವಿದ್ಯಾಲಯದ ಈ ವಿದ್ವಾಂಸರು ಒಟ್ಟು 'ಜನಪದ ಕಾವ್ಯ, ಪರಿಕಲ್ಪನೆ, ಸಂಗ್ರಹ, ಸಂಪಾದನೆ, ಅಧ್ಯಯನದ ಸ್ವರೂಪಗಳ ದೃಷ್ಟಿಯಿಂದ ಅನನ್ಯವಾದ ತತ್ವಗಳನ್ನು ರೂಪಿಸಿದರು. ಅವುಗಳಲ್ಲಿ ಏಕವ್ಯಕ್ತಿ ಹಾಡಿರುವ ಕಾವ್ಯಗಳ ಪ್ರಕಟಣೆಯಿಂದ ಹಿಡಿದು ಒಟ್ಟಾರೆ ಜನಪದ ಮಹಾಕಾವ್ಯಗಳನ್ನು ದೇಶೀಯ ಜ್ಞಾನ ಪರಂಪರೆಗಳೆಂದು ಭಾವಿಸಿ ಅಧ್ಯಯನಕ್ಕೆ ತೊಡಗಿದ್ದು ಗಮನಾರ್ಹವಾಗಿದೆ. ಇದೇ ಸಂದರ್ಭದಲ್ಲಿ ಡಿ.ಆರ್. ನಾಗರಾಜ ಅವರ ಅಧ್ಯಯನವನ್ನು ವಿಶೇಷವಾಗಿ ಪ್ರಸ್ತಾಪಿಸಬೇಕು. ೧೯೯೯ರಲ್ಲಿ ಪ್ರಕಟವಾದ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಕೃತಿಯಲ್ಲಿ ಶೂನ್ಯ ಸಂಪಾದನೆಗಳು ಮತ್ತು ಮಂಟೇಸ್ವಾಮಿ ಕಾವ್ಯವನ್ನು ಅಂತರ್ ಪಠ್ಯೀಯತೆಯ ನೆಲೆಯಲ್ಲಿ ತುಲನಾತ್ಮಕ ಅಧ್ಯಯನ ಮಾಡಿ, ಮಂಟೇಸ್ವಾಮಿ ಕಾವ್ಯವನ್ನು ಸಾಂಸ್ಕೃತಿಕ ಪಠ್ಯವಾಗಿ ನೋಡಿದ್ದಾರೆ. ಇವರ ಪ್ರಯತ್ನಗಳ ಜೊತೆಗೆ ವೀರಣ್ಣದಂಡೆಯವರ ಪ್ರಯತ್ನವನ್ನು ಗಮನಿಸಬೇಕು. ದಂಡೆಯವರು ೨೦೦೦ದಲ್ಲಿ 'ಜನಪದ ಹಾಲುಮತ ಮಹಾಕಾವ್ಯ'ವನ್ನು ಪ್ರಕಟಿಸಿದರು. ಈ ಕಾವ್ಯಕ್ಕೆ ದೀರ್ಘ ಹಾಗೂ ಅಧ್ಯಯನ ಯೋಗ್ಯ ಪ್ರಸ್ತಾವನೆಯೊಂದನ್ನು ಬರೆದಿರುವುದು ಮಹತ್ವದ ದಾಖಲೆಯಾಗಿದೆ.

ಇನ್ನು ಇತ್ತೀಚೆಗೆ ೨೦೦೨ರಲ್ಲಿ ನಿಂಗಪ್ಪ ಮುದೇನೂರು ಅವರು 'ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು'ಎಂಬ ವಿಷಯದ ಮೇಲೆ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಜುಂಜಪ್ಪ,

ಮಾದೇಶ್ವರ, ಮೈಲಾರಲಿಂಗ ಮತ್ತು ಮಂಟೇಸ್ವಾಮಿ ಈ ನಾಲ್ಕು ಜನ ಸಾಂಸ್ಕೃತಿಕ ವೀರರು ಜನಪದ ಮಹಾಕಾವ್ಯಗಳಲ್ಲಿ ಅನಾವರಣಗೊಂಡಿರುವ ಬಗೆಗಳನ್ನು ಶೋಧಿಸಿದ್ದಾರೆ. ಹಾಗೆಯೇ ಸಿ.ಎನ್. ರಾಮಚಂದ್ರನ್ ಅವರು ೨೦೦೨ರ ಜನವರಿಯಿಂದ ೨೦೦೨ರ ಜೂನ್ ವರೆಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬರೆದ ಹೊಸ ಮಡಿಯ ಮೇಲೆ ಚದುರಂಗ'ಎಂಬ ಅಂಕಣ ಮಹತ್ವಪೂರ್ಣವಾದುದು. ಈ ಅಂಕಣದಲ್ಲಿ ಜಗತ್ತಿನ ವಿವಿಧ ಭಾಷೆಗಳ ಜನಪದ ಮಹಾಕಾವ್ಯಗಳನ್ನು ವಿಶೇಷವಾಗಿ ಚರ್ಚಿಸಿದ್ದಾರೆ. ಪ್ರಸ್ತುತ ಲೇಖನಗಳಲ್ಲಿ ಮಹಾಕಾವ್ಯಗಳನ್ನು ಯಾವುದಾದರೂ ಒಂದು ತಾತ್ವಿಕ ಹಿನ್ನೆಲೆಯೊಳಗೆ ಪರಿಚಯಿಸಿರುವುದು ಹಾಗೂ ಅಧ್ಯಯನ ನಡೆಸಬಹುದಾದ ಸಾಧ್ಯತೆಗಳನ್ನು ಸೂಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಇದರಂತೆ ೨೨, ೨೩-೨-೨೦೦೨ರಂದು ಕರ್ನಾಟಕ ವಿಶ್ವವಿದ್ಯಾಲಯವು ಭದ್ರಾವತಿಯಲ್ಲಿ ನಡೆಸಿದ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ' ಉಲ್ಲೇಖಾರ್ಹವಾದುದು. ಈ ಸಮ್ಮೇಳನದ ವಿಶೇಷ ಹಾಗೂ ಮುಖ್ಯ ವಿಷಯವೆಂದರೆ 'ಜನಪದ ಮಹಾಕಾವ್ಯಗಳು' ಮತ್ತಿಘಟ್ಟ ಕೃಷ್ಣಮೂರ್ತಿಯವರ ಸರ್ವಾಧ್ಯಕ್ಷತೆಯಲ್ಲಿ ಜರುಗಿದ ಈ ಸಮ್ಮೇಳನವು ಮಹಾಕಾವ್ಯಗಳಲ್ಲಿ ಅನನ್ಯತೆ, ಚರಿತ್ರೆ, ಮಹಿಳೆ ಮತ್ತು ಇನ್ನಿತರ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಚರ್ಚಿಸಿತು. ಇನ್ನುಳಿದಂತೆ ಅಲ್ಲಲ್ಲಿ ಸಂಸ್ಕೃತಿ ಜನಪದ ಸಾಹಿತ್ಯ ಕುರಿತ ವಿಚಾರ ಸಂಕಿರಣಗಳಲ್ಲಿ ಜನಪದ ಮಹಾಕಾವ್ಯ ಕುರಿತ ಪ್ರಬಂಧಗಳು ಮಂಡನೆಯಾಗಿವೆ. ಜೊತೆಗೆ ಬೇರೆಬೇರೆ ಪತ್ರಿಕೆ, ನಿಯತಕಾಲಿಕೆಗಳಲ್ಲಿ ಕೆಲವು ಲೇಖನಗಳು ಪ್ರಕಟವಾಗಿವೆ. ಇಂಥ ಪ್ರಯತ್ನಗಳಲ್ಲಿ ಓ.ಎಲ್. ನಾಗಭೂಷಣಸ್ವಾಮಿ, ಎ.ವಿ. ನಾವಡ, ಅಂಬಳಿಕೆ ಹಿರಿಯಣ್ಣ, ಹಿ.ಶಿ. ರಾಮಚಂದ್ರೇಗೌಡ, ಸಂಧ್ಯಾರೆಡ್ಡಿ, ಡಿ.ಆರ್. ನಾಗರಾಜ, ಗಾಯಿತ್ರಿ ನವಡ, ಕಿ.ರಂ. ನಾಗರಾಜ, ಚಂದ್ರು ಕಾಳೇನಹಳ್ಳಿ, ಎಸ್.ಎಸ್. ಅಂಗಡಿ, ಮೊದಲಾದವರ ಲೇಖನಗಳು ಉಪಯುಕ್ತವಾಗಿವೆ.

ಇದಿಷ್ಟು ಕನ್ನಡ ಜನಪದ ಮಹಾಕಾವ್ಯಗಳ ಇದುವರೆಗಿನ ಅಧ್ಯಯನಗಳ ಸಮೀಕ್ಷೆ. ಹಾಗಾಗಿ, 'ಕನ್ನಡ ಜನಪದ ಮಹಾಕಾವ್ಯ ಕುರಿತಂತೆ ಹಲವು ರೀತಿಯ ಅಧ್ಯಯನಗಳು ಇನ್ನೂ ಆರಂಭವಾಗಬೇಕಿದೆ. ಉಳಿದಂತೆ ಈಗ ಅಧ್ಯಯನಕ್ಕೆ ಒಳಗಾಗಿರುವ ಮಹಾಕಾವ್ಯಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಶೋಧಿಸಬೇಕಿದೆ. ಈ ದೃಷ್ಟಿಯಿಂದ ಕೆಲವು 'ಕನ್ನಡ ದೇಸಿ ಜನಪದ ಮಹಾಕಾವ್ಯ' ಗಳಲ್ಲಿ ವ್ಯಕ್ತವಾಗಿರುವ ಹಸಿವಿನ ಮುಖಾಮುಖಿಯ ಸ್ವರೂಪಗಳನ್ನು ಕಂಡುಕೊಳ್ಳುವುದು ಇಲ್ಲಿಯ ಪ್ರಧಾನ ಹಂಬಲವಾಗಿದೆ. ಜನಪದ ಸಾಹಿತ್ಯ ಭೂಮಿಕೆಯಲ್ಲಿ ನಿರಂತರವಾಗಿ ದುಡಿಯುತ್ತಿರುವ ಡಾ. ಸಿ.ಟಿ. ಗುರುಪ್ರಸಾದ್, ಡಾ. ಹೆಬ್ಬಾಲೆ ಕೆ. ನಾಗೇಶ್, ಡಾ. ಮೊಗಳ್ಳಿ ಗಣೇಶ್, ಡಾ. ಮಂಜುನಾಥ ಬೇವಿನ ಕಟ್ಟಿ, ಮೊದಲಾದವರ ಅನೇಕ ಲೇಖನಗಳು ನನ್ನ ಸಂಶೋಧನೆಗೆ ಉಪಯುಕ್ತವಾಗಿವೆ.

❖❖❖

ಅಧ್ಯಾಯ : ಎರಡು

ಜನಪದರ ಹಸಿವಿನ ಅರ್ಥ, ವ್ಯಾಖ್ಯಾನ, ತತ್ವ

೨.೧ ಇತಿಹಾಸದಲ್ಲಿ ಹಸಿವಿನ ಚಾರಿತ್ರಿಕ ನೆಲೆ

೨.೨ ಹಸಿವಿನ ಹೆಚ್ಚಳಕ್ಕೆ ಕಾರಣ ನೆಪೋಲಿಯನ್ನರ ರಷ್ಯಾದ ಮೇಲಿನ ದಂಡಯಾತ್ರೆ.

೨.೩ ಕೈಗಾರಿಕಾ ಕ್ರಾಂತಿಯು ಕೂಡ ಹಸಿವಿನ ಹೆಚ್ಚಳಕ್ಕೆ ಪೂರಕವಾಗಿದೆ.

೨.೪ ನಗರೀಕರಣ ಹಸಿವಿನ ಹೆಚ್ಚಳಕ್ಕೆ ಕಾರಣವಾಗಿದೆ.

೨.೫ ಯುದ್ಧಗಳು ಹಸಿವಿನ ಹೆಚ್ಚಳಕ್ಕೆ ಕಾರಣವಾಗಿದೆ.

೨.೬ ಪಾಶ್ಚಿಮಾತ್ಯ ಚಿಂತಕರ ಕಣ್ಣೋಟದಲ್ಲಿ ಹಸಿವಿನ ಭಾರತ.

೨.೭ ದಾರ್ಶನಿಕರ ಬರವಣಿಗೆಯಲ್ಲಿ ಹಸಿವಿನ ಕಥನ.

೨.೮ ವಸಹತುಶಾಹಿ ಆಕ್ರಮಣಶೀಲತೆ: ಭಾರತದ ತಳಸಮುದಾಯಗಳ ಬಡತನ ಮತ್ತು ಹಸಿವು.

೨.೯ ಬ್ರಿಟೀಷರ ಆರ್ಥಿಕ ನೀತಿಗಳು.

೨.೧೦ ವಚನಕಾರರ ನೆಲೆಯಲ್ಲಿ ಹಸಿವಿನ ದಾರುಣತೆ.

ಅಧ್ಯಾಯ: ಎರಡು

ಜನಪದರ ಹಸಿವಿನ ಅರ್ಥ, ವ್ಯಾಖ್ಯಾನ, ತತ್ವ

"ಶಿವನು ಭಿಕ್ಷೆಗೆ ಬಂದ ನೋಡು ಬಾರೆ ತಂಗಿ ನೀಡುಬಾರೆ
ಇವನಂತೆ ಚೆಲ್ವರಿಲ್ಲ ನೋಡು ಬಾರೆ ತಂಗಿ ನೀಡು ಬಾರೆ"[೧]

ಲೋಕದ ಹಸಿವನ್ನು ನೀಗಿಸಲು ಆ ಪರಶಿವನು ಭಿಕ್ಷೆಗೆ ಬಂದಿದ್ದಾನೆ. ಸೃಷ್ಟಿಕರ್ತನಾದ ಆ ಪರಮೇಶ್ವರನಿಗೆ ಮಾನವನ ಒಡಲ ಹಸಿವನ್ನು ನೀಗಿಸುವ ನೈತಿಕ ಜವಾಬ್ದಾರಿ ಇರುತ್ತದೆ. ಸೃಷ್ಟಿಕರ್ತನಾದ ಆ ಪರಶಿವನನ್ನೇ ಪ್ರಶ್ನಿಸುವ ನೈತಿಕ ಹಕ್ಕು ನಮ್ಮ ಜನಪದರಿಗಿದೆ. ಲೋಕದ ಹಸಿವಿನ ಧಾರುಣ್ಯತೆಯನ್ನು ದೈವದ ನೆಲೆಯಲ್ಲಿ ಇಷ್ಟೊಂದು ಸೌಂದರ್ಯಾತ್ಮಕವಾಗಿ ಜಗತ್ತಿನ ಯಾವ ಸಾಹಿತ್ಯದಲ್ಲೂ ಅನಾವರಣಗೊಂಡಿರದೆ ಈ ನಮ್ಮ ಜನಪದರ ಹಾಡಿನಲ್ಲಿ ಅಭಿವ್ಯಕ್ತಗೊಂಡಿದೆ.

"ಕಣಜ ಬೆಳೆದ ಮನೆಗೆ ಉಣಲಾಕ ಕೂಳಿಲ್ಲ
ಬೀಸಾಕ ಕವಣೆ ಬಲವಿಲ್ಲ ಕೂಲ್ಯವರ
ಸುಡಬೇಕ ಜನುಮ ಸುಖವಿಲ್ಲ"[೨]

–ಜಾನಪದ ಹಾಡು

'ಹಸಿವು' ಜನಪದರ ಹಾಡಿನಲ್ಲಿ ಜನಸಮುದಾಯದ ಒಡಲಿನ ಹಸಿವಿನ ರೂಪಕವಾಗಿ ಮೂಡಿ ಬಂದಿರುವ ಈ ಹಾಡಿನ ಹಿನ್ನೆಲೆಯಲ್ಲಿ ಹಸಿವಿನ ದೀರ್ಘಕಾಲದ ಚರಿತ್ರೆಯನ್ನು ಕಾಣುತ್ತೇವೆ. ಅನಾದಿ ಕಾಲದಿಂದಲೂ ಮನುಷ್ಯನ ಬಹುದೊಡ್ಡ ಸಮಸ್ಯೆ ಯಾವುದು ಎಂದರೆ ಹಸಿವು ಮತ್ತು ಬಡತನ. ಖ್ಯಾತ ಚಿಂತಕ ಆಡಂಸ್ಮಿತ್ ಪ್ರಕಾರ 'ಬಡತನ' ಎನ್ನುವುದು ವ್ಯಕ್ತಿಯೊಬ್ಬನನ್ನು ಬರೀ ಹಸಿವು ಮತ್ತು ದೈಹಿಕ ದೌರ್ಬಲ್ಯಕ್ಕಷ್ಟೇ ಮಾಡುವುದಿಲ್ಲ. ಆ ವ್ಯಕ್ತಿಯನ್ನು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಭಾಗಹಿಸಲಾರದಂತಹ ಅಸಮರ್ಥನನ್ನಾಗಿ ಮಾಡುತ್ತದೆ. ಜೈವಿಕ ಕ್ರಿಯೆ ಹಸಿವು, ಮನುಷ್ಯನ ಹುಟ್ಟಿನೊಂದಿಗೆ ಇದರ ಹುಟ್ಟು ಆಗಿದೆ. ಈ ಹಸಿವಿನಿಂದ ಎಷ್ಟೊ ಜೀವಿಗಳು ಹುಟ್ಟಿದ ಬಳಿಕ ಅನಂತರ ನಶಿಸಿ

ಹೋಗಿವೆ. ಹುಟ್ಟಿದ ತಕ್ಷಣ ಮಗು ಹಸಿವಿನಿಂದ ಅಳುತ್ತದೆ. ಅಳುವೇ ಹಸಿವಿನ ಸೂಚನೆಯಾಗಿರುತ್ತದೆ. ಆದಿ ಮಾನವನ ಮೊದಲು ಹಸಿವನ್ನು ನೀಗಿಸಿಕೊಳ್ಳಲು ಕೈಗೆ ಸಿಕ್ಕ ಎಲೆ, ಹೂ, ಕಾಯಿಗಳನ್ನು ತಿನ್ನಲು ಶುರು ಮಾಡುತ್ತಾನೆ. ಅವನ ಕಾಲುಗಳಿಗೆ ಒಂದು ಚಲನೆ ಶುರುವಾಗುತ್ತದೆ. ಆಹಾರ ಹುಡುಕುತ್ತಾ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಚಲಿಸುತ್ತಾನೆ. ಎಷ್ಟೋ ದಿನಗಳ ಕಾಲ ಈ ಚಲನೆ ಮುಂದುವರಿಯುತ್ತದೆ. ಈ ಸಂದರ್ಭದಲ್ಲಿ ಪರಿಸರದ ಋತುಮಾನಕ್ಕೆ ಅನುಗುಣವಾಗಿ ಅವನ ಆಹಾರ ಕ್ರಮ ಬದಲಾಗುತ್ತದೆ. ಎಲ್ಲ ಕಾಲಕ್ಕೂ ಎಲೆ, ಹೂ, ಕಾಯಿ ಹಣ್ಣುಗಳು ಸಿಗಬೇಕಲ್ಲ. ಬೇಸಿಗೆ ಕಾಲದಲ್ಲಿ ಎಲೆ ಉದುರಿ ಮರಗಿಡಗಳೆಲ್ಲ ಬರಿದಾಗುತ್ತವೆ. ಇಲ್ಲಿಂದಲೇ ಆಹಾರದ ಸಮಸ್ಯೆ ಎದುರುಗೊಳ್ಳುತ್ತದೆ. ಬೇರೊಂದು ದಾರಿಕಾಣದೆ ಹಸಿದು ರಾತ್ರಿ ಹಗಲು ಧಣಿಯುತ್ತಾನೆ. ಮತ್ತೊಂದು ಋತುಮಾನ ಬರುವವರೆವಿಗೂ ಕಾಯಲಾರದೆ ಹಸಿದು ಸತ್ತ ಆದಿಮಾನವರ ಸಂಖ್ಯೆ ಎಷ್ಟೋ.

ಅಳಿದುಳಿದ ಆದಿಮಾನವರು ಪ್ರಕೃತಿಯ ವಿಕೋಪಗಳನ್ನು ಎದುರಿಸಬೇಕಾಗುತ್ತದೆ. ರಾತ್ರಿ ಹಗಲು ಸುರಿಯುವ ಮಳೆಗೆ ತಪ್ಪಿಸಿಕೊಳ್ಳಲು ಮರದ ಪೊಟರೆಗಳನ್ನು ಆಶ್ರಯಿಸುತ್ತಾ, ಕಾಡ್ಗಿಚ್ಚಿಗೆ ಭಯಬಿದ್ದು ಓಡುತ್ತಾನೆ, ಹಸಿದು ಹಸಿದು ಮೃಗವಾಗುತ್ತಾನೆ. ಹಸಿದ ಬಾಯಿಗೆ ಸುಟ್ಟ ಪ್ರಾಣಿಗಳ ಮಾಂಸದ ತುಂಡು ಸಿಗುತ್ತದೆ. ಇದು ಎಷ್ಟೊಂದು ದಿನಗಳ ಕಾಲ ಸಾಧ್ಯ. ತನಗೆ ಬೇಕಾದ ಆಹಾರ ಪಡೆದುಕೊಳ್ಳುವುದಕ್ಕೆ ಮೊದಲು ಮರದ ಬೇರುಗಳನ್ನು ಬಳಸಿ ನೆಲ ಹಗೆದು ಗಡ್ಡೆ ಗೆಣಸು ತಿನ್ನಲು ಶುರು ಮಾಡುತ್ತಾನೆ. ತನ್ನ ಪರಿಸರದೊಳಗೆ ಹಸಿದ ಹೊಟ್ಟೆಗೆ ಅನ್ನವನ್ನು ಕಂಡುಕೊಳ್ಳುತ್ತಾನೆ. ಸೀಮಿತ ಚೌಕಟ್ಟನ್ನು ಒಳಗೆ ಹುಡುಕಾಟ ಪ್ರಾರಂಭವಾಗಿ ಅನಂತರ ಸೀಮಿತ ಚೌಕಟ್ಟನ್ನು ದಾಟಿ ಹೊರಗೆ ಬಂದು ಮತ್ತೆ ಆಹಾರ ಅನ್ವೇಷಣೆ ಶುರುವಾಗುತ್ತದೆ. ಆದಿ ಮಾನವನ ಆಹಾರ ಅನ್ವೇಷಣೆಯ ಹಿಂದೆ ಹಸಿವಿನ ದೀರ್ಘಕಾಲದ ಇತಿಹಾಸವಿದೆ. ಈ ಕಾಲಘಟ್ಟದಲ್ಲಿ ಆದಿ ಮಾನವನ ಜೀವನ ಸಂಸ್ಕೃತಿ ಬದಲಾಗುತ್ತದೆ. ಎಲ್ಲೋ ಮರದ ಪೊಟರೆಗಳಲ್ಲಿ ಒಂಟಿಬಾಳು ನಡೆಸುತ್ತಿದ್ದ ಆದಿಮಾನವನ ಗುಂಪು ಗುಂಪಾಗಿ ವಾಸಿಸಲು ಶುರುಮಾಡುತ್ತಾನೆ. ಗುಹೆಗಳು ಇವನ ವಾಸಸ್ಥಳಗಳಾಗುತ್ತವೆ. ಪ್ರತಿದಿನ ಹಸಿದ ಒಡಲು ತುಂಬಿಸಿಕೊಳ್ಳಲು ಆಹಾರದ ಅನ್ವೇಷಣೆ ಶುರುವಾಗುತ್ತದೆ. ತಾನೇ ರೂಪಿಸಿಕೊಂಡ ಮರದ ಆ ಯುದ್ಧಗಳೊಂದಿಗೆ ಆಹಾರ ಹುಡುಕುತ್ತಾ ಕಾಡುಬೆಟ್ಟಗಳನ್ನು ಅಲೆಯುತ್ತಾನೆ. ಋತುಮಾನಕ್ಕೆ ಅನುಗುಣವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಅಯಾ ಋತುಮಾನಕ್ಕೆ ಆಹಾರ ಪದ್ಧತಿಗಳನ್ನು ರೂಪಿಸಿಕೊಂಡು ಕಾಡುಗಳಲ್ಲೇ ತನ್ನ ಜೀವನ ಸಂಸ್ಕೃತಿಯನ್ನು ಕಟ್ಟಿಕೊಂಡ. ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡಿದ. ಮೊದಮೊದಲು ಗಿಡ, ಬೇರುಗಳಿಂದ ತಯಾರಿಸುತ್ತಿದ್ದ ಆ ಯುದ್ಧಗಳು ಕ್ರಮೇಣ ಕಬ್ಬಿಣದ ಆಯುದಗಳಾಗಿ ರೂಪಾಂತರಗೊಂಡವು. ಆದಿಮಾನವ ಸಾಂಸ್ಕೃತಿಕ ಇತಿಹಾಸದಲ್ಲಿ ಬೇಟೆಯು ಒಂದು ಜೀವನ ವಿಧಾನವಾಗಿ ರೂಪುಗೊಂಡಿತು.

ಆದಿ ಮಾನವ ತನ್ನನ್ನು ಪ್ರಕೃತಿ ಪ್ರಕೋಪಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಸಹಜವಾಗಿ ನಿರ್ಮಿತವಾದ ಗುಹೆಗಳನ್ನು ಆಶ್ರಯಸ್ಥಾನವನ್ನಾಗಿ ಪಡೆದಿದ್ದ ಗುಹೆಗಳಲ್ಲಿ ಮೂಲ ಮಾನವ ವಾಸ ಮಾಡುತ್ತಿದ್ದ ಎಂಬುದಕ್ಕೆ ಈಗಲೂ ಕುರುಹುಗಳಿವೆ. ಆದರೆ ಕಾಲ ಕಳೆದಂತೆಲ್ಲಾ ತನ್ನ ಆಹಾರ ಇತ್ಯಾದಿಗಳಿಗೆ ಪ್ರದೇಶದಿಂದ ಪ್ರದೇಶಕ್ಕೆ ಅಲೆದಾಡಬೇಕಾದ ಸಂದರ್ಭದಲ್ಲಿ ಪ್ರಕೃತಿ ನಿರ್ಮಿತವಾದ ಇಂತಹ ಗುಹೆಗಳನ್ನು ಹುಡುಕಿಕೊಳ್ಳುವುದು ಕಷ್ಟವಾಯಿತು. ಈ ಕಾರಣದಿಂದ ಅನಿವಾರ್ಯವಾಗಿ ತಾನೇ ದೇಹಶ್ರಮದಿಂದ ಮತ್ತು ಬುದ್ಧಿ ಬಲವನ್ನು ಉಪಯೋಗಿಸಿ ರಕ್ಷಣಾಸ್ಥಾನವನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯ ಅಗತ್ಯವಾಯಿತು. ಮೊದಲಮೊದಲು ಮರಗಿಡಗಳ ಟೊಂಗೆಗಳನ್ನು ಮತ್ತು ಎಲೆಗಳನ್ನು ಉಪಯೋಗಿಸಿ ತನ್ನ ಜೋಪಡಿಗಳನ್ನು ಆದಿ ಮಾನವ ನಿರ್ಮಿಸಿಕೊಂಡಿದ್ದ. ಭೌಗೋಳಿಕವಾಗಿ ವಿಸ್ತಾರಗೊಂಡ ಮಾನವನ ಬುಡಕಟ್ಟುಗಳು, ತನ್ನ ಭೌಗೋಳಿಕ ಪರಿಸರದಲ್ಲಿ ಬದುಕುವ ಬುಡಕಟ್ಟು ಮಾನವನಿಗೆ ಮಾತ್ರ ಸ್ವಯಂ ರಕ್ಷಣೆಗಾಗಿ ಬೇಟೆಯನ್ನು ಒಂದು ಅನಿವಾರ್ಯ ಅಂಶವಾಗಿ, ಆ ಮೂಲಕ ಜೀವ ವಿಧಾನವಾಗುವ ಅವಕಾಶವಿದೆ. ಅಂತಹ ಪರಿಸರದಿಂದ ದೂರದ ಭೌಗೋಳಿಕ ಆವರಣಗಳಲ್ಲಿ ಬಯಲುನಾಡು ಮುಂತಾದೆಡೆ ಬದುಕುವಾತನಿಗೆ ಕಾಡು ಪ್ರಾಣಿಗಳೇ ಇಲ್ಲದಿರುವ ಸ್ಥಿತಿಯಲ್ಲಿ ಬೇಟೆ ಅನಿವಾರ್ಯವಾಗುವುದಿಲ್ಲ ಆದರೆ ಆಹಾರಕ್ಕಾಗಿ, ಮಾಂಸದ ಸಲುವಾಗಿ, ಆತ ತಾನಿರುವ ಸ್ಥಳದಿಂದ ಹತ್ತಿರದ ಅಥವಾ ದೂರದ ಕಾಡು ಪ್ರದೇಶಗಳಿಗೆ ಬೇಟೆಯಾಡಲು ಹೋಗಿರುವ ಸಾಧ್ಯತೆ ಇದೆ.

ಆದರೆ ಇಂತಹ ಎಲ್ಲಾ ಸಂದರ್ಭಗಳಲ್ಲೂ ಪ್ರಾಣಿ ಸಿಗುವ ಸಂಭವ ಇಲ್ಲವಾದರಿಂದ, ಇಂತಹ ಪ್ರದೇಶಗಳಲ್ಲಿ ಪ್ರಾಣಿಗಳನ್ನು ಗುಹೆಗಳಲ್ಲಿ ಅಥವಾ ಮರದ ವಿಶಾಲವಾದ ಪೊಟರೆಗಳಲ್ಲಿ ಸಾಕುವ ಜೀವನ ವಿಧಾನ ಆರಂಭವಾಗಿ ಈ ರೀತಿ ಪ್ರಾಣಿಗಳನ್ನು ಸಾಕುವ ಹಾಗೂ ಇಂತಹ ಸಾಕುಪ್ರಾಣಿಗಳ ಸಂತತಿಯನ್ನು ಬೆಳೆಸುವ ಪ್ರವೃತ್ತಿಯೇ ಮುಂದೆ ಬೇಟೆ ಸಂಸ್ಕೃತಿಯನ್ನು ಕಡಿಮೆ ಮಾಡಿದಂತೆ ಕಾಣಿಸುತ್ತದೆ. ಒಂದು ಕಡೆ ನೆಲೆ ನಿಂತು ತನಗೆ ಬೇಕಾಗುವ ಅವಶ್ಯಕತೆಗಳನ್ನು ತನ್ನ ಸುತ್ತ ಮುತ್ತಲಿನ ಪರಿಸರದಿಂದಲೇ ಪೂರೈಸಿಕೊಳ್ಳುತ್ತಾ ಯುಗ-ಯುಗಗಳನ್ನು ದಾಟಿ ಈಗ ಆಧುನಿಕ ಯುಗದಲ್ಲಿ ಬಂದು ನಿಂತಿದ್ದಾನೆ. ಅದು ಹಲವಾರು ಸಮಸ್ಯೆಗಳೊಂದಿಗೆ, ಇಂತಹ ಹಲವಾರು ಸಮಸ್ಯೆಗಳಲ್ಲಿ 'ಹಸಿವು' ಕೂಡ ಒಂದಾಗಿದೆ. ಅನಾದಿ ಕಾಲದಿಂದ ಮನುಷ್ಯ ತನ್ನ ಪ್ರಯಾಣದಲ್ಲಿ ಹಲವಾರು ಯುಗಗಳನ್ನು ದಾಟುತ್ತಾ ತನ್ನ ಜೀವನ ಕ್ರಮವನ್ನು ವಿಸ್ತರಿಸಿಕೊಳ್ಳುತ್ತಾ, ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾನೆ. ಈ ಅನಾದಿ ಕಾಲದ ಬದುಕಿನ ದಟ್ಟ ಅನುಭವಗಳನ್ನೆಲ್ಲ ತನ್ನ ಸ್ಮೃತಿಪಟಲದಲ್ಲಿ ಉಳಿಸಿಕೊಂಡು, ಧ್ವನಿಪಟಲ ವಿಸ್ತರಿಸಿಕೊಂಡು ಪರಿಸರವೇ ಕಥಾನಕದ ಎಳೆಗಳಾಗಿ ರೂಪುಗೊಳ್ಳುತ್ತಾ, ಈ ಎಲ್ಲಾ ಕಥಾನಕಗಳು ಮೌಖಿಕ ಪರಂಪರೆಯಾಗಿ ರೂಪುಗೊಂಡಿತು. ಪರಿಸರದ ಎಲ್ಲಾ ಆಗುಹೋಗುಗಳು ಅವನ ಸ್ಮೃತಿಪಟಲದಲ್ಲಿ ಕಥನಗಳ ಎಳೆ ಜಿಟ್ಟಿಕೊಂಡು ಧ್ವನಿ ತರಂಗಗಳ ಮೂಲಕ ಗೀತೆಗಳು

ಸೃಷ್ಟಿಗೊಂಡವು. ಹಸಿದು ನೊಂದ ದಿನಗಳೇ ಆದಿ ಮಾನವ ಬದುಕಿನ ಕಥಾನಕಗಳಾದವು ಹೀಗೆ ಅವನ ಬದುಕು ವಿಸ್ತಾರಗೊಂಡಿದೆ. ವೇದ, ಉಪನಿಷತ್ ಸಂದರ್ಭದಲ್ಲೂ ಸಾಮಾನ್ಯ ಮಾನವನ ಭೌತಿಕ ಸ್ಥಿತಿಗಳು ಉತ್ತಮವಾಗಿರಲಿಲ್ಲ. ದುಡಿಯುವ ವರ್ಗ ಕೂಡ ಹಸಿವಿನ ಧಾರುಣ್ಯತೆಯಲ್ಲಿ ಮುಳುಗಿತ್ತು. ತಳಸಮುದಾಯಗಳ ದುಡಿಮೆಯ ಫಲ ಮೇಲ್ವರ್ಗದವರ ಕೈ ಸೇರಿ ದುಡಿಯುವ ವರ್ಗ ಸದಾ ಹಸಿವಿನಿಂದ ಬಳಲುತ್ತಿತ್ತು. ಭರ್ಜರಿಯಾಗಿ ನಡೆಯುತ್ತಿದ್ದ ಯಜ್ಞಯಾಗಾದಿಗಳು ಜನಪರ ಕಾಳಜಿ ಹೊಂದಿರಲಿಲ್ಲ ದುಡಿಯುವ ವರ್ಗವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಉಪಾಯವೇ ಆಗಿದೆ.

ಹಸಿವು ಬಡತನದ ದಟ್ಟ ಅನುಭವ ನಮ್ಮ ಮೌಖಿಕ ಪರಂಪರೆಯಲ್ಲಿದೆ. ಸಂಸ್ಕೃತ ಮಹಾಕಾವ್ಯಗಳಲ್ಲಿ ಅಭಿವ್ಯಕ್ತಿಗೊಳ್ಳದ, ಪಂಡಿತ ಕವಿಗಳು ಮರೆತು ಹೋದ ಹಲವಾರು ಸಮುದಾಯಗಳ ಸಾಮಾಜಿಕ ಸಮಸ್ಯೆಗಳು ನಮ್ಮ ಮೌಖಿಕ ಪರಂಪರೆಯಲ್ಲಿ ಕಾಣುತ್ತೇವೆ. ಪ್ರಭುತ್ವದ ಕಣ್ಣಿಗೆ ಕಾಣದ ಹಲವು ಸಮಸ್ಯೆಗಳು ನಮ್ಮ ಮೌಖಿಕ ಸಾಹಿತ್ಯದಲ್ಲಿದೆ. ನಮ್ಮ ಜನಪದರು ತಮ್ಮೆಲ್ಲ ಬವಣೆಗಳನ್ನು ಮೌನದಲ್ಲೇ ನುಂಗಿಕೊಂಡು, ನೊಂದು ಗೀತೆಗಳ ಮೂಲಕ ಕಥನಗಳ ಮೂಲಕ ಗಾಥೆಗಳ ಮೂಲಕ, ಆಚರಣೆಗಳ ಮೂಲಕ ಅಭಿವ್ಯಕ್ತಿಗೊಳಿಸುತ್ತಾ ಪರಿಹಾರವಿಲ್ಲದೆ, ನಿಟ್ಟುಸಿರಿನಲ್ಲಿ ನೆಮ್ಮದಿಯನ್ನು ಕಂಡುಕೊಂಡಿವೆ. ಹೀಗೆ ನೆಲನಿಂತ ಸಮುದಾಯಗಳೊಳಗೆ ರೂಪುಗೊಂಡ ಪ್ರಭುತ್ವವು, ಹಲವರ ದುಡಿಮೆಯ ಫಲ ಒಂದುಕಡೆಗೆ ಸಂಗ್ರಹಗೊಳ್ಳುತ್ತಿತ್ತು. ಅನಂತರ ನಮ್ಮ ದುಡಿಮೆಯ ಫಲವನ್ನು ಪ್ರಭುತ್ವವು ಭಿಕ್ಷೆಯ ರೀತಿಯಲ್ಲಿ ನೀಡುತ್ತಿತ್ತು. ಜನಸಮುದಾಯಗಳಲ್ಲಿ ಜನಸಂಖ್ಯೆ ವಿಸ್ತಾರಗೊಂಡಂತೆಲ್ಲ ಹೆಚ್ಚು ಹೆಚ್ಚು ಆಹಾರದ ಅಗತ್ಯತೆಗೆ ಹೆಚ್ಚಿತ್ತು. ಹೆಚ್ಚಿದ ಆಹಾರದ ಅಗತ್ಯತೆಗೆ ಪ್ರಭುಗಳು ನೀಡುತ್ತಿದ್ದ ಭಿಕ್ಷೆ ಸಾಲದಾಗುತ್ತಿತ್ತು. ಇಲ್ಲಿಂದಲೇ ಹಸಿವಿನ ಎಳೆಗಳು ಬಿಚ್ಚಿಕೊಳ್ಳುತ್ತಾ, ಪ್ರಕೃತಿ ವಿಕೋಪಗಳು ಕೂಡ ಹಸಿವಿನ ಹೆಚ್ಚಳಕ್ಕೆ ಕಾರಣ. ಅತಿ ಮಳೆಯಾದರೂ, ಮಳೆ ಹೋದರೂ ಹೊಡೆತ ಸಾಮಾನ್ಯ ಮನುಷ್ಯನ ಹೊಟ್ಟೆಗೆ ಹೀಗೆ ರಾಜ ಪರಂಪರೆ ಯುದ್ಧಕ್ಕೂ ಹಸಿವಿನ ಕರಾಳ ರೂಪಗಳು ಚರಿತ್ರೆಯಲ್ಲಿ ಕಪ್ಪು ಅಥವಾ ಮರೆಮಾಚಿದ ಕಥಾನಕಗಳಾಗಿವೆ. ಪ್ರತಿ ಸಾಮ್ರಾಜ್ಯಗಳ ವೈಭವದ ವರ್ಣನೆಗಳ ಭರಾಟೆಯಲ್ಲಿ ಒಳಗಿನ ಹಸಿವನ್ನು ತೆರೆದಿಡುವಲ್ಲಿ ನಮ್ಮ ಇತಿಹಾಸದ ಪಠ್ಯಗಳು ಸೋತಿವೆ.

೨.೧ ಇತಿಹಾಸದಲ್ಲಿ ಹಸಿವಿನ ಚಾರಿತ್ರಿಕ ನೆಲೆ

ಸಾಮ್ರಾಜ್ಯಗಳ ವೈಭವದಲ್ಲಿ ಸಾಮಾನ್ಯರ ಹಸಿವು ಬೂದಿ ಮುಚ್ಚಿದ ಕೆಂಡದಂತೆ ಕಣ್ಮರೆಯಾಗಿಬಿಟ್ಟಿದೆ. ರಾಜ–ರಾಣಿ–ವೇಶ್ಯೆಯರ ವೈಭವದ ಚರಿತ್ರೆಯಲ್ಲಿ ಸಾಮಾನ್ಯ ಜನರ ಛಿದ್ರಗೊಂಡ ಬದುಕು ಚರಿತ್ರೆಕಾರರಿಗೆ ಮುಖ್ಯವಾಗಲಿಲ್ಲ. ಇಂತ ಕರಾಳ ವೈಭವದ ಚರಿತ್ರೆಯನ್ನು ನಾವೆಲ್ಲ ಓದುತ್ತಿದ್ದೇವೆ. ಮಾನವ ಇತಿಹಾಸದ ಉದ್ದಕ್ಕೂ ಹಸಿವಿನ ಧಾರುಣತೆಯನ್ನು ಕಾಣುತ್ತೇವೆ. ಹಸಿವಿನ ಧಾರುಣತೆಯನ್ನು ಚಾರಿತ್ರಿಕವಾಗಿ ಗಮನಿಸಿದಾಗ ಫ್ರಾನ್ಸ್ ಮಹಾ

ಕ್ರಾಂತಿಗೆ ಹಲವು ಸಮಸ್ಯೆಗಳಲ್ಲಿ ಹಸಿವು ಕೂಡ ಒಂದಾಗಿತ್ತು ಫ್ರಾನ್ಸ್‌ನಲ್ಲಿ ಬಹುಕಾಲದಿಂದ ಇದ್ದ ರಾಜವ್ಯವಸ್ಥೆಯು ಹಲವಾರು ನ್ಯೂನತೆಗಳಿಂದ ಕೂಡಿದ್ದು, ಕೊಳೆತು ನಾರುವಂತಹ ವ್ಯವಸ್ಥೆಯಾಗಿದ್ದಿತು. ಅನೇಕ ವರ್ಷಗಳಿಂದ ನಿರಂಕುಶರು ಮತ್ತು ದರ್ಪಿಷ್ಟ ಪ್ರಭುಗಳು ಆದ ರಾಜರು ಆಳುತ್ತಿದ್ದರು. ರಾಜ್ಯ ಮತ್ತು ಪ್ರಜೆಗಳಿರುವುದು ತಮಗಾಗಿ, ತಮ್ಮ ವಿಲಾಸಕ್ಕಾಗಿ ಮತ್ತು ವೈಭವಕ್ಕಾಗಿ ಎನ್ನುವುದು ಇವರ ಕಲ್ಪನೆ.

೧೪ನೇ ಲೂಯಿಯ ತನ್ನ ಕಟ್ಟಡಗಳು, ಆಸ್ಥಾನಿಕರ, ನಲ್ಲೆಯರ ಮತ್ತು ದೀರ್ಘವು ಆಯಶ್ವಿಯು ಆದ ಯುದ್ದಗಳ ಮೇಲಿನ ದುಂದುವೆಚ್ಚ ಮತ್ತು ದುರ್ವೆಚ್ಚಗಳ ಮೂಲಕ ಜನತೆಯ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹೊರಿಸಿ ಅವರನ್ನು ನಿರ್ಗತಿಕರನ್ನಾಗಿ ಮಾಡಿದನು. ಇವನ ಕಾಲದಲ್ಲಿ ಫ್ರಾನ್ಸ್ ಹೊರನೋಟಕ್ಕೆ ಆಕರ್ಷಕವಾಗಿ ಕಂಡರೂ ಆಂತರಿಕವಾಗಿ ಆರ್ಥಿಕ ದು:ಸ್ಥಿತಿಗೆ ಒಳಗಾಗಿ ಆರ್ಥಿಕ ದಿವಾಳಿತನದತ್ತ ಸಾಗಿದ್ದಿತು. "ತೋಟ ಶೃಂಗಾರ, ಒಳಗೆ ಗೋಳಿಸೊಪ್ಪು"[೩] ಎಂಬ ಉಕ್ತಿಗೆ ಫ್ರಾನ್ಸ್ ಸರಿ ದೊರೆಯಾಗಿದ್ದಿತು. ಮೇಲ್ವರ್ಗದ ಫಾದರಿಗಳು ಮತ್ತು ಶ್ರೀಮಂತರು ವೈಭವದ ವಿಲಾಸದ ಮತ್ತು ಶ್ರೀಮಂತಿಕೆಯ ಐಷಾರಾಮದ ಜೀವನವನ್ನು ನಡೆಸುತ್ತಿದ್ದರೆ ಬಹುಸಂಖ್ಯಾತ ಸಾಮಾನ್ಯ ಜನತೆ ಕಡುಬಡತನದ ನಿರ್ಗತಿಕ ಜೀವನವನ್ನು ನಡೆಸುತ್ತಿದ್ದರು. ಇವರದು ಹೊಟ್ಟೆ ಬಟ್ಟೆಗಿಲ್ಲದ ಜೀವನ. ಒಂದು ಹೇಳಿಕೆಯಂತೆ "ಫ್ರಾನ್ಸ್‌ನಲ್ಲಿ ಹತ್ತು ಮಂದಿಯಲ್ಲಿ ಒಂಬತ್ತು ಮಂದಿ ಹಸಿವಿನಿಂದ ಸತ್ತರೆ ಉಳಿದ ಒಬ್ಬನು ಅಜೀರ್ಣದಿಂದ ಸಾಯುತ್ತಿದ್ದರು." "In France, out of 10 Persons a persons died of hunger the remaining one person died of indigestion"[೪] ಫ್ರಾನ್ಸಿನ ಜನತೆಗೆ ತೆರಿಗೆ ವಸೂಲಿ ಅಧಿಕಾರಿಗಳು ರಾಕ್ಷಸ ಸದೃಶ್ಯರಾಗಿದ್ದರು. ಅವರ ಭ್ರಷ್ಟಾಚಾರ, ಕ್ರೂರತೆ ಮತ್ತು ಹಿಂಸೆಗಳು ಅಮಾನುಷವಾಗಿದ್ದವು. ತೆರಿಗೆ ಅಧಿಕಾರಿಗಳ ಆಗಮನದ ಸುದ್ದಿ ತಿಳಿದಾಕ್ಷಣ ಹಳ್ಳಿಗಾಡಿನ ಜನ ತಮ್ಮ ಮನೆ ಮಠಗಳನ್ನು ತೊರೆದು ಕಾಡು ಮೇಡುಗಳಿಗೆ ಓಡಿ ಹೋಗುತ್ತಿದ್ದರು. ಇದು ಫ್ರಾನ್ಸಿನ ಜನತೆಯ ಹಸಿವಿನ ದಟ್ಟ ದಾರಿದ್ರ್ಯಕ್ಕೆ ಕೈಗನ್ನಡಿ. ಫ್ರಾನ್ಸಿನಾದ್ಯಂತ ಈ ಎಲ್ಲ ಘಟನೆಗಳು ಜರುಗುತ್ತಿರುವ ಸಮಯದಲ್ಲಿ ಮತ್ತೊಂದು ಪ್ರಮುಖ ಘಟನೆ ಫ್ಯಾರಿಸ್ಸಿನಲ್ಲಿ ಅಕ್ಟೋಬರ್ ತಿಂಗಳಿನ ಆದಿ ಭಾಗದಲ್ಲಿ ಜರುಗಿತು. ಈ ಘಟನೆಯನ್ನು ರೊಟ್ಟಿ 'ಹಗರಣ' ಅಥವಾ "ವರ್ಸೈಲ್ಸಿಗೆ ಮಹಿಳೆಯ ಮುತ್ತಿಗೆ" ಎಂದು ವರ್ಣಿಸಲಾಗಿದೆ.

ಆನಿಬೆಸೆಂಟರು ಬರೆದಿರುವಂತೆ "ಈಗ ಎಲ್ಲವೂ ಚೆನ್ನಾಗಿ ಕಾಣುತ್ತಿದ್ದಿತು. ಸಭೆಯು ತನ್ನ ಕಾರ್ಯವನ್ನು ಆರಂಭಿಸಿದ್ದಿತು. ಫ್ಯಾರಿಸ್ಸಿಗೆ ಸ್ವಯಂ ಆಡಳಿತ ದೊರೆತಿದ್ದತು. ರಾಜಕುಮಾರರು ಓಡಿಹೋಗಿದ್ದರು. ನೆಕ್ಕರನು ವಿಜಯೋತ್ಸಾಹದಿಂದ ಹಿಂತಿರುಗಿದ್ದನು. ರಾಜನು ಜನತೆಯ ಸ್ನೇಹಿತನಾಗಿದ್ದನು. ಅಯ್ಯೋ! ಮತ್ತೊಂದು ಅತಿ ತೀವ್ರವಾದ ಕ್ರಾಂತಿ ಬೆದರಿಕೆಯನ್ನುಂಟು ಮಾಡಿದ್ದಿತು. ಅದು ಹಸಿವಿನ ಕ್ರಾಂತಿಯಾಗಿದ್ದಿತು"[೫] ಜನರ ಹಸಿವು ಮತ್ತು ಸಾವಿನ ಸಮಸ್ಯೆಗಳು

ಕ್ರಾಂತಿಯ ಮತ್ತೊಂದು ಪ್ರಖ್ಯಾತ ಘಟನೆಗೆ ಕಾರಣವಾದವು. ಫ್ಯಾರಿಸ್ಸಿನಲ್ಲಿ ಮತ್ತೊಮ್ಮೆ ಸುದ್ದಿ ಪ್ರಚಲಿತವಾಯಿತು. ರಾಜನು ಮತ್ತೊಮ್ಮೆ ಸೈನ್ಯವನ್ನು ಸಂಗ್ರಹಿಸುತ್ತಿದ್ದಾನೆ. ತ್ರಿವರ್ಣಧ್ವಜಕ್ಕೆ ಅವಮಾನವೆಸಗಲಾಗಿದೆ. ರಾಣಿ ರಾಷ್ಟ್ರೀಯ ಸಭೆಯ ಕಾರ್ಯಗಳನ್ನು ರದ್ದುಗೊಳಿಸಲು ಉದ್ಯುಕ್ತಳಾಗಿದ್ದಾಳೆ ಎಂಬ ಸುದ್ದಿಗಳು ಜನರ ಕಿವಿ ಮುಟ್ಟಿದವು. ರಾಜ ಮತ್ತು ರಾಣಿಯರು ವರ್ಸೈಲ್ಸ್‌ಗಿಂತ ಫ್ಯಾರಿಸ್ಸಿನಲ್ಲಿ ಇರುವುದೇ ಕ್ಷೇಮ. ಇಲ್ಲಿ ಅವರನ್ನು ಫ್ಯಾರಿಸ್ಸಿನ ಕಮ್ಯೂನ್ ಮತ್ತು ರಾಷ್ಟ್ರೀಯ ರಕ್ಷಣಾ ಪಡೆ ಸದಾಕಾಲ ಗಮನಿಸಬಹುದೆಂಬ ಅಭಿಪ್ರಾಯ ಬೆಳೆಯಿತು. ಇದೇ ಸಮಯಕ್ಕೆ ಸರಿಯಾಗಿ ಫ್ಯಾರಿಸ್ಸಿನಲ್ಲಿ ಬರಗಾಲದಿಂದಾಗಿ ರೊಟ್ಟಿಗೆ ತೀವ್ರ ಅಭಾವ ಉಂಟಾಯಿತು. ಜನ ಚೂರು ರೊಟ್ಟಿಗಾಗಿ ಪರಿತಪಿಸುವಂತಾಯಿತು. ರಾಜನ ಉದಾರತೆ ಮತ್ತು ಸಹೃದಯತೆಯ ಬಗೆಗೆ ಕತೆಗಳು ಹುಟ್ಟಿಕೊಂಡವು. ಜನತೆಯ ಮನಸ್ಸಿನಲ್ಲಿ "ರಾಜನು ಇದ್ದಲ್ಲಿ ನಮಗೆಲ್ಲ ರೊಟ್ಟಿ ದೊರೆಯುತ್ತದೆ" ಎಂಬ ಭಾವನೆ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರಲ್ಲಿ ಕಂಡು ಬಂದಿತು. ರಾಜ ಫ್ಯಾರಿಸ್ಸಿಗೆ ಬಂದು ಹಸಿವಿನಿಂದ ಸಾಯುತ್ತಿರುವ ಜನರನ್ನು ಉಳಿಸಲೆಂದು ಬಯಸಿದರು. ಅಕ್ಟೋಬರ್ ೫ ರಂದು ಫ್ಯಾರಿಸ್ಸಿನ ಮಹಿಳಾ ಸಮೂಹ ದಂಗೆಯೆದ್ದು ವರ್ಸೈಲ್ಸ್ ಅರಮನೆಯ ಮುತ್ತಿಗೆಯನ್ನಾರಂಭಿಸಿದರು. ಯುವತಿಯರು ಮತ್ತು ಮುದುಕಿಯರು ಸ್ಫುರದ್ರೂಪಿಗಳು ಮತ್ತು ಕುರೂಪಿಗಳು, ಬಲಹೀನರು ಮತ್ತು ಬಲಯುತರು, ಚಿಂದಿ ಬಟ್ಟೆಯವರು, ಮತ್ತು ಮಸಿನ್ ಬಟ್ಟೆ ತೊಟ್ಟವರು ಸೇರಿದಂತೆ ಎಲ್ಲ ವರ್ಗದ ಎಲ್ಲ ಬಗೆಯ ಸಾವಿರಾರು ಮಹಿಳೆಯರು ಫ್ಯಾರಿಸ್ಸಿನ ಬೀದಿಗಳಲ್ಲಿ ಪ್ರದರ್ಶನ ನಡೆಸಿದರು. ಕ್ರಾಂತಿಕಾರರು ಇವರನ್ನು ವರ್ಸೈಲ್ಸಿಗೆ ಮುತ್ತಿಗೆ ಹಾಕುವಂತೆ ಪ್ರಚೋದಿಸಿ ಅವರನ್ನು ಸೇರಿಕೊಂಡರು. ಅವರೆಲ್ಲರೂ 'ರೊಟ್ಟಿ ಬೇಕು' ಎಂಬ ಘೋಷಣೆಯೊಂದಿಗೆ ಅರಮನೆಯತ್ತ ಧಾವಿಸಿದರು. ಈ ತಾಯಂದಿರು, ಹೆಂಡತಿಯರು, ಸೋದರಿಯರು ತಮ್ಮ ಮಕ್ಕಳ ಗೋಳಿನ ಕರೆಯಿಂದ ಬೇಸತ್ತು ಹೋಗಿ ಬದಲಾವಣೆಯನ್ನು ಬಯಸಿ ದಂಗೆಯೆದ್ದರು. ಅವರೂ ಬರಗಾಲವನ್ನೆ ತಮ್ಮ ಸೈನ್ಯದ ದಂಡನಾಯಕನ್ನಾಗಿ ಮಾಡಿಕೊಂಡು ವರ್ಸೈಲ್ ಅರಮನೆಗೆ ಮುತ್ತಿಗೆ ಹಾಕಿದರು"[೬] ಎಂದು ಅನಿಬೆಸೆಂಟರು ವರ್ಣಿಸಿದ್ದಾರೆ.

ಹಾಗೆಯೇ ಅಕ್ಟೋಬರ್ ೫ರ ಸಂಜೆ ವರ್ಸೈಲ್ ಅರಮನೆಯನ್ನು ತಲುಪಿದ ಫ್ಯಾರಿಸ್ಸಿನ ಈ ಜನಜಂಗುಳಿ ಅರಮನೆಯ ಮುಖ್ಯದ್ವಾರದಲ್ಲಿ ರಾಜನ ಬರವಿಗಾಗಿ ಮತ್ತು ಅವನಿಂದ ರೊಟ್ಟಿಯ ಭರವಸೆಗಾಗಿ ರಾತ್ರಿಯೆಲ್ಲ ಕಾದಿತ್ತು. ಆದರೆ ಅವರ ನಿರೀಕ್ಷೆ ಫಲಿಸಲಿಲ್ಲ. ರಾಜನಾಗಲಿ, ಅಥವಾ ಅಧಿಕಾರಿಗಳಾಗಲಿ, ಬಂದು ಇವರ ಸಮಸ್ಯೆಗಳನ್ನು ವಿಚಾರಿಸಲಿಲ್ಲ. ಇದರಿಂದ ಮನನೊಂದು ತಾಳ್ಮೆಯನ್ನು ಕಳೆದುಕೊಂಡ ಈ ಜನಜಂಗುಳಿ ರೊಚ್ಚಿಗೆದ್ದು, ಅಕ್ಟೋಬರ್ ೬ರ ಬೆಳಗ್ಗೆ ಅರಮನೆಯ ಮಹಾದ್ವಾರವನ್ನು ಒಡೆದು ಪುಡಿಮಾಡಿ ಅಲ್ಲಿದ್ದ ಸ್ವಿಸ್ ರಕ್ಷಣಾ ಪಡೆಯವರನ್ನು ಕೊಂದು ಅರಮನೆಗೆ ಮುತ್ತಿಗೆ ಹಾಕಿತು. ರಾಣಿಯು ಹೆದರಿ ರಕ್ಷಣೆಗಾಗಿ ರಾಜನ ಕೋಣೆಗೆ ಓಡಿದಳು. ಕಟ್ಟಕಡೆಗೆ ರಾಜನು ಅರಮನೆಯ ಉಪ್ಪರಿಗೆಯ ಮೇಲೆ

ಬಂದನು. ಜನರನ್ನು ಉದ್ದೇಶಿಸಿ ಮಾತನಾಡಿ ಅವರಿಗೆ ರೊಟ್ಟಿಯನ್ನು ಒದಗಿಸುವ ಭರವಸೆಯನಿತ್ತನು. ಆದರೆ ಈ ಟೊಳ್ಳು ಭರವಸೆಯಿಂದ ತೃಪ್ತರಾಗದ ಹಸಿದ ಜನತೆ ರಾಜ ಮತ್ತು ರಾಣಿಯರು ತಮ್ಮೊಂದಿಗೆ ಪ್ಯಾರಿಸ್ಸಿಗೆ ಬರುವಂತೆ ಒತ್ತಾಯಿಸಿತು. ರಾಜ ಮತ್ತು ರಾಣಿಯರು ಬಲತ್ಕಾರಕ್ಕೆ ಕಟ್ಟುಬಿದ್ದು ಮನಸ್ಸಿಲ್ಲದ ಮನಸ್ಸಿನಿಂದ ವರ್ಸೈಲ್ಸ್ ಅರಮನೆಯನ್ನು ತ್ಯಜಿಸಿ ಪ್ಯಾರಿಸ್ಸಿನಲ್ಲಿ ತಮ್ಮ ಪ್ರಜೆಗಳೆನಿಸಿಕೊಂಡವರ ಮಧ್ಯೆ ವಾಸಿಸಲು ಒಪ್ಪಿದರು. ರಾಜ ಮತ್ತು ಅವನ ಕುಟುಂಬದವರನ್ನು ಸಣ್ಣ ಕೈಗಾಡಿಯಲ್ಲಿ ಕೂಡಿಸಿಕೊಂಡು ವಿಜಯೋತ್ಸಾಹದಿಂದ ಜನಜಂಗುಳಿ ಪ್ಯಾರಿಸ್ಸಿಗೆ ಮರಳಿತು. ಮಾರ್ಗದಲ್ಲಿ ಅವರು ನಾವು ಈಗ ರೊಟ್ಟಿಯವನನ್ನು ರೊಟ್ಟಿಯವನ ಹೆಂಡತಿಯನ್ನು ಮತ್ತು ರೊಟ್ಟಿಯವನ ಮಗನನ್ನು ಕರೆದೊಯ್ಯುತ್ತಿದ್ದೇವೆ. ಇನ್ನು ಮುಂದೆ ನಮಗೆ ರೊಟ್ಟಿಯ ಅಭಾವವೇ ಇಲ್ಲ. "we are bringing the baker, the bakers wife and the bakers son: we shall not lack bread"[೬] ಎಂದು ಕೂಗುತ್ತಿದ್ದರು. ಪ್ಯಾರಿಸ್ಸಿನಲ್ಲಿ ರಾಜ ಮತ್ತು ರಾಣಿಯರನ್ನು ಚಿಕ್ಕದಾದ 'ಟೂಲಿರಿಯಸ್' ಅರಮನೆಯನಲ್ಲಿ ಗೃಹಬಂಧನದಲ್ಲಿ ಇರಿಸಲಾಯಿತು.

೨.೨ ಹಸಿವಿನ ಹೆಚ್ಚಳಕ್ಕೆ ಕಾರಣ ನೆಪೋಲಿಯನ್ನರ ರಷ್ಯಾದ ಮೇಲಿನ ದಂಡಯಾತ್ರೆ

ನೆಪೋಲಿಯನ್ನನು ರಷ್ಯಾದ ಮೇಲೆ ದಂಡಯಾತ್ರೆಯನ್ನು ಕೈಗೊಂಡ ಸಂದರ್ಭದಲ್ಲಿ ವಿವಿಧ ಜನಾಂಗಗಳಿಂದ ಕೂಡಿದ ಆರು ಲಕ್ಷ ಮಹಾಸೈನ್ಯವನ್ನು ಕೂಡಿಸಿಕೊಂಡು ೧೮೧೨ರ ಜೂನಿನಲ್ಲಿ ರಷ್ಯಾದ ಕಡೆಗೆ ಪ್ರಯಾಣ ಬೆಳೆಸಿದನು. ಈ ಮಹಾಸೈನ್ಯದ ಯಂತ್ರವು ಅದರ ಭಾರದಿಂದಲೇ ಕುಸಿಯಲಾರಂಭಿಸಿತು. ಸೈನ್ಯವು ಐದು ದಿನ ಮುಂದುವರಿಯುವುದಕ್ಕೆ ಮುಂಚೆಯೇ ಆಹಾರ ಪೂರೈಕೆಯ ವಿಭಾಗವು ತೊಂದರೆ ಎದುರಿಸಿತು. ಆಹಾರದ ಅಭಾವ ತಲೆದೋರಿತು. ಪೌಷ್ಟಿಕ ಆಹಾರವಿಲ್ಲದೆ ಕುದುರೆಗಳು ಸಾವಿರಾರು ಸಂಖ್ಯೆಯಲ್ಲಿ ಸತ್ತವು. ಶಸ್ತ್ರಪಡೆಗೆ ಗಂಡಾಂತರವೊದಗಿತು. ರಷ್ಯನ್ನರ ಯುದ್ಧ ನೀತಿ ಈ ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸಿತು. ನೆಪೋಲಿಯನ್ನನ ಈ ಮಹಾಸೈನ್ಯರೂಪದ ಮುಂದೆ ನಿಂತು ಯುದ್ಧ ಮಾಡುವುದರ ಅಪ್ರಯೋಜಕತೆಯನ್ನು ಅರಿತು ಅವರು ಹೋರಾಡದೆ ಒಳ ಪ್ರದೇಶಗಳಿಗೆ ಹಿಂದೆ ಸರಿದರು. ರಾಷ್ಟ್ರೀಯ ಮನೋಭಾವನೆ ಮತ್ತು ದೇಶಪ್ರೇಮಗಳು ಯಾವ ಮಟ್ಟ ತಲುಪಿದ್ದವೆಂದರೆ ಅವರು ತಮ್ಮ ಮನೆ ಮಠಗಳಿಗೆ, ಹೊಲಗದ್ದೆಗಳಿಗೆ, ಹಳ್ಳಿ ಮತ್ತು ನಗರಗಳಿಗೆ ತಮ್ಮ ಕೈಯಿಂದಲೇ ಬೆಂಕಿಯಿಟ್ಟರು. ಯಾವುದೇ ದವಸಧಾನ್ಯಗಳು, ಹುಲ್ಲು ಮತ್ತು ಕಾಳುಗಳು ಶತ್ರುವಿನ ಕೈಗೆ ಭೀಳದಂತೆ ನೋಡಿಕೊಂಡರು. ನೆಪೋಲಿಯನ್ನನು ಈ ಎಲ್ಲ ತೊಂದರೆಗಳನ್ನು ಗಮನಿಸದೆ ಯುದ್ಧದ ವಿಜಯದ ಮತ್ತು ಜಾರ್ ಅಲೆಕ್ಸಾಂಡರನ ಆರಣ್ಯಗತಿಯ ಕನಸುಕಾಣುವ ಮಾಸ್ಕೋದ ಕಡೆಗೆ ಮುನ್ನುಗಿದನು. ಮಾರ್ಗದಲ್ಲಿ ರೋಗ-ರುಜಿನಗಳು, ಹಸಿವು, ಫಲಾಯನಗಳು ಮತ್ತು ಅಲ್ಲಲ್ಲಿ ಸೈನ್ಯ ಕೇಂದ್ರಗಳ ಏರ್ಪಾಡುಗಳು ಸೈನ್ಯದ ಸಂಖ್ಯೆಯನ್ನು ಅಪಾಯಕಾರಿಯಾಗಿ ಕಡಿಮೆ ಮಾಡಿದವು.

೨.೩ ಕೈಗಾರಿಕಾ ಕ್ರಾಂತಿಯು ಕೂಡ ಹಸಿವಿನ ಹೆಚ್ಚಳಕ್ಕೆ ಪೂರಕವಾಗಿದೆ.

ಕೈಗಾರಿಕಾ ಕ್ರಾಂತಿಯು ಕೂಡ ಹಸಿವಿನ ಹೆಚ್ಚಳಕ್ಕೆ ಪೂರಕವಾಗಿದೆ. ಕೈಗಾರಿಕಾ ಕ್ರಾಂತಿಯು ಮುಖ್ಯವಾಗಿ ಯೂರೋಪಿನಲ್ಲಿ ಕಡಿಮೆ ಪ್ರದೇಶದಲ್ಲಿ ಹೆಚ್ಚು ಜನರು ಜೀವಿಸಲು ಸಾಧ್ಯಮಾಡಿಕೊಟ್ಟು ಜನ ಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಯಿತು. ಇದಕ್ಕೆ ಕಾರಣ ಕೃಷಿಯ ಯಾಂತ್ರಿಕರಣದಿಂದ ಭೂಮಿಯಿಂದ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಾದುದೇ ಅಲ್ಲದೇ ಕೈಗಾರಿಕೆಯ ವಿಸ್ತರಣೆ ಅನೇಕ ಉದ್ಯೋಗಗಳನ್ನು ನಿರ್ಮಿಸಿ ಕೃಷಿಯನ್ನು ಬಿಟ್ಟು ಜನರಿಗೆ ಬದುಕಲು ಅವಕಾಶ ಮಾಡಿಕೊಟ್ಟುದುದು. ಇದರಿಂದ ಕೈಗಾರಿಕಾ ಸಂಪತ್ತನ್ನು ಹೊಂದಿದ್ದ ರಾಜ್ಯಗಳು ಕೃಷಿಯಿಂದ ಸಾಧ್ಯವಾಗದೆ ಇದ್ದ, ಅನೇಕ ಪಟ್ಟು ಹೆಚ್ಚು ಜನಸಂಖ್ಯೆಯನ್ನು ಹೊಂದಲು ಮತ್ತು ಅವರಿಗೆ ಉತ್ತಮ ಜೀವನವನ್ನು ಒದಗಿಸಲು ಸಾಧ್ಯಮಾಡಿಕೊಟ್ಟಿತು. ಜನಸಂಖ್ಯೆಯ ಹೆಚ್ಚಳ ಮತ್ತು ಕೈಗಾರಿಕ ನಗರಗಳಲ್ಲಿ ಜನದಟ್ಟಣೆ ಹೆಚ್ಚಾದುದು ಅನೇಕ ತೀವ್ರತರವಾದ ಸಮಸ್ಯೆಗಳ ಉದ್ಭವಕ್ಕೆ ಕಾರಣವಾದವು. ನಿರುದ್ಯೋಗ, ಕಡಿಮೆ ಆದಾಯ, ಪೌಷ್ಠಿಕ ಆಹಾರದ ಕೊರತೆ, ಆಹಾರದ ಅಭಾವ, ವಾಸಗೃಹಗಳ ಕೊರತೆ, ಅಪರಾಧಗಳು ಇತ್ಯಾಧಿ ಸಮಸ್ಯೆಗಳು ಸಾಮಾಜಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದವು.

೨.೪ ನಗರೀಕರಣ ಕೂಡ ಹಸಿವಿನ ಹೆಚ್ಚಳಕ್ಕೆ ಕಾರಣವಾಗಿದೆ.

ನಗರೀಕರಣ ಕೂಡ ಹಸಿವಿನ ಹೆಚ್ಚಳಕ್ಕೆ ಕಾರಣವಾಗಿದೆ. ೧೯ನೇ ಶತಮಾನದ ಕೊನೆಯ ಮೂವತ್ತು ವರ್ಷಗಳಲ್ಲಿ ವ್ಯವಸಾಯ ನಿರತ ಜನರಲ್ಲಿ ೧/೩ ಭಾಗ ಜನರು ಶಾಶ್ವತವಾಗಿ ವ್ಯವಸಾಯವನ್ನು ತೊರೆದು ಕೈಗಾರಿಕೆಗಳಲ್ಲಿ ನಿರತರಾದರು. "೧೯೨೦ರ ಹೊತ್ತಿಗೆ ಉತ್ತರ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಜನಸಂಖ್ಯೆಯ ಅರ್ಧಭಾಗ ಜನರು ನಗರಗಳಲ್ಲಿ ವಾಸಿಸುತ್ತಿದ್ದರು. ಗ್ರಾಮಪ್ರದೇಶದಿಂದ ನಗರಗಳಿಗೆ ಜನರು ಹೀಗೆ ಅಧಿಕ ಸಂಖ್ಯೆಯಲ್ಲಿ ವಲಸೆ ಹೋಗುವುದಕ್ಕೆ ನಗರ ಜೀವನದ ಆಕರ್ಷಣೆ ಮತ್ತು ಕೃಷಿಯ ಯಾಂತ್ರಿಕರಣದಿಂದ ಕಾರ್ಮಿಕರ ಬಳಕೆ ಕಡಿಮೆಯಾದುದು ಮುಖ್ಯ ಕಾರಣ. ನಗರೀಕರಣದ ಪರಿಣಾಮಗಳು ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳ ಮಿಶ್ರಣವಾಗಿದ್ದವು. ಇದು ಜನರನ್ನು ಕೃಷಿಯಂತಹ ಕಷ್ಟದಾಯಕವಾದ ಮತ್ತು ಶ್ರಮದ ಜೀವನದಿಂದ ಮುಕ್ತ ಮಾಡಿತು. ಆಧುನಿಕ ನಾಗರೀಕತೆಯ ಫಲಗಳನ್ನು ಶ್ರಮಿಕರ ಮನೆ ಬಾಗಿಲಿಗೂ ತಂದಿತು. ಅದರ ಸುಖ ಮತ್ತು ಮನರಂಜನೆಗಳು ಹೆಚ್ಚಿದವು. ಆದರೆ ಅದು ಈ ಒಳ್ಳೆಯ ಪರಿಣಾಮಗಳೊಂದಿಗೆ ಕೆಲವೊಂದು ಕೆಟ್ಟ ಪರಿಣಾಮಗಳನ್ನು ಉಂಟುಮಾಡಿತು. ಇದು ಜನರನ್ನು ಹೆಚ್ಚು ಉತ್ಪಾದನೆಯ ಫಲವಾಗಿ ಉದ್ಯೋಗವನ್ನು ಕಳೆದುಕೊಳ್ಳುವಂತಹ ಅಪಾಯಗಳಿಗೆ ಮತ್ತು ತಮ್ಮ ಸ್ವಾಧೀನದಲ್ಲಿಲ್ಲದ ಪದ್ಧತಿಯ ಕೃಪಾಕಟಾಕ್ಷದಲ್ಲಿಟ್ಟಿತು. ನಗರಗಳಲ್ಲಿ ವಸತಿ, ಆರೋಗ್ಯ, ನೈರ್ಮಲ್ಯ, ಶಿಕ್ಷಣ, ಆಹಾರ ಇತ್ಯಾದಿ ಸಮಸ್ಯೆಗಳು ತೀವ್ರವಾದವು"[೭]

೧೮೬೧ರಲ್ಲಿ ಎರಡನೇ ನಿಕೋಲಸನು ಜೀತ ವಿಮೋಚನೆಯ ಶಾಸನವನ್ನು ಜಾರಿಗೆ ತಂದನು. ರಷ್ಯದಲ್ಲಿ ಜೀತವಿಮೋಚನೆ ಮಾಡಿದುದು ಇವನ ಮಹತ್ಸಾಧನೆಗಳಲ್ಲಿ ಒಂದಾಗಿದ್ದಿತು. ಶತಮಾನಗಳ ಜೀತದ ಶೃಂಖಲೆಯಿಂದ ರಷ್ಯಾದ ಅಸಂಖ್ಯಾತ ಜನರನ್ನು ವಿಮೋಚನೆ ಮಾಡಿ ಇವನು ಅವರೆಲ್ಲರ ಕೃತಜ್ಞತೆಗೆ ಕಾರಣನಾದನು. ಜನರನ್ನು ಜೀತದಿಂದ ವಿಮೋಚನೆ ಮಾಡುವ ಕೆಲಸ ೧೮೬೧ರಲ್ಲಿ ಆರಂಭವಾಗಿ ಹಲವು ವರ್ಷಗಳ ಕಾಲ ಮುಂದುವರಿಯಿತು. ರಾಜರ ಒಡೆತನದಲ್ಲಿದ್ದ ಭೂಮಿಗಳಲ್ಲಿ ಇದು ಬಹಳ ಸುಲಭವಾಗಿದ್ದಿತು. ಜೀತದಾಳುಗಳು ಸ್ವತಂತ್ರರೆಂದು, ಅವರು ಸರ್ಕಾರಕ್ಕೆ ಯಾವುದೇ ಗೇಣಿಯನ್ನು ಕೊಡಬೇಕಾಗಿಲ್ಲವೆಂದು ಹೇಳಲಾಯಿತು. . ಇದರಿಂದ ಜೀತಗಾರರು ತಂತಮ್ಮ ಭೂಮಿಗೆ ಒಡೆಯರಾಗಿ ಮಾರ್ಪಟ್ಟರು. ಆದರೆ ಇದೇ ನೀತಿಯನ್ನು ಖಾಸಗಿ ಭೂಮಿಗಳಲ್ಲಿ ಜಾರಿಗೆ ತಂದಲ್ಲಿ ಜೀತದಾರರಿಗೆ ಮತ್ತು ಭೂಮಾಲೀಕರಿಗೆ ತೊಂದರೆಯಾಗುವ ಸಂಭವವಿದ್ದಿತು. ಜೀತದಾರರಿಗೆ ಭೂಮಿಯ ಒಡೆತನ ನೀಡದೆ ಅವರನ್ನು ಸ್ವತಂತ್ರಗೊಳಿಸಿದ್ದಲ್ಲಿ ಅವರು ಹೊಟ್ಟೆಗಿಲ್ಲದೆ ಸಾಯಬೇಕಾಗಿತ್ತು. ಅವರು ದಿನಗೂಲಿಗಾಗಿ ಭೂಮಾಲೀಕರ ಬಳಿ ದುಡಿಯಬೇಕಾಗಿ ಬಂದು ಅವರ ಜೀವನ ಮತ್ತಷ್ಟು ಶೋಚನಿಯವಾಗಿದ್ದಿತು. ಭೂಮಾಲೀಕರ ಭೂಮಿಯನೆಲ್ಲ ಜೀತದಾರರಿಗೆ ಕೊಟ್ಟಿದ್ದಲ್ಲಿ ಭೂಮಾಲೀಕರು ನಿರ್ಗತಿರಾಗಿದ್ದರು. ಇದನ್ನು ತಪ್ಪಿಸುವ ಸಲುವಾಗಿ ಕೆಲವು ಮಾರ್ಪಾಟು ಮಾಡಲಾಯಿತು. ಪ್ರತಿ ರೈತನಿಗೂ ಒಂದು ಮನೆ ಮತ್ತು ಒಂದಿಷ್ಟು ಭೂಮಿಯನ್ನು ನೀಡಲು ನಿರ್ಧರಿಸಲಾಯಿತು. ಪ್ರತಿಗ್ರಾಮದಲ್ಲಿ ಭೂಮಾಲೀಕರು ಒಂದು ತುಂಡು ಭೂಮಿಯನ್ನು ಗ್ರಾಮಸಮುದಾಯಕ್ಕೆ ನೀಡಬೇಕಾಗಿದ್ದಿತು. ಇದನ್ನು ರೈತರಿಗೆ ಹಂಚಲಾಗುತ್ತಿದ್ದಿತು. ಆದರೆ ಇದರ ಮೇಲೆ ಯಾವುದೇ ವ್ಯಕ್ತಿಯ ಒಡೆತನವಿರಲಿಲ್ಲ. ಹಲವಾರು ವರ್ಷಗಳಿಗೊಮ್ಮೆ ಇದನ್ನು ಪುನಃ ಹಂಚಲಾಗುತ್ತಿದ್ದಿತು. ಭೂಮಿ ನೀಡಿದ ಭೂಮಾಲೀಕನಿಗೆ ಹಣದ ರೂಪದಲ್ಲಿ ಪರಿಹಾರ ನೀಡಲಾಗಿದ್ದಿತು. ರಾಜ್ಯದ ಬೊಕ್ಕಸದಿಂದ ಈ ಹಣವನ್ನು ನೀಡಿ. ಸರ್ಕಾರ ಇದನ್ನು ರೈತರಿಂದ ಸಂಗ್ರಹಿಸುತ್ತಿದ್ದರು

೨.೫ ಯುದ್ಧಗಳು ಹಸಿವಿನ ಹೆಚ್ಚಳಕ್ಕೆ ಕಾರಣವಾಗಿವೆ.

ಮೊದಲ ಮಹಾಯುದ್ಧದ ಪರಿಣಾಮಗಳು ಈ ಯುದ್ಧದಿಂದ ಯುದ್ಧರಂಗಗಳಲ್ಲಿ ಸತ್ತವರ ಸಂಖ್ಯೆ ೮೦ ಲಕ್ಷವನ್ನು ಮೀರಿದ್ದಿತು. ಗಾಯಗೊಂಡವರ ಮತ್ತು ಅಂಗವಿಕಲರಾದವರ ಸಂಖ್ಯೆ ೨೪೦ ಲಕ್ಷಕ್ಕೂ ಹೆಚ್ಚು ಈ ಯುದ್ಧದಿಂದ ಒದಗಿದ ರೋಗ-ರುಜಿನಾತಿಗಳಿಂದ ಮತ್ತು ಆಹಾರದ ಅಭಾವಗಳಿಂದ ಸತ್ತವರ ಸಂಖ್ಯೆಯೂ ವಿಪರೀತವಾಗಿದ್ದಿತು. ಮೊದಲು ಮಹಾಯುದ್ಧದಿಂದ ಆದ ಆರ್ಥಿಕ ಹಾನಿ ವಿಪರೀತವಾದುದು. ರಷ್ಯದ ಕ್ರಾಂತಿ ೧೯೧೭ರ ಮಾರ್ಚ್ ೮ರಂದು ಪೆಟ್ರೋಗ್ರಾಡ್ (ಸೇಂಟ್ ಪೀಟರ್ಸ್ ಬರ್ಗ್) ನಗರದಲ್ಲಿ ನಡೆದ ಪ್ರದರ್ಶನದಿಂದ ಆರಂಭವಾಯಿತು. ಅಲ್ಲಿನ ಕಾರ್ಮಿಕರು ಮತ್ತು ಸೈನಿಕರು 'ಆಹಾರ ಮತ್ತು ಶಾಂತಿ'/'Food and peace' ಯ ಬೇಡಿಕೆಗಳನ್ನು ಮುಂದೊಡ್ಡಿ ಬೃಹತ್ ಪ್ರದರ್ಶನ ನಡೆಸಿದರು. ಕ್ರಾಂತಿಯು

ಬಹು ಬೇಗ ಕಾಡ್ಗಿಚ್ಚಿನಂತೆ ರಷ್ಯದ ಎಲ್ಲಾ ನಗರಗಳಿಗೆ ಹರಡಿತು. ಮೊದಲ ಮಹಾಯುದ್ಧ ಇಟಲಿಗೆ ಹಲವಾರು ಸಮಸ್ಯೆಗಳನ್ನು ನಿರ್ಮಿಸಿದ್ದಿತು. ಇಟಲಿಯ ಆರ್ಥಿಕವ್ಯವಸ್ಥೆ ಕುಸಿದು ಬಿದ್ದು ಹಣದುಬ್ಬರದ ಸಮಸ್ಯೆ ತೀವ್ರವಾಗಿದ್ದಿತು. ನಿರುದ್ಯೋಗ ಸಮಸ್ಯೆ ಜನರನ್ನು ಕಾಡುತ್ತಿದ್ದಿತು. ಯುದ್ಧದ ನಂತರ ಸೈನ್ಯದಿಂದ ಹೊರ ಹಾಕಲ್ಪಟ್ಟ ಮಾಜಿಸೈನಿಕರು ಸರ್ಕಾರಕ್ಕೆ ದೊಡ್ಡ ತಲೆ ನೋವಾಗಿದ್ದರು. ಜೀವನಾವಶ್ಯಕ ವಸ್ತುಗಳ ಅಭಾವ ತಲೆದೋರಿ ಅವುಗಳ ಬೆಲೆ ಗಗನವನ್ನು ಮುಟ್ಟಿತು. ಇದರಿಂದಾಗಿ ಸಾಮಾನ್ಯ ಜನತೆ ಹಸಿವಿನಿಂದ ನರಳಬೇಕಾಯಿತು. ಬಡತನದ ರೇಖೆಯ ಕೆಳಗಿನ ಜನರ ಸಂಖ್ಯೆ ಹೆಚ್ಚಿತು. ಯುದ್ಧದಿಂದ ಒದಗಿದ ಆರ್ಥಿಕ ವಿಪತ್ತು, ನಿರುದ್ಯೋಗ ಸಮಸ್ಯೆ, ಹಣದುಬ್ಬರ, ಹಸಿವು ಸಮತಾವಾದದ ಭೀತಿಗಳು ಒಂದು ಕಡೆ ಇಟಲಿಯ ಸರ್ಕಾರದ ತಲೆಯನ್ನು ಕೊರೆಯುತ್ತಿತ್ತು.

ದ್ವಿತೀಯ ಮಹಾಯುದ್ಧದ ತರುವಾಯ ಯೂರೋಪಿನ ರಾಜ್ಯಗಳು ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸಿದವು. ಈ ರಾಜ್ಯಗಳಲ್ಲಿನ ಆರ್ಥಿಕ ಬಿಕ್ಕಟ್ಟುಗಳು ಕಮ್ಯುನಿಸಂಗೆ ಆಹ್ವಾನ ನೀಡುತ್ತವೆ ಎಂದು ಭಾವಿಸಿ ಅಮೇರಿಕ ಈ ರಾಜ್ಯಗಳ ನೆರವಿಗೆ ಧಾವಿಸಿತು. ಈ ಯೋಜನೆಯನ್ನು ವಿವರಿಸುತ್ತಾ ಮಾರ್ಷೆಲ್ "ಎಲ್ಲಿಯವರೆಗೆ ಬಡತನ, ಆರ್ಥಿಕ ಹಿಂಜರಿತ ಮತ್ತು ಆಹಾರದ ಅಭಾವ ಯೂರೋಪಿನಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ಈ ರಾಷ್ಟ್ರಗಳಲ್ಲಿ ಸಾಮಾಜಿಕ ಅತೃಪ್ತಿ ಮತ್ತು ರಾಜಕೀಯ ಅವ್ಯವಸ್ಥೆ ವೃದ್ಧಿಯಾಗುತ್ತವೆ. ಇದರಿಂದ ಈ ರಾಷ್ಟ್ರಗಳ ಹಿತಕ್ಕೆ ಮಾತ್ರವೇ ಅಲ್ಲದೆ ಅಮೇರಿಕದ ಹಿತಕ್ಕೆ ಧಕ್ಕೆ ಉಂಟಾಗುತ್ತದೆ. ನಾವು ಈಗ ಈ ರಾಷ್ಟ್ರಗಳಿಗೆ ಸಮಯೋಚಿತ ನೆರವು ನೀಡಿದಲ್ಲಿ ಈ ರಾಷ್ಟ್ರಗಳು ಪುನಃಶ್ಚೇತನಗೊಳ್ಳುತ್ತವೆ. ಮತ್ತು ಅವುಗಳ ಸಮಸ್ಯೆಗಳು ಬಗೆಹರಿಯುತ್ತವೆ"[೮] ಎಂದು ಹೇಳಿದ್ದನು.

ಸ್ವಾಮಿ ವಿವೇಕಾನಂದ "ಭಾರತಿಯ ಜನಪದರ ಸ್ಥಿತಿ-ಗತಿಯನ್ನು ಈ ಕೆಳಕಂಡ ಮಾತುಗಳ ಮೂಲಕ ವಿವರಿಸಿದ್ದಾರೆ. ಚಿಂದಿಯಾದ ಕಂಬಳಿಗಳನ್ನು ಹೊದ್ದು, ಅಲ್ಲಿಂದಿಲ್ಲಿಗೆ ಬಡಕಲು ದೇಹ ಹೊತ್ತು ಓಡಾಡುವ ನೂರು ವರ್ಷಗಳಿಗೂ ಹೆಚ್ಚು ಅವಧಿಯ ನಿರಾಶೆ ಮತ್ತು ಬಡತನದಿಂದ ಸುಕ್ಕು ಗಟ್ಟಿದ ಮುಖದ ತರುಣರು ಮತ್ತು ವೃದ್ದರು; ಎಲ್ಲೆಲ್ಲಿಯೂ ಸಾಮಾನ್ಯವಾಗಿ ಕಾಣುವ ಹಸುಗಳು, ಎತ್ತುಗಳು, ಕೋಣಗಳು- ಓ, ಅವರ ಕಣ್ಣುಗಳಲ್ಲಿಯೂ ಅದೇ ಖಿನ್ನತೆ, ಅದೇ ದುರ್ಬಲ ದೇಹ, ಹಾದಿ ಬದಿಯ ತಿಪ್ಪೆ ಕೊಳಕು; ಇದು ವರ್ತಮಾನದ ನಮ್ಮ ಭಾರತ! ಅರಮನೆಗಳ ಪಕ್ಕದಲ್ಲೆ ಮುರಿದು ಬಿದ್ದ ಗುಡಿಸಲುಗಳು, ದೇವಸ್ಥಾನಗಳ ಸಮೀಪದಲ್ಲೆ ತಿಪ್ಪೆಗುಂಡಿಗಳು, ನಡುವಿನ ತುಂಡುಬಟ್ಟೆ ಹುಟ್ಟ ಸನ್ಯಾಸಿನಿ, ಆಡಂಬರದ ಉಡುಪು ಧರಿಸಿದವರ ಪಕ್ಕದಲ್ಲೆ ನಡೆಯುವ ಹಸಿವಿನ ಬಳಲಿಕೆಯಿಂದ ಕಾಂತಿ ಕಳೆದುಕೊಂಡ ಮರುಕದ ಕಣ್ಣುಗಳ ನೋಟದ ಬದಿಯಲ್ಲೇ ಚೆನ್ನಾಗಿ ತಿಂದು ಕೊಬ್ಬಿದ ವ್ಯಕ್ತಿ:- ಇದು ನಮ್ಮ ಜನ್ಮ ಭೂಮಿ! ಭೀಕರ ಪ್ಲೇಗ್ ಮತ್ತು ಕಾಲರಗಳಿಂದ ಆಗುವ ನಾಶ ದೇಶದ ಜೀವವನ್ನೆ

ತಿನ್ನುತ್ತಿರುವ ಮಲೇರಿಯಾ; ಎರಡನೆಯ ಸ್ವಭಾವವೇ ಆದ ಹಸಿವು ಅರೆ ಹಸಿವು; ಆಗಾಗೆ ತನ್ನ ದುರಂತ ನರ್ತತನವನ್ನು ಮಾಡುವ ಮರಣ ಸದೃಶವಾದ ಕ್ಷಾಮ; ನೋಡಲು ಮಾತ್ರ ಮನುಷ್ಯರಂತೆ ಕಾಣುವ ಮೂರು ನೂರು ದಶಲಕ್ಷ ಆತ್ಮಗಳ ಮೇಳ: ತಮ್ಮದೇ ಜನರಿಂದ ಮತ್ತು ವಿದೇಶಿ ರಾಷ್ಟ್ರಗಳಿಂದ ಕೆಳಗೆ ತುಳಿಯಲ್ಪಟ್ಟ ಜೀವ ಕಳೆದುಕೊಂಡ, ಯಾವುದೇ ಭರವಸೆ ಇಲ್ಲದೆ, ಯಾವುದೇ ಭೂತಕಾಲವಿಲ್ಲದೆ, ಯಾವುದೇ ಭವಿಷ್ಯವಿಲ್ಲದೆ, ಹಗೆ ಸಾಧನೆಯ ಸ್ವಭಾವಕ್ಕೆ ಸಿದ್ಧಗೊಂಡ ಗುಲಾಮನಾಗಿ, ತಮ್ಮ ಜೊತೆಯ ಜನರಿಗೆ ಹೊರಲಾರದ ಹೊರೆಯಾದ, ಬಲಿಷ್ಠರ ಪಾದಗಳ ಧೂಳನ್ನು ನೆಕ್ಕೂತ್ತಾ, ಆದರೂ ದುರ್ಬಲರಾದವರಿಗೆ, ಸಾವಿನ ಏಟನ್ನು ಕೊಡುವ ಪೂರ್ಣ ವಿಕಾರವಾದ, ದುರ್ಬಲರಾದವರಿಗೆ ಮತ್ತು ಭವಿಷ್ಯದ ಬಗ್ಗೆ ಭರವಸೆಯೇ ಇಲ್ಲದವರಿಗೆ ಸಹಜವಾಗಿ ಬರುವ ಪೈಶಾಚಿಕ ಮೂಢನಂಬಿಕೆಯ; ತಮ್ಮ ಬೆನ್ನು ಮೂಳೆಯಂತೆಯೆ ಕೂಡಿರುವ, ಕೊಳೆತು ನಾರಿ ವಾಸನೆ ಬಂದ ಶವದ ಮೇಲಿನ ಹುಳುಗಳ ಹಾಗೆ, ಮೂರುನೂರು ದಶಲಕ್ಷ ಆತ್ಮಗಳು: ಇದು ಸ್ವಾಭಾವಿಕವಾಗಿ ಇಂಗ್ಲಿಷ್ ಅಧಿಕಾರಿಗಳ ಗಮನಕ್ಕೆ ಬರಬೇಕಾದ, ನಮಗೆ ಸಂಬಂಧಿಸಿದ ಚಿತ್ರ."[೯]

ಯುದ್ಧ ಮತ್ತು ರಾಜರು ವಿಧಿಸುತ್ತಿದ್ದ ಕಾನೂನುಗಳು ಜನಸಾಮಾನ್ಯರ ಹಸಿವಿನ ಹೆಚ್ಚಳಕ್ಕೆ ಮೂಲ ಪ್ರೇರಣೆಯಾಗಿತ್ತು. ಅಕ್ಬರನ ಕಾಲದಿಂದಲೂ ಭೂ ಕಂದಾಯದ ಹೊರೆಯು ಹೆಚ್ಚುತ್ತಲೇ ಹೋಯಿತು. ಜೊತೆಗೆ ಜಹಗೀರಿನಿಂದ ಜಹಗೀರಿಗೆ ಗಣ್ಯರ ನಿರಂತರ ವರ್ಗಾವಣೆಯು ದುಷ್ಪರಿಣಾಮಗಳಿಗೆ ಕಾರಣವಾಯಿತು. ತಮ್ಮ ಅಲ್ಪಾವಧಿಯ ಜಹಗೀರುದಾರಿಕೆಯ ಸಂದರ್ಭ ದಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಹಣದ ಸವಾಲುದಾರನಿಗೆ ಭೂಮಿಯ ಮೇಲಿನ ಅಧಿಕಾರ ನೀಡುವ ಮತ್ತು ಅವನು ಅದನ್ನು ಕೃಷಿಕರಿಂದ ಸಂಗ್ರಹಿಸುವ ಪದ್ಧತಿಯು ಜಹಗೀರುಗಳು ಮತ್ತು ಖಲೀಸಾ (ರಾಜತ್ವ) ಭೂಮಿಗಳಿಗೂ ಅನ್ವಯವಾಯಿತು. ಇದು ಕಂದಾಯ ಕೃಷಿಕರು ಮತ್ತು ತಾಲ್ಲೂಕುದಾರರು ಎಂಬ ಹೊಸ ವರ್ಗಗಳ ಸೃಷ್ಟಿಗೆ ಕಾರಣವಾಯಿತು. ಇವರು ಕೃಷಿಕರಿಂದ ವಸೂಲೂ ಮಾಡುತ್ತಿದ್ದ ಸಂಪತ್ತಿಗೆ ಮಿತಿಯೇ ಇರಲಿಲ್ಲ. ಇವೆಲ್ಲವೂ ಕೃಷಿಯು ಜಡ್ಡುಗಟ್ಟಿ ನಾಶಗೊಳ್ಳಲು ಮತ್ತು ಕೃಷಿಕರು ಮತ್ತಷ್ಟು ಬಡವರಾಗಲು ಕಾರಣವಾದವು. ಕೃಷಿಕರ ಅತೃಪ್ತಿಯು ಹೆಚ್ಚಿ ಅಂತಿಮ ಘಟ್ಟವನ್ನು ಮುಟ್ಟಿತು. ತೆರಿಗೆಗಳನ್ನು ತಪ್ಪಿಸಿಕೊಳ್ಳಲು ಕೃಷಿಕರು ಭೂಮಿಯನ್ನೇ ತೊರೆದ ಕೆಲವು ಪ್ರಸಂಗಗಳಿವೆ. ಕೃಷಿಕರ ಅತೃಪ್ತಿಯು ನಿರಂತರ ಬಂಡಾಯಗಳಿಗೂ ಕಾರಣವಾಯಿತು.

ಆರ್ಥಿಕವಾಗಿ, ಸಾಮಾಜಿಕವಾಗಿ ಅಥವಾ ಸಾಂಸ್ಕೃತಿಕವಾಗಿ ಯಥೋಚಿತವೇಗದಲ್ಲಿ ಪ್ರಗತಿಯನ್ನು ಸಾಧಿಸಲು ಹದಿನೆಂಟನೆಯ ಶತಮಾನದ ಭಾರತವು ವಿಫಲವಾಯಿತು. ಸಂಸ್ಥಾನಗಳ ಏರುತ್ತಿದ್ದ ಕಂದಾಯದ ಬೇಡಿಕೆ, ಅಧಿಕಾರಿಗಳ ದಬ್ಬಾಳಿಕೆ, ನಾಯಕರ, ಕಂದಾಯ-ಕೃಷಿಕರ, ಜಮೀನ್ದಾರರ ದುರಾಸೆ ಮತ್ತು ಸುಲಿಗೆ ಶತ್ರು ಸೈನಿಕರ ದಾಳಿ ಮತ್ತು ಪ್ರತಿದಾಳಿ ದೇಶದಲ್ಲಿ

ಸಂಚರಿಸುತ್ತಿದ್ದ ಅನೇಕ ಸಾಹಸಿಗಳ ಲೂಟಿ ಮತ್ತು ಕೊಳ್ಳೆಗಳು ಜನತೆಯ ಬದುಕನ್ನು ಕಷ್ಟಕರವನ್ನಾಗಿಸಿದವು. ಆ ಕಾಲದ ಭಾರತವು ವೈವಿಧ್ಯತೆಗಳ ನಾಡಾಗಿತ್ತು. ಅತ್ಯಂತ ಬಡತನ ಮತ್ತು ಅತ್ಯಂತ ಶ್ರೀಮಂತಿಕೆ ಹಾಗೂ ವೈಭವ ಎರಡೂ ಅಕ್ಕಪಕ್ಕದಲ್ಲೇ ಇದ್ದವು. ಒಂದೆಡೆ ವೈಭವ ಮತ್ತು ಸುಖದಲ್ಲಿ ಮುಳಗಿಹೋಗಿದ್ದ ಶ್ರೀಮಂತರು ಮತ್ತು ಪ್ರಬಲ ಗಣ್ಯರಿದ್ದರೆ, ಮತ್ತೊಂದೆಡೆ ಹಿಂದುಳಿದ ತುಳಿತಕ್ಕೊಳಗಾದ ಬಡ ಕೃಷಿಕರು, ಎಲ್ಲಾ ಅಸಮಾನತೆಯ ಮತ್ತು ಅನ್ಯಾಯಗಳನ್ನು ಸಹಿಸಿಕೊಂಡು ಕನಿಷ್ಟ ಅನುಕೂಲಗಳು ಇಲ್ಲದ ಬದುಕನ್ನು ನಡೆಸುತ್ತಿದ್ದರು. ಆದರೂ ಭಾರತೀಯ ಜನತೆಯ ಸಾಮಾನ್ಯ ಬದುಕು ಆ ಕಾಲದಲ್ಲಿ ನೂರು ವರ್ಷಗಳ ನಂತರದ ಬ್ರಿಟಿಷರ ಆಳ್ವಿಕೆಯ ಹತ್ತೊಂಭತ್ತನೆಯ ಶತಮಾನದ ಕೊನೆಯ ಕಾಲದ ಬದುಕಿಗಿಂತ ಉತ್ತಮವಾಗಿತ್ತು.

ಬ್ರಿಟಿಷರ ಆಳ್ವಿಕೆಯಲ್ಲಿ ಕೃಷಿಕರೂ ನಿರಂತರವಾಗಿ ಬಡತನವನ್ನು ಹೆಚ್ಚಿಸಿಕೊಂಡರು. ಈಗ ಅವರು ಆಂತರಿಕ ಯುದ್ಧಗಳಿಂದ ನಿರಂತರವಾಗಿ ಬಡತನವನ್ನು ಹೆಚ್ಚಿಸಿ ಕೊಂಡರ ಈಗ ಅವರು ಆಂತರಿಕ ಯುದ್ಧಗಳಿಂದ ಮುಕ್ತರಾಗಿದ್ದರೂ, ಅವರ ಭೌತ ಸ್ಥಿತಿಯು ಕುಗ್ಗಿ, ಒಂದೇ ಸಮನೆ ಬಡತನಕ್ಕೆ ಕುಸಿಯಬೇಕಾಯಿತು. ಬಂಗಾಳದಲ್ಲಿ ಬ್ರಿಟೀಷ್ ಆಳ್ವಿಕೆಯ ಆರಂಭದಲ್ಲೆ ಸಾಧ್ಯವಾದಷ್ಟು ಭೂಕಂದಾಯವನ್ನು ಸಂಗ್ರಹಿಸುವ ಕ್ಲೈವ್ ಮತ್ತು ವಾರನ್ ಹೇಸ್ಟಿಂಗ್ಸ್‌ನ ನೀತಿಯು ಬಂಜರು ಭೂಮಿಯ ಸೃಷ್ಟಿಗೆ ಕಾರಣವಾಗಿತ್ತು. ಕಾರ್ನ್‌ವಾಲಿಸ್ ಕೂಡ ಬಂಗಾಲದ ಮೂರನೆ ಒಂದು ಭಾಗ ಭೂಮಿಯು ಕಾಡು ಪ್ರಾಣಿಗಳು ಮಾತ್ರ ವಾಸಿಸುವ ಅರಣ್ಯವಾಗಿದೆ"ಎಂದು ದೂರಿದ್ದಾನೆ. ನಂತರವೂ ಯಾವ ಅಭಿವೃದ್ಧಿಯೂ ಆಗಲಿಲ್ಲ. ಶಾಶ್ವತವಾಗಿ ಮತ್ತು ತಾತ್ಕಾಲಿಕವಾಗಿ ನೆಲೆಗೊಂಡಿದ್ದ ಜಮೀನುನ್ದಾರಿ ಪ್ರದೇಶಗಳಲ್ಲೂ, ಕೃಷಿಕ ಸಮುದಾಯವು ಅಸೂಯಾ ರಹಿತವಾಗಿ ಉಳಿಯಿತು. ಅವರು ಗೇಣಿಯನ್ನು ಮಿತಿ ಮೀರಿ ಹೇರುತ್ತಿದ್ದು, ನ್ಯಾಯಬಾಹಿರ ಸಾಲದ ಬಾಕಿಯನ್ನು ಹಿಂದಿರುಗಿಸಲು ಒತ್ತಾಯಿಸುತ್ತಾ, ಬಲವಂತದಿಂದ ದುಡಿಸುತ್ತಾ, ಇಲ್ಲವೇ ಬೇಗಾರ್ (ದುಡಿಮೆ ರಹಿತ) ಗಳನ್ನಾಗಿ ಮಾಡಿ, ಹಲವು ವಿಧದ ಒತ್ತಡಗಳ ಮೂಲಕ ಹಿಂಸಿಸುತ್ತಿದ್ದ ಜಮೀನ್ದಾರರ ಕೃಪಾಶ್ರಯದಲ್ಲೇ ಉಳಿದರು. ರೈತವಾರಿ ಮತ್ತು ಮಹಲ್ ವಾರಿ ಪ್ರದೇಶಗಳ ಬೆಳೆಗಾರರ ಪರಿಸ್ಥಿತಿಯೂ ಯಾವುದೇ ರೀತಿಯಲ್ಲಿ ಉತ್ತಮವಾಗಿರಲಿಲ್ಲ. ಇಲ್ಲಿ ಜಮೀನ್ದಾರರ ಸ್ಥಾನವನ್ನು ಸರ್ಕಾರವೇ ವಹಿಸಿಕೊಂಡು, ಹೆಚ್ಚು ಭೂಕಂದಯವನ್ನು ವಿಧಿಸಿತು. ಮೊದಲಿಗೆ ಉತ್ಪನ್ನದ ಮೂರನೆ ಒಂದು ಭಾಗ ಅಥವಾ ಅರ್ಧದಷ್ಟು ಎಂದು ನಿಗಧಿ ಮಾಡಿತು. ಬಡತನದ ಹೆಚ್ಚಳಕ್ಕೆ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಕೃಷಿಯ ವಿನಾಶಕ್ಕೆ, ಭೂಮಿಯ ಮೇಲೆ ನಿಗದಿಪಡಿಸುತ್ತಿದ್ದ ಕಂದಾಯದ ಅಧಿಕ ಹೊರೆಯು ಒಂದು ಬಹುಮುಖ್ಯ ಕಾರಣವಾಗಿತ್ತು. ಅನೇಕ ಸಮಕಾಲೀನ ಲೇಖಕರು ಮತ್ತು ಅಧಿಕಾರಿಗಳು ಈ ವಾಸ್ತವವನ್ನು ಗಮನಿಸಿದ್ದಾರೆ.

ಅಧಿಕ ಭೂಕಂದಾಯ ಬೇಡಿಕೆಯ ಕೆಟ್ಟ ಪರಿಣಾಮಕ್ಕಿಂತ ಅದರ ವಸೂಲಿಯ ಕಠಿಣ ವಿಧಾನದಿಂದ ತೊಂದರೆಗಳ ಪ್ರಮಾಣ ಮತ್ತಷ್ಟು ಹೆಚ್ಚಿತು. ಸುಗ್ಗಿಯಲ್ಲಿ ಫಸಲು ಸರಾಸರಿ ಪ್ರಮಾಣಕ್ಕಿಂತ ಕಡಿಮೆ ಬರಲಿ ಅಥವಾ ಸಂಪೂರ್ಣವಾಗಿ ಬರದೆ ಇರಲಿ ಭೂಕಂದಾಯವನ್ನು ಮಾತ್ರ ತಪ್ಪದೆ, ಅವರಿಗೆ ಸರಿಯಾಗಿ ಪಾವತಿಸಬೇಕಾಗಿತ್ತು. ಒಳ್ಳೆಯ ಫಸಲು ಬಂದ ವರ್ಷಗಳಲ್ಲಿ ರೈತನಿಗೆ ಭೂಕಂದಾಯವನ್ನು ಪಾವತಿಸುವುದು ಕಷ್ಟ ಎನಿಸುತ್ತಿರಲಿಲ್ಲ. ಆದರೆ, ಫಸಲು ಬರದ ಕೆಟ್ಟ ವರ್ಷಗಳಲ್ಲಿ ಭೂಕಂದಾಯ ಕಟ್ಟುವುದು ರೈತನಿಗೆ ಕಷ್ಟವಾಗುತ್ತಿತ್ತು. ರೈತನು ಭೂಕಂದಾಯವನ್ನು ಕಟ್ಟಲು ವಿಫಲನಾದಾಗ, ಕಂದಾಯವನ್ನು ವಸೂಲಿ ಮಾಡುವ ಸಲುವಾಗಿ, ಸರ್ಕಾರವು ಅವನ ಭೂಮಿಯನ್ನು ಹರಾಜು ಹಾಕುತ್ತಿತ್ತು. ಆದರೆ, ಬಹಳ ಸಂದರ್ಭಗಳಲ್ಲಿ ರೈತನೆ ಕ್ರಮ ತೆಗೆದುಕೊಂಡು, ಅವನ ಪಾಲಿನ ಭೂಮಿಯ ಸ್ವಲ್ಪ ಭಾಗವನ್ನು ಮಾರಿ, ಸರ್ಕಾರದ ಭಾಕಿಯನ್ನು ತೀರಿಸುತ್ತಿದ್ದ. ಎರಡೂ ಕ್ರಮಗಳಲ್ಲಿ ಅವನು ಭೂಮಿಯನ್ನು ಕಳೆದುಕೊಳ್ಳುತ್ತಿದ್ದ. ಭೂಮಿಯ ನಷ್ಟ ಮತ್ತು ದಟ್ಟಣೆಯ ಕೈಗಾರಿಕೀಕರಣ ಗೊಳ್ಳದಿರುವ ಹಾಗೂ ಆಧುನಿಕ ಕೈಗಾರಿಕೆಗಳ ಕೊರತೆಯ ಒಟ್ಟು ಕಾರಣದಿಂದ ಭೂರಹಿತ ರೈತರು ಮತ್ತು ವಿನಾಶ ಹೊಂದಿದ ಕುಶಲ ಕರ್ಮಿಗಳು ಹಾಗೂ ಕರಕುಶಲಗಾರರು ಲೇವಾದೇವಿಗಾರರಲ್ಲಿ ಮತ್ತು ಜಮೀನ್ದಾರರಲ್ಲಿ ಗೇಣಿದಾರನಾಗಿ ದುಬಾರಿ ಕಂದಾಯ ಕೊಡುವ ಅಥವಾ ಬರಗೆಟ್ಟ ಕೂಲಿಗೂ ಕೃಷಿಕ ಕೂಲಿಕಾರರಾಗಿ ಇರಬೇಕಾಯಿತು.

ಹೀಗೆ ಕೃಷಿಕರು ಸರ್ಕಾರ, ಜಮೀನ್ದಾರ ಅಥವಾ ಭೂಮಾಲಿಕ ಮತ್ತು ಲೇವಾದೇವಿಗಾರ ಈ ಮೂರೂ ಜನರು ತಮ್ಮ ಪಾಲನ್ನು ತೆಗೆದುಕೊಂಡ ಮೇಲೆ ಅಕಸ್ಮಾತ್ ಉಳಿದದ್ದು, ಕೃಷಿಕರು ಮತ್ತು ಅವರ ಕುಟುಂಬದ ಜೀವಿತಕ್ಕೆ ದೊರೆಯುತ್ತಿತ್ತು. ೧೯೫೦-೫೧ರಲ್ಲಿ ಲೆಕ್ಕ ಹಾಕಿದ ಪ್ರಕಾರ, ಭೂಮಿಯ ಬಾಡಿಗೆ ಮತ್ತು ಲೇವಾದೇವಿಗಾರರ ಬಡ್ಡಿಯ ಮೊತ್ತವು ರೂ. ೧೪೦೦ ಕೋಟಿ ಅಥವಾ ಆ ವರ್ಷದ ಒಟ್ಟು ವ್ಯವಸಾಯ ಉತ್ಪನ್ನದ ಸುಮಾರು ಮೂರನೆಯ ಒಂದು ಭಾಗದಷ್ಟು ಇತ್ತು. ಇದರ ಫಲವಾಗಿ, ರೈತರ ಬಡತನವು ಬರಗಾಲದ ಹೆಚ್ಚಳದೊಂದಿಗೆ, ಮುಂದುವರಿಯಿತು. ಕ್ಷಾಮ ಮತ್ತು ಪ್ರವಾಹಗಳು ಬೆಳೆಗಳ ನಾಶ ಮತ್ತು ಕೊರತೆಯ ಜೊತೆಗೆ ಲಕ್ಷಾಂತರ ಜನರ ಸಾವಿಗೆ ಕಾರಣವಾಗುತ್ತಿತ್ತು. ಭಾರತದಲ್ಲಿ ಬ್ರಿಟೀಷ್ ಆಡಳಿತದ ಮುಖ್ಯ ಸ್ವರೂಪ ಮತ್ತು ಬ್ರಿಟೀಷ್ ಆರ್ಥಿಕ ನೀತಿಗಳ ಒಟ್ಟು ಫಲಿತಾಂಶ ಎಂದರೆ, ಅದರ ಜನತೆಯಲ್ಲಿ ಉಳಿದ ಅತ್ಯಂತ ಬಡತನ. ಬ್ರಿಟೀಷರ ಆಡಳಿತಾವಧಿಯಲ್ಲಿ ಭಾರತವು ಹೆಚ್ಚು ಬಡತನಕ್ಕೆ ಗುರಿಯಾಯಿತೆ ಎಂಬ ಪ್ರಶ್ನೆಗೆ ಇತಿಹಾಸಕಾರ ಉತ್ತರದಲ್ಲಿ ಭಿನ್ನತೆ ಇದ್ದರೂ, ಬ್ರಿಟೀಷರ ಆಡಳಿತಾವಧಿಯ ಉದ್ದಕ್ಕೂ ಬಹುತೇಕ ಭಾರತೀಯರು, ಹಸಿವಿನ ಅಂಚಿನಲ್ಲೇ ಬದುಕಿದರು ಎಂಬ ಮಾತಿನಲ್ಲಿ ಭಿನ್ನಮತವಿಲ್ಲ. ಕಾಲಕಳೆದಂತೆ, ಅವರು ಉದ್ಯೋಗವನ್ನು ಪಡೆಯಲು ಅಥವಾ ಜೀವನ ನಡೆಸಲೂ ಕಷ್ಟಪಟ್ಟರು. ಬ್ರಿಟೀಷರ ಆರ್ಥಿಕ ಶೋಷಣೆ, ಹಳೆಯ ಸ್ಥಳೀಯ ಕೈಗಾರಿಕೆಗಳ ವೈಫಲ್ಯ, ಅಧಿಕ ತೆರಿಗೆ ಬ್ರಿಟನ್‌ಗೆ ಐಶ್ವರ್ಯದ ವರ್ಗಾವಣೆ, ವ್ಯವಸಾಯದ

ಜಡತೆಗೆ ದಾರಿಯಾದ ವ್ಯವಸಾಯದ ಹಿಂದುಳಿದ ಸ್ವರೂಪ, ಜಮೀನ್ದಾರರು, ಭೂ ಮಾಲೀಕರು, ರಾಜರು ಲೇವಾದೇವಿಗಾರರು, ವ್ಯಾಪಾರಿಗಳ ಶೋಷಣೆ ಮತ್ತು ರಾಜ್ಯವು ಕ್ರಮೇಣ ಭಾರತದ ಬಡತನವನ್ನು ಮತ್ತಷ್ಟು ಕೆಳಕಿಳಿಸಿ ಅದರ ಪ್ರಗತಿಗೆ ತಡೆಯಾದವು. ಭಾರತದ ವಸಾಹತು ಆರ್ಥಿಕತೆಯು ಅತ್ಯಂತ ಕಡಿಮೆ ಮಟ್ಟದಲ್ಲಿ ಜಡವಾಗಿ ಉಳಿಯಿತು.

ಜನತೆಯ ಬಡತನವು, ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ, ಇಡೀ ಭಾರತವನ್ನು ಸರಣಿ ಕ್ಷಾಮವು ನಾಶಮಾಡಿ, ಭಾರತೀಯರ ಬಡತನವು ತುತ್ತತುದಿಯನ್ನು ಕಂಡಿತು. ಈ ಕ್ಷಾಮಗಳಲ್ಲಿ ಮೊದಲ ಸರಣಿಯು ೧೮೬೦-೬೧ರಲ್ಲಿ ಉತ್ತರ ಪ್ರದೇಶದಲ್ಲಿ ಸಂಭವಿಸಿ, ೨ ಲಕ್ಷಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡಿತು. ೧೮೬೫-೬೬ರಲ್ಲಿ ಒರಿಸ್ಸಾ, ಬಂಗಾಳ, ಬಿಹಾರ ಮತ್ತು ಮದ್ರಾಸ್ ಗಳನ್ನು ಧ್ವಂಸಮಾಡಿದ ಕ್ಷಾಮವು ೨೦ಲಕ್ಷ ಜೀವಿಗಳನ್ನು ಬಲಿ ತೆಗೆದುಕೊಂಡಿತು. ಒರಿಸ್ಸಾ ಒಂದರಲ್ಲೆ ೧೦ ಲಕ್ಷ ಜನ ಪ್ರಾಣ ಕಳೆದುಕೊಂಡರು. ೧೮೬೮-೭೦ರ ಕ್ಷಾಮವು ಪಶ್ಚಿಮ ಉತ್ತರ ಪ್ರದೇಶ, ಬೊಂಬಾಯಿ ಮತ್ತು ಪಂಜಾಬ್ ಗಳಲ್ಲಿ ೧೪ ಲಕ್ಷಕ್ಕೂ ಹೆಚ್ಚು ಜನ ಮೃತಪಟ್ಟರು. ಕ್ಷಾಮಕ್ಕೆ ತುತ್ತಾದ ರಜಪುತಾಣದ ಅನೇಕ ರಾಜ್ಯಗಳು ಮತ್ತು ಇತರ ಪ್ರದೇಶಗಳು ತಮ್ಮ ಜನಸಂಖ್ಯೆಯ ನಾಲ್ಕನೆಯ ಒಂದು ಭಾಗದಿಂದ ಮೂರನೆಯ ಒಂದು ಭಾಗದಷ್ಟು ಜನರನ್ನು ಕಳೆದುಕೊಂಡವು.

ಬಹುತೇಕ ಭಾರತೀಯ ಇತಿಹಾಸದಲ್ಲಿ ಆವರೆಗೆ ಕಾಣದಿದ್ದ ಅತ್ಯಂತ ಭೀಕರ ಕ್ಷಾಮವು ೧೮೭೬-೭೮ರಲ್ಲಿ ಮದ್ರಾಸ್, ಮೈಸೂರು. ಹೈದರಾಬಾದ್, ಮಹಾರಾಷ್ಟ್ರ, ಪಶ್ಚಿಮ ಉತ್ತರ ಪ್ರದೇಶ ಮತ್ತು ಪಂಜಾಬುಗಳಲ್ಲಿ ಸಂಭವಿಸಿತು. ಮಹಾರಾಷ್ಟ್ರದಲ್ಲಿ ೮ ಲಕ್ಷ ಮದ್ರಾಸ್ ನಲ್ಲಿ ಸುಮಾರು ೩೫ ಲಕ್ಷ ಮೈಸೂರಿನಲ್ಲಿ ಅದರ ಜನಸಂಖ್ಯೆಯ ಶೇ೨೦%ರಷ್ಟು ಮತ್ತು ಉತ್ತರ ಪ್ರದೇಶದಲ್ಲಿ ೧೨ ಲಕ್ಷಕ್ಕೂ ಹೆಚ್ಚು ಜನ ಮೃತರಾದರು. ೧೮೯೬-೯೭ರಲ್ಲಿ ಸಂಭವಿಸಿದ ಪ್ರವಾಹವು ದೇಶಾದಾದ್ಯಂತ ಕ್ಷಾಮಕ್ಕೆ ದಾರಿ ಮಾಡಿತು. ಅದರ ಪರಿಣಾವು ಸುಮಾರು ೯.೫ ಕೋಟಿ ಜನರ ಮೇಲಾಗಿ, ಅದರಲ್ಲಿ ಸುಮಾರು ೪೫ ಲಕ್ಷ ಜನರು ಮರಣ ಹೊಂದಿದರು. ತಕ್ಷಣ ೧೮೯೯-೧೯೦೦ರಲ್ಲಿ ಅನುಸರಿಸಿದ ಕ್ಷಾಮವು ವ್ಯಾಪಕ ವಿನಾಶಕ್ಕೆ ಕಾರಣವಾಯಿತು. ಕ್ಷಾಮ ಪರಿಹಾರದ ಅವಕಾಶಗಳ ಮೂಲಕ ಪ್ರಾಣಗಳನ್ನು ಉಳಿಸಲು ಅಧಿಕೃತ ಅವಕಾಶ ಮಾಡಿಕೊಳ್ಳಲಾಯಿತಾದರೂ, ೨೫ ಲಕ್ಷಕ್ಕೂ ಹೆಚ್ಚು ಜನ ಮೃತಪಟ್ಟರು. ಈ ದೊಡ್ಡ ಪ್ರಮಾಣದ ಕ್ಷಾಮಗಳನ್ನು ಹೊರತುಪಡಿಸಿ, ಇತರ ಅನೇಕ ಸ್ಥಳೀಯ ಕ್ಷಾಮಗಳು ಮತ್ತು ಕೊರತೆಗಳು ಎದುರಾದವು. ಬ್ರಿಟೀಷ್ ಲೇಖಕ ವಿಲಿಯಂ ಡಿಗ್ಬಿ ಲೆಕ್ಕ ಹಾಕಿರುವಂತೆ, ೧೮೫೪ರಿಂದ ೧೯೦೧ರವರೆಗೆ ಸಂಭವಿಸಿದ ಕ್ಷಾಮವು ಸುಮಾರು ಮೂರು ಲಕ್ಷ ಜನರನ್ನು ಬಲಿ ತೆಗೆದುಕೊಂಡಿತು. ಈ ಕ್ಷಾಮಗಳು ಮತ್ತು ಅವುಗಳಿಂದ ಆದ ಬಾರೀ ಜೀವಹಾನಿಯು ಭಾರತದಲ್ಲಿ ಬೇರೂರಿದ್ದ ಬಡತನ ಮತ್ತು ಹಸಿವಿನ ಸಂಕೇತವಾಗಿದೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತದಲ್ಲಿದ್ದ ಅನೇಕ ಇಂಗ್ಲೀಷ್ ಅಧಿಕಾರಿಗಳು ಭಾರತದ ಬಡತನದ ಗಂಭೀರ ವಾಸ್ತವವನ್ನು ಗುರುತಿಸಿದ್ದರು. ಉದಾಹರಣೆಗೆ, ಗವರ್ನರ್ ಜನರಲ್‌ನ ಸಲಹಾ ಮಂಡಳಿಯ ಸದಸ್ಯರಾಗಿದ್ದ ಚಾರ್ಲ್ಸ್ ಎಲಿಯಟ್ ಹೀಗೆ ಬರೆದಿದ್ದಾನೆ; "ಕೃಷಿಯನ್ನು ನಂಬಿದ ಜನರಲ್ಲಿ ಅರ್ಧ ಭಾಗವು ಒಂದು ವರ್ಷದ ಅಂತ್ಯದಿಂದ ಇನ್ನೊಂದು ವರ್ಷಕ್ಕೆ ಪೂರ್ಣ ಊಟವನ್ನು ಪಡೆಯುವುದು ಎಂದರೆ ಏನು ಎಂದೂ ತಿಳಿದಿಲ್ಲ ಎಂದು ತಿಳಿಸಲು ನನಗೆ ಸಂಕೋಚವಾಗುವುದಿಲ್ಲ. ಇಂಪೀರಿಯಲ್ ಗೆಜೆಟಿಯರ್‌ನ ಸಂಕಲಕಾರ, ವಿಲಿಯಂ ಹಂಟರ್ ಒಪ್ಪಿಕೊಂಡಿರುವಂತೆ, ಭಾರತದಲ್ಲಿ ನಲವತ್ತು ಲಕ್ಷ ಜನರು ಜೀವನದಲ್ಲಿ ಆಹಾರದ ಕೊರತೆಯ ಅಭ್ಯಾಸ ಮಾಡಿಕೊಂಡಿದ್ದಾರೆ" ಇಪ್ಪತ್ತನೆಯ ಶತಮಾನದಲ್ಲಿ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಿತ್ತು. ೧೯೧೧ ರಿಂದ ೧೯೪೧ರ ನಡುವಿನ ೩೦ ವರ್ಷಗಳ ಅವಧಿಯಲ್ಲಿ ಭಾರತೀಯನಿಗೆ ದೊರೆಯುತ್ತಿದ್ದ ಆಹಾರದ ಪ್ರಮಾಣವು ಶೇ ೨೯ರಷ್ಟು ಕಡಿಮೆಯಾಯಿತು. ಭಾರತದ ಆರ್ಥಿಕ ಹಿಂದುಳಿದಿರುವಿಕೆ ಮತ್ತು ಬಡತನದಲ್ಲಿ ಇತರ ಇನ್ನೂ ಹಲವು ಸೂಚನೆಗಳಿದ್ದವು. ರಾಷ್ಟ್ರೀಯ ಆಧ್ಯಾಯದ ಮೇಲೆ ಅಧಿಕೃತವಾಗಿ ಮಾತನಾಡುವವರೆಂದೇ ಪ್ರಸಿದ್ಧರಾದರು ಕಾಲಿನ್ ಕ್ಲಾರ್ಕ್ಸ್ ೧೯೨೫-೩೪ರ ಅವಧಿಯಲ್ಲಿ ಭಾರತ ಮತ್ತು ಚೀನಾ ವಿಶ್ವದ ಅತ್ಯಂತ ಕಡಿಮೆ ತಲಾದಾಯ ಹೊಂದಿದ್ದ ದೇಶಗಳು ಎಂದು ಲೆಕ್ಕ ಹಾಕಿದ್ದಾನೆ. ಒಬ್ಬ ಇಂಗ್ಲೀಷ್‌ನ ಆದಾಯವು ಭಾರತೀಯನ ಆದಾಯಕ್ಕಿಂತ ಐದು ಪಟ್ಟು ಹೆಚ್ಚಿತು.ಹಾಗೆಯೇ ಆಧುನಿಕ ವೈದ್ಯವಿಜ್ಞಾನ ಮತ್ತು ಒಳಚರಂಡಿ ವ್ಯವಸ್ಥೆಯ ಅದ್ಭುತ ಪ್ರಗತಿಯ ನಡುವೆಯೂ ೧೯೩೦ರಲ್ಲಿ ಭಾರತೀಯನ ಸರಾಸರಿ ಆಯುಷ್ಯವು ಕೇವಲ ೩೨ ವರ್ಷವಾಗಿತ್ತು. ಪಶ್ಚಿಮ ಯೂರೋಪ್ ಮತ್ತು ಉತ್ತರ ಅಮೇರಿಕಾದ ಬಹು ಭಾಗದಲ್ಲಿ ಆಗಲೇ ಸರಾಸರಿ ಆಯುಷ್ಯವು ೬೦ರ ಮೇಲಿತ್ತು"[೧೦]

ಭಾರತದ ಬಡತನವು ಅದರ ಭೌಗೋಳಿಕ ಅಥವಾ ಅದರ ಜನತೆಯ ಗುಣದಲ್ಲಿನ 'ಅಂತರ್ಗತ' ದೌರ್ಬಲ್ಯ ಅಥವಾ ಸಾಮರ್ಥದ ಕೊರತೆಯ ಸೃಷ್ಠಿಯಾಗಿರಲಿಲ್ಲ. ಅದು ಮುಘಲ್ ಅಥವಾ ಬ್ರಿಟಿಷ್ ಪೂರ್ವ ಅವಧಿಯ ಪಳಯುಳಿಕೆಯೂ ಆಗಿರಲಿಲ್ಲ. ಅದು ಕೇವಲ ಕಳೆದ ಎರಡು ಶತಮಾನಗಳ ಇತಿಹಾಸದ ಸೃಷ್ಠಿಯಾಗಿತ್ತು. ಅದಕ್ಕೆ ಮೊದಲು ಭಾರತವು ಪಶ್ಚಿಮ ಯೂರೋಪಿನ ದೇಶಗಳಿಗಿಂತಲೂ ಹಿಂದುಳಿದಿರಲಿಲ್ಲ. ಅಥವಾ ಬದುಕಿನ ಮಟ್ಟವು, ವಿಶ್ವದ ಯಾವುದೇ ದೇಶದಲ್ಲಿನ ಜೀವನ ಮಟ್ಟಕ್ಕಿಂತ ಹೆಚ್ಚು ಅಂತರದಲ್ಲೂ ಇರಲಿಲ್ಲ. ಖಚಿತವಾಗಿ ಹೇಳುವುದಾದರೆ. ಪಶ್ಚಿಮ ದೇಶಗಳು ಅಭಿವೃದ್ಧಿಗೊಂಡು ಶ್ರೀಮಂತವಾಗುತ್ತಿದ್ದ ಅವಧಿಯಲ್ಲಿ ಭಾರತವು ಆಧುನಿಕ ವಸಾತೀಕರಣಕ್ಕೆ ಒಳಗಾಗಿ, ಅಭಿವೃದ್ಧಿಯಿಂದ ವಂಚನೆಗೆ ಗುರಿಯಾಗಿತ್ತು. ಬಹುತೇಕ ಇಂದಿನ ಎಲ್ಲಾ ಅಭಿವೃದ್ಧಿ ಹೊಂದಿರುವ ದೇಶಗಳೂ ಅಭಿವೃದ್ಧಿ ಸಾಧಿಸಿದ್ದು, ಬಹುತೇಕ ಬ್ರಿಟನ್ ಭಾರತವನ್ನು ಆಳುತ್ತಿದ್ದ ಸಂದರ್ಭದಲ್ಲಿ ಅದರಲ್ಲೂ ಕೆಲವು ೧೮೫೦ರ ನಂತರ. ೧೭೫೦ರವರೆಗೂ ಪ್ರಪಂಚದ ಬೇರೆ ಬೇರೆ

ಭಾಗಗಳ ಜೀವನ ಮಟ್ಟದ ನಡುವೆ ಹೆಚ್ಚಿನ ಅಂತರ ಇರಲಿಲ್ಲ. ಈ ಸಂಬಂಧ, ಗಮನಿಸಬೇಕಾದ ಕುತೂಹಲದ ವಿಷಯವೆಂದರೆ, ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿಯು ಆರಂಭವಾದ ದಿನಗಳು ಮತ್ತು ಬ್ರಿಟಿಷರು ಬಂಗಾಳವನ್ನು ಗೆದ್ದ ದಿನಗಳು ಸಹಜವಾಗಿ ಒಂದೇ ಆಗಿವೆ. ವಾಸ್ತವವೆಂದರೆ, ಕೈಗಾರಿಕಾ ಪ್ರಗತಿಗೆ ಕಾರಣವಾದ ಮತ್ತು ಬ್ರಿಟನ್ನಿನಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಗತಿಗೆ ಕಾರಣವಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳೇ ಭಾರತದಲ್ಲಿ ಆರ್ಥಿಕ ಹಿಂಜರಿಕೆ ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿಂದುಳಿಯುವಿಕೆಗೂ ಕಾರಣವಾದವು. ಇದಕ್ಕೆ ಕಾರಣವು ಸ್ಪಷ್ಟವಾಗಿದೆ. ಬ್ರಿಟನ್ ತನ್ನ ಆರ್ಥಿಕತೆಗೆ ಅನುಕೂಲವಾಗುವಂತೆ ಭಾರತದ ಆರ್ಥಿಕತೆಯನ್ನು ಅಧೀನಗೊಳಿಸಿಕೊಂಡಿತು. ಮತ್ತು ಭಾರತದ ಅವಶ್ಯಕ ಸಾಮಾಜಿಕ ಸ್ವರೂಪವನ್ನು ತನ್ನ ಸ್ವಂತ ಅನುಕೂಲಗಳಿಗೆ ತಕ್ಕಂತೆ ನಿರ್ಧರಿಸಿತು. ಇದರ ಫಲವೇ, ಭಾರತದಲ್ಲಿ ವ್ಯವಸಾಯದ ಮತ್ತು ಕೈಗಾರಿಕೆಯ ಜಡತೆ, ಜಮೀನ್ದಾರರು, ಭೂಮಾಲೀಕರು, ರಾಜರು, ಲೇವಾದೇವಿಗಾರರು, ವ್ಯಾಪಾರಿಗಳು, ಬಂಡವಾಳಗಾರರು ಮತ್ತು ವಿದೇಶಿ ಸರ್ಕಾರ ಮತ್ತು ಅದರ ಅಧಿಕಾರಿಗಳ ಶೋಷಣೆ ಮತ್ತು ಬಡತನ ರೋಗ ಮತ್ತು ಅರೆ ಹೊಟ್ಟೆಯ ಹೆಚ್ಚಳ.

ಸ್ವಾಮಿ ವಿವೇಕಾನಂದ, ಭಾರತೀಯರ ಸ್ಥಿತಿಯನ್ನು ಈ ಕೆಳಕಂಡ ಮಾತುಗಳ ಮೂಲಕ ವಿವರಿಸಿದ್ದಾರೆ "ಚಿಂದಿಯಾದ ಕಂಬಳಿಗಳನ್ನು ಹೊದ್ದು, ಅಲ್ಲಿಂದಿಲ್ಲಿಗೆ ಬಡಕಲು ದೇಹ ಹೊತ್ತು ಓಡಾಡುವ, ನೂರು ವರ್ಷಗಳಿಗೂ ಹೆಚ್ಚು ಅವಧಿಯ ನಿರಾಶೆ ಮತ್ತು ಬಡತನದಿಂದ ಸುಕ್ಕುಗಟ್ಟಿದ ಮುಖದ, ತರುಣರು ಮತ್ತು ವೃದ್ಧರು; ಎಲ್ಲೆಲ್ಲಿಯೂ ಸಾಮಾನ್ಯವಾಗಿ ಕಾಣುವ ಹಸುಗಳು, ಎತ್ತುಗಳು, ಕೋಣಗಳು – ಓ. ಅವರ ಕಣ್ಣುಗಳಲ್ಲಿಯೂ ಅದೇ ಖಿನ್ನತೆ, ಅದೇ ದುರ್ಬಲ ದೇಹ, ಹಾದಿ ಬದಿಯ ತಿಪ್ಪೆ, ಕೊಳಕು; ಇದು ವರ್ತಮಾನದ ನಮ್ಮ ಭಾರತ! ಅರಮನೆಗಳ ಪಕ್ಕದಲ್ಲೇ ಮುರಿದುಬಿದ್ದ ಗುಡಿಸಲುಗಳು, ದೇವಸ್ಥಾನಗಳ ಸಮೀಪದಲ್ಲೇ ತಿಪ್ಪೆಗುಂಡಿಗಳು, ನಡುವಿಗೆ ತುಂಡು ಬಟ್ಟೆ ಉಟ್ಟ ಸನ್ಯಾಸಿ, ಆಡಂಬರದ ಉಡುಪು ಧರಿಸಿದವರ ಪಕ್ಕದಲ್ಲೇ ನಡೆಯುವ ಹಸಿವಿನ ಬಳಲಿಕೆಯಿಂದ ಕಾಂತಿ ಕಳೆದುಕೊಂಡ ಮರುಕದ ಕಣ್ಣುಗಳ ನೋಟದ ಬದಿಯಲ್ಲೆ ಚೆನ್ನಾಗಿ ತಿಂದು ಕೊಬ್ಬಿದ ವ್ಯಕ್ತಿ– ಇದು ನಮ್ಮ ಜನ್ಮಭೂಮಿ! ಭೀಕರ ಪ್ಲೇಗ್ ಮತ್ತು ಕಾಲರಗಳಿಂದ ಆಗುವ ನಾಶ, ದೇಶದ ಜೀವವನ್ನೇ ತಿನ್ನುತ್ತಿರುವ ಮಲೇರಿಯಾ; ಎರಡನೆಯ ಸ್ವಭಾವವೇ ಆದ ಹಸಿವು, ಅರೆ ಹಸಿವು; ಆಗಾಗ್ಗೆ ತನ್ನ ದುರಂತ ನರ್ತನವನ್ನು ಮಾಡುವ ಮರಣಸದೃಶವಾದ ಕ್ಷಾಮ; ನೋಡಲು ಮಾತ್ರ ಮನುಷ್ಯರಂತೆ ಕಾಣುವ ಮೂರು ನೂರು ದಶಲಕ್ಷ ಆತ್ಮಗಳ ಮೇಳ; ತಮ್ಮದೇ ಜನರಿಂದ ಮತ್ತು ವಿದೇಶಿ ರಾಷ್ಟ್ರಗಳಿಂದ ಕೆಳಗೆ ತುಳಿಯಲ್ಪಟ್ಟ ಜೀವ ಕಳೆದುಕೊಂಡ. ಯಾವುದೇ ಭರವಸೆ ಇಲ್ಲದೆ, ಯಾವುದೇ ಭೂತಕಾಲವಿಲ್ಲದೆ. ಯಾವುದೇ ಭವಿಷ್ಯವಿಲ್ಲದೆ. ಹಾಗೆ ಸಾಧನೆಯ ಸ್ವಭಾವಕ್ಕೆ ಸಿದ್ಧಗೊಂಡ ಗುಲಾಮನಾಗಿ. ತಮ್ಮ ಜೊತೆಯ ಜನರಿಗೇ ಹೊರಲಾರದ ಹೊರೆಯಾದ. ಬಲಿಷ್ಠದ ಪಾದಗಳ ಧೂಳವನ್ನು ನೆಕ್ಕುತ್ತಾ, ಆದರಿಂದ ದುರ್ಬಲರಾದವರಿಗೆ. ಸಾವಿನ ಏಟನ್ನು ಕೊಡುವ ಪೂರ್ಣ ವಿಕಾರವಾದ

ದುರ್ಬಲರಾದವರಿಗೆ ಮತ್ತು ಭವಿಷ್ಯದ ಬಗ್ಗೆ ಭರವಸೆಯೇ ಇಲ್ಲದವರಿಗೆ ಸಹಜವಾಗಿ ಬರುವ ಪೈಶಾಚಿಕ ಮೂಢನಂಬಿಕೆಯ ತಮ್ಮ ಬೆನ್ನು ಮೂಳೆಯಂತೆಯೇ ಯಾವುದೇ ಮಾದರಿಯ ನೈತಿಕತೆಯೂ ಇಲ್ಲದೆ, ಭಾರದ ದೇಹದ ಮೇಲೆ ಹೇನಿನಂತೆ ಕೂಡಿರುವ ಕೊಳೆತು ನಾರಿ ವಾಸನೆ ಬಂದ ಶವದ ಮೇಲಿನ ಹುಳುಗಳ ಹಾಗೆ ಮೂರು ನೂರು ದಶಲಕ್ಷ ಆತ್ಮಗಳ ಇದು ಸ್ವಾಭಾವಿಕವಾಗಿ ಇಂಗ್ಲೀಷ್ ಅಧಿಕಾರಿಗಳ ಗಮನಕ್ಕೆ ಬರಬೇಕಾದ, ನಮಗೆ ಸಂಬಂಧಿಸಿದ ಚಿತ್ರ"[೧೧]

ಹಾಗೆಯೇ ೧೯೪೩ರಲ್ಲಿ ಬಂಗಾಳವು ಈಚಿನ ಇತಿಹಾಸದಲ್ಲಿ ಸಂಭವಿಸಿದ ಅತ್ಯಂತ ದಾರುಣ ಕ್ಷಾಮದಲ್ಲಿ ಮುಳುಗಿಹೋಗಿತು. ಕೆಲವೇ ತಿಂಗಳುಗಳಲ್ಲಿ ಹಸಿವಿನಿಂದ ಮೂರು ದಶಲಕ್ಷಕ್ಕೂ ಹೆಚ್ಚು ಜನ ಮೃತರಾದರು. ಕ್ಷಾಮವು ಅಷ್ಟು ಜನರನ್ನು ಬಲಿ ತೆಗೆದುಕೊಳ್ಳುವುದನ್ನು ಸರ್ಕಾರವು ತಡೆಯಬಹುದಾಗಿತ್ತು ಎಂದು ಜನರಲ್ಲಿ ತೀವ್ರ ಆಕ್ರೋಶವಿತ್ತು. ಆದರೆ ಆ ಆಕ್ರೋಶವು ರಾಜಕೀಯ ಅಭಿವ್ಯಕ್ತಿ ಪಡೆಯಲೇ ಇಲ್ಲ.

೨.೬ ಪಾಶ್ಚಿಮಾತ್ಯ ಚಿಂತಕರ ಕಣ್ಣೋಟದಲ್ಲಿ ಹಸಿವಿನ ಭಾರತ

ಮಾನವ ಇತಿಹಾಸದ ಉದ್ದಕ್ಕೂ ಹಸಿವಿನ ಧಾರುಣತೆಯನ್ನು ಕಾಣುತ್ತೇವೆ. ಹಸಿವಿನ ಚರಿತ್ರೆ ಇಂದು ನೆನ್ನೆಯದಲ್ಲ. ಮನುಷ್ಯನ ಹುಟ್ಟಿನಿಂದಲೇ ಇದರ ಹುಟ್ಟು ಆಗಿದೆ. ಅದರ ರೂಪಕಗಳು ಸ್ಮೃತಿಗಳು ಪ್ರತಿಯೊಂದು ಸಂಸ್ಕೃತಿಯ ಗರ್ಭದಲ್ಲಿ ಹಾಸುಹೊಕ್ಕಾಗಿದೆ. ಪ್ರತಿಯೊಂದು ಪ್ರಾಚೀನ ಮತ್ತು ಅರ್ವಾಚೀನ ಪರಂಪರೆಗಳ ಕೇಂದ್ರ ವಸ್ತು ಹಸಿವು ಸೃಷ್ಟಿಸಿದ ನೋವು ಮತ್ತು ಅವಮಾನಗಳೇ ಆಗಿವೆ. ಪ್ರತಿಯೊಂದು ಸಂಸ್ಕೃತಿ ಪರಂಪರೆ ಹಸಿವನ್ನು ಹೇಗಾದರೂ ಮಾಡಿ ಕೊನೆಗಾಣಿಸಬೇಕೆಂದು ಪ್ರಯತ್ನ ಪಡುತ್ತಿದ್ದರೂ ಅದು ಸಾಧ್ಯವಾಗಿಲ್ಲ ಎಂಬುದು ಮಾತ್ರ ವಿಪರ್ಯಾಸದ ಸಂಗತಿ. ಹಸಿವು ಮನುಷ್ಯನನ್ನು ಸದಾ ಕಾಡುತ್ತಿರುವ ಸಾಮಾಜಿಕ ಸಮಸ್ಯೆ. ನಾಲ್ವರು ಭಾರತೀಯರಲ್ಲಿ ಒಬ್ಬ ಸದಾ ಹಸಿವಿನಿಂದ ಬಳಲುತ್ತಿರುವ ಭೀಕರ ಪರಿಸ್ಥಿತಿ ನಮ್ಮಲ್ಲಿದೆ. ಮುಂಬರುವ ವರ್ಷಗಳಲ್ಲಿ ಹಸಿವು ಜಗತ್ತಿನ ಪ್ರಮುಖ ಸಮಸ್ಯೆ ಆಗಲಿದೆ ಎಂದು ಈಗಾಗಲೇ ಅಂದಾಜು ಮಾಡಲಾಗಿದೆ. ಆದರೆ ಇಷ್ಟು ಸಿರಿವಂತಿಕೆ, ಆಧುನಿಕ ಬೆಳವಣಿಗೆಗಳು ಹಸಿವಿನ ಸಮಸ್ಯೆ ನಿವಾರಿಸಿಲ್ಲ ಎನ್ನುವುದೇ ವಿಚಿತ್ರ.

ಖ್ಯಾತ ಚಿಂತಕ ಆಡಂ ಸ್ಮಿತ್ ಪ್ರಕಾರ ಬಡತನ ಎನ್ನುವುದು ವ್ಯಕ್ತಿಯೊಬ್ಬನನ್ನು ಬರೀ ಹಸಿವು ಮತ್ತು ದೈಹಿಕ ದೌರ್ಬಲ್ಯಕ್ಕಷ್ಟೇ ಮಾಡುವುದಿಲ್ಲ. ಆ ವ್ಯಕ್ತಿಯನ್ನು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸಲಾರದಂತಹ ಅಸಮರ್ಥನನ್ನಾಗಿ ಮಾಡುತ್ತದೆ. ಆಡಂ ಸ್ಮಿತ್ ಪ್ರಕಾರ ಈ ರೀತಿಯಲ್ಲಿ ವ್ಯಕ್ತಿಯನ್ನು ಸಾಂಸ್ಕೃತಿಕವಾಗಿ ಹೊರಹಾಕುವ ಕ್ರಿಯೆ ಎರಡು ರೀತಿಯಲ್ಲಿ ನಡೆಯುತ್ತದೆ. ಮೊದಲನೆಯದು ವ್ಯಕ್ತಿಗತವಾಗಿ ಹೊರಹಾಕುವುದು. ಎರಡನೆಯದು ನಿರ್ದಿಷ್ಟ ಗುಂಪನ್ನು ಹೊರಹಾಕುವುದು. ಹಸಿವಿನಿಂದ ಬಳಲುವ ವ್ಯಕ್ತಿ

ಸಮುದಾಯದ ಯಾವುದೇ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರಾಸಕ್ತಿ ತಾಳುತ್ತಾನೆ. ಅವನಿಗೆ ಹೊಟ್ಟೆಯದೇ ಚಿಂತೆ. ಅಂಥವನನ್ನು ಸಮಾಜವೇ ನಿರ್ಲಕ್ಷಿಸಿ, ನಿರಾಕರಿಸಿ ಬಿಡುತ್ತದೆ. ನಮ್ಮ ಸಮಾಜದಲ್ಲಿ ಬಡತನ, ಹಸಿವಿಗೆ ನಿರಂತರವಾಗಿ ಬಲಿಯಾಗುವ ನಿರ್ದಿಷ್ಟ ಗುಂಪುಗಳಿವೆ. ಅವುಗಳೆಂದರೆ ದಲಿತರು, ಬುಡಕಟ್ಟು ಜನರು, ಹೆಂಗಸರು ಅದರಲ್ಲೂ ಮುಖ್ಯವಾಗಿ ವಿಧವೆಯರು ಇವರು ಸದಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಭಾಗಿದಾರಿಕೆಯಿಂದ ಹೊರಗುಳಿದಿರುತ್ತಾರೆ. ಇದನ್ನು ಸ್ಮಿತ್ ಭಾಗವಹಿಸುವಿಕೆಯಿಂದ ಹೊರಗುಳಿಯುವ ಪ್ರಕ್ರಿಯೆ ಎಂದು ಕರೆದಿದ್ದಾನೆ.

ಪ್ರಪಂಚದಲ್ಲಿ ಇಂದು ಹೆಚ್ಚು ಜನ ಸಾಯುತ್ತಿರುವುದು ಹಸಿವಿನಿಂದ, ಏಡ್ಸ್, ಕಾನ್ಸರ್ ಮುಂತಾದ ಪ್ರಾಣಾಂತಿಕ ರೋಗಗಳಿಗೆ ಹಸಿವಿನ ನಂತರ ಸ್ಥಾನ ಅಂದರೆ ಹಸಿವು ಎಂಬುದನ್ನು ಒಂದು ರೋಗ ಅಂದೇ ಪರಿಗಣಿಸಬೇಕಾಗುತ್ತದೆ. ದುರಾದೃಷ್ಟಕರ ಸಂಗತಿ ಎಂದರೆ ಹಸಿವನ್ನು ರೋಗ ಎಂದು ನಮ್ಮ ಸರ್ಕಾರದವರು ಪರಿಗಣಿಸದೇ ಇರುವುದು. ಇಂದು ಪ್ರಪಂಚದಲ್ಲಿ ಹಸಿವು ಎಂಬ ಭೀಕರ ರೋಗದಿಂದ ಬಳಲುತ್ತಿರುವವರ ಸಂಖ್ಯೆ ೮೨೦ ಮಿಲಿಯನ್ನಷ್ಟಿದೆ. ಅಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನ ಭಾರತದಲ್ಲಿ ಇದ್ದಾರೆ. ನಮ್ಮ ದೇಶದಲ್ಲಿ ೮೩೬ ಮಿಲಿಯನ್ ಜನರು ದಿನವೊಂದಕ್ಕೆ ಇಪ್ಪತ್ತು ರೂಪಾಯಿಗಿಂತ ಕಡಿಮೆ ಹಣವನ್ನು ತಮ್ಮ ಊಟಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಅವರಿಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ಚಿಂತೆ. ಅವರೆಂದೂ ಪೌಷ್ಠಿಕ ಆಹಾರದ ಬಗ್ಗೆ ಯೋಚಿಸುವುದಿಲ್ಲ. ಇನ್ನು ಸುಮಾರು ೩೦೦ ಮಿಲಿಯನ್ ಜನರು ಹಸಿವಿಗೆ ಸಂಬಂಧಿಸಿದ ಖಾಯಿಲೆಗಳಿಂದಾಗಿ ಸಾಯುತ್ತಿದ್ದಾರೆ. ಚೈನಾ ಬಗ್ಗೆ ಬರೆಯುತ್ತಾ ಒಬ್ಬ ವಿದ್ವಾಂಸ ಜಾನ್‌ಗರ್ಲಿ ಈ ಬಗ್ಗೆ ಹೇಳುವ ಮಾತು ಮಾರ್ಮಿಕ. "ಬಡತನದ ಭೀಕರ ರೂಪ ನೋಡಬೇಕಾದರೆ ನಾವು ಹೋಗಬೇಕಾದುದು ಚೈನಾಕ್ಕಲ್ಲ. ಬದಲಿಗೆ ಭಾರತ ಮತ್ತು ಪಾಕಿಸ್ಥಾನ ಇತ್ಯಾದಿಗಳ ಕಡೆಗೆ"[೧೧]

೨.೭ ದಾರ್ಶನಿಕರ ಬರವಣಿಗೆಯಲ್ಲಿ ಹಸಿವಿನ ಕಥನ

ವಿಷಯಕ್ಕೆ ಪೂರಕವಾಗಿ ವಿಲ್ ಡ್ಯೂರೆಂಟ್‌ನ 'ದಿ ಕೇಸ್ ಫಾರ್ ಇಂಡಿಯಾ'ಕೃತಿಯ ಕೆಲವು ಹೇಳಿಕೆಗಳನ್ನು ಅಧ್ಯಯನದ ದೃಷ್ಟಿಯಿಂದ ಗಮನಿಸಿದಾಗ ಹಲವಾರು ಸತ್ಯಗಳು ಕಂಡುಬರುತ್ತವೆ. ವಿಲ್ ಡ್ಯೂರೆಂಟು ಬ್ರಿಟೀಷ್ ವಸಾಹತುಶಾಹಿ ಕಾಲಘಟ್ಟದಲ್ಲಿ ಇಡೀ ಭಾರತವನ್ನು ಸಂಚರಿಸಿದವನು. ಭಾರತದ ಗ್ರಾಮಸಮಾಜ ಎದುರಿಸುತ್ತಿದ್ದ ಬಡತನ ಮತ್ತು ಹಸಿವು ಕಣ್ಣಾರೆ ಕಂಡವನು ಇದಕ್ಕೆ ಕಾರಣ ವಸಾಹತುಶಾಹಿ ಆಕ್ರಮಣಶೀಲತೆ. ಈ ಸತ್ಯಗಳಿಗೆ ಒಂದು ಪುಟ್ಟ ಶೀರ್ಷಿಕೆಯೊಂದನ್ನು ನೀಡಿದರೆ ವಿಷಯ ಗ್ರಹಿಕೆಗೆ ಒಂದು ಸೂಕ್ತ ಮಾದರಿ ಲಭಿಸುತ್ತದೆ.

೨.೮ ವಸಹತುಶಾಹಿ ಆಕ್ರಮಣಶೀಲತೆ : ಭಾರತದ ತಳಸಮುದಾಯಗಳ ಬಡತನ ಮತ್ತು ಹಸಿವು.

ವಸಹತುಶಾಹಿ ಆಗಮನ ಭಾರತದ ಹಸಿವು ಮತ್ತು ಬಡತನಕ್ಕೆ ಮೂಲ ಕಾರಣವೆಂದರೆ ತಪ್ಪಾಗಲಾರದು. ಇತಿಹಾಸದ ಮೊರೆ ಹೋಗಿ ಕಂಡಾಗ ಹಲವಾರು ಸತ್ಯಗಳು ಹೊರಬೀಳುತ್ತವೆ. ಆ ಸತ್ಯಗಳು ಭಾರತೀ ಇತಿಹಾಸದಲ್ಲಿ ಶೈಕ್ಷಣಿಕವಾಗಿ ಬಳಕೆ ಆಗದಿರುವುದು ಕೂಡ ದೊಡ್ಡ ದುರಂತ ಎಂದು ನಾನು ಹೇಳುತ್ತೇನೆ. ೧೫ನೇ ಶತಮಾನದ ಕೊನೆಯ ಇಪ್ಪತ್ತೈದು ವರ್ಷಗಳು ಪ್ರಪಂಚದ ಭೋಗೋಳಿಕ ಅನ್ವೇಷಣೆಯ ಕಾಲವಾಗಿತ್ತು. ಈ ರೀತಿಯ ಅನ್ವೇಷಣೆಯು ವಿವಿಧ ರಾಷ್ಟ್ರಗಳ ವಾಣಿಜ್ಯ ಸಂಬಂಧಗಳ ಮೇಲೆ ತೀವ್ರತರವಾದ ಪರಿಣಾಮವನ್ನು ಉಂಟುಮಾಡಿತು. ಈ ರೀತಿಯ ಅನ್ವೇಷಣೆಯಿಂದಾಗಿ ಜಲಮಾರ್ಗದ ಅವಿಷ್ಕಾರದ ಫಲವಾಗಿ ೧೪೯೮ ಮೇ ೧೭ ರಂದು ಪೂರ್ಚುಗಲ್‌ನ ವಾಸ್ಕೋಡಿಗಾಮನು ಭಾರತಕ್ಕೆ ವ್ಯಾಪಾರದ ಉದ್ದೇಶವನ್ನು ಇಟ್ಟುಕೊಂಡು ಪೋರ್ಚುಗೀಸರು, ಡಚ್ಚರು, ಬ್ರಿಟೀಷರು ಮತ್ತು ಕೊನೆಯದಾಗಿ ಫ್ರಂಚರು ಬಂದರು. ಪೋರ್ಚುಗೀಸರು ೧೫೦೦ ರಿಂದ ಭಾರತದೊಡನೆ ವ್ಯಾಪಾರವನ್ನು ಆರಂಭಿಸಿದರು. ಇವರು ಡಯ್ಯು, ಡಾಮನ್, ಸಾಲ್ಸೆಟ್, ಬೆಸ್ಸಿನ್, ಬೊಂಬಾಯಿ, ಸ್ಯಾಂಥೋಮ್ ಮತ್ತು ಹೂಗ್ಲಿಗಳನ್ನು ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡಿಕೊಂಡಿದ್ದರು.

ಇವರ ನಂತರ ಬಂದ ಡಚ್ಚರು, ಫ್ರೆಂಚರು ಬ್ರಿಟೀಷರು ತಮ್ಮ ತಮ್ಮಲಿಯೇ ಸ್ಥಾಪಿಸಿಕೊಂಡ ಮತ್ತು ಆ ದೇಶಗಳು ಸರ್ಕಾರಿ ಬೆಂಬಲವನ್ನು ಪಡೆದುಕೊಂಡ ವಾಣಿಜ್ಯ ಕಂಪನಿಗಳ ಉದ್ದೇಶ ಮೊದಮೊದಲು ಭಾರತದ ವ್ಯಾಪಾರಿ ಕಂಪನಿಗಳ ಉದ್ದೇಶ ಮೊದಲಮೊದಲು ಭಾರತದ ವ್ಯಾಪಾರಿ ಲಾಭಕ್ಕೆ ಮಾತ್ರ ಸೀಮಿತವಾಗಿತ್ತು. ಮೊಘಲರ ಕೊನೆಯ ಆಳ್ವಿಕೆಯ ಅವಧಿಯಲ್ಲಿನ ರಾಜಕೀಯ ಅಸ್ಥಿರತೆಯನ್ನು ಗಮನಿಸಿ ಮತ್ತು ದೇಶೀಯ ರಾಜರುಗಳ ಕಚ್ಚಾಟದ ಸದುಪಯೋಗವನ್ನು ಪಡೆದುಕೊಂಡು ರಾಜಕೀಯದಲ್ಲಿ ಪ್ರವೇಶಿಸಲಾರಂಭಿಸಿದರು. ಈ ಹಂತದಲ್ಲಿ ಐರೋಪ್ಯ ದೇಶಗಳು ತಮ್ಮ ತಮ್ಮ ದೇಶದ ವಾಣಿಜ್ಯ ಕಂಪನಿಗಳಿಗೆ ಯುದ್ಧ ಮಾಡುವ ಒಪ್ಪಂದ ಮಾಡಿಕೊಳ್ಳುವ, ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸುವ ಹಾಗೂ ಗೆದ್ದು ವಶಪಡಿಸಿಕೊಂಡಪ್ರದೇಶಗಳ ಮೇಲೆ ಆಳ್ವಿಕೆ ಮಾಡುವ ಸನ್ನದು ಎಂಬ ಅಧಿಕಾರವನ್ನು ನೀಡಿದವು. ಈ ಸನ್ನದುಗಳ ಆ ವ್ಯಾಪಾರಿಗಳಿಗೆ ಅವಶ್ಯಕವಾದ ಖಾಯಂ ನೆಲೆಗಳನ್ನು ತಮ್ಮ ವ್ಯಾಪಾರಿ ನೆಲೆಗಳನ್ನು ಸ್ಥಾಪಿಸುವ ಮತ್ತು ವ್ಯಾಪಾರಿ ಸ್ವಾಮ್ಯ ಹೊಂದುವ ವಿಷಯದಲ್ಲಿ ಐರೋಪ್ಯ ರಾಷ್ಟ್ರಗಳ ಕಂಪನಿಗಳಲ್ಲೇ ಬಿರುಸಿನ ಹೋರಾಟ ಪ್ರಾರಂಭವಾಯಿತು. ತಕ್ಕಡಿಯನ್ನು ಹಿಡಿದು ವ್ಯಾಪಾರಕ್ಕಾಗಿ ಆಗಮಿಸಿದ ಈ ಯೂರೋಪಿಯನ್ನರು ಅದರಲ್ಲೂ ಬ್ರಿಟಿಷರು ತಮ್ಮ ಪ್ರತಿಸ್ಪರ್ಧಿಗಳಾದ ಪೋರ್ಚುಗೀಸರನ್ನು ಡಚ್ಚರನ್ನು ಹಾಗೂ ಫ್ರೆಂಚರನ್ನು ವ್ಯಾಪಾರದ ಪೈಪೋಟಿಯಿಂದಲ್ಲದೆ ಹಲವಾರು ಕದನಗಳ ಮೂಲಕವು ಜಯವನ್ನು ಗಳಿಸಿ ಭಾರತದಲ್ಲಿ ಶಾಸ್ವತವಾದ ನೆಲಯನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾದರು.

ಭಾರತಕ್ಕೆ ವ್ಯಾಪಾರ ವಾಣಿಜ್ಯಕ್ಕೆ ಆಗಮಿಸಿದ ಐರೋಪ್ಯರಲ್ಲಿ ಫ್ರೆಂಚರು ಕೊನೆಯವರು. ಇವರು ಬ್ರಿಟೀಷರಿಗೆ ಇತರ ಯೂರೋಪಿಯನ್ನರಿಗಿಂತ ಪ್ರಬಲವಾದ ಪೈಪೋಟಿಯನ್ನು ನೀಡಿದರು. ಬ್ರಿಟಿಷರು ಪ್ರಥಮವಾಗಿ ೧೭೪೬-೪೮ರ ನಡುವೆ ಫ್ರೆಂಚರನ್ನು ಮೊದಲು ಕರ್ನಾಟಕ ಯುದ್ದದಲ್ಲಿ ಎದುರಿಸಿದರೂ ಅಷ್ಟೂ ಯಶಸ್ವಿಯಾಗಲಿಲ್ಲ. ಆದರೆ ಮುಂದೆ ೧೭೪೯-೫೪ರ ಎರಡನೇ ಕರ್ನಾಟಕ ಯುದ್ದದಲ್ಲಿ ಹಾಗೂ ೧೭೫೮-೬೩ರ ಮೂರನೆ ಕರ್ನಾಟಕ ಯುದ್ದದಲ್ಲಿ ಫ್ರೆಂಚರನ್ನು ಸಂಪೂರ್ಣವಾಗಿ ಸೋಲಿಸಿ ತಮಗೆ ಬಲಯುತವಾಗಿದ್ದ ಶತೃವನ್ನು ನಾಶಮಾಡಿದರು. ಅದರಲ್ಲೂ ೧೭೫೭ರ ಬಂಡಾಯ ಬಂಗಾಳದಲ್ಲಿ ಇಂಗ್ಲೀಷರ ಸೇನಾ ಪಾರಮ್ಯತೆಯನ್ನು ಸ್ಥಾಪಿಸಿತು. ಈ ನಿಟ್ಟಿನಲ್ಲಿ ೧೭೫೭ರ ಪ್ಲಾಸಿ ಕದನದಲ್ಲಿ ಪ್ರಮುಖ ಪಾತ್ರ ವಹಿಸಿದ ರಾಬರ್ಟ್‌ಕ್ಲೈವ್‌ನ ಸಿರಾಜ್-ಉದ್-ದೌಲನನ್ನು ಹತ್ತಿಕ್ಕುವ ಮೂಲಕ ಬ್ರಿಟೀಷ್ ಸಾಮಾಜ್ಯವು ಒಂದು ಭದ್ರಸ್ಥಾನವನ್ನು ಭಾರತದಲ್ಲಿ ಪಡೆದುಕೊಳ್ಳುವಂತೆ ಮಾಡಿದನು. ಆಂದರೆ ಪ್ಲಾಸಿ ಕದನದಿಂದ ಬಂಗಾಳದಲ್ಲಿ ಸುಭದ್ರವಾಗಿ ನೆಲೆಯೂರಲು ಬ್ರಿಟಿಷರಿಗೆ ಅವಕಾಶವಾಯಿತು. ಎಂಬುದು ನಿಜ ಈಸ್ಟ್ ಇಂಡಿಯಾ ಕಂಪನಿಯು ೧೭೫೭ರ ಪ್ಲಾಸಿ ಕದನದ ಜಯದ ನಂತರ ಬಂಗಾಲದಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ಭಾರತವನ್ನು ವಸಾಹತು ನೆಲೆಯನ್ನಾಗಿಸಿ ಕೊಂಡಿತು. ಹಾಗೆಯೇ ಬ್ರಿಟನ್ನಿನ ಸಾಮಾಜಿಕ ಆರ್ಥಿಕ ಸಂಸ್ಥೆಗಳು ಮತ್ತು ಆಧುನಿಕವಾದ ತಾಂತ್ರಿಕಜ್ಞಾನ ವಸಾಹತುವಿನ ಮೇಲೆ ಹಿಡಿತ ಸಾಧಿಸಲು ಕಾರಣವಾದವು. ಈಸ್ಟ್ ಇಂಡಿಯಾ ಕಂಪನಿಯು ಸಹ ಪ್ರಪಂಚದ ಇತರ ಬಂಡವಾಳ ಏಕಸ್ವಾಮ್ಯದ ಸಂಸ್ಥೆಗಳಂತೆ ವಿದೇಶಗಳಲ್ಲಿ ದೊರೆಯುವ ವಸ್ತುಗಳಿಂದ ಅಧಿಕ ಲಾಭ ಪಡೆಯುವ ಉದ್ದೇಶ ಹೊಂದಿತ್ತು.

ಆದರಿಂದ ಇಂಗ್ಲೆಂಡ್ ಮತ್ತು ಇತರೆ ಯೂರೋಪಿಯನ್ ದೇಶಗಳಲ್ಲಿ ಬೇಡಿಕೆ ಇರುವ ವಸ್ತುಗಳ ದೊರೆಯುವಿಕೆಯ ಮೇಲೆ ಹತೋಟಿ ಹೊಂದಲು ಅನೇಕ ವಿಧಾನಗಳನ್ನು ಅಳವಡಿಸಿ ಕೊಂಡಿತು. ಮೊದಲು ತನ್ನ ನೌಕಾ ಶಕ್ತಿಯನ್ನು ಕರಾವಳಿಗುಂಟ ಬಲಗೊಳಿಸಿ, ಪ್ಲಾಸಿ ಕದನ ನಂತರ ಬಂಗಾಳ, ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳನ್ನು ತನ್ನ ಹತೋಟಿಗೆಪಡೆದು ಅಲ್ಲಿನ ಸ್ಥಳೀಯ ನವಾಬರು, ಜಮೀನ್ದಾರರು ಮತ್ತಿತರ ಮುಖ್ಯಸ್ಥರ ಬಳಿಯಿದ್ದ ಸಂಪತ್ತನ್ನು ದೋಚಿತು. ಇದರ ಪರಿಣಾಮವೆಂದರೆ ಪ್ಲಾಸಿ ಕದನಕ್ಕಿಂತ ಮೊದಲು ಬ್ರಿಟನ್ ಭಾರತ ದೇಶದೊಂದಿಗೆ ವ್ಯಾಪಾರ ಮಾಡಲು ಚಿನ್ನ ಬೆಳ್ಳಿಯಂತಹ ಅಮೂಲ್ಯ ಲೋಹಗಳನ್ನು ಉಪಯೋಗಿಸುತ್ತಿತ್ತು. ಆದರೆ ೧೭೫೭ರ ನಂತರ ಈ ಲೋಹಗಳನ್ನು ಉಪಯೋಗಿಸದೆ ಕಂಪನಿಯ ವರ್ತಕರು ಭಾರತೀಯ ಉತ್ಪಾದಕರ ಮೇಲೆ ನೀತಿ ನಿಯಮಗಳನ್ನು ಹೇರಲಾರಂಭಿಸಿದರು. ಹೀಗಾಗಿ ಪ್ರತಿವರ್ಷ ಭಾರತದ ಸಂಪತ್ತು ಇಂಗ್ಲೇಂಡಿಗೆ ಹರಿದು ಇಂಗ್ಲೇಂಡ್ ಶ್ರೀಮಂತವಾಯಿತು. ವಸಹತುವಿನ ಪ್ರಮುಖ ಸಿದ್ಧಾಂತ ಆರ್ಥಿಕ ಸುಲಿಗೆ. ಆರ್ಥಿಕ ಸುಲಿಗೆಯನ್ನು ವ್ಯವಸ್ಥಿತವಾಗಿ ಮುಂದುವರಿಸಲು ರಾಜಕೀಯ ನಿಯಂತ್ರಣವು ಅವಶ್ಯಕವಾದುದರಿಂದ ಬ್ರಿಟೀಷರು ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರು. ಆರ್.ಪಿ. ದತ್ತರವರು ತಮ್ಮ ಅಮೂಲ್ಯ ಕೃತಿ 'ಇಂಡಿಯಾ ಟುಡೆ'ಗ್ರಂಥದಲ್ಲಿ

ಕಾರ್ಲ್ ಮಾರ್ಕ್ಸ್ ರವರ ಮೂರು ಹಂತದ ಬ್ರಿಟೀಷ್ ವಸಾಹತು ನೀತಿ ಮತ್ತು ಆರ್ಥಿಕ ಶೋಷಣೆಯ ಅಂಶವನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಮೊದಲ ಹಂತವು ೧೭೫೭ ರಿಂದ ೧೮೧೩ರವರೆಗಿನ ವ್ಯಾಪಾರಿ ಪ್ರವೃತ್ತಿಯ ಹಂತ, ಈ ಹಂತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಇಂಗ್ಲೇಂಡ್ ಮತ್ತು ಯೂರೋಪಿನ ದೇಶಗಳಿಗೆ ರಫ್ತಾಗುವ ಸಿದ್ದ ವಸ್ತುಗಳ ಬೆಲೆಯನ್ನು ಸಂಪೂರ್ಣವಾಗಿ ಇಳಿಸಿ ಭಾರತದ ವ್ಯಾಪಾರದ ಮೇಲೆ ತನ್ನ ಹತೋಟಿ ಪಡೆದು ಭಾರತದ ಸಂಪತ್ತನ್ನು ನೇರವಾಗಿ ಸೂರೆಗೈದಿತು. ಈ ಹಂತದಲ್ಲಿ ಬ್ರಿಟನ್ನಿನ ಕೈಗಾರಿಕೆಗಳಲ್ಲಿ ಸಿದ್ದಗೊಂಡ ವಸ್ತುಗಳ ವ್ಯಾಪಾರ ಮಾರುಕಟ್ಟೆಯಾಗಿ ಭಾರತವು ಬದಲಾಯಿತು. ಹಾಗೆಯೇ ಇಂಗ್ಲೆಂಡಿನ ಕೈಗಾರಿಕೆಗೆ ಅವಶ್ಯಕವಾದ ಕಚ್ಚಾವಸ್ತುಗಳ ಪೂರೈಕೆಯ ದೇಶವಾಯಿತು. ಈ ಹಂತದಲ್ಲಿ ಬ್ರಿಟನ್ ಯಾವ ರೀತಿ ಶೋಷಣೆಗೆ ಈಡುಮಾಡಿತೆಂದರೆ ಶತಮಾನಗಳಿಂದ ಭಾರತವು ಪ್ರಪಂಚಕ್ಕೆಲ್ಲಾ ಹತ್ತಿಯ ಮತ್ತಿತರ ಸಿದ್ದ ವಸ್ತುಗಳನ್ನು ರಫ್ತು ಮಾಡುತ್ತಿದ್ದುದು ೧೮೫೦ರ ವೇಳೆಗೆ ಬ್ರಿಟನ್ನಿನ ಸಿದ್ಧ ವಸ್ತು ೧/೪ ಭಾಗವನ್ನು ಆಮದು ಮಾಡಿಕೊಳ್ಳುವಂತಾಯಿತು.

೧೮೧೩ ರಿಂದ ಕಂಪನಿಯು ಭಾರತದೊಂದಿಗಿನ ವ್ಯಾಪಾರಕ್ಕೆ ನಿರ್ಬಂಧ ವಿಧಿಸಿತು. ಮತ್ತು ೧೮೩೩ರಲ್ಲಿ ಕಂಪನಿಯು ಭಾರತದೊಂದಿಗಿನ ವ್ಯಾಪಾರಿ ಚಟುವಟಿಕೆಗಳ ಮೇಲೆ ಸಂಪೂರ್ಣ ತಡೆ ಹಾಕಿತು. ನಂತರ ಭಾರತವು ಬ್ರಿಟನ್ನಿನ ವ್ಯಾಪಾರಿಗಳು ಮತ್ತು ಕೈಗಾರಿಕಾ ಬಂಡವಾಳ ವರ್ಗದ ಶೋಷಣೆಗೆ ತೆರೆಯಲ್ಪಟ್ಟಿತು. ಈ ವರ್ಷವು ಕಚ್ಚಾವಸ್ತುಗಳನ್ನು ಕೊಂಡು ಹೋಗಿ ಸಿದ್ದ ವಸ್ತುಗಳನ್ನು ಭಾರತದ ಮಾರುಕಟ್ಟೆಗೆ ಬಿಟ್ಟಿತು. ಮತ್ತು ಈ ವರ್ಗವು ತನ್ನ ಬ್ರಿಟನ್ನಿನ ಕೈಗಾರಿಕಾ ಕಾರ್ಮಿಕರಿಗೆ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಕೊಂಡೊಯ್ಯಲು ಪ್ರಾರಂಭಿಸಿತು. ಈ ಕಾರಣದಿಂದ ೧೯ನೇ ಶತಮಾನದಲ್ಲಿ ಕ್ಷಾಮಗಳು ಸಂಭವಿಸಿ ಸುಮಾರು ೨೦ ದಶಲಕ್ಷ ಜನರ ಸಾವು ನೋವಿಗೆ ಕಾರಣವಾಯಿತು. ಕ್ಷಾಮವೆಂದರೆ ಸಮಾಜದಲ್ಲಿ ವಾಸಿಸುವ ಮಾನವನಿಗೆ ಬೇಕಾದ ಅಗತ್ಯವಸ್ತುಗಳ ಅಭಾವವಿದ್ದು, ಅಥವಾ ಪೂರೈಕೆಯಲ್ಲಿ ಕೊರತೆ ಕಂಡು ಬಂದಾಗ ಕ್ಷಾಮ ಪರಿಸ್ಥಿತಿ ಉದ್ಭವಿಸುತ್ತದೆ. ಕೇವಲ ಪ್ರಾಕೃತಿಕ ಕಾರಣಗಳಿಂದಲೇ ಕ್ಷಾಮ ಉಂಟಾಗಲಾರದು. ಮಳೆಬಾರದೇ ಬೆಳೆನಾಶವಾಗಿ, ಅತಿವೃಷ್ಠಿಯಿಂದಾಗಿಯೂ, ಅಭಾವ ಪರಿಸ್ಥಿತಿಯುಂಟಾಗಿ ಕ್ಷಾಮ ಉಂಟಾಗಬಹುದು. ಮತ್ತೆ ಕೆಲವೊಮ್ಮೆ ಮಾನವನ ನಿರ್ಮಿತ ಕಾರಣಗಳಿಂದಲೂ ಕ್ಷಾಮ ಬರುವುದುಂಟು. ಆಡಳಿತದಲ್ಲಿ ನಿರ್ಲಕ್ಷತೆ, ಸರ್ಕಾರದ ಆಡಳಿತ ಯಂತ್ರದಲ್ಲಿ ನಿಷ್ಕ್ರಿಯತೆ, ಅದಕ್ಕಾಗಿ ಸರ್ಕಾರ ಸೂಕ್ತ ಪರಿಹಾರ ಕ್ರಮ ಕೈಗೊಳ್ಳದಿರುವುದು ಆಹಾರ ಧಾನ್ಯವನ್ನು ದಲ್ಲಾಳಿಗಳು ಅಥವಾ ಇತರ ದಗಾಕೋರರು ಬಚ್ಚಿಡುವುದು. ಸರಿಯಾದ ವಿತರಣಾ ವ್ಯವಸ್ಥೆಯ ಕೊರತೆಯಿರುವುದು. ಅದಕ್ಕಿಂತ ಹೆಚ್ಚಾಗಿ ಲಾಭಗಳಿಸುವ ಮನೋಭಾವ ಈ ಮಾನವನ ನಿರ್ಮಿತ ಕಾರಣಗಳಿಂದಲೂ ಕ್ಷಾಮ ಸಂಭವಿಸಬಹುದು. ಬ್ರಿಟಿಷರು ಭಾರತವನ್ನು ತಮ್ಮ ವಸಹತುವಾಗಿ ಇಟ್ಟುಕೊಂಡು ಆಳಿದರೂ ಭಾರತದ ಅಭಿವೃದ್ಧಿಗೆ ಶ್ರಮಿಸಲಿಲ್ಲ.

ಇದು ಭಾರತದ ಅಭಿವೃದ್ಧಿಗೆ ಅಂದರೆ ಆರ್ಥಿಕ ನೀತಿಗೆ ಮಾರಕವಾಯಿತು. ಬ್ರಿಟೀಷರು ಭಾರತಕ್ಕೆ ಬರುವುದಕ್ಕಿಂತ ಮುನ್ನ ಅಂದರೆ ದೆಹಲಿ ಸುಲ್ತಾನರ ಕಾಲದಲ್ಲಿಯೂ ಕ್ಷಾಮ ಸಂಭವಿಸಿದವು. ಆದರೆ ಕ್ಷಾಮ ಬಂದಾಗ ಮಹಮ್ಮದ್ ಬಿನ್ ತೊಘಲಕನೂ ಸಾಕಷ್ಟು ಪರಿಹಾರ ಕಾರ್ಯ ಕೈಗೊಂಡನು. ಅದೇ ರೀತಿ ಮೊಗಲ್ ಅರಸರು ಕ್ಷಾಮ ಬಂದಾಗ, ಜನರಿಗೆ ಆಹಾರ, ವಸತಿ, ಉದ್ಯೋಗ, ಕಲ್ಪಿಸಿ ಸೂಕ್ತ ಪರಿಹಾರ ಕ್ರಮ ಕೈಗೊಂಡಿದ್ದನ್ನು ಬ್ರಿಟೀಷ್ ಅಧಿಕಾರಿಗಳೇ ಪ್ರಶಂಸಿದ್ದಾರೆ. ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ನೂರು ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ೧೨ ಕ್ಷಾಮಗಳು, ೪ ಅಭಾವ ಪರಿಸ್ಥಿತಿಗಳು ಸಂಭವಿಸಿದುದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಲಾರ್ಡ್ ಎಲ್ಲೆನ್ ಬರೋನ ಅಧಿಕಾರಾವಧಿಯಲ್ಲಿ ಎರಡು ಭೀಕರ ಕ್ಷಾಮಗಳು ತಲೆದೋರಿದವು.

೧೮೬೬ರ ಒರಿಸ್ಸಾದ ಕ್ಷಾಮವು ಭೀಕರ ರೂಪವನ್ನು ತಾಳಿದಾಗ ಬಂಗಾಳದಲ್ಲಿ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಸರ್ ಸೆನೆಟ್ ಬೆಡನ್ ಜನರಿಗೆ ಬರಗಾಲದ ಅಪಾಯವೇನು ಇಲ್ಲವೆಂದ ತಿಳಿಸಿದನು. ಆದರೆ ಕ್ಷಾಮಗಳ ಜೊತೆಯಲ್ಲಿಯೇ ಅನೇಕ ಪ್ರವಾಹಗಳು ಉಂಟಾಗಿ ಅನೇಕ ಜನ ಮರಣಹೊಂದಿ, ರೈತರು ತಮ್ಮ ಜಮೀನನ್ನು ಕಳೆದುಕೊಂಡು ನಿರ್ಗತಿಕರಾದರು. ಅಂದಿನ ಒರಿಸ್ಸಾದಲ್ಲುಂಟಾದ ಕ್ಷಾಮದ ಬಗ್ಗೆ ಲಾರೆನ್ಸ್ ಈ ರೀತಿ ಅಭಿಪ್ರಾಯಪಟ್ಟಿದ್ದಾನೆ. "ಜನರು ಆಹಾರ, ವಸತಿಯಿಲ್ಲದೇ ಬಹಳ ಕಷ್ಟ ಪಟ್ಟರು. ಅನಾವೃಷ್ಟಿಯು ಬಿಟ್ಟಿದನ್ನು ಪ್ರವಾಹಗಳು ಕೊಚ್ಚಿಕೊಂಡು ಹೋದವು. ಇದೇ ರೀತಿ ಬುಂದೇಲ್ ಖಂಡ ಮತ್ತು ರಾಜಪುಟಾಣದಲ್ಲಿ ೧೮೬೮-೬೯ರಲ್ಲಿ ಕ್ಷಾಮದ ಅರಿವನ್ನು ತಿಳಿದಿದ್ದ ಲಾರ್ಡ್ ಎಲ್ಲೆನ್ ಬರೋ ಮುಂಜಾಗ್ರತೆ ವಹಿಸಿದನು. ಸರ್. ಜಾರ್ಜ್ ಕ್ಯಾಂಪ್ ಬೆಲ್ ಪ್ರಕಾರ ೧೯ನೇ ಶತಮಾನದ ಭೀಕರ ಕ್ಷಾಮದಲ್ಲಿ ಎಲ್ಲೆಲ್ಲಿಯೂ ಹೆಣಗಳು, ಅಸ್ಥಿಪಂಜರಗಳನ್ನು ಕಂಡು ನನಗೆ ದಿಗ್ಭ್ರಮೆಯಾಯಿತು ಎಂದಿದ್ದಾನೆ. ೧೮೭೬-೮೦ರಲ್ಲಿ ಲಾರ್ಡ್ ಲಿಟ್ಟನ್ ವೈಸ್‌ರಾಯ್ ಆಗಿದ್ದ ಕಾಲದಲ್ಲಿ ಮದ್ರಾಸ್, ಹೈದರಾಬಾದ್, ಬೊಂಬಾಯಿ, ಮೈಸೂರು ರಾಜ್ಯಗಳಲ್ಲಿ ಕ್ಷಾಮ ಉಲ್ಬಣಗೊಳಿಸಿತು. ಇದರ ಹಿಂದೆಯೇ ವಿಷಮ ಶೀತಜ್ವರ, ಕಾಲರಾ, ಪ್ಲೇಗು ಬಂದಿತು. ಇದೇ ಸಮಯದಲ್ಲಿ ಮಧ್ಯಭಾರತ ಹಾಗೂ ಪಂಜಾಬಿನ ಕೆಲವು ಭಾಗಗಳಲ್ಲಿ ಕ್ಷಾಮ ಆವರಿಸಿತು. ಒಟ್ಟಿನಲ್ಲಿ ಈ ಎಲ್ಲಾ ಪ್ರದೇಶಗಳಿಂದ ೧೦ ಲಕ್ಷಕ್ಕೂ ಹೆಚ್ಚು ಮಂದಿ ಸತ್ತರು. ಬ್ರಿಟಿಷರಿಗೆ ಬರುತ್ತಿದ್ದ ಎರಡು ಕೋಟಿ ಕಂದಾಯದ ಹಣ ನಿಂತು ಹೋಯಿತು. ಭಾರತದಲ್ಲಿ ಪರಿಹಾರದ ತತ್ವ ಮತ್ತು ಕ್ರಮವನ್ನು ನಿಶ್ಚಿತವಾದ ಆಧಾರದ ಮೇಲೆ ಕೈಗೊಳ್ಳದಿದ್ದುದರಿಂದ ಪರಿಸ್ಥಿತಿ ಚಿಂತಾಜನಕ ವಾಗಿತ್ತು. ಹೆಚ್ಚು ಸಂಖ್ಯೆಯಲ್ಲಿ ಸಾವುನೋವುಗಳು ಸಂಭವಿಸಿದವು. ಇಂತಹ ಸಮಯದಲ್ಲಿಯೂ ದೆಹಲಿಯಲ್ಲಿ ದರ್ಬಾರನ್ನು ಏರ್ಪಡಿಸಿಕೊಂಡ ಬ್ರಿಟಿಷ್ ಅಧಿಕಾರಿಗಳು ೧೮೭೭ರ ಮೊದಲನೆ ದಿನ ವಿಕ್ಟೋರಿಯಾ ಮಹಾರಾಣಿ ಭಾರತದ ಚಕ್ರವರ್ತಿನಿ ಎಂಬುದಾಗಿ ಘೋಷಿಸಿ ಐಶಾರಾಮವಾಗಿದ್ದರು."

೨ನೇ ಲಾರ್ಡ್ ಎಲ್ಗಿನ್ ಬರೋ ವೈಸ್‌ರಾಯಿಯಾಗಿ ಪದವಿ ಸ್ವೀಕರಿಸಿದ ಮರುವರ್ಷವೇ ೧೮೯೬ರಲ್ಲಿ ಮಳೆ ಬೀಳದೆ ಅನಾವೃಷ್ಠಿಯುಂಟಾಗಿ ಪಂಜಾಬ್, ರಾಜಸ್ಥಾನ್, ಅಯೋಧ್ಯೆ, ಬಿಹಾರ, ಬಂಗಾಳ, ಬೊಂಬಾಯಿ ಮದ್ರಾಸ್‌ಗಳಲ್ಲಿ ಕ್ಷಾಮ ತಲೆದೋರಿ ಸುಮಾರು ೭.೫ಲಕ್ಷ ಜನ ಬ್ರಿಟಿಷ್ ಭಾರತದಲ್ಲಿ ಮೃತರಾದರು. ಸುಮಾರು ೪೦ ಲಕ್ಷದಷ್ಟು ಜನರು ಸಂಸ್ಥಾನ ರಾಜರುಗಳ ಆಶ್ರಯವನ್ನು ಪಡೆದವರು. ಇಷ್ಟೆಲ್ಲದರ ಜೊತೆಗೆ ೧೮೯೬ರಲ್ಲಿ ಬೊಂಬಾಯಿಯಲ್ಲಿ ಪ್ಲೇಗು ಕಾಣಿಸಿಕೊಂಡಿತು. ೧೮೯೭ರಲ್ಲಿ ಪೂನಾದಲ್ಲಿ ಸಿಟ್ಟಿಗೆದ್ದ ಜನತೆ ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಂದರು. ನಂತರ ಬೊಂಬಾಯಿಯಲ್ಲಿ ಜನತೆ ಬ್ರಿಟಿಷ್ ಆಡಳಿತದ ವಿರುದ್ಧ ದಂಗೆಯೆದ್ದರು. ನಂತರ ಭಾರತದ ವೈಸ್‌ರಾಯ್ ಆಗಿ ಬಂದ ಲಾರ್ಡ್ ಕರ್ಜನ್ (೧೮೯೯-೧೯೦೫) ಭಾರತದಲ್ಲಿನ ಮುಂದುವರೆದ ಕ್ಷಾಮ, ಪ್ಲೇಗು, ರೋಗರುಜಿನಗಳ ವಿರುದ್ಧ ಹೋರಾಡ ಬೇಕಾಯಿತು. ಈ ಕ್ಷಾಮವು ಹಿಂದಿನ ಕ್ಷಾಮವನ್ನೇ ಹಿಂಬಾಲಿಸಿ ಬಂದಿತ್ತಾದರೂ ಭಾರತ ಭೀಕರವಾದ ಕಾಲರ, ಮಲೇರಿಯಾದ ದವಡೆಗೆ ಸಿಲುಕಿತು. ಪಶ್ಚಿಮ ಭಾರತ ಮತ್ತು ದಕ್ಷಿಣ ಭಾರತ ಇವುಗಳು ಸಹ ಕ್ಷಾಮಕ್ಕೆ ಬಲಿಯಾದವು. ಈ ಪರಿಸ್ಥಿತಿಯು ಉಪವಾಸದಿಂದ ನರಳುತ್ತಿದ್ದ ಜನರ ಸಂಕಷ್ಟಗಳನ್ನು ತೀವ್ರಗೊಳಿಸಿತು. ಸುಮಾರು ೪,೭೫,೦೦೦ ಚದುರ ಮೈಲು ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಹರಡಿ ಸುಮಾರು ೬ ಕೋಟಿ ಜನರು ಸಂಕಷ್ಟದಲ್ಲಿ ಸಿಲುಕಿಕೊಂಡರು. ಸುಮಾರು ೧೦ ಲಕ್ಷ ಜನರ ಮರಣ ಹೊಂದಿದರು. ಕಾನ್ಪುರದಲ್ಲಿ ಗಲಭೆ ಸಂಭವಿಸಿ ಸಾವಿಗೆ ತುತ್ತಾದವರ ಸಂಖ್ಯೆ ೪೦೦ ಕ್ಕೂ ಮೀರಿತ್ತೆಂದು ಅಂದಾಜು ಮಾಡಲಾಗಿದೆ. ಈ ಮೇಲಿನ ಎಲ್ಲಾ ಕ್ಷಾಮಗಳು ಬ್ರಿಟಿಷ್ ಆಡಳಿತದ ನಿಷ್ಕ್ರಿಯತೆಯಿಂದಾಗಿ ಸಂಭವಿಸಿದರೂ, ಬಹಪಾಲು ಕಾರಣ ಪ್ರಕೃತಿಗೆ ಸೇರಿದ್ದತೆನ್ನಬಹುದು. ಆದರೆ ೧೭೬೭ ರಿಂದ ೧೭೭೦ರ ಅವಧಿಯಲ್ಲಿ ಸಂಭವಿಸಿದ ಕ್ಷಾಮಕ್ಕೆ ಬ್ರಿಟಿಷರು ಅನುಸರಿಸಿದ ನೀತಿಯೇ ಬಹುಪಾಲು ಕಾರಣವೆನ್ನಬಹುದು.

"ವಾರನ್ ಹೇಸ್ಟಿಂಗ್ ಭಾರತದ ಗವರ್ನರ್ ಆಗಿದ್ದ ೧೭೬೭-೭೦ರ ಅವಧಿಯಲ್ಲಿ ಬಂಗಾಲ ಮತ್ತು ಭಾರತದ ಬಹು ಭಾಗದಲ್ಲಿ ಕ್ಷಾಮ ಸಂಭವಿಸಿತು. ಇಂಗ್ಲೇಂಡಿನಲ್ಲಿ ಕೈಗಾರಿಕಾ ಕ್ರಾಂತಿಯಲ್ಲುಂಟಾದ ಬೆಳವಣಿಗೆಯಿಂದ ಇಂಗ್ಲೇಂಡ್ ಅತ್ಯಧಿಕ ಪ್ರಮಾಣದಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳತೊಡಗಿತು. ಇದರಿಂದ ಇಂಗ್ಲೇಂಡ್‌ನ ಕಾರ್ಮಿಕರಿಗೆ ಬೇಕಾದ ಅಪಾರ ಆಹಾರ ಪದಾರ್ಥಗಳನ್ನು ಪೂರೈಸಲು ತೊಡಗಿದರು. ಇದರಿಂದ ಭಾರತದ ಜನತೆ ಆಹಾರದ ಅಭಾವಕ್ಕೆ ಸಿಲುಕಿ ಇನ್ನಿತರ ಕಾಯಿಲೆಯಿಂದ ಬಳಲಿತು. ಬಂಗಾಲದ ಸುಮರು ೧/೩ ಭಾಗದ ಜನಸಂಖ್ಯೆ ಅಂದರೆ ಹೆಚ್ಚು ಕಡಿಮೆ ಒಂದು ಕೋಟಿ ಜನ ಮರಣ ಹೊಂದಿದರು. ಬಹುಭಾಗದ ಭೂಮಿ ಪಾಳುಬಿದ್ದಿತು. ೧೭೭೦ರಲ್ಲಿ ಕಂಪನಿಯ ಸೇವಕನೊಬ್ಬ ಕಡುಬಡತನದ ದೃಶ್ಯ ಇನ್ನೂ ಮುಂದುವರಿಯುತ್ತದೆ. ಅದರ ವರ್ಣನೆಯನ್ನು ಕೇಳಿದರೆ ಮಾನವ ಜನಾಂಗ ತಲ್ಲಣಿಸುವುದು ಸತ್ಯ" ಎಂದು ತಿಳಿಸಿದ್ದಾನೆ.

೨.೯ ಬ್ರಿಟಿಷರ ಆರ್ಥಿಕ ನೀತಿಗಳು

ಭಾರತೀಯರ ಶೋಷಣೆ, ಬಡತನ, ಹಸಿವು

ಬ್ರಿಟಿಷರು ಬಾರತದಲ್ಲಿ ಜಾರಿಗೆ ತಂದಿದ್ದ ಆರ್ಥಿಕ ನೀತಿ ಭಾರತೀಯರನ್ನು ಶೋಷಣೆಗೀಡು ಮಾಡಿತು. ಎಲ್ಲಾ ವ್ಯಾಪಾರ ವಾಣಿಜ್ಯವನ್ನು ತಮ್ಮ ಅಧೀನಕ್ಕೊಳಪಡಿಸಿಕೊಂಡು ಅಪಾರ ಆಹಾರ ಪದಾರ್ಥಗಳನ್ನು ಇಂಗ್ಲೇಂಡಿಗೆ ರಪ್ತು ಮಾಡಿದ್ದರಿಂದ ಇಲ್ಲಿಯ ಜನತೆಗೆ ಆಹಾರ ವಸ್ತುಗಳ ಆಭಾವ ಉಂಟಾಗಿ ಜನತೆ ಹಸಿವಿನಿಂದ ಬಳಲಿ ಇಂಗ್ಲೀಷರ ವಿರುದ್ದ ಸಿಟ್ಟಿಗೇಳುವಂತಾಯಿತು. ಅಲ್ಲದೇ ಬ್ರಿಟೀಷರು ಜಾರಿಗೆ ತಂದಿದ್ದ ಖಾಯಂ ಜಮೀನ್ದಾರಿ ಪದ್ದತಿಯಿಂದ ಕಿತ್ತುಕೊಂಡಿತು ಇದರಿಂದ ಜಮೀನ್ದಾರರು ಮತ್ತು ಅವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರು ಕೆಲಸ ಕಳೆದುಕೊಂಡು ಬ್ರಿಟೀಷರ ವಿರುದ್ದ ತಿರುಗಿ ಬೀಳುವಂತಾಯಿತು. ವಸಾಹತುಗಳಿರುವುದೇ ತಾಯ್ನಾಡಿನ ಹಿತಕ್ಕಾಗಿ ಎಂಬ ತತ್ವಪ್ರತಿಪಾದಕರಾದ ಬ್ರಿಟಿಷರು ಇಲ್ಲಿನ ಕಚ್ಚಾವಸ್ತುಗಳನ್ನು ತಮ್ಮ ಕೈಗಾರಿಕೆಗಳಿಗೆ ರವಾನಿಸಿದರು. ಅಲ್ಲದೇ ಇಂಗ್ಲೇಂಡಿನಲ್ಲಿ ಸಿದ್ದವಾದ ವಸ್ತುಗಳಿಗೂ ಭಾರತವನ್ನೇ ಮಾರುಕಟ್ಟೆಯನ್ನಾಗಿ ಮಾಡಿಕೊಂಡರು. ಭಾರತ ಕೇವಲ ಕಚ್ಚಾ ಪದಾರ್ಥಗಳನ್ನು ರಪ್ತು ಮಾಡುವ ರಾಷ್ಟ್ರವಾಗಿ ಮಾರ್ಪಟ್ಟಿದ್ದರಿಂದ ಕೃಷಿಯ ಮೇಲಿನ ಅವಲಂಭನೆ ಹೆಚ್ಚಾಗಿ ಇಲ್ಲಿನ ಎಲ್ಲಾ ಕಚ್ಚಾ ಸಂಪನ್ಮೂಲ ಇಂಗ್ಲೇಂಡ್‌ಗೆ ಹೋಗಿ ಭಾರತ ಕೇವಲ ಬಳಕೆ ವಸ್ತುಗಳ ಆಮದು ರಾಷ್ಟ್ರವಾಗಿ ಪರಿಣಮಿಸಿತು.

"ಬ್ರಿಟಿಷ್ ಬಂಡವಾಳವು ಭಾರತಕ್ಕೆ ನದಿಯಂತೆ ಹರಿದು ಬಂದು ಪ್ರವಾಹದಂತೆ ಬಡ್ಡಿ ಮತ್ತು ಲಾಭಗಳೆರಡನ್ನು ತನ್ನೊಂದಿಗೆ ಕೊಚ್ಚಿಕೊಂಡು ಹೋಯಿತು. ಈ ಕುರಿತು ಜವಹರಲಾಲ್ ನೆಹರುರವರು ತಮ್ಮ "ಡಿಸ್ಕವರಿ ಆಫ್ ಇಂಡಿಯಾದಲ್ಲಿ ಭಾರತದಿಂದ ಇಂಗ್ಲೇಂಡಿಗೆ ವಿಪುಲ ಪ್ರಮಾಣದಲ್ಲಿ ಸಂಪತ್ತು ಕೊಚ್ಚಿಹೋಯಿತು ಎಂದಿದ್ದಾರೆ." ಒಟ್ಟಿನಲ್ಲಿ ಆರ್ಥಿಕವಾಗಿ ಭಾರತ ಬಹಳ ಬಡವಾಯಿತು. ಡಾ. ಈಶ್ವರೀಪ್ರಸಾದರವರ ಮಾತಿನಲ್ಲಿ ಹೇಳುವುದಾದರೆ ತನ್ನ ಮಕ್ಕಳೇ ಕ್ರಮೇಣ ಉಪವಾಸಕ್ಕೆ ತುತ್ತಾದರೂ, ಭಾರತ ಇಂಗ್ಲೇಂಡಿಗೆ ಹಾಲು ಕೊಡುವ ಹಸುವಾಯಿತು. ಒಟ್ಟಿನಲ್ಲಿ ಹೇರಳವಾದ ಭೂಕಂದಾಯ, ಆಸ್ತಿಯ ಪಶಪಡಿಸಿಕೊಳ್ಳುವಿಕೆ, ಆಹಾರ ಧಾನ್ಯದ ಅಭಾವದಿಂದ ಬೇಸತ್ತು ಶ್ರೀಸಾಮಾನ್ಯನೂ ಸಹ ಬ್ರಿಟಿಷರ ಆಡಳಿತದ ವಿರುದ್ದ ತಿರುಗಿ ಬೀಳುವಂತಾಯಿತು. ಬ್ರಿಟಿಷರು ಬಂಗಾಳದಲ್ಲಿ ಸೂರೆಗೊಂಡ ಬೃಹತ್ ಪ್ರಮಾಣದ ಸಂಪತ್ತು., ಅಲ್ಲಿನ ಸ್ವದೇಶಿ ಕೈಗಾರಿಕೆಗಳ ನಾಶಕ್ಕೆಕಾರಣವಾದ ಬ್ರಿಟಿಷರ ಕ್ರಮಗಳು, ಒಂದೇ ಸಮನೆ ಏರಿಸಲಾದ ಭೂಕಂದಾಯದಿಂದ ಒಂದು ಕಾಲದಲ್ಲಿ ಶ್ರೀಮಂತ ಪ್ರಾಂತವಾಗಿದ್ದ ಬಂಗಾಳ, ಬ್ರಿಟಿಷ್ ಆಳ್ವಿಕೆಯಡಿಯಲ್ಲಿ ಆರ್ಥಿಕವಾಗಿ ಸೊರಗಿತು. ಬ್ರಿಟಿಷರ ಭೂಕಂದಾಯ ಹೆಚ್ಚಳದಿಂದ ೧/೩ ಭಾಗದ ಬಂಗಾಳದ ಜನತೆ ವಲಸೆ ಹೋದರು. ಇದರಿಂದ ಕೃಷಿ ಭೂಮಿಯ ೧/೩ ಭಾಗ ಬರಡು ಭೂಮಿಯಾಯಿತು. ಇದು ಕೇವಲ ಬಂಗಾಳ ಪ್ರಾಂತ್ಯಕ್ಕೆ ಮಾತ್ರ ಸೀಮಿತವಾಗದೆ ಭಾರತವನ್ನೇ ವ್ಯಾಪಿಸಿತು. ಹೀಗೆ ಒಂದು

ಕಾಲದಲ್ಲಿ ಶ್ರೀಮಂತವಾಗಿದ್ದ ಭಾರತವನ್ನು ಬಡತನಕ್ಕೀಡು ಮಾಡಿದುದು ಬ್ರಿಟಿಷರ ಆಡಳಿತವೆಂದೇ ಜನರು ಭಾವಿಸಿ ಬ್ರಿಟಿಷ್ ವಿರೋಧಿ ಭಾವನೆಯನ್ನು ಹೊಂದಿದರು.

ಕ್ಷಾಮ, ಬರಗಾಲಗಳ ಕಾಲದಲ್ಲಿ ಆಹಾರ ಕೊರತೆಯಿಂದ ನರಳುತ್ತಿದ್ದ ಬಡ ಜನರನ್ನು ಕ್ರೈಸ್ತರನ್ನಾಗಿ ಮತಾಂತರ ಮಾಡಲಾಯಿತು. ಬ್ರಿಟಿಷರು ತಮ್ಮ ಸೈನಿಕ ನೆಲೆಗಳಿಗೆ ಆಹಾರ ವಸ್ತುಗಳನ್ನು ಭಾರತದಿಂದ ರಫ್ತು ಮಾಡಿ ಭಾರತದಲ್ಲಿ ಆಹಾರದ ಕೊರತೆ ನಿರ್ಮಾಣಮಾಡುವ ಮೂಲಕ ಭಾರತವನ್ನು ಕ್ರೈಸ್ತಧರ್ಮ ಮತಾಂತರದ ಕೇಂದ್ರವನ್ನಾಗಿ ಮಾಡಿದರೆಂದು ಹೇಳಬಹುದು. ಕರ್ನಾಟಕದ ಕೆಲವು ಭಾಗಗಳಲ್ಲಿ ಬರಗಾಲದ ವೇಳೆಯಲ್ಲಿ ಹಸಿದ ಹಿಂದೂಗಳಿಗೆ ಅಕ್ಕಿಯನ್ನು ಕೊಟ್ಟು ಮತಾಂತರಗೊಳಿಸಿದ ಘಟನೆಗಳು ಕಂಡುಬರುತ್ತವೆ. ಅಂತಹ ಮತಾಂತರಗೊಂಡವರನ್ನು ರೈಸ್ ಕ್ರಿಸ್ತಿಯನ್ ಎಂದು ಕರೆಯಲಾಗುತ್ತಿತ್ತು.

ಇಂಗ್ಲೇಂಡಿನಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿ ಆ ಕೈಗಾರಿಕೆಗಳಿಗೆ ಸಾಕಷ್ಟು ಕಚ್ಚಾ ಪದಾರ್ಥಗಳು ಹಾಗೂ ಸಿದ್ಧಪಡಿಸಿದ ವಸ್ತುಗಳಿಗೆ ಮಾರುಕಟ್ಟೆ ಬೇಕಾಗಿತ್ತು. ಈಸಿಟ್ಟಿನಲ್ಲಿ ಭಾರತವನ್ನು ಬ್ರಿಟಿಷರು ಮಾರುಕಟ್ಟೆಯನ್ನಾಗಿ ಮಾಡಿಕೊಂಡರು. ಇದು ಭಾರತೀಯ ಕರಕುಶಲ ಕಲೆ, ಗೃಹ ಕೈಗಾರಿಕೆಗಳ ಅವನತಿಗೆ ಮತ್ತು ಕೃಷಿಯ ಮೇಲೆ ಒತ್ತಡ ಹೇರ್ಲಾಯಿತು. ಬ್ರಿಟಿಷರ ಭೂ ಕಂದಾಯ ನೀತಿಯು ಪರಂಪರಾನುಗತವಾಗಿ ಅಸ್ತಿತ್ವದಲ್ಲಿದ್ದ ಕೃಷಿ ಪದ್ಧತಿಯನ್ನು ನಾಶಪಡಿಸಿತು. ಜೊತೆಗೆ ಕೃಷಿಯನ್ನು ವಾಣಿಜ್ಯಕರಣಗೊಳಿಸಿದ್ದು, ಮುಕ್ತ ವಾಣಿಜ್ಯ ನೀತಿ ಆರ್ಥಿಕ ಕ್ಷೇತ್ರದಲ್ಲಿ ಅಸಮತೋಲನವನ್ನುಂಟು ಮಾಡಿತು. ಅಲ್ಲದೆ ಬ್ರಿಟಿಷರು ಅನುಸರಿಸಿದ ಕೈಗಾರಿಕಾ ನೀತಿಯಿಂದಾಗಿ ಭಾರತೀಯ ಕೈಗಾರಿಕೆಗಳು ವಿನಾಶದ ಹಾದಿ ಹಿಡಿದವು. ಇದರಿಂದ ಆರ್ಥಿಕ ಪರಿಸ್ಥಿತಿಯ ಮೇಲೆ ಹೇಳಲಾಗದಷ್ಟು ದುಷ್ಪರಿಣಾಮಗಳುಂಟಾದವು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಭಾರತದಲ್ಲಿ ಹಲವಾರು ಕ್ಷಾಮಗಳು ಸಂಭವಿಸಿದವು. ಇವು ಬ್ರಿಟಿಷ್ ಆಡಳಿತದ ನೀತಿಯಿಂದಾಗಿ ಸಂಭವಿಸಿದ್ದವಾಗಿದ್ದವು. ಇದಕ್ಕೆ ಕಾರಣ ಭಾರತದ ಆಹಾರ ಪದಾರ್ಥಗಳನ್ನು ಇಂಗ್ಲೆಂಡಿಗೆ ರಫ್ತು ಮಾಡುತ್ತಿದ್ದುದ್ದರಿಂದ ಭಾರತದಲ್ಲಿ ಆಹಾರ ಅಭಾವದ ಸಮಸ್ಯೆ ತಲೆದೋರಿತು. ಸೈನ್ಯಕ್ಕೆ ಆಹಾರ ಧಾನ್ಯಗಳನ್ನು ರಫ್ತು ಮಾಡುತ್ತಿದ್ದುದು ಆಶ್ಚರ್ಯಕರ ಸಂಗತಿಯಾಗಿದೆ.

ರಾಷ್ಟ್ರೀಯವಾದಿಗಳು ದಾದಾಬಾಯಿ ನವರೋಜಿಯವರ ನೇತೃತ್ವದಲ್ಲಿ ಭಾರತದ ಸಂಪತ್ತು ಬ್ರಿಟನ್‌ಗೆ ಸೋರಿ ಹೋಗುತ್ತಿರುವುದನ್ನು ಮೇ ೨, ೧೮೬೭ರ "ಪಾವರ್ಟಿ ಅಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ" ದಲ್ಲಿ ತಮ್ಮ ಆಳ್ವಿಕೆಗೆ ಪ್ರತಿಫಲವಾಗಿ ಭಾರತದ ೪ ಭಾಗದ ಸಂಪತ್ತನ್ನು ಬ್ರಿಟನ್‌ಗೆ ಹೇಗೆ ಕೊಂಡೊಯ್ಯುತ್ತಾರೆಂಬುದನ್ನು ತಿಳಿಸಿದರು ಮತ್ತು ತಡೆಯಲು ಆಗ್ರಹಿಸಿದರು. ರೈತರ ಮೇಲಿನ ಭೂ ಕಂದಾಯವನ್ನು ಕಡಿಮೆ ಮಾಡಿ ಅವರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕೆಂದು ಚಳವಳಿ ನಡೆಸಿದರು. ಕೆಲವರು ಬ್ರಿಟಿಷರು ತಂದಿರುವ ಅರೆ ಊಳಿಗಮಾನ್ಯ ಕೃಷಿ ಸಂಬಂಧವನ್ನು ಟೀಕಿಸಿದರು. ರಾಷ್ಟ್ರೀಯವಾದಿಗಳು

ಪ್ಲಾಂಟೇಷನ್‌ಗಳ ಕಾರ್ಮಿಕ ಪರಿಸ್ಥಿತಿಯ ಉತ್ತಮೀಕರಣಕ್ಕೆ ಪ್ರಯತ್ನಿಸಿದರು. ಅಧಿಕ ತೆರಿಗೆಯೇ ಭಾರತದ ಬಡತನಕ್ಕೆ ಕಾರಣವಾಗಿರುವುದರಿಂದ ಉಪ್ಪಿನ ಮೇಲಿನ ತೆರಿಗೆ ರದ್ದುಮಾಡಬೇಕೆಂದು ಮತ್ತು ಭೂ ಕಂದಾಯ ಕಡಿತಕ್ಕೆ ಆಗ್ರಹಿಸಿದರು. ಕಾಲ ಕಳೆದಂತೆ ಬ್ರಿಟಿಷರ ಪರವಾದ ನಿಲವನ್ನು ಹೊಂದಿದ್ದ ರಾಷ್ಟ್ರೀಯವಾದಿ ಗಳು ಅವರ ಆರ್ಥಿಕ ಶೋಷಣೆಯನ್ನು ತಿಳಿದು ತಿರುಗಿಬಿದ್ದರು. ದಾದಾಬಾಯಿ ನವರೋಜಿಯವರು ಭಾರತದಲ್ಲಿ ಜೀವ ಆಸ್ತಿಯ ರಕ್ಷಣೆ ಇವೆ ಎಂಬ ಅಭಿಪ್ರಾಯ ಇದೆ. ಆದರೆ ವಾಸ್ತವವಾಗಿ ದೇಶಿಯ ರಾಜರ ನಡುವೆ ಹಿಂಸೆಯಿಲ್ಲದಿರಬಹುದು. ಆದರೆ ಭಾರತೀಯರ ಸಂಪತ್ತಿಗೆ ರಕ್ಷಣೆ ಇಲ್ಲ, ಕೇವಲ ಇಂಗ್ಲೇಂಡ್ ಮಾತ್ರ ಭಾರತದಿಂದ ಸಂಪತ್ತನ್ನು ಕೊಂಡೊಯ್ದು ರಕ್ಷಣೆ ಪಡೆದಿದೆ ಎಂಬುದನ್ನು ಒಪ್ಪಲಾಗುವುದಿಲ್ಲ. ಭಾರತದಿಂದ ವಾರ್ಷಿಕವಾಗಿ ೩,೦೦,೦೦೦,೦೦ ಪೌಂಡ್ ಅಥವಾ ೪,೦೦,೦೦೦,೦೦ ಪೌಂಡ್ ಬ್ರಿಟನ್‌ಗೆ ಹರಿದು ಹೋಗುತ್ತಿದೆ. ಅದರಿಂದ ಭಾರತವು ಒಪ್ಪಲಾಗುವುದಿಲ್ಲ. ಕೋಟ್ಯಾಂತರ ಭಾರತೀಯ ಜನರ ಜೀವನವು ಸುಲಭವಾಗಿ ಅರೆಹೊಟ್ಟೆ" ಅಥವಾ ಉಪವಾಸ ಅಥವಾ ಕ್ಷಾಮ ಮತ್ತು ರೋಗಗಳಿಂದ ಕೂಡಿದೆ"ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ದಾದಾಬಾಯಿ ನವರೋಜಿಯವರು ದೇಶದ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಭಾರತದಲ್ಲಿ ಆಗಿದ್ದ ನಾಣ್ಣುಡಿಯನ್ನು ಕುರಿತು ಹೀಗೆ ಹೇಳಿದ್ದಾರೆ. ಹೊಟ್ಟೆ ಮೇಲೆ ಹೊಡಿಬೇಡಿ ಪ್ರಾರ್ಥಿಸಿಕೊಳ್ಳುತ್ತೇನೆ ಸ್ವಾಮಿ ಬೆನ್ನ ಮೇಲೆ ಹೊಡೆಯಿರಿ ಎಂದು ಜನ ಹೇಳುತ್ತಿದ್ದರು. ಏಕೆಂದರೆ ದೇಶೀಯ ರಾಜರ ಕಾಲದಲ್ಲಿ ತಾವು ಉತ್ಪಾದಿಸಿದುದನ್ನು ತಾವೇ ಇಟ್ಟುಕೊಂಡು ಅನುಭವಿಸುತ್ತಿದ್ದರು. ಅದಕ್ಕೆ ಕೆಲವು ಭಾರಿ ಹಿಂಸೆಯ ರೂಪದಲ್ಲಿ ಬೆನ್ನ ಮೇಲೆ ಏಟು ಬೀಳುತ್ತಿತ್ತು. ನಿಜ. ಆದರೆ ಬ್ರಿಟಿಷ್ ನಿರಂಕುಶ ಪ್ರಭುತ್ವದಲ್ಲಿ ಮನುಷ್ಯ ಶಾಂತಿಯಿಂದಿದ್ದಾನೆ, ಯಾರೂ ಅವನ ಮೇಲೆ ಕಾಣುವ ಹಾಗೆ ಹಿಂಸಿಸುವುದಿಲ್ಲ. ಸದ್ದಿಲ್ಲದೆ ನಯವಾಗಿ ಅವನ ಅಂತಃಸತ್ವವನ್ನು ಹೀರಿ ಶಾಂತವಾಗಿ ಉಪವಾಸವಿದ್ದು ತನ್ನ ನಾಶವನ್ನು ಕಾಣುತ್ತಿದ್ದಾನೆ ಇದರಿಂದಾಗಿ ರೈತನ ಹೊಟ್ಟೆಗೂ ಸಂಚಕಾರ ಬಿದ್ದಿದೆ ಎಂದು ತಿಳಿಸಿದರು. ಹೀಗೆ ಉದಾರವಾದಿಗಳು ಆರ್ಥಿಕ ವಿಷಯಗಳನ್ನು ಉಪಯೋಗಿಸಿಕೊಂಡು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತದಾದ್ಯಂತ ಜನಾಂದೋಲನವನ್ನು ಕೈಗೊಂಡರು. ಚರಿತ್ರೆಯ ಒಳನೋಟಗಳ ಹಿನ್ನೆಲೆಯಲ್ಲಿ ವಿಸ್ತಾರವಾದ ಹಸಿವಿನ ದಾರುಣ್ಯತೆಗಳನ್ನು ಕಾಣುವುದರ ಮೂಲಕ ವೈಭವದ ಚರಿತ್ರೆಗಿಂತ, ಹಸಿವಿನ ಚರಿತ್ರೆ ವಿಸ್ತಾರವಾದದ್ದು ಎಂಬುದನ್ನು ನಮ್ಮ ಸಂಶೋಧನೆಯಲ್ಲಿ ತಿಳಿಸಲು ಇಚ್ಚಿಸುತ್ತೇನೆ.

೨.೧೦ ವಚನಕಾರರ ನೆಲೆಯಲ್ಲಿ ಹಸಿವಿನ ದಾರುಣತೆ

ಹಸಿವಿನ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರವು ಕೂಡ ಹಸಿವನ್ನು ಕುರಿತು ಮತ್ತೆ ಮತ್ತೆ

ಪ್ರಸ್ತಾಪಿಸುತ್ತಲೇ ಬಂದಿದೆ. ಆದ್ಯ ವಚನಕಾರ ಜೇಡರ ದಾಸಿಮಯ್ಯ ಹಸಿವನ್ನು ಕಂಡವನು ಉಂಡವನು. ಅವನು ಹೇಳುವ ಮಾತುಗಳು ಹಸಿವಿಗೆ ಬರೆದ ಭಾಷ್ಯದಂತಿದೆ.

ಒಡಲು ಗೊಂಡವ ಹಸಿವ
ಒಡಲು ಗೊಂಡವ ಹುಸಿವ
ಒಡಲು ಗೊಂಡವನೆಂದು ನೀನೆನ್ನ
ಜಡಿದೊಮ್ಮೆ ನುಡಿಯದಿರ
ನೀ ನನ್ನಂತೆ ಒಮ್ಮೆ
ಒಡಲುಗೊಂಡು ನೋಡಾ ರಾಮನಾಥ
ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೆಡೆ
ವಿಷವೇರಿತಯ್ಯ ಅಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳಹ ಬಲ್ಲಡೆ
ವಸುಧೆಯೊಳಗೆ ಆತನೆಗಾರುಡಿಗ ಕಾಣಾ ರಾಮನಾಥ”[೧೨]

ಇವು ಹಸಿವನ್ನು ಕುರಿತು ಅತ್ಯಂತ ಶಕ್ತ ಪ್ರಾತಿನಿಧಿಕ ಮಾತುಗಳು. ಹಸಿವೆಂಬ ಹೆಬ್ಬಾವಿಗೆ ಅನ್ನವನಿಕುವ ಕೆಲಸ ಇಂದು ಆಗಬೇಕಾಗಿದೆ.

ನಮ್ಮ ಖ್ಯಾತ ಕವಿ ಬೇಂದ್ರೆ ಅವರು ಒಂದು ಸಾರಿ ಹಸಿವನ್ನು ಕುರಿತು ಭಾಷಣ ಮಾಡುವಾಗ ಹೇಳಿದ ಮಾತಿದು. “ಅಯ್ಯೋ ಶಿವನೆ, ಎಂಥ ಅನಾಹುತ ಮಾಡಿ ಬಿಟ್ಟಿಯಪ್ಪಾ! ಹಸಿವನ್ನು ಹೊಟ್ಟೆ ಒಳಗಿಟ್ಟು ಅನ್ನವನ್ನು ಹೊರಗಡೆ ಇಟ್ಟು ಬಿಟ್ಟೆಯಲ್ಲ ಅದರ ಬದಲು ಅನ್ನವನ್ನೇ ಹೊಟ್ಟೆಯೊಳಗಿಟ್ಟು ಹಸಿವನ್ನು ಹೊರಗೆ ಇಡಬಾರದಿತ್ತಾ?”

“ಅನ್ನವೆಲ್ಲವೂ ಆದರೆ ಚಿನ್ನ
ತಿನ್ನುವುದೇನನ್ನ ?
ಕಿಕ್ಕಿರಿ ತುಂಬಿದೆ
ಭೂಮಿಯ ಕಣಜ
ಕಕ್ಕಸ ಬಡುತಿದೆ
ಬೊಕ್ಕಸ ದೊಡಲು
ಬರಿದೋ ಬರಿದು
ತೆರವೋ ತೆರವೋ
ಬಡವರ ಬಗ್ಗರ
ತುತ್ತಿನ ಚೀಲ”[೧೩]

(ತುತ್ತಿನ ಚೀಲ ಕವನ –ದ.ರಾ. ಬೇಂದ್ರೆ)

ಬೇಂದ್ರೆಯವರ ಈ ಕವಿತೆಯ ಸಾಲಿನ ಹಿಂದೆ ಹಸಿವಿನ ಕರಾಳ ಸ್ವರೂಪದ ಚಿತ್ರಣವಿದೆ. ಅವರು ತಮ್ಮ ತುತ್ತಿನ ಚೀಲ'ಎಂಬ ಕವಿತೆಯಲ್ಲಿ ಹಸಿವಿನ ನಗ್ನ ರೂಪದ ಅದ್ಭುತ ಚಿತ್ರಣ ಕೊಡುತ್ತಾರೆ. ಹಸಿವಿನ ಆರ್ಭಟವೇ ಹಾಗೆ. ಮನುಷ್ಯನಷ್ಟೇ ಅಲ್ಲ, ಜೀರ್ಣಶಕ್ತಿ ಇರುವ ಪ್ರತಿಯೊಂದು ಪ್ರಾಣಿಗೂ ಆಹಾರ ಅತ್ಯವಶ್ಯ. ಅದು ಸಿಗದೆ ಇದ್ದಾಗ ಮನುಷ್ಯನೂ ಸೇರಿದಂತೆ ಪ್ರತಿ ಪ್ರಾಣಿಯೂ ತಾಳುವ ಅವತಾರ ಉಗ್ರರೂಪದ್ದೇ. ಹಸುವಿನ ಬರ್ಬರತೆಯನ್ನು ರಂ.ಶ್ರೀ. ಮುಗಳಿ ಅವರ ಕವನ' ಅನ್ನದ ಕೆಲವು ಸಾಲುಗಳನ್ನು ಇಲ್ಲಿ ಗಮನಿಸಲಾಗಿದೆ.

"ಬಡವರ ಹರಣದ ಲೂಟಿಯ ಮಾಡಿ
ಕಳ್ಳಪೇಟೆಯ ಕುಬೇರರು ತಂದನ್ನವ ಮಾರಾಡಿ
ಹೆಣಗಳ ಬವಣೆಯ ರಂಗದ ಮೇಲೆ
"ಹಣಗಳ ಕುಣಿತವ ಮಾಡಿಸಿ ಮಲೆವರು ತನುಮನ ಸೋಲೆ
ಹಸಿವರ ಗೇಣೊಡಲಿನ ವಾಮನನು
ಸೊಕ್ಕೇರಿದ ಬಲಿರಾಜನ ತಲೆ ಮೆಟ್ಟಲು ಹೊರಟಿಹನು
ಮೂಲೋಕವ ಮೂರಡಿಯಲಿ ನುಂಗಿ
ಅನ್ನ ಕೊಡದಿರೆ ಪ್ರಾಣದ ಬಲಿಯನು ಕೊಳ್ವನು ಹೊಂಗಿ"೧೪

(–ರಂ.ಶ್ರೀ. ಮುಗುಳಿ ಅವರ ಕವನ 'ಅನ್ನ'ದಿಂದ)

ದುಡಿಯುವ ರೈತರ ಹಸಿವಿ ಬದುಕನ್ನು ಕಟ್ಟಿಕೊಡುವ ಈ ಕವಿಕೆಯನ್ನು ಹಸಿವಿನ ನೆಲೆಯಲ್ಲಿ ಕಾಣಬಹುದು.

"ಆಳೋನಿಗಾರು ಕಾಸು ಉಳೋನಿಗೊಂದು ಕಾಸು
ಮಾಡಿದೋರು ಯಾರಣ್ಣ?
ದುಡಿಯೋ ಮೈಗೆ ಬಟ್ಟೆ ಇಲ್ಲ ಉಳೋ ಮೈಗೆ ಅನ್ನ ಇಲ್ಲ
ಕುಂತು ಮೈಗೆ ಹೊಟ್ಟೆ ತುಂಬಾ
ನಾಲ್ಕು ಜನರ ಬೆವರ ಹೀರಿ ಆಸ್ತಿ ಎಂಬ ಹೆಸರಿನಿಕ್ಕಿ
ಕಣ್ಗೆ ಮಣ್ಣು ತೂರಿದಂತ ಧನಿಕರು ಯಾರು"೧೫

ಇನ್ನೂ ದಲಿತ ಮತ್ತು ಬಂಡಾಯ ಸಾಹಿತ್ಯದಲ್ಲಿ ದೇವನೂರು ಮಹಾದೇವರ 'ಒಡಲಾಳ' ಕೃತಿ ತೆರೆದಿಡುವ ಹಸಿವಿನ ಸಮಸ್ಯೆ ಎದುರಿಸುತ್ತಿರುವ ಒಂದು ಸಮುದಾಯದ ಅತ್ಯಂತ ದಾರುಣ ಅಭಿವ್ಯಕ್ತಿ. ಮೊಗಳ್ಳಿ ಗಣೇಶ್ ಅವರ ಕಥನ ಸಾಹಿತ್ಯ ಹಸಿವು ಮತ್ತು ಬಡತನವನ್ನು ತೆರೆದಿಡುವ ಒಂದು ಸಮುದಾಯದ ಕಥನವೇ ಆಗಿದೆ. ಡಾ. ಸಿದ್ಧಲಿಂಗಯ್ಯ ಅವರ ಆತ್ಮಕಥನ 'ಊರುಕೇರಿ' ಹಾಗೂ ಮರಾಠಿ ಸಾಹಿತ್ಯದ ಶ್ರೇಷ್ಠ ಕಾದಂಬರಿಕಾರರಾದ ಲಕ್ಷ್ಮಣ್ ಗಾಯಕ್ ವಾಡ್ ಅವರ ಆತ್ಮ ಕಥನ 'ಉಚ್ಚಾಲ್ಯ'ಈ ಆತ್ಮಕಥನಗಳು ಬಡತನ ಮತ್ತು ಹಸಿವನ್ನು ಅತ್ಯಂತ ದಾರುಣವಾಗಿ ತೆರೆದಿಡುತ್ತವೆ. ಬಂಡಾಯ ಮತ್ತು ದಲಿತ ಸಾಹಿತ್ಯದ

ಅನೇಕ ಕಥೆಗಳ ಕೇಂದ್ರಬಿಂದು ಹಸಿವು ಮತ್ತು ಬಡತನ. ಈ ನೆಲೆಯಲ್ಲಿ ತಳಸಮುದಾಯಗಳ ಹಸಿವು, ಬಡತನ ಇವುಗಳಿಗೆ ಪೂರಕವಾಗಿ ಡಾ. ಮಂಜುನಾಥ ಬೇವಿನಕಟ್ಟೆ ಅವರ 'ಮೈಲಾರಲಿಂಗ ಕಾವ್ಯ'ದಲ್ಲಿ ಅನಾವರಣ ಗೊಳಿಸಿರುವುದು ಮನಮುಟ್ಟಿದಂತಿದೆ. ಹಾಗೆ ಡಾ. ಮೋಗಳ್ಳಿ ಗಣೇಶ್ ಅವರ ' ಬುಗರಿ' 'ಅತ್ತೆ' 'ತೊಟ್ಟಿಲು' ಇತ್ಯಾದಿಕೃತಿಗಳು ತಳಸಮುದಾಯದ ಅಲ್ಪಸಂಖ್ಯಾತರ ಹಸಿವಿನ ಆಶಯಗಳನ್ನು ಮೂಲವಾಗಿ ಇಟ್ಟುಕೊಂಡು ತನ್ನ, ಅವರ ಜೀವದ ಜೀವಗಳ ಹಸಿವಿನ ಕಲೆಗಳನ್ನು ಗಂಭೀರದಿಂದ ಆಳವಾಗಿ ಕಥಾನಕಗಳನ್ನು ಅಣು ಅಣುವಾಗಿ ಚಿತ್ರಿಸಿರುವುದು ನಿಜವಾಗಲೂ ಇಡೀ ಸಮುದಾಯಗಳ ಹಸಿವಿನ ಅರವುಗಳನ್ನು ಪ್ರಜ್ಞಾಪೂರ್ವಕವಾಗಿ ಓದುಗರಿಗೆ ಕಟ್ಟಿಕೊಟ್ಟಿದ್ದಾರೆ.

ಡಾ. ಹೆಬ್ಬಾಳೆ. ಕೆ. ನಾಗೇಶ್ ಅವರ 'ಅರಳವ್ವ' ಕಾದಂಬರಿಯ ಆರಂಭದಲ್ಲಿ ಪ್ರಸ್ತಾಪಿಸಿರುವ ಮಾತುಗಳು ಇಡೀ ತಳಸಮುದಾಯಗಳ ಹಸಿವಿನ ಒಡಲಾಳದ ನೋವಿನ ವ್ಯಾಖ್ಯಾನವೇ ಆಗಿದೆ. ಅವರ ಒಡಲಾಳದ ಮಾತುಗಳು ಹೀಗೆ ಆರಂಭವಾಗುತ್ತವೆ. ಶತ-ಶತಮಾನಗಳಿಂದ ನನ್ನ ಜನರ ಹಸಿವು, ಬಡತನ, ದಾರಿದ್ರ್ಯ, ನಿರಕ್ಷರತೆ, ದಾಹ, ಅನ್ನವಿಲ್ಲದೆ, ರಕ್ತವಿಲ್ಲದೇ, ಬಗ್ಗರಿ ಮೂಳೆ ಹೊದಿಕೆ ಕಂಡುಬರುವ ಶರೀರ. ಇವೆಲ್ಲವು ನನ್ನ ಹಿಂಡಿ ಹಿಪ್ಪೆಕಾಯಿ ಮಾಡಿ ಇರಿಯುತ್ತಿದ್ದವು. ಆಗಿಂದಾಗ್ಗೆ ನನ್ನ ಮುಂದೆ ಟೊಂಕಕಟ್ಟಿ ಸಡ್ಡು ಹೊಡೆದುನಿಂತವು. ಈ ಸ್ಥಿತಿ ನನ್ನ ಊರಲ್ಲಿ ಮಾತ್ರವೇ, ಇಲ್ಲಾ ಜಗತ್ತಿನ ಪರಿಕಲ್ಪನೆಯ ಒಳಗೆ ಹೀಗೆಯೇ ಅನ್ನಿಸಿತು. ಇಂಡಿಯಾದ ಪರಿಕಲ್ಪನೆ ಓಳಗೆ ಅಸಮಾನತೆಯ ತೋಳ್ ತೆಕ್ಕೆಯಲ್ಲಿ ಸಿಕ್ಕಿ ನುಚ್ಚು-ನೂರಾಗುತ್ತಿರುವರು ನನ್ನ ಜನ ಅನ್ನಿಸಿತು. ಇಂದಿಗೂ ನನ್ನ ಜನ ಎಲ್ಲವೂ ಇದ್ದು ಏನು ಇಲ್ಲದವರಂತೆ ಬದುಕುತ್ತಿದ್ದಾರೆ. ಅತ್ತ ಸಾಯಲಿಕ್ಕೂ ಆಗದೆ ಇತ್ತ ಬದುಕಲಿಕ್ಕೂ ಆಗದೆ ವಿಲಿವಿಲಿನೆ ಒದ್ದಾಡುತ್ತಿದ್ದಾರೆ. ಇಂತಹ ಸಂದಿಗ್ಧಸ್ಥಿತಿಯಲ್ಲಿ ಕೆಲವು ಅಂಶಗಳು ತರ್ಕಕ್ಕೆ ಎಡೆ ಮಾಡಿಕೊಟ್ಟು ಬೃಹದಾಕಾರವಾಗಿ ನನ್ನ ಮುಂದೆ ಬಂದು ನಿಲ್ಲುತ್ತವೆ.

ಶರೀರವೇ ಮಾಂಸಕಂಡಗಳ ರಕ್ತದ ಹೊದಿಕೆ. ಹೀಗಿದ್ದಾಗಲೂ ಬಾಡೆಂದಾಕ್ಷಣ ವಾಕರಿಕೆ ಬರುತ್ತದೆ ಎನ್ನುವರು ಕೆಲವರು. ಕದ್ದು ಮುಚ್ಚಿ ಮರೆಯಲ್ಲಿ ತಿಂದು ಚಪ್ಪರಿಸುವವರಿಗೇನು ಈ ನೆಲದಲ್ಲಿ ಕೊರತೆ ಇಲ್ಲ. ತನಗೆ ಇಷ್ಟ ಬಂದ ಪರಿಪಾಟಲುಗಳಲ್ಲಿ ಮೂಳೆ ಇಲ್ಲದ ನಾಲಿಗೆ ಬಳಸಿ ಕೀಳಿನಿಂದ ಇರಿಯುವ ಮಾತನಾಡುತ್ತಾರೆ. ಒಟ್ಟಿನಲ್ಲಿ ಬಾಡೆಂದರೆ ಹಿಂಸೆಯ ಪ್ರತೀಕವೆಂದು ಭಾವಿಸಿರುವುದು ನಿಜ. ಆದರೆ ನನ್ನ ತಥ್ಯವಿರುವುದು ಬಾಡಿನ ಬೇರುಗಳಲ್ಲಿರುವ ವಳವರ್ಮ ತಿಳಿದು ಅರುಹುವುದು. ನನ್ನ ಜನರ ಗರ್ಭಧರಿಸಿದ ಕುಡಿಯೇ ಚಿಸಿಲು ವೊಡೆದಾಗಲೇ ಹಸಿವಿನ ನೋವನ್ನು ಉಂಡಿರುತ್ತದೆ. ಹಸಿವಿನ ಹಪಹಪಿಸುವಿಕೆಯಿಂದ ಹೊರಜಗತ್ತಿಗೆ ಅಂಜಿಗಾಲಿಡುತ್ತದೆ. ಹಸಿವನ್ನು ನೀಗಿಸಿಕೊಳ್ಳಲು ಪಡಬಾರದ ಸುಳಿಯ ಸಂಕೋಲೆಗೆ ಸಿಲುಕಿ ನಜ್ಜುಗುಜ್ಜಾಗಿರುತ್ತದೆ. ಒಂದೊತ್ತಿನ ಹಿಟ್ಟಿಗೂ ಧಗಧಗಿಸುವ ನನ್ನ ಜನ ಬಾಡು ನಮ್ಮ ನಿತ್ಯದ ಆಹಾರ ಎಂದರೆ ತಪ್ಪುಂಟೇ?

ನನ್ನ ಜನ ತಲೆ ಒಡಿಯುವವರಲ್ಲ. ಉಳ್ಳವರಿಂದ ಕಸಿದುಕೊಳ್ಳವರಲ್ಲ. ಮೋಸ ಮಾಡುವವರಲ್ಲ. ಅವರ ಹುಟ್ಟೇ ಉಳ್ಳವರ ಹಟ್ಟಿಯ ದುಡಿಮೆಗಾಗಿ ಜೀವವನ್ನು ಒತ್ತಯಿಟ್ಟವರು. ಊರಿನ ಹೇಲು, ಉಚ್ಚೆ, ರಕ್ತ ಸೋರಿದ ಬಟ್ಟೆ. ಕೊಳಚೆಯನ್ನು ಸಿರಿವಂತ ಹೃದಯದಿಂದ ತೊಳೆದವರು ನನ್ನ ಜನ. ಬರಗಾಲ ಬಂದಾಗ ಬಡತನ ತಡೆಯಲಾಗದೆ ಮಕ್ಕಳನ್ನೇ ಮಾರುವವರು ಅನೇಕರು. ಆದರೆ ನನ್ನ ಜನ ಹೊಟ್ಟೆಗಿಲ್ಲದೆ ಸತ್ತರೂ ಮಕ್ಕಳೇ ಆಸ್ತಿಯೆಂದು ನಂಬಿದವರು." ಇದು ಹೆಬ್ಬಾಲೆ.ಕೆ. ನಾಗೇಶ್ ಅವರ ತಳಸಮುದಾಯಗಳ ಹಸಿವಿನ ಲೋಕದ ಒಡಲಾಳದ ಮಾತುಗಳಾಗಿವೆ. ಹಾಗೆ ಹಸಿವಿನ ಇನೊಂದು ಲೋಕವನ್ನು ತಮ್ಮ 'ನೀಲಗಾರರು' ಕೃತಿಯಲ್ಲಿ ಡಾ. ಸಿ.ಟಿ. ಗುರುಪ್ರಸಾದ್ ಅವರು ವಾಸ್ತವ ನೆಲೆಯಲ್ಲಿ ತಿಳಿಸುತ್ತಾರೆ. ಮಂಟೇಸ್ವಾಮಿ ಆರಾಧಕರಾದ 'ನೀಲಗಾರರು' ಇಂದು ಹೊಟ್ಟೆ ತುಂಬಿಸಿಕೊಳ್ಳಲು ಮಂಟೇಸ್ವಾಮಿ ಕತೆಯನ್ನು ಹಾಡುತ್ತಾ ಜೀವನವನ್ನು ನಡೆಸುತ್ತಿದ್ದಾರೆ.ಇವತ್ತಿಗೂ ಇವರ ಬದಕು ಧಾರುಣ್ಯತೆಯಿಂದ ಕೂಡಿದೆ. ಆಡಂಸ್ಮಿತ್ ಹೇಳಿದಂತೆ ದಲಿತರು ಮತ್ತು ಮಹಿಳೆಯರು ಇಂದು ಕೂಡ ಹಸಿವಿನ ಹೆಬ್ಬಾವಿನ ಹಿಡಿತಕ್ಕೆ ಸಿಲುಕಿ ನಲುಗುತ್ತಲೇ ಇದ್ದಾರೆ.

ಜಾಗತೀಕರಣ ಇಂದು ಹಸಿವು, ಬಡತನವನ್ನು ಹೆಚ್ಚಿಸುತ್ತಿದೆ. ಇದಕ್ಕೆ ಪರಿಹಾರಗಳನ್ನು ಹುಡುಕುವಲ್ಲಿ ನಮ್ಮ ಸರ್ಕಾರಗಳು ಸೋತಿವೆ. ಜನರ ಮೂಲಭೂತ ಸೌಕರ್ಯಗಳನ್ನು ಪೂರೈಸದ ಸರ್ಕಾರ ಅಭಿವೃದ್ಧಿಯ ಹೆಸರಿನಲ್ಲಿ ಜನವಿರೋಧಿ ಕೆಲಸಗಳನ್ನು ಮಾಡುತ್ತಿದೆ. ಹಸಿವು, ಬಡತನವನ್ನು ಹೋಗಲಾಡಿಸದ ಪ್ರಭುಗಳು ಅನ್ನ ಬೆಳೆಯುವ ಹೊಲಗಳನ್ನೆಲ್ಲಾ ರೈತರಿಂದ ಕಸಿದುಕೊಂಡು ಟೌನ್‌ಶಿಫ್‌ಗಳನ್ನಾಗಿ ಮಾರ್ಪಡಿಸುವುದನ್ನು ನೋಡಿದರೆ ಎಂಥವರಿಗೂ ನಗು ಬರುವಂಥದು. ಹಸಿವು, ಬಡತನ ಹೋಗಲಾಡಿಲು ಕೃಷಿ ಪಶು ಸಂಗೋಪನೆ, ಗೃಹಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕೆಂದು ಮಹತ್ಮ ಗಾಂಧಿಯವರು ಹೇಳಿದ್ದಾರೆ. ಆದರೆ ಇಂದು ಪ್ರಭುತ್ವಶಾಹಿಗಳು ಇಡೀ ಜಗತ್ತನ್ನೇ ವಿಶ್ವ ಮರುಕಟ್ಟೆಯನ್ನಾಗಿ ಮಾಡಿಕೊಂಡು ಅಭಿವೃದ್ಧಿಯ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ಸಾಮಾನ್ಯ ಜನರ ಬದುಕು ಇಂದು ತುಂಬ ಶೋಚನೀಯವಾಗಿದೆ.

ಅಡಿ ಟಿಪ್ಪಣಿ

೧. ಅಪ್ಪಗೆರೆ ತಿಮ್ಮರಾಜು, **ಅವ್ವನ ಹಾಡುಗಳು (ಸ)**, ಪು.ಸಂ–೧೫

೨. ವಸಂತರಾಜ ಎನ್. ಕೆ. – **ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯೆಂತು?**, ಪು.ಸಂ–೧೦೧

೩. **ಅದೇ ಪುಸ್ತಕ,** ಪು.ಸಂ–೩೦

೪. **ಅದೇ ಪುಸ್ತಕ,** ಪು.ಸಂ–೩೧

೫. **ಅದೇ ಪುಸ್ತಕ,** ಪು.ಸಂ–೩೧

೬. **ಅದೇ ಪುಸ್ತಕ,** ಪು.ಸಂ–೩೨

೭. **ಅದೇ ಪುಸ್ತಕ,** ಪು.ಸಂ–೩೧

೮. ಬಿಪಿನ್ ಚಂದ್ರ, **ಆಧುನಿಕ ಭಾರತದ ಇತಿಹಾಸ,** ಪು.ಸಂ–೨೩೯

೯. **ಅದೇ ಪುಸ್ತಕ,** ಪು.ಸಂ–೨೩೮

೧೦. **ಅದೇ ಪುಸ್ತಕ,** ಪು.ಸಂ–೨೩೯

೧೧. ನಾಗರಾಜ್.ಡಿ.ಆರ್., **ಸಾಹಿತ್ಯ ಕಥನ,** ಪು.ಸಂ–೩೨೫

೧೨. ವಸಂತರಾಜು.ಎನ್.ಕೆ., **ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯೆಂತು?,** ಪು.ಸಂ–೦೭

೧೩. **ಅದೇ ಪುಸ್ತಕ,** ಪು.ಸಂ–೫೩

೧೪. **ಅದೇ ಪುಸ್ತಕ,** ಪು.ಸಂ–೧೧೮

೧೫. **ಅದೇ ಪುಸ್ತಕ,** ಪು.ಸಂ–೭೪

❖❖❖

ಅಧ್ಯಾಯ : ಮೂರು

ದೇಸಿ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಹಸಿವಿನ ಸಂಕ್ಷಿಪ್ತ ನೋಟ

ಅಧ್ಯಾಯ: ಮೂರು

ದೇಶಿ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಹಸಿವಿನ ಸಂಕ್ಷಿಪ್ತ ನೋಟ

ರಾಮಾಯಣ, ಮಹಾಭಾರತದ ಕಾಲಘಟ್ಟದಲ್ಲಿ ನಮ್ಮ ಗ್ರಾಮಗಳು ಹಸಿವಿನ ನೆಲೆಗಳಾಗಿದ್ದವು. ತಳಸಮುದಾಯಗಳು ಸದಾಕಾಲ ಹಸಿವಿನಿಂದ ಪರದಾಡುತ್ತಿದ್ದವು. ಎಷ್ಟೋ ಸಮುದಾಯಗಳು ಆಹಾರದ ಮೂಲಗಳನ್ನು ಹುಡುಕಿಕೊಂಡು ಹೊರಟವು. ಎಷ್ಟೋ ರಾತ್ರಿ, ಹಗಲು ಹಸಿದು ಆಹಾರ ದೊರಕದೆ ದಾರಿಯಲ್ಲೇ ಸತ್ತವರೆಷ್ಟೋ, ಈ ಹಸಿವಿನ ಎಳೆಗಳು ಮನುಷ್ಯನ ಉಗಮದ ಹೊರವಿಗೂ ಹಬ್ಬಿದೆ. ಇಂತ ಅನೇಕ ಸಂದರ್ಭಗಳು ದೇಶಿ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ಕಂಡುಬರುತ್ತವೆ. ವ್ಯಾಸ ವಾಲ್ಮೀಕಿ ಹಸಿವಿನ ನೆಲೆಯಿಂದ ಬಂದ ತಳಸಮುದಾಯದ ವ್ಯಕ್ತಿಗಳು ಅಂದಿನಿಂದ ಇಂದಿನವರೆವಿಗೂ ಚರಿತ್ರೆಯಲ್ಲಿ ದಾಖಲಾಗದ ಎಷ್ಟೋ ತಳವರ್ಗದ ಸಮುದಾಯಗಳ ಬದುಕಿನ ವಿವರಣೆಗಳು ನಮ್ಮ ಮೌಖಿಕ ಸಾಹಿತ್ಯದಲ್ಲಿ ದಾಖಲುಗೊಂಡಿವೆ. ಹಸಿವಿಗೆ ಆಹಾರದ ಏರುಪೇರುಗಳೆ ಕಾರಣ ಎಂಬುದು ಮೇಲ್ಮಟ್ಟಕ್ಕೆ ತೋರಿದರೂ, ಮೂಲಕಾರಣ ಗೊತ್ತಾಗುವುದು ಅವುಗಳನ್ನು ನಿಯಂತ್ರಿಸುತ್ತಿದ್ದ ಪ್ರಬಲ ವರ್ಗ ಎಂಬುದು ಸತ್ಯ

ಇನ್ನೊಂದು ಸಾಂಸ್ಕೃತಿಕ ಸತ್ಯವೆಂದರೆ, ಕರ್ನಾಟಕವನ್ನು ಆಳಿದ ಅರಸರು ನಮ್ಮ ಜನಪದ ಕಥನಗಳ ವಸ್ತುವಾಗಲೇ ಇಲ್ಲ. ವಿಜಯನಗರ ಪತನವಾದ ಮೇಲೆ ಕೆಳದಿ ಸಂಸ್ಥಾನಗಳು ಮತ್ತು ಮೈಸೂರು ಸಂಸ್ಥಾನಗಳು ಪ್ರಧಾನ ರಾಜವಂಶಗಳಾಗಿ ಕಾಣಿಸಿಕೊಂಡರೂ, ಆಯಾ ಆಡಳಿತ ಪ್ರದೇಶಗಳಲ್ಲಿದ್ದ ಪಾಳೇಗಾರರು ಪ್ರಬಲವಾಗಿದ್ದ ಕಾಲವದು. "ಕರ್ನಾಟಕ ಚರಿತ್ರೆ"ಯಲ್ಲಿ ಸಾಮ್ರಾಜ್ಯಗಳ ಕೇಂದ್ರೀಕರಣ ಆಡಳಿತ ತಪ್ಪಿ ಆಯಾಯ ಪ್ರದೇಶಗಳಲ್ಲಿದ್ದ ಪಾಳೇಗಾರರು ಸಾಮಂತರು, ಸ್ವತಂತ್ರ ಅಸ್ತಿತ್ವವನ್ನು ಹೊಂದಿದ್ದು, ರಾಜಡಳಿತ ವಿಕೇಂದ್ರೀಕರಣಗೊಂಡಿದ್ದ ಕಾಲಘಟ್ಟವಿದ್ದ ಜನಪದರು ತಮ್ಮ ನಡುವಿನ ಪಾಳೆಗಾರನ ನಾಯಕರ ಆಡಳಿತ ವಿಧಾನ ಜೀವನ ವಿಧಾನವನ್ನು ಹತ್ತಿರದಿಂದ ಗಮನಿಸಿ. ಅನೇಕ ಜನಪದ ಕಥನಗಳನ್ನು ಕಟ್ಟಿದ

ಕಾಲವೂ ಇದಾಗಿದೆ. ಇದಕ್ಕೆ ಪೂರ್ವದಲ್ಲಿ ಕರ್ನಾಟಕವನ್ನು ಆಳಿದ ಕದಂಬರು ಚಾಲುಕ್ಯರು, ಹೊಯ್ಸಳರು ಚರಿತ್ರೆಯಲ್ಲಿ ಅತಿದೊಡ್ಡ ಸಾಮ್ರಾಜ್ಯವಾಗಿ ಮೆರೆದಿದ್ದರೂ ಜನಪದರು ವಿಜಯನಗರದ ಯಾವ ರಾಜನನ್ನು ಕುರಿತು ಕಥನಗಳನ್ನು ಸೃಷ್ಟಿಸಲೇ ಇಲ್ಲ. ಕಂಪಲಿಯ ಸಾಮಂತ ದೊರೆಯ ಮಗ ಕುಮಾರಾಮ ಜನಪದರ ಸಾಂಸ್ಕೃತಿಕ ನಾಯಕನಾಗುತ್ತಾನೆ" ಜನರಿಂದ ದೂರಸರಿದ ರಾಜರು ಸಾಮ್ರಾಜ್ಯಗಳು ಅವರ ಪ್ರಜ್ಞೆಗೆ ನಿಲುಕದೆ ಜನಪದ ಕಥನಗಳಿಂದ ಹೊರಗುಳಿದಿದ್ದಾರೆ. ಹಾಗೆ ಜನಪದರಿಗೆ ಮೈಸೂರು ಸಂಸ್ಥಾನವೆಂದರೆ ಮಂಟೇಸ್ವಾಮಿ – ರಾಜಪಾಜಿಯವರ ಚರಿತ್ರೆ ನೆನಪಾಗುತ್ತದೆಯೇ ಹೊರತು ಮೈಸೂರು ಒಡೆಯರ ಚರಿತ್ರೆ ಅಲ್ಲ. ಇದು ಜನಪದರ ಕಥನಗಳ ವಿಶಿಷ್ಟ ಲಕ್ಷಣವಾಗಿ ಬೆಳೆದು ಬಂದಿದೆ. ಜಗತ್ತಿನ ಯಾವುದೇ ಚರಿತ್ರೆಯನ್ನು ಗಮನಿಸಿದಾಗ ಮೈತ್ರೆ ಕಣ್ಣ ಮುಂದೆ ಬಂದುನಿಲ್ಲುತ್ತದೆ. ಆದರೆ ಆ ವೈಭವದ ಚರಿತ್ರೆಯ ಒಳಗೆ ತಳವರ್ಗದ ಸಮುದಾಯಗಳ ಹಸಿವಿನ ಎಳೆಗಳು ಗೂಡುಕಟ್ಟಿರುವುದು ಯಾರ ಕಣ್ಣಿಗೂ ಕಾಣಿಸದು. ಕಾಣಿಸಿದರೂ ಅದನ್ನು ಪ್ರಭುತ್ವ ವಿರೋಧಿ ರೂಪದಲ್ಲಿ ಪ್ರಕಟಿಸಲು ಆಯಾಕಾಲದ ಬರಹಗಾರರು ಹೋಗಲಿಲ್ಲ ಎಂಬುದು ವಿಷಾದನೀಯ.

'ಪ್ರಭುತ್ವ' ಎಂಬುದು ಜಗತ್ತಿನ ಎಲ್ಲಾ ಕಾಲದಲ್ಲೂ ಅಸ್ತಿತ್ವದಲ್ಲಿರುವ ಒಂದು ವರ್ಗ. ಬೇರೆ ಬೇರೆ ವೇಷತೊಟ್ಟು ತಳ ಸಮುದಾಯಗಳನ್ನು ನಿಯಂತ್ರಿಸುತ್ತಾ ಬಂದಿವೆ. ಜಗತ್ತಿನೊಳಗೆ, ಇವು ಭಯಾನಕವಾಗಿ ಆರ್ಭಟಿಸುತ್ತವೆ. ಇವತ್ತಿಗೂ ಈ ಆರ್ಭಟಗಳು ಮುಂದು ಹೋಗುತ್ತಿವೆ. ಇವತ್ತಿನ ಆಧುನಿಕ ಜಗತ್ತಿನಲ್ಲಿ ಮುಂದುವರಿದ ರಾಷ್ಟ್ರಗಳು ಎಂದು ಹೆಮ್ಮೆ ಪಡೆವ ದೇಶಗಳು ಹಸಿವಿನಿಂದ ದೂರ ಸರಿದಿವೆ ಅಥವಾ ಹಸಿವೇ ಇಲ್ಲದ ಶ್ರೀಮಂತದೇಶ ಎಂದು ಹೇಳಿಕೊಳ್ಳಲು ಸಾಧ್ಯವೇ? ಹಸಿವಿನ ಕೂಗು ಭಾರತದ ಪ್ರತಿಭಟನೆಗೂ ಈ ಕೂಗು ನನ್ನಂಥ ಓದುಗನಿಗೆ ಆತಂಕ ಹುಟ್ಟಿಸುತ್ತದೆ. ಜಾಗತೀಕರಣದ ಸಂದರ್ಭದಲ್ಲಿನ ಲೋಕವನ್ನೇಮರೆಯುತ್ತಿರುವ ಪ್ರಭುತ್ವ ಶಾಹಿಗಳು ಯಾವುದೋ ಲೋಕದ ರಾಕ್ಷಸರಂತೆ! ಇನ್ನು ಕರ್ನಾಟಕದ ಚರಿತ್ರೆಯೊಳಗೆ ಪ್ರವೇಶಿಸಿದಾಗ ಇಂತಹ ದೊಡ್ಡ ಆತಂಕ ಎದುರಾಗುತ್ತದೆ. ಹಸಿವು, ಅವಮಾನ, ಜಾತಿ, ಮತಗಳಿಗೆ ಬಿಗಿಗೊಂಡ ತಳಸಮುದಾಯಗಳನ್ನು ಹಿಗ್ಗಾಮುಗ್ಗಾ ನಿಯಂತ್ರಿಸುವ ಪ್ರಭುತ್ವಶಾಹಿ ಅಟ್ಟಹಾಸ ರಾಮಾಯಣ, ಮಹಾಭಾರತದ ಕಾಲದಿಂದಲೂ ಇದ್ದುದ್ದೇ. ಇದಕ್ಕೆ ಪ್ರತಿರೋಧಿಯಾಗಿದ್ದ ಬುದ್ಧ, ನಿಜಕ್ಕೂ ಜನಮುಖಿ, ಹಸಿವಿನ ಸಮುದಾಯಗಳನ್ನುಕಣ್ಣಾರೆ ಕಂಡವನು ಅದಕ್ಕೆ ಸ್ಪಂದಿಸಿದವನು.

೩.೧ ದೇಸಿ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ

ರಾಮಾಯಣ, ಮಹಾಭಾರತಗಳನ್ನು ಕುರಿತು ಕನ್ನಡ ಜನಪದ ಸಾಹಿತ್ಯದಲ್ಲಿ ಅಪಾರವಾದ ಸಾಮಾಗ್ರಿ ಲಭ್ಯವಾಗುತ್ತದೆ. ಪುರಾಣ, ಐತಿಹ್ಯ, ಗೀತೆ ಲಾವಣಿ ಕಾವ್ಯರೂಪದಲ್ಲಿ ಸಿಗುವ

ಈ ಸಾಮಗ್ರಿಯ ಸಕ್ರಮ ಸಂಗ್ರಹವಾಗಲಿ, ಅಧ್ಯಯನವಾಗಲೀ ಇನ್ನು ನಡೆಯಬೇಕಾಗಿದೆ. ಕರ್ನಾಟಕದ ಯಾವ ಮೂಲೆಗೆ ಹೋದರೂ ಕಥೆಗಳನ್ನು ಹೇಳಲಾಗುತ್ತದೆ. ಚುಂಚನಕಟ್ಟೆ ಕ್ಷೇತ್ರದ ಸೀತಾದೇವಿ, ಮಿಂದಲೆ ಪಾಂಡವರು ಕೈತೊಳೆದ ಚಿತ್ರದುರ್ಗ ಜಿಲ್ಲೆಯ ಧರ್ಮಪುರಿ ಕೆರೆ, ಅವರು ವಾಸಿಸಿದ ನಾಗಮಂಗಲ ತಾಲ್ಲೂಕಿನ ಅಲತಿಗಿರಿಯ ಗುಹೆ, ಕುಂತಿ ಪಟ್ಟಣ, ಮಕ್ಕಳನ್ನು ಸಾಕಿದ ಪಾಂಡವಪುರದ ಕುಂತಿಬೆಟ್ಟ, ಬಾಯಾರಿದ ಅತ್ತಿಗೆಗೆ ನೀರನ್ನು ಒದಗಿಸಲು ಬಂಡೆಗೆ ಬಾಣವನ್ನು ಎಸೆದ ಲಕ್ಷ್ಮಣ ನೀರು ತರಿಸಿದ ಮೇಲುಕೋಟೆಯ ಧನುಷ್ಕೋಟಿ, ಇಂಥ ನೂರಾರು ಕಥೆಗಳು ಕನ್ನಡನಾಡಿನಲ್ಲಿ ರಾಮಾಯಣ, ಮಹಾಭಾರತಗಳ ಜನಪ್ರಿಯತೆಗಳನ್ನು ಸಾದರಪಡಿಸುತ್ತವೆ. ಪ್ರಕೃತಿಯ ಮೈಯಲ್ಲಿ ಈ ಪುರಾಣ ಪುರುಷರನ್ನು ಸಾಕ್ಷಾತ್ಕರಿಸಿಕೊಂಡು, ಜನ ಸದಾ ತಮ್ಮ ಬದುಕಿಗೆ ಅವರನ್ನು ಆದರ್ಶವಾಗಿ ಇಟ್ಟುಕೊಂಡ ದೃಷ್ಟಿ ನಮ್ಮನ್ನು ಚಕಿತಗೊಳಿಸುತ್ತದೆ. ಜಡ ಪ್ರಕೃತಿ ಅವರ ಕಲ್ಪನೆಯ ಕಣ್ಣಿಗೆ ಎಂಥ ಕಾವ್ಯದ ಕುಸುರಿಯನ್ನು ನೇಯ್ದಿದೆ ಎಂಬುದನ್ನು ಇಲ್ಲಿ ಕಾಣಬಹುದು. ಪ್ರಕೃತಿಯಲ್ಲಿ ಕಣ್ಣು ಓಡುವ, ಕಿವಿ ಕೇಳುವಂಥ ಸುಂದರ ಕಥೆಗಳ ವಿವರವಾದ ಅಧ್ಯಯನದ ಕಡೆ ನಾವು ಗಮನಿಸಿದರೆ ಇನ್ನೂ ಅಪೂರ್ವವಾದ ಕತೆಗಳು ಲಭ್ಯವಾಗಬಹುದು. ವಿವರಣಾತ್ಮಕ ಕಥೆಗಳ ರೂಪದಲ್ಲಿಯೂ ಈ ಮಹಾಕಾವ್ಯಗಳ ಕಥೆಗಳು ಹರಡಿವೆ. ಅಳಿಲಿನ ಮೈಮೇಲೆ ಮೂಡಿರುವ ಮೂರು ಪಟ್ಟೆಗಳಿಗೆ ಜನ ಕಟ್ಟಿರುವ ಕತೆ ಮೋಹಕವಾದುದು.

ಐತಿಹ್ಯ ರೂಪದ ಈ ಕತೆಗಳ ಜೊತೆಗೆ ಗಾದೆಗಳ ರೂಪದಲ್ಲಿಯೂ ರಾಮಾಯಣದ ಕತೆಗಳು, ಮಹಾಭಾರತದ ಪ್ರಸಂಗಗಳು ಹೆಣೆದುಕೊಂಡಿವೆ. ಗಾದೆಗಳಲ್ಲಿ ರಾಮಾಯಣ ಹಾಗೂ ಮಹಾಭಾರತಗಳ ಒಂದು ಹೊಸ ಪ್ರಯೋಗವನ್ನು ದಿ.ಎಚ್.ಎಂ. ರಾಮಾರಾಧ್ಯರು ಮಾಡಿದ್ದಾರೆ. ಗಾಥೆಗಳಂತೆಯೇ ಗೀತೆಗಳಲ್ಲಿಯೂ ರಾಮಾಯಣ ಸಂಬಂಧವಾದ ರಚನೆಗಳು ಹೇರಳವಾಗಿ ದೊರೆಯುತ್ತವೆ. ಹೆಣ್ಣುಮಕ್ಕಳ ತ್ರಿಪದಿ ಸಾಹಿತ್ಯದಲ್ಲಿ ಅತ್ಯಂತ ಅರ್ಥವತ್ತಾದ ಪದ್ಯಗಳು ರಾಮಾಯಣ, ಮಹಾಭಾರತಗಳ ಬಗ್ಗೆ ಲಭ್ಯವಾಗುತ್ತವೆ. ಸಮಗ್ರ ರಾಮಾಯಣದ ಕಲ್ಪನೆಯನ್ನು ಮೂಡಿಸುವ ಅದ್ಭುತ ವರ್ಣನೆಗಳ ತ್ರಿಪದಿಗಳು ನಮಗೆ ಸಿಗುತ್ತವೆ.

ಜನಪದ ಕಾವ್ಯಗಳಲ್ಲಿ ರಾಮಾಯಣ ಹಾಗೂ ಮಹಾಭಾರತಕ್ಕೆ ಸಂಬಂಧಪಟ್ಟ ಸಮಗ್ರ ರಚನೆಗಳು ದೊರೆತಿರುವುದು ವಿರಳ. ಭಾಗವಂತಿಕೆ ಸಂಪ್ರದಾಯದ ರಾಮಾಯಣವನ್ನು ಬಿಟ್ಟರೆ ಉಳಿದ ಸಂಪ್ರದಾಯಗಳಲ್ಲಿ ರಾಮಾಯಣದ ಪೂರ್ಣ ಕಥೆ ಲಭ್ಯವಾಗಿಲ್ಲ. ಈಗ ಸಂಗ್ರಹಗೊಂಡಿರುವ ರಾಮಯಣ ಸಂಬಂಧವಾದ ಭಾಗಗಳೆಲ್ಲಾ ಒಂದೊಂದು ಪ್ರಸಂಗವನ್ನು ಮಾತ್ರ ನಿರೂಪಿಸುವ ರಚನೆಗಳಾಗಿವೆ. ಮಹಾಭಾರತಕ್ಕೆ ಸಂಬಂಧಪಟ್ಟಂತೆ ಸಮಗ್ರ ಜನಪದ ಕಾವ್ಯವೊಂದು ಇಟ್ಟತು ಎಂದು ಡಾ. ಗದ್ಗಿಮಠ ಅವರು ಒಂದೆಡೆ ಬರೆಯುತ್ತಾರೆ. ಅವರು

ಸಂಗ್ರಹಿಸಿರಬಹುದಾದ ಕಾವ್ಯ ಬೆಳಕು ಕಾಣಲಿಲ್ಲ. ಕಿನ್ನರಿ ಜೋಗಿಗಳ ಸಂಪ್ರದಾಯದಲ್ಲಿ ಮಹಾಭಾರತದ ವಿವಿಧ ಪರ್ವಗಳು ಲಭ್ಯವಾಗುತ್ತವೆ. ಜೋಗಿಗಳು ಹಾಡುವ ಮಹಾಭಾರತದ ಸ್ವರೂಪವನ್ನು ಪರಿಚಯಿಸಿಕೊಳ್ಳಲು ಆ ಸಂಪ್ರದಾಯದ ಕಾವ್ಯಗಳ ಸಂಗ್ರಹ ಇನ್ನೂ ನಡೆದಿಲ್ಲ. 'ಅರ್ಜುನ ಜೋಗಿ ಹಾಡು' ಈಗಾಗಲೇ ಜನಪ್ರಿಯವಾದ ಒಂದು ಕಾವ್ಯ ಎನ್ನಿಸಿದರೂ ಅದರಲ್ಲಿ ಮಹಾಭಾರತದ ಯಾವುದೋ ಸಂದರ್ಭಕ್ಕೆ ಅನ್ವಯವಾಗುವಂಥ ಕಥೆ ಮಾತ್ರ ಚಿತ್ರಿತವಾಗಿದೆ. ಡಾ. ಗದ್ದಿಗಿಮಠ, ಕ.ರಾಕೃ. ಕೆ.ವಿ. ಲಿಂಗಪ್ಪ ಮುಂತಾದವರು ಮಹಾಭಾರತದ ಬೇರೆ ಬೇರೆ ಪ್ರಸಂಗಗಳಿಗೆ ಸಂಬಂಧಿಸಿದ ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಭಾಗವಂತಿಕೆ ಸಂಪ್ರದಾಯದಲ್ಲಿ ಜನಪದ ಮಹಾಭಾರತ ಒಂದು ಇದ್ದಿತು ಎಂದು ಕೆಲವು ವಕ್ತೃಗಳು ಅಭಿಪ್ರಾಯ ಪಡುತ್ತಾರೆ. ಆದರೆ, ಈ ವರೆವಿಗೆ ನಡೆದಿರುವ ಸಂಗ್ರಹ ಕಾರ್ಯದಲ್ಲಿ ಮಹಾಭಾರತ ಲಭ್ಯವಾಗಿಲ್ಲ. ಭಾಗವಂತಿಕೆ ರಾಮಾಯಣವೇ ಅಲ್ಲಿ ಹೆಚ್ಚು ಜನಪ್ರಿಯ.

೩.೨ ಮಹಾಭಾರತದಲ್ಲಿ ಹಸಿವಿನ ನೆಲೆಗಳು

ಮೂಲ ಭಾರತವನ್ನೇ ಅನುಕರಿಸಿ ರಚಿತವಾದಂತಿರುವ ಜನಪದ ಮಹಾಭಾರತವೊಂದನ್ನು ಮೊಟ್ಟಮೊದಲ ಬಾರಿಗೆ ಗುರುತಿಸಿ ಒಂದೆಡೆ ಸಂಗ್ರಹಿಸಿ ಶ್ರೀ ರಾಮಯ್ಯನವರು ಪ್ರಕಟಿಸಿದ್ದಾರೆ. ಸಮಗ್ರ ಮಹಾಭಾರತದ ಕಥೆಯ ವಿಸ್ತಾರವನ್ನು ನೆನಪಿನಲ್ಲಿಟ್ಟುಕೊಂಡು ಸಂಗ್ರಹಿಸಿ ಹೇಳುವ ಸಾಹಸವನ್ನು ತಳವರ್ಗದ ಜನಪದ ಗಾಯಕಿಯೊಬ್ಬಳು ಇಲ್ಲಿ ಮೆರೆದಿರುವುದು ಆಶ್ಚರ್ಯಕರ ವಾಗಿ ತೋರುತ್ತದೆ. ಮಹಾಭಾರತದಲ್ಲಿ ಬರುವ ಕೆಲವು ಮುಖ್ಯ ಪಾತ್ರಗಳು ಮುಖ್ಯ ಸನ್ನಿವೇಶಗಳು, ಕಥನ ಕ್ರಮ ಇವುಗಳನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಒಂದು ಕ್ರಮದಲ್ಲಿ ಅಳವಡಿಸುವುದು ಕಷ್ಟ ಸಾಧ್ಯವಾದ ಕೆಲಸ. ತ್ರಿಪದಿಯಲ್ಲಿ ಇದ್ದಿರಬಹುದಾದ ಈ ಜನಪದ ಕಾವ್ಯದ ದಾಟಿ, ಧೋರಣೆ, ಎಲ್ಲಾ ಮೂಲ ಭಾರತಕ್ಕೆ ನಿಷ್ಠವಾದಂತೆ ತೋರುತ್ತದೆ. ತೀರ ಸಂಗ್ರಹವಾಗಿ ಒಂದು ರಾತ್ರಿಯ ಕಥೆಯಾಗಿ ಮಹಾಭಾರತವನ್ನು ಹೇಳ ಹೊರಟಂತೆ ತೋರುವ ಈ ರಚನೆಯಲ್ಲಿ ಉದ್ದಕ್ಕೂ ಶೈಥಿಲ್ಯ ಕಂಡು ಬರುತ್ತದೆ. ಶೈಲಿ ಸ್ವಲ್ಪ ಕೃತಕವಾದಂತೆ ತೋರುತ್ತದೆ. ಇದು ಮೂಲತಃ ತ್ರಿಪದಿ ಕಾವ್ಯವೇ ಆಗಿದ್ದು ಹಾಡುಗಾರಿಕೆಯ ಅವಕಾಶಗಳು ತಪ್ಪಿಹೋಗಿ ಕಥೆಗಾರ್ತಿಯ ನಾಲಿಗೆಯಲ್ಲಿ ಈ ಕಥೆ ತಾಳತಪ್ಪಿ ನಡೆದಂತೆ ಕಾಣತ್ತದೆ. ಭಿನ್ನವಾದ ಮೂರ್ತಿಯಂತೆ ಇದು ತೋರಿದರೂ ಮಹಾಭಾರತದ ಕಥೆಯ ಸಮಗ್ರ ಕಲ್ಪನೆಯನ್ನು ತಂದುಕೊಡುವಲ್ಲಿ ವಿಫಲವಾಗುವುದಿಲ್ಲ ಅಲ್ಲಲ್ಲಿ ಜನಪದ ಕಾವ್ಯವೊಂದರ ನೈಜವರ್ಣನೆಗಳು ನಿರೂಪಣ ಕ್ರಮದ ನಿರಾಡಂಬರದ ಶೈಲಿಯ ವೈಖರಿ ಕಂಡುಬರುತ್ತದೆ. ಮಹಾಭಾರತ ಕಥೆಯನ್ನು ಒಂದು ಸಣ್ಣ ಚೌಕಟ್ಟಿಗೆ ಅಳವಡಿಸಲು ಮಾಡಿರುವ ಇಲ್ಲಿನ ಪ್ರಯತ್ನ ಮಾತ್ರ ಅಪ್ರತಿಮವಾದುದು. ವಾಕ್ಸಂಪ್ರದಾಯದ ಕಿರಿಯ ಅವಕಾಶದಲ್ಲಿ ದೊಡ್ಡ ಮಹಾಭಾರತದ ಕಥಾಸಾಗರವನ್ನು ಈಸಿರುವ ಸಾಹಸ ಮೆಚ್ಚತಕ್ಕದ್ದೇ ಸರಿ.

ನನ್ನ ಸಂಶೋಧನೆಯ ನೆಲೆಯಲ್ಲಿ ಬಹುಮುಖ್ಯವಾಗಿ ಗಮನ ಇರುವುದು ಪ್ರಭುತ್ವ ರೂಪಿಸಿದ ಚರಿತ್ರೆಯಲ್ಲಿ ತಳಸಮುದಾಯಗಳ ಬದುಕಿನ ವಿವರಣೆಗಳು ದಾಖಲಾಗದೆ ಇರುವುದು. ಹಾಗೂ ಅವು ಸದಾಕಾಲ ಹಸಿವಿನಿಂದ ಬದುಕುತ್ತಿರುವುದು ಇದಕ್ಕೆ ಪ್ರಭುತ್ವ ರೂಪಿಸಿರುವ ಜನವಿರೋಧಿ ಕ್ರಮಗಳು ಕಾರಣವೆಂದು ನನ್ನ ಪ್ರಬಲ ನಂಬಿಕೆ. ಇದು ನನ್ನ ಸಂಶೋಧನೆಯ ತಳಸ್ಪರ್ಶ ಕೂಡ. ಇದಕ್ಕೆ ಮೂಲ ಸಾಕ್ಷಿ ಚರಿತ್ರೆಯ ಕನ್ನಡಿಯಲ್ಲಿ ಕಾಣುವ ಸತ್ಯಾಸತ್ಯತೆ. ಹಾಗಾಗಿ ನಮ್ಮ ರಾಮಾಯಣ ಮತ್ತು ಮಹಾಭಾರತದಲ್ಲಿ ತಳಸಮುದಾಯಗಳ ಹಸಿವಿನ ಕಥನದ ಸಂಕ್ಷಿಪ್ತ ನೋಟ ಈ ಅಧ್ಯಯನದ ಒಳವಿಷಯವಾಗಿದೆ. ಮೇಲಿನ ವಿಷಯದ ನಂಬಿಕೆಯಲ್ಲಿ ಇನ್ನೊಂದು ಮಾತು ಇಲ್ಲಿ ಹೇಳಬಯಸುತ್ತೇನೆ. ತಳವರ್ಗದ ಸಮುದಾಯಗಳು ಯಾವಾಗಲೂ ಪ್ರಕೃತಿಯೊಂದಿಗೆ ಸಮ್ಮಿಳಿತಗೊಂಡಿವೆ. ಇಲ್ಲಿ 'ಪ್ರಕೃತಿ' ಎಂದರೆ ತಳವರ್ಗಗಳ ಬದುಕಿನ ಜೀವಾಳ. ನೆಲಸಂಸ್ಕೃತಿಯ ಪ್ರತೀಕ. ನೆಲದೊಂದಿಗೆ ಸಂಬಂಧಹೊಂದಿರುವ ಸಮುದಾಯಗಳೆಲ್ಲವು ತಳವರ್ಗಕ್ಕೆ ಸೇರಿದ್ದು. ಅಂದಿನಿಂದಲೂ ಪ್ರತಿಭೆಯ ಚಕ್ರವರ್ತಿಗಳಾಗಿ ಮೆರೆದ ತಳವರ್ಗದ ಪ್ರತಿಭೆ ಇಂದಿಗೂ ತನ್ನ ಸಾಂಸ್ಕೃತಿಕ ಮೆರುಗನ್ನು ಕಳಚಿಕೊಂಡಿಲ್ಲ. ಜನಪದರಿಗೆ ಜಾತಿ, ಮತಗಳ ಚೌಕಟ್ಟಿಲ್ಲ. ಬದುಕಿನ ವಿಸ್ತಾರದಲ್ಲಿ ವಿಭಿನ್ನ ಅನುಭವಗಳೊಂದಿಗೆ ತಮ್ಮ ತಮ್ಮ ಬದುಕುಗಳನ್ನು ಕಟ್ಟಿಕೊಂಡವರು.

ಹಸಿವಿನ ಧಾರುಣ್ಯತೆ ಮಹಾಭಾರತದಲ್ಲಿ ಎದುರಾಗುವುದು ದ್ರೋಣಾಚಾರ್ಯರು ಅವತಾರ ಸ್ವರೂಪಿ ಪರಶುರಾಮರಿಂದ ವಿವಿಧ ಅಸ್ತ್ರಗಳನ್ನು ಪ್ರಯೋಗದ ವಿಧಾನವನ್ನು ಮತ್ತು ಅಸ್ತ್ರಗಳ ಅಧಿದೇವತೆಗಳನ್ನು ಒಲಿಸಿಕೊಳ್ಳುವ ಮಂತ್ರವನ್ನು ಅಭ್ಯಾಸ ಮಾಡುತ್ತಾರೆ. ಆದುದರಿಂದ ಅವರನ್ನು ಮೀರಿಸುವ ಪಂಡಿತರು ಧನುರ್ವಿದ್ಯೆಯಲ್ಲಿ ಯಾರೂ ಇರಲಿಲ್ಲ. ಆದರೆ ಮನೆಯಲ್ಲಿ ದಾರಿದ್ರ್ಯ ಕಾಡುತಿರುತ್ತದೆ. ಒಂದು ಕುಡಿಕೆ ಕ್ಷೀರಕ್ಕೂ ಗತಿ ಇರಲಿಲ್ಲ. ಕಡು ಬಡತನದ ಬೇಗೆಯಲ್ಲಿ ಬಳಲುತ್ತಿದ್ದ ದ್ರೋಣಾಚಾರ್ಯರಿಗೆ ತನ್ನ ಮಗನಿಗೆ ಹಾಲುಣಿಸಲಾಗದ ಸ್ಥಿತಿ ಅಷ್ಟೊಂದು ಕಡು ಬಡತನವಿರುತ್ತದೆ. ಇಂತ ಸಂದರ್ಭದಲ್ಲಿ ತನ್ನ ಸಹಪಾಠಿ ದ್ರುಪದ ನೆನಪಾಗುತ್ತಾನೆ. ಅವನ ಬಳಿಗೆ ದ್ರೋಣಾಚಾರ್ಯರು ಬರುತ್ತಾರೆ. ರಾಜ ಸಭೆಯನ್ನು ಪ್ರವೇಶಿಸುತ್ತಾನೆ. ಸಿಂಹಾಸನ ರೂಢನಾದ ದ್ರುಪದನನ್ನು ಮತನಾಡಿಸುತ್ತಾರೆ. ಆದರೆ ನೃಪತಿಯ ಮುಖದಲ್ಲಿ ಯಾವೊಂದು ಸ್ನೇಹಭಾವವೂ ತೋರುವುದಿಲ್ಲ. ಆಗ ದ್ರೋಣಾಚಾರ್ಯರು, ದ್ರುಪದನಿಗೆ ತಮ್ಮ ಬಾಲ್ಯದಲ್ಲಿ ಜೊತೆಯಾಗಿ ಧನುರ್ವಿದ್ಯೆ ಕಲಿತೆವು ಎಂದು ಹೇಳುತ್ತಾನೆ. ತನಗೆ ವಿದ್ಯಾದೇವಿ ಒಲಿದಳೇ ಹೊರತು, ಲಕ್ಷ್ಮೀದೇವಿ ಅನುಗ್ರಹಿಸಲಿಲ್ಲ ಎಂದು ಹೇಳಿ ಹಿಂದಿನ ಸ್ನೇಹದಿಂದ ನಿನ್ನನ್ನು ನೋಡಲು ಬಂದಿರುವುದಾಗಿ ತಿಳಿಸುತ್ತಾನೆ. ಆದರೆ ದ್ರುಪದನಿಗೆ ತನ್ನ ಬಾಲ್ಯದ ವಿದ್ಯಾಭ್ಯಾಸದ ದಿನಗಳು ಸ್ಮೃತಿ ಪಟಲದಿಂದ ಮಾಸಿರಲಿಲ್ಲ. ಆದರೆ ಮಹಾರಾಜನಾದ ನಾನು ಈ ದಟ್ಟ ದರಿದ್ರನಾದ ಬ್ರಾಹ್ಮಣನನ್ನು ಸ್ನೇಹಿತನನ್ನಾಗಿ ಹೇಗೆ ಒಪ್ಪಿಕೊಳ್ಳಲಿ ಎಂದು

ತನ್ನ ಮನಸ್ಸಿನಲ್ಲಿ ಯೋಚಿಸುತ್ತಾನೆ. ತನ್ನ ಎದುರು ನಿಂತ ದ್ರೋಣಾಚಾರ್ಯರನ್ನು ದುರುದುರನೆ ನೋಡುತ್ತಾನೆ. ಆಗ ದ್ರೋಣಾಚಾರ್ಯರನ್ನು ಕುರಿತು ಎಲೇ ಬ್ರಾಹ್ಮಣನೇ ಭೂಮಂಡಲೇಶ್ವರನಾದ ನಾನು ನಿನ್ನಂತ ದರಿದ್ರನೊಂದಿಗೆ ಯಾವ ಸ್ನೇಹವನ್ನು ಮಾಡುವುದಿಲ್ಲ. ಬಾಲ್ಯದ ಒಂದು ಕಾಲದಲ್ಲಿ ನಾವಿಬ್ಬರು ಅಲ್ಪಸ್ವಲ್ಪ ಸಮಯ ಜೊತೆಯಲ್ಲಿದ್ದಿರಬಹುದು. ಅದರಿಂದಾಗಿ ಜೀವನವಿಡೀ ಸ್ನೇಹಿತರಾಗಬೇಕಾಗಿಲ್ಲ. ಪಾಂಚಾಲ ದೇಶದ ರಾಜಗದ್ದುಗೆಯನ್ನು ಅಲಂಕರಿಸಿರುವ ನಾನೆಲ್ಲಿ? ಕೈಯಲ್ಲಿ ದರ್ಭೆ ಹಿಡಿದು ದಿನನಿತ್ಯ ಊಟಕ್ಕೊಸ್ಕರ ಮಟಮಟ ಮಧ್ಯಾಹ್ನ ಅಲೆದಾಡುವ ದರಿದ್ರ ಬ್ರಾಹ್ಮಣನಾದ ನೀನೆಲ್ಲಿ"[೧] ಎಂದು ಅವಮಾನಪಡಿಸುತ್ತಾನೆ.

ಹಾಗೆ ಮುಂದುವರೆದು "ದರಿದ್ರನಾದವನು ಅರಸನಾದವನ ಸ್ನೇಹಿತನಾಗಲಾರ, ವಿದ್ವಾಂಸನು ಅವಿದ್ಯಾವಂತನ ಮಿತ್ರನಾಗಲಾರನು. ನಪುಂಸಕನಿಗೆ ಶೂರನು ಗೆಳೆಯನಾಗಲಾರ, ಪ್ರಜಾಜನರಿಂದ ಸೇವಿಸಲ್ಪಟ್ಟು ವೈಭವೋಪೇತನಾದ ಗದ್ದುಗೆಯನ್ನೇರಿ ವಂದಿಮಗದ ಪರಿಮೇಷ್ಟಿತನಾದ ನಾನೆಲ್ಲಿ? ಮಡದಿ ಮಕ್ಕಳನ್ನು ಪೋಷಿಸಲು ಅನ್ನ ಆಹಾರವಿಲ್ಲದೆ ಅರೆಹೊಟ್ಟೆಯಲ್ಲಿ ಮಲಗುವ ನೀನೆಲ್ಲಿ? ನನಗೆ ನಿನ್ನ ಪರಿಚಯವೇ ಇದ್ದಂತಿಲ್ಲ. ಇಲ್ಲಿಂದ ಹೊರಟುಹೋಗು"[೨] ಎಂದು ಕಟುವಾಗಿ ಮಾತನಾಡುತ್ತಾನೆ. ವರ್ಗವ್ಯವಸ್ಥೆಯಲ್ಲಿ ಬಡತನ, ಹಸಿವು ಎಂಥವರನ್ನು ಅವಮಾನಕ್ಕೆ ಗುರಿ ಮಾಡುತ್ತದೆ. ಇದಕ್ಕೆ ಈ ಮೇಲಿನ ಸಂಗತಿಯೇ ಸಾಕ್ಷಿ. ಇಲ್ಲಿ ಸ್ನೇಹಕ್ಕಿಂತ ಹಣ, ಅಧಿಕಾರ, ಮುಖ್ಯವಾಗುತ್ತದೆ. ಪ್ರಭುತ್ವಶಾಹಿಯ ಎಲ್ಲಾ ರೀತಿಯ ಅಪಾಯಗಳು ಇಲ್ಲಿ ದ್ರುಪದನ ಹಿನ್ನೆಲೆಯಲ್ಲಿ ಗೋಚರಿಸುತ್ತದೆ. ಇವತ್ತಿನ ವರ್ತಮಾನದ ಪರಿಸ್ಥಿತಿಯು ಕೂಡಿದೇ ಆಗಿದೆ. ಎಲ್ಲಾ ಕಾಲಕ್ಕೂ ಅನ್ವಹಿಸುವಂತೆ, ತಳಸಮುದಾಯಗಳ ಬದುಕಿನ ದಾರುಣ ಸ್ಥಿತಿಗೂ ದ್ರೋಣಾಚಾರ್ಯರ ಕೌಟುಂಬಿಕ ಪರಿಸ್ಥಿತಿಗೂ ಅಂತವ್ಯತ್ಯಾಸವೇನು ಇಲ್ಲ. ಹಲವು ರೀತಿಯಲ್ಲಿ ತಲ್ಲಣಗೊಳಿಸುವ ದ್ರೋಣಾಚಾರ್ಯರ ಬದುಕಿನ ದಾರುಣ್ಯತೆಯನ್ನು ಇನ್ನಷ್ಟು ವಿಸ್ತರಿಸಿ ಹೇಳುವುದು ಸೂಕ್ತ ಎನಿಸುತ್ತದೆ. ಭೀಷ್ಮರ ಸಮ್ಮುಖದಲ್ಲಿ ನಡೆಯುವ ಘಟನೆ. ದ್ರೋಣಾಚಾರ್ಯರು ಹೀಗೆ ಹೇಳುತ್ತಾರೆ. ನಾನು ಲೋಕಪ್ರಖ್ಯಾತರಾದ ಭರದ್ವಾಜರ ಪುತ್ರ ದ್ರೋಣಾಚಾರ್ಯನಾಗಿದ್ದಾನೆ. ಭಗವನ್ ಪರಶುರಾಮರ ಶಿಷ್ಯ, ಬಡತನ ಬೇಗೆ ನನ್ನನ್ನು ಕಾಡುತ್ತಿದೆ. ದರಿದ್ರ ದೇವತೆಯ ಕಾಟಕ್ಕೆ ಬಲಿಯಾದ ನನಗೆ ಒಂದಿಷ್ಟು ಆಕಳಿನ ಹಾಲನ್ನು ಪುತ್ರನಿಗೆ ಕೊಡುವ ಯೋಗ್ಯತೆ ಇಲ್ಲ.

ಇದನ್ನು ಅರಿತ ಅವನ ಬಾಲ್ಯ ಸ್ನೇಹಿತರು ಅಕ್ಕಿಹಿಟ್ಟನ್ನು ಕಲಸಿದ ನೀರನ್ನು ಹಾಲೆಂದು ಆತನಿಗೆ ಕುಡಿಸಿ ವಿನೋದ ಮಾಡಿ ನಮ್ಮನ್ನು ತುಚ್ಛರಾಗಿ ಕಂಡರು. ದರಿದ್ರನು ಯಾವಾಗಲೂ ಹೆಣದಂತೆ ನಗಣ್ಯನಾಗಿದ್ದಾನೆ. ಬದುಕಲು ಆಶ್ರಯವನ್ನು ಪಡೆಯುವ ದೃಷ್ಟಿಯಿಂದ ನನ್ನ ಸಹಪಾಠಿಯಾಗಿದ್ದ ದ್ರುಪದ ಮಹಾರಾಜನಲ್ಲಿಗೆ ಹೋದರು ಮಾಡುವುದೇನು? ವಿದ್ಯಾಭ್ಯಾಸದ

ಕಾಲದಲ್ಲಿ ಅರೆಗಳಿಗೆಯೂ ನನ್ನನ್ನು ಬಿಟ್ಟಿರಲಾರದ ಆ ಭೋಪತಿಯನ್ನು ಸಂದರ್ಶಿಸಿದಾಗ ಹೀನಾಯವಾದ ಮಾತುಗಳನ್ನಾಡಿದನು. ಬೇಡುವಹಸ್ತಕ್ಕೆ ಲಭಿಸುವ ಅದೃಷ್ಟವು ನಕಾರವಲ್ಲದೆ ಮತ್ತೇನು? ಅವನು ಬೈದು ಹಂಗಿಸಿದಾಗ ಅವಮಾನಿಸಿದಾಗ ಅರೆಗಳಿಗೆಯೂ ನಿಲ್ಲದೆ ಆ ರಾಜ್ಯದಿಂದ ಹೊರಟುಬಂದೆ. ಅವನ ದುರಹಂಕಾರವನ್ನು ಮುರಿದು ಮೆರೆಯುವ ಪ್ರತಿಜ್ಞೆಯನ್ನು ಹೊತ್ತು ಊರೂರು ಸುತ್ತಾಡುತ್ತಿದ್ದೇನೆ. ಅರ್ಧಹೊಟ್ಟೆಯಿಂದ ಬಳಲುವ ಮಡದಿ ಮತ್ತು ಮಗುವನ್ನು ಒಮ್ಮೊಮ್ಮೆ ನೋಡುವಾಗ ಮನಸ್ಸಿನಲ್ಲಿ ತಡೆಯಲಾರದ ಖೇದವಾಗುತ್ತಿದೆ. ಬದುಕಲು ಬೇಕಾದಷ್ಟು ಸಂಪಾದನೆಯನ್ನು ಮಾಡಲಾಗದ ಈ ಪಾಂಡಿತ್ಯಕ್ಕೆ ಬೆಲೆಯೇನು? ಎಂಬ ನಿರಾಶೆಯ ಮಾತುಗಳನ್ನು ಹೊರಹಾಕುತ್ತಾನೆ. ರಾಮಾಯಣ, ಮಹಾಭಾರತದ ಕಾಲದಿಂದಲೂ ಈ ದೇಶಕ್ಕೆ ಬಡತನ, ಹಸಿವಿನ ದಾರಿದ್ರತೆ ಒಂದು ಶಾಪವಾಗಿ ಕಾಡುತ್ತಿದೆ.

ಬಂಡವಾಳಶಾಹಿಯ ಮನೋಧರ್ಮದ ಸೂಕ್ಷ್ಮ ಎಲೆಗಳು ಇಲ್ಲಿ ದ್ರುಪದನ ಮಾತುಗಳಲ್ಲಿ ನೋಡುವುದಾದರೆ, ನಮ್ಮಂತ ಬಡರಾಷ್ಟ್ರಗಳ ದಾರುಣ್ಯತೆಯನ್ನು ಪ್ರತಿನಿಧಿಸುವ ಪಾತ್ರವಾಗಿ ದ್ರೋಣಾಚಾರ್ಯರು ಕಂಡು ಬರುತ್ತಾರೆ. ಪ್ರಭುತ್ವಶಾಹಿಗೆ ಹಣ, ಅಧಿಕಾರವೇ ಮುಖ್ಯ, ಬಡರಾಷ್ಟ್ರಗಳಿಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ದೊಡ್ಡ ಚಿಂತೆಯಾಗಿಬಿಟ್ಟಿದೆ. ನಮ್ಮ ಗ್ರಾಮ ಸಮಾಜದ ಬದುಕಿನ ದಾರುಣ ಸ್ಥಿತಿಗತಿಗಳನ್ನು ಎತ್ತಿತೋರಿಸುವ ನೆಲೆಯಲ್ಲಿ ದ್ರೋಣಾಚಾರ್ಯರು ಕಂಡುಬರುತ್ತಾರೆ. ವರ್ಣವ್ಯವಸ್ಥೆಯಲ್ಲಿ ದ್ರೋಣಾಚಾರ್ಯರು ಮೇಲ್ವರ್ಗಕ್ಕೆ ಸೇರಲ್ಪಟ್ಟರೂ, ತಳಸಮುದಾಯಗಳ ಬದುಕಿನ ದಾರುಣ್ಯತೆಯನ್ನು ಅನುಭವಿಸಿದರು. ಜಾಗತೀಕರಣದ ನೆಲೆಯಲ್ಲಿ ಹಣ, ಅಧಿಕಾರದ ಮುಂದೆ ಪ್ರೀತಿ, ಸ್ನೇಹ, ಮಮತೆ, ಬಾಂಧವ್ಯ ಎಲ್ಲಾ ಮಾನವೀಯ ಅಂಶಗಳು ಶೂನ್ಯ. ಈ ಕಾವ್ಯದ ಆರಂಭದಲ್ಲಿ ಶಕುನಿಯ ಪ್ರಸಂಗ ಬರುತ್ತದೆ. ನೆಲಮಾಳಿಗೆಯಲ್ಲಿ ಶಕುನಿ ಮತ್ತು ಅವನ ಸೋದರರನ್ನು ದುರ್ಯೋಧನ ಸೆರೆಯಿಟ್ಟ ಸನ್ನಿವೇಶ ಬರುತ್ತದೆ. ಮಹಾಭಾರತದ ಮುಖ್ಯ ಘಟನೆಗಳಿಗೆ ಮೂಲ ಪ್ರೇರಣೆಯನ್ನು ನೀಡುವ ಈ ಪ್ರಸಂಗಕ್ಕೆ ಜನಪದ ಕವಿ ಅಧ್ಯತೆಯನ್ನು ನೀಡಿ ದುರ್ಯೋಧನನ ಮೇಲೆ ಸೇಡಿನ ಕಿಡಿಯನ್ನು ಶಕುನಿ ತುಂಬಿಕೊಳ್ಳಬೇಕಾಗಿ ಬಂದ ಬಗೆಯನ್ನು ಚಿತ್ರಿಸುತ್ತಾನೆ. ಒಂದು ಪಾವು ಅಕ್ಕಿ, ಒಂದು ಪಾವು ನೆಲಮಾಳಿಗೆಗೆ ಕೊಟ್ಟ ದುರ್ಯೋಧನ, ನೂರೊಂದು ಮಂದಿಯನ್ನು ಕೊಲ್ಲಲೆಂದೇ ಎಣಿಸಿದ್ದ. ಆದರೆ ಅಷ್ಟು ಮಂದಿಯಲ್ಲಿ ಶಕುನಿ ಮಾತ್ರ ಅದನ್ನು ಸ್ವೀಕರಿಸಿ, ಅವನು ಬದುಕಿದ. ಉಳಿದ ನೂರು ಮಂದಿ ಮಡಿದರು. ಇಂಥ ಸ್ಥಿತಿಯನ್ನು ತಂದೊಡ್ಡಿದ ದುರ್ಯೋಧನ ಶಕುನಿಯನ್ನು ಉಪಾಯವಾಗಿ ತನ್ನ ವಶಕ್ಕೆ ತೆಗೆದುಕೊಂಡ ಸಂದರ್ಭ ತುಂಬ ಮಾರ್ಮಿಕವಾಗಿ ಈ ವಾಕ್ಯದಲ್ಲಿ ಮೂಡಿ ಬಂದಿದೆ. ಇಲ್ಲಿ ಗಮನಿಸಬಹುದಾದ ಬಹಳ ಮುಖ್ಯವಾದ ವಿಷಯವೆಂದರೆ 'ಹಸಿವು' ಸೇಡಿನ ಪರಿಕಲ್ಪನೆಯಾಗಿ ರೂಪುಗೊಳ್ಳುತ್ತದೆ. ಪ್ರಭುತ್ವದನಾಶಕ್ಕೆ ಶಕುನಿಯ ಸೋದರರು ಹಸಿವಿನಿಂದ ಪ್ರಾಣತೆತ್ತು ಕುರುವಂಶನಾಶಕ್ಕೆ ಶಕುನಿಯೆಂಬ ದುರ್ಮಾಗಿ ರೂಪುಗೊಳ್ಳುತ್ತಾನೆ.

ಇಲ್ಲಿ ಪ್ರಭುತ್ವ, ಸೇಡು, ಹಸಿವು, ಸಾವು ಇವುಗಳು ಎಂದೆಂದಿಗೂ ತಳವರ್ಗದ ಪ್ರತಿರೋಧದ ರೂಪಕಗಳಾಗಿ ಕಂಡು ಬರುತ್ತದೆ.

ವನವಾಸಕ್ಕೆ ಬಂದಂತ ಪಾಂಢವರು ಹಲವಾರು ಬಿಕ್ಕಟ್ಟುಗಳಿಗೆ ಒಳಗಾಗುತ್ತಾರೆ. ಅಂತಹ ಬಿಕ್ಕಟ್ಟುಗಳಲ್ಲಿ ಹಸಿವು ಕೂಡ ಒಂದು, ಜನನಿ ಕುಂತಿ ಸಹಿತವಾಗಿ ಪಾಂಡವರು ಹಲವು ಮೈಲುಗಳು ನಡೆದು ಬಳಲಿ ಬಸವಳಿದರು. ಹಸಿವು, ಬಾಯಾರಿಕೆಯಿಂದ ಬಳಲಿದ ಪಾಂಡವರ ಪಾದಗಳು ಸೀಳಿ ರಕ್ತ ಹೊರಸೂಸುತ್ತಿತ್ತು. ಆಯಾಸಪಟ್ಟ ಕುಂತಿದೇವಿ ಮುಂದೆ ಹೋಗಲಾರದೆ ಅಲ್ಲಿಯೇ ಕುಸಿದುಬಿಟ್ಟಳು. ಅರಗಿನಾಲಯದಲ್ಲಿ ಸಾಯಲು ಬಿಡದೆ ಇಲ್ಲಿ ಕೊಲ್ಲುತ್ತಿರುವೆಯಲ್ಲಾ ಭೀಮ !ಎಂದು ಕೂಗಾಡಿದಳು. ಅರ್ಜುನನ ಮುಖದಲ್ಲಿ ಬೆವರಿಳಿದಿತ್ತು. ನಕುಲ ಸಹದೇವರು ಖೀನವದನರಾಗಿ ದರ್ಯೋಧನನ ದುಷ್ಟ ಯೋಜನೆಯನ್ನು ಹಳಿಯುತ್ತಾ ರಾತ್ರಿ ಕಳೆಯುತ್ತಾರೆ. ಕತ್ತಲೆ ಕವಿದ ಮನಸ್ಸುಗಳಿಗೆ ಮುಂಜಾನೆಯ ಪರಿವೇ ಇರಲಿಲ್ಲ. ಅಣ್ಣಾ ಭೀಮಸೇನ ಈ ಹಾಳು ಅಡವಿಯಲ್ಲಿ ಗಿಡಮರ ಪೊದರುಗಳ ಮಧ್ಯನಡೆಯಲಾರೆವು. ತೊರೆಯನ್ನು ದಾಟಲು ಸಾಧ್ಯವಿಲ್ಲ. ಬಳಲಿ ಬೆಂಡಾಗಿ ಅವಯವಗಳು ಸೋತಿವೆ. ನಾಲಿಗೆ ಒಣಗಿದೆ. ನಮ್ಮ ಇಹಲೋಕದ ಯಾತ್ರೆ ಇಲ್ಲಿಯೇ ಮುಗಿಯುವುದೋ ಏನೋ? ಅಣ್ಣಾ, ನೀನು ಅತಿಬಲಢ್ಯ ನಾದುದರಿಂದ ನಮ್ಮನ್ನು ಎತ್ತಿಕೋ ಎಂದು ಎಲ್ಲರೂ ಅಂಗಲಾಚುತ್ತಾರೆ.

ಇಷ್ಟೆಲ್ಲಾ ಬಿಕ್ಕಟ್ಟುಗಳನ್ನು ಎದುರಿಸುತ್ತಾ ಪಾಂಢವರು ಸುಂದರವಾದ ಏಕಚಕ್ರ ನಗರಿಯನ್ನು ಪ್ರವೇಶಿಸುತ್ತಾರೆ. ವೇದವ್ಯಾಸರು ಆರುತಿಂಗಳು ಏಕನಗರದಲ್ಲಿ ವಾಸಮಾಡಲು ಸೂಚಿಸಿದುದರಿಂದ ಭಿಕ್ಷಾನ್ನವನ್ನು ಬೇಡುವುದಕ್ಕೋಸ್ಕರ ಬ್ರಾಹ್ಮಣ ವೇಷವನ್ನು ಧರಿಸಿ ಓರ್ವ ಕುಂಬಾರನ ಮನೆಯಲ್ಲಿ ತಂಗಿದರು. ಒಂದು ದಿನ ಆಸುಪಾಸಿನಲ್ಲಿ ಬೆಂಕಿ ಬಿದ್ದು ಎಲ್ಲಾ ಮನೆಗಳು ಅಗ್ನಿಗಾಹುತಿಯಾದವು. ಭೀಮಸೇನನು ಅಲ್ಲಿಯ ಕುಂಬಾರನ ಮನೆಯನ್ನು ಬೆಂಕಿಯಿಂದ ತಪ್ಪಿಸಿದನು. ಕುತೂಹಲದಿಂದ ಕುಂಬಾರನು ಭೀಮ ಹೇಗೆ ರಕ್ಷಿಸಿದೆ. ಎಂದು ಕೇಳುತ್ತಾನೆ. ಆಗ ಭೀಮನು ದೇವರೆ, ಉಳಿಸಿದನೆಂದು ತನ್ನ ಶರಣಭಾವವನ್ನು ವ್ಯಕ್ತಪಡಿಸುತ್ತಾನೆ. ಆಗ ಕುಂಬಾರನು ಆನಂದದಿಂದ "ಆಯ್ಯಾ ಬೇಕಾದುದನ್ನು ಕೇಳಿರಿ"ಎಂದು ಹೇಳಿದಾಗ ಭೀಕ್ಷೆ ಬೇಡಲು ಐದು ಮಣ್ಣಿನ ಮಡಕೆಗಳನ್ನು ನೀಡೆದರೆ ಅದೇ ಮಹದುಪಕಾರವಾಗುತ್ತದೆ ಎಂದು ಭೀಮನು ಆ ಕುಂಬಾರನಿಗೆ ಹೇಳುತ್ತಾನೆ ಕುಂಬಾರನು ಕೊಟ್ಟ ಐದು ಮಡಕೆಗಳನ್ನು ಸ್ವೀಕರಿಸಿ ಮಧುಕರ ವೃತ್ತಿಯನ್ನು ಅವಲಂಬಿಸಿ ಪಾಂಡವರು ಬ್ರಾಹ್ಮಣರ ಅಗ್ರಹಾರದಲ್ಲಿ ವಾಸಮಾಡುತ್ತಾರೆ. ಇಡೀ ಭೂಮಂಡಲದವನ್ನು ಗಡಗಡನೇ ನಡುಗಿಸುವ ಶೌರ್ಯ, ಧೈರ್ಯ, ಪಾಂಡವರಲ್ಲಿ ಇದ್ದರೂ ಭಿಕ್ಷಾನ್ನವನ್ನು ಬೇಡಿ ಜೀವಿಸುವ ಸ್ಥಿತಿ ಒದಗುತ್ತದೆ. ಬೇಡಿ ತಂದ ದಿನ ನಿತ್ಯದ ಭಿಕ್ಷಾನ್ನವನ್ನು ಕುಂತಿದೇವಿ ಎರಡು ಭಾಗಮಾಡಿ ಅರ್ಧಪಾಲನ್ನು ಭೀಮನಿಗೆ ಕೊಡುತ್ತಿದ್ದಳು. ಉಳಿದಿರುವ

ಅರ್ಧವನ್ನು ಐದು ಪಾಲು ಮಾಡಿ ಉಳಿದವರು ಉಣ್ಣುತ್ತಿದ್ದರು. ಪಾಂಡವರ ಹಸಿವಿನ ದಿನಗಳು ಹೀಗೆ ಮುಂದುವರಿಯುತ್ತವೆ. ಒಂದು ದಿನ ನೆರೆಮನೆಯ ಬ್ರಾಹ್ಮಣನ ಮನೆಯಿಂದ ಹೃದಯವಿದ್ರವಿಸುವ ಆರ್ತನಾದ ಕೇಳಿಸುತ್ತದೆ. ಕುಂತಿದೇವಿಯು ಅಲ್ಲಿ ಹೋಗಿ ಒದಗಿ ಬಂದಿರುವ ಅಪತ್ತೇನೆಂದು ವಿಚಾರಿಸುತ್ತಾಳೆ. ಆಗ ಆ ಬ್ರಾಹ್ಮಣ ಹೆಂಗಸು "ಅಮ್ಮಾ ಈ ಊರ ಹೊರಗೆ ಒಬ್ಬ ಘೋರ ರಾಕ್ಷಸನಿದ್ದಾನೆ. ಬಕಾಸುರನೆಂಬುದು ಆ ನೀಚನ ಹೆಸರು. ನಮ್ಮೀ ಊರಿನಲ್ಲಿ ಪ್ರತಿದಿನ ಸರದಿಯಂತೆ ಒಂದೊಂದು ಮನೆಯಿಂದ ಜೋಡೆತ್ತಿನ ಒಂದು ಗಾಡಿ ಅನ್ನ, ಭಕ್ಷ್ಯಭೋಜ್ಯ ಮತ್ತು ಓರ್ವ ಯುವಕನನ್ನು ಅವನ ಪಾರಣೆಗೆ ಕಳುಹಿಸಬೇಕು. ನಾಳೆ ನಮ್ಮ ಮನೆಯ ಸರದಿ ಬಂದಿದೆ. ನನಗೆ ಒಬ್ಬನೇ ಮಗನಿದ್ದಾನೆ. ಆ ಧಾನವನ ಗುಡಾಣದಂತಹ ಹೊಟ್ಟೆಗೆ ಕುಮಾರನನನ್ನು ಹೇಗೆ ತಳಲ್ಲಿ? ಪುತ್ರನನ್ನು ಕಳೆದುಕೊಂಡು ಕ್ಷಣಕಾಲ ಬಾಳಲಾರೆವು. ಬೇರೆದಾರಿ ಇಲ್ಲದೆ ತಲೆ ತಲೆ ಬಡಿದುಕೊಳ್ಳುತ್ತಿದ್ದೇವೆ. ತಾಯೇ. ನಮಗೆ ಯಾರು ಸಂರಕ್ಷಣೆ ನೀಡುವವರು? ಹಾಳು ವಿಪ್ರಕುಲದಲ್ಲಿ ಜನಿಸಿದುದರಿಂದ ನಮಗೆ ಭುಜಬಲವಿಲ್ಲ. ದುಷ್ಟನನ್ನು ಎದುರಿಸುವ ಧೈರ್ಯವೂ ಇಲ್ಲ. ಪುತ್ರನನ್ನು ಹೇಗೆ ಮಾರಿಯ ಹೊಟ್ಟೆಗೆ ದೂಡಲಿ? ಎಂದು ಆ ಬ್ರಾಹ್ಮಣ ಹೆಂಗಸು ಗೋಳಾಡುತ್ತಾಳೆ."

ಈ ಪರಿಸ್ಥಿತಿಯ ಅರಿವಾದ ಕುಂತಿದೇವಿಗೆ ಸಾಧು ಸಜ್ಜನರ ಮೇಲೆ ದುಷ್ಟದೈತ್ಯನು ನಡೆಸುವ ದಬ್ಬಾಳಿಕೆಯನ್ನು ಮುಗಿಸುವ ಛಲ ಅಂಕುರಿಸಿ ಕುಂತಿಯು ವಿನಯದಿಂದ ಆ ಬ್ರಾಹ್ಮಣ ಸ್ತ್ರೀಯನ್ನು ಸಮಾಧಾನ ಪಡಿಸುತ್ತಾಳೆ. "ದುಃಖಿಸಬೇಡಿ, ನಿಮಗಿರುವ ಓರ್ವ ಮಗನನ್ನು ಅವನಲ್ಲಿಗೆ ಕಳುಹಿಸುವುದು ಉಚಿತವಲ್ಲ. ನನಗೆ ಐವರು ಮಕ್ಕಳಿದ್ದಾರೆ. ಅವರಲ್ಲಿ ಒಬ್ಬನನ್ನಂತೂ ಸಾಕಲಾರೆ. ಹೊಟ್ಟೆಬಾಕನ ಅವನಿಗೆ ಪ್ರತಿದಿನವೂ ತಂದ ಭಿಕ್ಷಾನ್ನದಲ್ಲಿ ಅರ್ಧವನ್ನು ಕೊಟ್ಟರೂ ಸಾಕಗುವುದಿಲ್ಲ. ನಿಮ್ಮ ಪುತ್ರನ ಬದಲಿಗೆ ಸಾಕಲು ಕಷ್ಟವಾದ ಭೀಮನನ್ನು ಬಕಾಸುರನಲ್ಲಿಗೆ ನೂಕುತ್ತೇನೆ. ದುಃಖ ಮಾಡಬೇಡಿರಿ. ಎಂದು ಕುಂತಿ ಆ ಹೆಂಗಸನ್ನು ಸಮಾಧಾನ ಪಡಿಸುವಳು. ಹಿಂತಿರುಗಿ ಬಂದ ಕುಂತಿದೇವಿಯು ತನ್ನ ಮಗನಾದ ಭೀಮನಿಗೆ ಸಂತಸದ ವಿಷಯವನ್ನು ತಿಳಿಸುತ್ತಾಳೆ. ಆಗ ಭೀಮನಿಗೆ ಆದ ಆನಂದಕ್ಕೆ ಪರವೇ ಇಲ್ಲ. ತೊಳದಂತಿರುವ ಹೊಟ್ಟೆಗೆ ಬೇಕಾಗುವಷ್ಟು ಮೃಷ್ಟಾನ್ನವನ್ನು ಉಣ್ಣದೆ ಅದೆಷ್ಟೋ ದಿವಸಗಳಾಗಿದ್ದವು. ಆ ದಿನ ರಾತ್ರಿ ಭೀಮನಿಗೆ ನಿದ್ದೆ ಹತ್ತಲಿಲ್ಲ. ನೆರೆಮನೆಯಲ್ಲಿ ದಾನವನಿಗಾಗಿ ತಯರಾಗುವ ಬಂಡಿ ಅನ್ನ ಭಕ್ಷ್ಯ ಭೋಜ್ಯಗಳ ಪರಿಮಳವನ್ನು ಆಘ್ರಾಣಿಸಿ ಮಲಗಿದ್ದಲ್ಲಿಯೇ ಅತ್ತಿಂದಿತ್ತ ಹೊರಳಾಡಿ ಸೂರ್ಯೋದಯಕ್ಕಾಗಿ ಚಡಪಡಿಸಿದನು. ಕ್ಷಣವೊಂದು ಯುಗವಾಗಿ ತೋರಿತು. ಇನ್ನೇನು, ಸಮಯ ಸಮೀಪಿಸಿತೆಂದಾಗ ಎದ್ದು ನಿತ್ಯ ವಿಧಿಯನ್ನು ಮುಗಿಸಿ, ಸ್ನಾನಾದಿಗಳನ್ನು ಮಾಡಿ, ತಾಯಿಗೆ ನಮಸ್ಕರಿಸಿ ಅಣ್ಣನಿಂದ ಆಶೀರ್ವಾದ ಪಡೆದನು. ಅರ್ಜುನ, ನಕುಲ, ಸಹದೇವಾದಿಗಳು ಶುಭವನ್ನು ಕೋರಿದರು. ಭೀಮನಿಗೆ ಮನದಲ್ಲಿ ರಾಕ್ಷಸನನ್ನು ಕೊಲ್ಲುವ

ತವಕ, ಇಲ್ಲಿ ಸಾವಿಗಿಂತ ಹೊಟ್ಟೆ ತುಂಬಿಸಿಕೊಳ್ಳುವುದೇ ಮುಖ್ಯ. ಹಸಿವು ಸಾವಿಗಿಂತ ಭಯಾನಕವಾದುದು. ಅಷ್ಟೇ ವಿಕೃತಿಯಾದುದು.

ಭೀಮನಿಗೆ ಹೊಟ್ಟೆ ತುಂಬ ಉಣ್ಣುವ ಅವಸರ. ರಾಕ್ಷಸನನ್ನು ಕೊಂದಾದರು ತಾನು ಹಸಿವನ್ನು ನೀಗಿಸಿಕೊಳ್ಳಬಹುದು ಎಂಬ ಆಸೆ ಅವನಲ್ಲಿ ಮೂಡಿತ್ತು. ಹಸಿವಿನ ದಿನಗಳನ್ನೇ ಕಾಣುತ್ತಿದ್ದ ಭೀಮನಿಗೆ ಇದೊಂದು ಉತ್ತಮ ಅವಕಾಶವಾಗಿತ್ತು. ಭೀಮನು ಗಾಡಿಯಲ್ಲಿ ಖಂಡಗದ ಅನ್ನವನ್ನು ಹೇರಿಕೊಂಡು ಎರಡು ಕೈಗಳಿಂದಲೂ ಮೃಷ್ಟಾನ್ನ ಭೋಜನವನ್ನು ಗಬಗಬನೇ ಉಣ್ಣುತ್ತಾ, ಎತ್ತುಗಳನ್ನು ಚಪ್ಪರಿಸಿ ಊರಹೊರಗೆ ಇರುವ ಬಕಾಸುರನಲ್ಲಿಗೆ ಹೋದನು. ಆತನು ಮೆಲ್ಲನೆ ಹೋದುದರಿಂದ ಕ್ಲಪ್ತ ಸಮಯಕ್ಕೆ ರಾಕ್ಷಸನಿಗೆ ಊಟ ತಲುಪಲಿಲ್ಲ. ಹೊತ್ತು ನೆತ್ತಿಗೇರಿದುದರಿಂದ ರಾಕ್ಷಸನು ಕೋಪ ಉಕ್ಕೇರಿತು. ನೆಟ್ಟ ದೃಷ್ಟಿಯಿಂದ ಬರಬೇಕಾದ ಗಾಡಿಯನ್ನು ನಿರೀಕ್ಷಿಸುತ್ತಿದ್ದನು. ಆ ಹೊತ್ತಿಗೆ ಭೀಮ ಪರಾಕ್ರಮಿ ವೃಕೋದರನು ಯಾರ ಹೆದರಿಕೆಯಿಲ್ಲದೆ ರಾಕ್ಷಸನನ್ನು ಅಣಕಿಸುತ್ತಾ ಆಗಮಿಸುತ್ತಾನೆ. ಇಲ್ಲಿ ಇಬ್ಬರ ಪ್ರಧಾನ ಸಮಸ್ಯೆ ಇರುವುದು ಹಸಿವು. ಇನ್ನೊಂದು ಕಡೆ ಹಸಿವನ್ನು ನೀಗಿಸಲು ಸಿದ್ದವಾಗಿರುವ ಆಹಾರ. ಇದನ್ನು ಪಡೆಯಲು ಇಬ್ಬರ ನಡುವೆ ನಡೆವ ಹೋರಾಟ. ಇದು ಇವತ್ತಿನ ಆಧುನಿಕ ಕಾಲದ ಹಲವು ಸಮಸ್ಯೆಗಳಲ್ಲಿ ಒಂದಾಗಿದೆ.

ಆಗ ರಾಕ್ಷಸನು "ಎಲವೋ ನೀನಾರು? ನನ್ನ ಶಕ್ತಿ ಪರಾಕ್ರಮಗಳನ್ನು ಅರಿಯದೆ ಬರುತ್ತಿರುವ ಪುಂಡಾಟಿಕೆಯ ಹುಡುಗನಂತಿರುವೆ. ಸಾಯುವ ಕಾಲದಲ್ಲಿ ಈ ವಿಪರೀತ ಬುದ್ಧಿ ಪ್ರಾಪ್ತವಾದಂತೆ ತೋರುತ್ತಿದೆ."[3] ಎನ್ನುತ್ತಾ ಭೀಮನ ಬೆನ್ನ ಮೇಲೆ ಎರಡು ಹಸ್ತಗಳಿಂದ ಪ್ರಹರಿಸಿದನು. ಅದು ಭೀಮನ ಮೇಲೆ ಯಾವ ಪರಿಣಾಮವಾಗಲಿಲ್ಲ. ಬಂಡಿಯ ಅನ್ನವನ್ನು ಖಾಲಿ ಮಾಡಿ ಕೈತೊಳೆದು ರಕ್ಕಸನನ್ನು ನೋಡಿ ಅಸಡ್ಡೆಯಿಂದ ಗಹಗಹಿಸಿ ನಗುತ್ತಾನೆ. ಆಗ ಭೀಮನು "ನೀಚ ರಾಕ್ಷಸ ಮಾಡಿರುವ ಅನ್ಯಾಯದಿಂದ ನಿನ್ನ ಪಾಪದ ಕೊಡ ತುಂಬಿ ಕೊನೆಗಾಲ ಪ್ರಾಪ್ತವಾಗಿದೆ. ನಾನು ನಿನ್ನನ್ನು ಪೆಡಂಭೂತವಾಗಿ ಕಾಡಿ ಕೊಲ್ಲುತ್ತೇನೆ. ಹಾಗೆ ಹೇಳಿ ಭೀಮನು ರಕ್ಕಸನ ಉದರಕ್ಕೆ ಬಿಗಿದನು. ಇನ್ನಿತರರ ಹೊಟ್ಟೆ ಹೊಡೆದು ನಿನ್ನ ಉಣ್ಣುವ ಆಸೆ ಇಂದೆ ತೀರಿ ಹೋಗಲಿ ಎನ್ನುತ್ತಾ ಕಾಲುಗಳಿಂದ ಬಕಾಸುರನ ಎದೆಗೊದೆದನು. ಮರುತಸುತನನ್ನು ಹಿಡಿದು ಹೊಡೆಯಬೇಕೆನ್ನುವಷ್ಟರಲ್ಲಿ ಪುನಃ ಒಂದು ಪ್ರಹಾರವನ್ನು ತಿನ್ನಬೇಕಾಯಿತು. ದನುಜನು ಸಮೀಪದ ವೃಕ್ಷದಿಂದ ವಾಯುಸುತನನ್ನು ಸಾಕಷ್ಟು ಘಾಸಿಗೊಳಿಸಿದನು. ಹೀಗೆ ಇಬ್ಬರ ಕಾಳಗ ಮುಂದುವರೆಯುತ್ತದೆ. ಭೀಮನು ರಕ್ಷಸನನ್ನು ಎರಡು ಕೈಗಳಿಂದ ಮೇಲೆತ್ತಿ ಗರಗರನೆ ತಿರುಗಿಸಿ ನೆಲಕ್ಕಪಳಿಸುತ್ತಾನೆ ಕೋಪದಿಂದ ಪಾಪಿ ಮಗನೇ, ನಿನ್ನಂತವರು ಬದುಕಿರುವುದೇ ಇನ್ನಿತರರ ರಕ್ತ ಹೀರುವುದಕ್ಕಾಗಿರುತ್ತದೆ. ಸತ್ತು ಹೋಗು ಎಂದು ಬಕರಾಕ್ಷಸನನ್ನು ಬಲವಾಗಿ ತುಳಿದು ಕೊಲ್ಲುತ್ತಾನೆ.

ಜಾಗತೀಕರಣ ಎಂಬ ರಾಕ್ಷಸನನ್ನು ಸಂಹಾರ ಮಾಡುವ ತನಕ ಬಡರಾಷ್ಟ್ರಗಳ ಹಸಿವಿನ ಸಮಸ್ಯೆ ನಿವಾರಣೆಯಾಗದು. ಭಾರತದ ಹಸಿವಿನ ಸಮಸ್ಯೆಗೆ ಕಾರಣವಾಗಿರುವ ಬಂಡವಾಳಶಾಹಿ ರಾಷ್ಟ್ರಗಳ ಕಬಂಧ ವರ್ತಮಾನದ ಜಾಗತಿಕ ಬಿಕ್ಕಟ್ಟುಗಳೇ ಸಾಕ್ಷಿಯಾಗಿದೆ. ತಳ ಸಮುದಾಯಗಳು ಸಿಡಿದೇಳದಿದ್ದರೆ ಪ್ರಭುತ್ವಶಾಹಿ ಸದಾಕಾಲ ಈ ಸಮುದಾಯಗಳು ದೊರಕಬೇಕಾಗಿರುವ ಸೌಲಭ್ಯಗಳನ್ನು ತಾವು ಗಳಿಸಿ ಮೆರೆಯುತ್ತಿರುತ್ತವೆ ಎಂಬ ಸೂಕ್ಷ್ಮ ಅರಿವು ತಿಳಿಯಬೇಕಾಗಿದೆ. ಹಾಗೆ ಮುಂದುವರೆಯುತ್ತಾ ಅರ್ಜುನನು ಪಣದಲ್ಲಿ ದ್ರೌಪದಿಯನ್ನು ಗೆದ್ದು ತನ್ನ ಸಹೋದರನ ಜೊತೆಯಲ್ಲಿ ಸ್ವಗೃಹಕ್ಕೆ ಬರುತ್ತಾನೆ. ರಾಜಗೃಹದಿಂದ ಒಮ್ಮೆಯೇ ತಿರಿದುಂಬುವವರ ಮನೆಗೆ ಬಂದ ಪಾಂಚಾಲೆಯನ್ನು ಕುಂತಿಯು ಹತ್ತಿರ ಕುಳ್ಳಿರಿಸಿ ನಿತ್ಯದ ದಿನಚರಿಯನ್ನು ವಿವರಿಸುತ್ತಾಳೆ. ಅರಸು ಮಗಳಾದ ನಿನಗೆ ಈ ವಾತಾವರಣ ಕಷ್ಟಕರವೆನಿಸಬಹುದು, ಹೊಟ್ಟೆಗೆ ಬೇಕಾದಷ್ಟು ಓಟ್ಟಿಲ್ಲ. ನನ್ನೈದು ಮಕ್ಕಳಲ್ಲಿ ಇವನೊರ್ವ ಎಷ್ಟು ತಿಂದರೂ ಕರಗಿಸಿಕೊಳ್ಳಬಲ್ಲ ದೊಡ್ಡ ಹೊಟ್ಟೆಯವನು. ಬೇಡಿ ತಂದ ನಿನ್ನ ಭಿಕ್ಷಾನ್ನದಲ್ಲಿ ಅರ್ಧವನ್ನು ಅವನಿಗೆ ನೀಡಿ ಉಳಿದ ಅರ್ಧವನ್ನು ನಾವೆಲ್ಲರೂ ಉಂಬಬೇಕು. ನೀನು ಬಂದ ಈ ಶುಭಗಳಿಗೆಯಿಂದಲಾದರೂ ನಮ್ಮಲ್ಲಿ ನಿತ್ಯವಾಸವಾಗಿರುವ ದಾರಿದ್ರ್ಯವು ದೂರವಾಗಿ ಐಶ್ವರ್ಯದದಿದೇವತೆಯಾದ ಶ್ರೀ ಲಕ್ಷ್ಮಿಯು ಪ್ರಸನ್ನಳಾಗಲಿ ಎಂದು ಕುಂತಿಯು ತಮ್ಮ ದಾರಿದ್ರ್ಯತನವನ್ನು ದ್ರೌಪದಿಗೆ ವಿವರಿಸುತ್ತಾಳೆ.

ಅನಂತರ ಪಾಂಡವರು ತಂಗಿದ ಆ ಬಿಡಾರವು ಹರಿಭವನವಾಯಿತು. ದಿನನಿತ್ಯವೂ ಭಿಕ್ಷಾಟನೆ, ಸಂಧ್ಯಾಕಾಲದಲ್ಲಿ ಭಜನೆ, ಪಾರಾಯಣ, ಪೂಜೆಗಳಿಂದ ಮನೆಯ ವಾತಾವರಣ ಹರಿಮಯವಾಯಿತು. ಅರಮನೆಯಲ್ಲಿ ವಿಜೃಂಭಿಸಬೇಕಾದ ರಾಜಕುಮಾರರು ಮುರುಕು ಗುಡಿಸಲಲ್ಲಿ ಬೇಡಿ ಸಂಪಾದಿಸಿದ ವಾರಾನ್ನವನ್ನು ಭುಂಜಿಸಿ ಅರೆಹೊಟ್ಟೆಯಲ್ಲಿ ಮಲಗುತ್ತಿದ್ದರು.ಮುಂದೆ ಕುಂತಿಯು ಶ್ರೀಕೃಷ್ಣನ ಸಹಾಯ ಹಸ್ತವನ್ನು ಬಯಸುತ್ತಾಳೆ. "ವಾಸುದೇವ–ಧರೆಯಲ್ಲಿ ಹೆಸರಾಂತ ಚಕ್ರವರ್ತಿ ವಂಶದಲ್ಲಿ ಜನಸಿ ಬಂದರೂ ನನ್ನೀ ಕುಮಾರರು ಪಡಬಾರದ ಪಾಡನ್ನನುಭವಿಸಿದರು. ಅವರ ಹಣೆಯಬರಹ ಚೆನ್ನಾಗಿಲ್ಲವೋ ಏನೋ ಮಕ್ಕಳು ಮೈಮರೆಸಿಕೊಂಡು ಅರೆಹೊಟ್ಟೆಯಲ್ಲಿ ದರಿದ್ರ ದೇವತೆಯ ಅತಿಥಿಗಳಾಗಿ ಕಳೆದ ದಿನಗಳನ್ನು ಎಣಿಸಿದರೆ ಮೈಜುಮ್ಮೆನ್ನುತ್ತದೆ. ನಿನ್ನ ಕಾಣದ ಕೈಯ ಮಹಿಮೆಯಿಂದಾಲೋ, ಏನೋ, ಕೌರವನು ಇಕ್ಕಿದ ವಿಷಾನ್ನದಿಂದ, ಬೆಂಕಿಯ ಮಧ್ಯದಿಂದಲೇ ಪಾರಾಗಿ ಬದುಕಿದ್ದಾರೆ." ಹೀಗೆ ತನ್ನ ಅಳಲನ್ನು ಕುಂತಿ ಕೃಷ್ಣನ ಮುಂದೆ ತೋಡಿಕೊಳ್ಳುತ್ತಾಳೆ. ಇದು ಪಾಂಡವರ ಹಸಿವಿನ ದಾರಿದ್ರ್ಯತೆಯ ಸ್ಥಿತಿ. ಇದು ಕೇವಲ ಪಾಂಡವರ ಸ್ಥಿತಿಯಲ್ಲ. ಅಂದಿನ ಸಮಾಜದ ಹಸಿವಿನ ಸ್ಥಿತಿಯಾಗಿದೆ. ಕಾವ್ಯಾತ್ಮಕವಾಗಿ ಹೇಳುವುದಾದರೆ, ಕಾಲದ ಹಸಿವಿನ ಕಥನ ಎಂದೇ ಹೇಳುತ್ತೇವೆ.

ಕುಂತಿಯು ಹೇಳುವ ಹಾಗೆ "ಅರೆಹೊಟ್ಟೆಯಲ್ಲಿ ದರಿದ್ರ ದೇವತೆಯ ಅತಿಥಿಗಳು" ಎಂಬ ಹಸಿವಿನ ಸೂಚನೆಗಳು ಮಹಾಭಾರತದ ಕಾಲದಿಂದಲೂ ಈ ಭಾರತಕ್ಕೆ ಅಂಟಿದ ಹಸಿವಿನ

ದಾರಿದ್ರತೆ. ಹಸಿವು ದ್ವೇಷವಾಗಿ ಪರಿವರ್ತನೆಗೊಳ್ಳುವ ಕೆಲವು ಸಂದರ್ಭಗಳು ಮಹಾಭಾರತದಲ್ಲಿ ಕಾಣುತ್ತೇವೆ. ಇದಕ್ಕೆ ಈ ಸಂದರ್ಭ ಮತ್ತೊಂದು ಸಾಕ್ಷಿಯಾಗಿದೆ. ಎಲ್ಲಾ ಅವಮಾನಗಳನ್ನು ಸಹಿಸಿಕೊಂಡ ಪಾಂಡವರು ಕೊನೆಯದಾಗಿ ಧರ್ಮರಾಯನ ಮನದಿಚ್ಛೆಯಂತೆ ಸಂಧಾನಕ್ಕೆ ಕೃಷ್ಣನನ್ನು ದುರ್ಯೋಧನನ ಹತ್ತಿರಕ್ಕೆ ಕಳುಹಿಸುವ ಯೋಚನೆ ಬಂದಾಗ ದ್ರೌಪದಿಯಾಡುವ ಮಾತುಗಳು ತುಂಬ ಕಠೋರವಾಗಿವೆ. ಓರ್ವ ತರುಣಿಗೆ ಒಬ್ಬನೇ ಪತಿಯಿದ್ದರೂ ಆಕೆಯ ಮಾನರಕ್ಷಣೆಗೆ ಹರಣವನ್ನಾದರೂ ಅರ್ಪಿಸುತ್ತಾನೆ. ನೀವೈವರೂ ಇದ್ದೂ ಕುರುಸಭೆಯಲ್ಲಿ ನನ್ನ ಜೀವನ್ಮರಣಾವಸ್ಥೆ ಯನ್ನು ಕಂಡು ಆನಂದಿಸಿದ್ದೀರಿ. ನಾನು ಸ್ವಪ್ನಲೋಕದಲ್ಲಿ ಇಲ್ಲ ತಾನೇ? ಇಲ್ಲದಿದ್ದರೆ ಸತ್ಯಕ್ಕಾಗಿ ಕದನದಲ್ಲಿ ಕಾದುವುದನ್ನು ಬಿಟ್ಟು ಐದೂರುಗಳನ್ನು ಭಿಕ್ಷೆ ಬೇಡಲು ಹರಿಯನ್ನು ಕಳುಹಿಸಲು ತೀರ್ಮಾನಿಸಿರುವಿರಿ. ಒಂದೊಮ್ಮೆಗೆ ರಾಜ್ಯ ದೊರಕಿದರೂ ದುಷ್ಟ ಕೌರವನು ಮತ್ತು ಭೀಮಸೇನನು ಬಂದು ಕೂಡಿ ಬದುಕಲಸಾಧ್ಯ ಮನದೊಳಗೆ ಕುದಿಯುತ್ತಿರುವ ರೋಷವನ್ನು ಮರೆತು ನೀವು ಸನ್ಯಾಸಿಗಳಾಗಲು ಹೊರಟಿರಿ. ಹೀಗೆ ತನ್ನ ಮನದ ನೋವುಗಳನ್ನು ತಿಳಿಸುತ್ತಾಳೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ದ್ರೌಪದಿಗೆ ಹಸಿವಿಗಿಂತ ಅವಮಾನವೇ ಮುಖ್ಯವಾಗುತ್ತದೆ. ಹಸಿವನ್ನು ಎದುರಿಸಬಹುದು. ಆದರೆ ಅವಮಾನವನ್ನು ಎದುರಿಸುವುದು ತುಂಬ ಕಷ್ಟ ಎನ್ನುವ ತತ್ವದೊಂದಿಗೆ ದ್ರೌಪದಿಯ ಮಾತುಗಳಾದರೆ, ಎಲ್ಲಾ ದ್ವೇಷಗಳನ್ನು ಮರೆತು ಒಡಲು ತುಂಬಿಸಿಕೊಳ್ಳಲು ದುರ್ಯೋಧನನಿಂದ ಐದು ಹಳ್ಳಿಗಳು ಸಿಕ್ಕರೆ ಸಾಕು ಎಂಬ ಸಿದ್ಧಾಂತ ಪಾಂಡವರದಾಗಿರುತ್ತದೆ. ಹಸಿವು, ಅವಮಾನ ನಮ್ಮ ದೇಶಕ್ಕೆ ಶತಶತಮಾನಗಳಿಂದ ಅಂಟಿದ ರೋಗವಾಗಿದೆ. ಇದು ಎಂದಿಗೂ ವಾಸಿಯಾಗದ ಕಾಯಿಲೆಯಾಗಿದೆ.

ಹೀಗೆ ಪಾಂಥವರು ಹದಿನಾಲ್ಕು ವರ್ಷಗಳ ಕಾಲ ಹಸಿವಿನ ದಾರಿದ್ರ್ಯವನ್ನು ಅನುಭವಿಸುತ್ತಾರೆ. ಪ್ರತಿದಿವಸ ಅನ್ನಕ್ಕಾಗಿ ಪಡುವ ಭಾದೆಗಳು ಅಷ್ಟಿಷ್ಟಲ್ಲ. ಅವರ ತಪಸ್ಸು ಕೂಡ ಹಸಿವಿನ ಚಿಂತೆಯಾಗಿದೆ. ಶಿವನನ್ನು ಒಲಿಸಿಕೊಳ್ಳಲು ಅರ್ಜುನನು ಮಹರ್ಷಿ ವೇದವ್ಯಾಸರ ವಾಕ್ಯಗಳನ್ನು ಶಿರಸಾವಹಿಸಿ ಅರ್ಜುನ ಹೊರಡಲು ಅನುವಾಗುತ್ತಾನೆ. ಋಷಿಮುನಿಗಳಿಂದ ಹರಿಕೆಯನ್ನು ಹೊತ್ತು ಅಣ್ಣಂದಿರ ಕಾಲ್ಗಳಿಗೆ ನಮಿಸಿದನು. ದ್ರೌಪದಿಯು ಪತಿದೇವರಿಗೆ ಮಂಗಳಾರತಿಯನ್ನು ಬೆಳಗಿದಳು. ಶುಭಗಳಿಗೆಯಲ್ಲಿ ಪರ್ಣಶಾಲೆಯಿಂದ ಗಾಂಢೀವಿಯು ಹೊರಟನು. ಆತ್ಮರಕ್ಷಣೆಗಾಗಿ ಸೊಂಟದಲ್ಲಿ ಹರಿತವಾದ ಕಠಾರಿ, ಬೆನ್ನಲಿ ಬತ್ತಳಿಕೆ. ಮಂತ್ರಾಸ್ತ್ರಗಳು, ಮತ್ತು ಎಡಗೈಯಲ್ಲಿ ಗಾಂಢೀವ ಧನಸ್ಸುವನ್ನು ಧರಿಸಿ ಅರ್ಜುನನು ಒಮ್ಮೆ ಆಶ್ರಮದತ್ತ ದೃಷ್ಠಿ ಬೀರಿ ಭಗವಾನ್ ಶ್ರೀಕೃಷ್ಣನನ್ನು ಮನಸಾರೆ ವಂದಿಸಿ ಗಂಭೀರ ಹೆಜ್ಜೆಗಳನ್ನಿಡುತ್ತಾ ಮುಂದೆ ಸಾಗಿದನು. ಹಗಲು ರಾತ್ರಿಯೆನ್ನದೆ ಕಾಲ್ನಡಿಗೆಯಿಂದ ದುರ್ಗಮವಾದ ಕಾಡನ್ನು ದಾಟಿದನು. ಭೃಗುತುಂಗ ಕ್ಷೇತ್ರದಲ್ಲಿ ಉಪವಾಸ ವ್ರತಸ್ಥನಾಗಿ ಒಂದು ರಾತ್ರಿ ಅಲ್ಲಿರುವ ಬ್ರಾಹ್ಮಣರಿಗೆ ತನ್ನ ಮನೋದ್ದೇಶವನ್ನು

ವಿಶಧೀಕರಿಸಿದನು. ಹರಿಯುತ್ತಿರುವ ನದಿಗಳಲ್ಲಿ ಮುಂಜಾನೆ ಸ್ನಾನ, ಭಗವಂತನ ಧ್ಯಾನ, ವನವೃಕ್ಷಗಳಿಂದ ಫಲವು ಲಭಿಸಿದರೆ ಆಹಾರ ಸ್ವೀಕಾರ, ಇಲ್ಲದ್ದಿದ್ದರೆ ಬರೀ ಹೊಟ್ಟೆಯಿಂದಿರುತ್ತಿದ್ದನು. ಗುರುಹಿರಿಯರ ಅಪೇಕ್ಷೆಯಂತೆ ಶಿವನೊಲುಮೆಯನ್ನು ಪಡೆಯುವ ಒಂದೇ ಹಟ. ಅನೇಕ ಗಿರಿಕಂದರಗಳನ್ನು ಹಾದು ಗಂಧಮಾದವ ಪರ್ವತವನ್ನು ದಾಟಿ ಪುಣ್ಯಸ್ಥಳವಾದ ಇಂದ್ರ ಕೀಲಕದ ನೆಲದಲ್ಲಿ ಕಾಲಿರಿಸಿದನು. ಅಂದರೆ ಇಲ್ಲಿ ತಪಸ್ಸು ಕೂಡ ಹಸಿವಿನ ಪರಿಹಾರವೆ ಆಗಿರುತ್ತದೆ.

ಹಾಗೇ ಇಡೀ ಮಹಾಭಾರತ ಸೂತ್ರದಾರನಾದ ಶ್ರೀಕೃಷ್ಣ ದ್ರೌಪದಿಯ ಭಕ್ತಿಗೆ ಮುಗುಳ್ನಕ್ಕುತ್ತಾ ತಂಗಿ ಏನಿದು? ಯಾದವ ನಗರಿಯಿಂದ ನಿಮ್ಮನ್ನು ನೋಡಲು ಓಡಿ ಓಡಿ ಇಲ್ಲಿಗೆ ಬಂದಿದ್ದೇವೆ. ಅನ್ನ ಪಾನಗಳನ್ನು ನೀಡದೆ ನನ್ನೀ ಚರಣಗಳನ್ನು ಹೊಗಳುತ್ತಿರುವೆ. ಹೀಗೂ ಇದೆಯೇ ಇನ್ನು ಮುಂದಕ್ಕೆ ನಿನ್ನಂತೆ ಪ್ರತಿಯೊಬ್ಬನು ಬಂದ ಅತಿಥಿಗಳಿಗೆ ತೃಷೆ ಭೋಜನಗಳನ್ನಿಯದೆ ಹೋಗಳುತ್ತಾ ಇದ್ದರೆ ಆಗಮಿಸಿದವನು ಹಸಿದು ಸಾಯಬೇಕಾದೀತು ಹೊಟ್ಟೆ ಚುರುಚುರು ಎನ್ನುತ್ತಿದೆ ಏನಾದರೂ ಕೊಡು ಎಂದು ಕೇಳುತ್ತಾನೆ. ದ್ರೌಪದಿ ಒಮ್ಮೆ ನಿಟ್ಟುಸಿರು ಬಿಟ್ಟಳು. ದೂರ್ವಾಸರ ಹಸಿವನ್ನು ಪ್ರಾರ್ಥಿಸಿದರೆ ಅವನೇ ಬಂದು ತನಗೂ ಹಸಿವಾಗುತ್ತಿದೆ ಎನ್ನುತ್ತಾನಲ್ಲ– ಎಂದು ಚಿಂತಿಸಿದಳು. ಪಾಪ! ಕಣ್ಣಿಗೆ ಬಟ್ಟೆ ಕಟ್ಟಿ ಅವಳನ್ನು ಕಾನನದಲ್ಲಿ ಬಿಟ್ಟಂತಾಯಿತು. ತೊಳೆದಿಟ್ಟ ಕಾಂಚನ ಪಾತ್ರೆಯನ್ನು ಭಾವಶುದ್ಧಿಯಿಂದ ಶ್ರೀಕೃಷ್ಣನ ಮುಂದಿಟ್ಟಳು. ಸೂರ್ಯನಿಂದ ದತ್ತವಾದ ಅಕ್ಷಯ ಪಾತ್ರೆಯನ್ನು ಶ್ರೀಕೃಷ್ಣನು ಸ್ವೀಕರಿಸುತ್ತಾನೆ. ಇಲ್ಲಿ ನನ್ನ ಮನಸ್ಸಿಗೆ ಬರುವ ವಿಷಯವೆಂದರೆ ಅಕ್ಷಯಪಾತ್ರೆಯ ಹಿನ್ನೆಲೆಯಲ್ಲಿ ಹಸಿವಿನ ಚಿಂತನೆ ಇದೆ ಎಂಬುದರ ಜೊತೆಗೆ, ಶ್ರೀಕೃಷ್ಣನಿಗೆ ಈ ಹಸಿವಿನ ಸಮಸ್ಯೆ ಎದುರಾದರೆ, ಇನ್ನೂ ಸಾಮಾನ್ಯ ವ್ಯಕ್ತಿ, ಸಮುದಾಯಗಳ ಗತಿಯೇನು?

ಹಾಗೆ ಮುಂದುವರಿಯುತ್ತಾ ಶ್ರೀಕೃಷ್ಣನು ದ್ರೌಪದಿಯನ್ನು ಕುರಿತು "ಏನೇ ಇದು, ಏನಿಲ್ಲಾ ಎನ್ನುತ್ತಿರುವೆಯಲ್ಲಾ" ಅವನು ಪಾತ್ರೆಯ ಒಳಮೈಯನ್ನು ಕೈಯಿಂದ ಸವರಿ ಕಿಂಚಿತ್ ಶೇಷಾನ್ನವನ್ನು ಉಂಡ ಹಾಗೆ ನಟಿಸಿದನು. ನನ್ನ ಪಾಲಿಗೆ ಅಷ್ಟೇ ಸಾಕು ಎಂದು ಅದನ್ನು ಶ್ರೀಕೃಷ್ಣನು ತೃಪ್ತಿಯಿಂದ ಸವಿದು ತೇಗಿದಾಗಿ ಕ್ಷುಭಾದೆಯು ನಿವಾರಿಸಲ್ಪಟ್ಟಿತು. ಅವನು ಅದರಿಂದ ಪ್ರಸನ್ನವಾಗಿ ದ್ರೌಪದಿಯನ್ನು ಪ್ರಶಂಸಿಸಿದನು. ಶ್ರೀ ಕೃಷ್ಣನು ತಿಂದು ತೇಗಿದನೋ ಇಲ್ಲವೋ, ನದಿತೀರದಲ್ಲಿದ್ದ ದೂರ್ವಾಸರ ಮತ್ತು ಋಷಿವೃಂದದ ಹಸಿವು, ತೃಷೆಗಳಡಗಿ ಹೊಟ್ಟೆ ಬೆಳೆದು ಕೊರಳಿಗೆ ಮುಟ್ಟಿತು. ದೂರ್ವಾಸರು ಅಚ್ಚರಿಪಡುತ್ತಾ ದಿವ್ಯದೃಷ್ಟಿಯಿಂದ ನೋಡಿ ಶ್ರೀಕೃಷ್ಣನಲೀಲೆಯಿದೆಂದು ಮನವರಿಕೆ ಮಾಡಿಕೊಂಡರು. ಕೌರವನ ಮಾತಿಗೆ ಮನ್ನಣೆ ಕೊಟ್ಟು ಸಜ್ಜನರಾದ ಪಾಂಡವರನ್ನು ಪರೀಕ್ಷೆ ಮಾಡುವುದಕ್ಕೆ ಹೊರಟದ್ದಕ್ಕಾಗಿ ನಾಚಿಕೆಯಿಂದ ಶಿಷ್ಯರ ಸಮೇತ ಧರ್ಮರಾಯನ ಆಶ್ರಮಕ್ಕೆ ಧಾವಿಸಿದರು. ಮುನಿಗಳು ಆಗಮಿಸಿದ ಕೂಡಲೇ ಶ್ರೀಕೃಷ್ಣನು, ಶ್ರೀಧರ್ಮಜ–

ಮುನಿಜನರು ಸ್ನಾನಾದಿಗಳನ್ನು ಮುಗಿಸಿ ಚಿತ್ತೈಸಿದ್ದಾರೆ. ಎಲೆ ಹಾಕಿ ಮೃಷ್ಟನ್ನ ಬಡಿಸಿರಿ, ದ್ರೌಪದಿ ನೀರು ತಾ, ಅವರಿಗೆ ಮಣೆ ಹಾಕಿರಿ ಎಂದು ಋಷಿಪುಂಗವರಿಗೆ ಕೇಳಿಸುವಂತೆ ಹೇಳುತ್ತಾನೆ. ಋಷಿಗಳಿಗೆ ವಾಸುದೇವನ ವ್ಯಂಗ್ಯೋಕ್ತಿ ಅರ್ಥವಾಯಿತು. ದೂರ್ವಾಸರು ಶ್ರೀಕೃಷ್ಣನನ್ನು ನೋಡಿ' ಮುರಹರಿ ನಿನ್ನ ನುಡಿಗಳ ಸ್ಪಷ್ಟ ಮನವರಿಕೆ ನನಗಾಗಿದೆ. ನಾವು ಪಾಂಡವರನ್ನು ಪರೀಕ್ಷೆಗೆ ಒಳಪಡಿಸುವುದಕ್ಕೆ ನೀನು ಅಂತರ್ಯದಲ್ಲಿ ಅಸಮಾಧಾನ ಹೊಂದರುವೆಯಾದರೂ ನಮ್ಮ ಸಮಕ್ಷಮ ಸ್ವಾಗತದ ನಟನೆಯನ್ನು ಮಾಡುತ್ತಿರುವೆ. ವೃಕ್ಷದ ಎಲೆಗಳಾಗಲಿ, ಶಾಖೆಗಳಾಗಲಿ, ನೀರನ್ನು ಕುಡಿಯಬೇಕಾದ್ದಿಲ್ಲ. ಬೇರು ನೀರನ್ನು ಉಂಡರೆ ಸಾಕು. ಹಾಗೆಯೇ ಭೂಮಿಯಲ್ಲಿ ಜನಿಸಿರುವ ಶಾಖೋಪಶಾಖೆಗಳಿಗೆ ನೀನೆ ಬೇರಾಗಿರುವೆ. ನಿನ್ನ ಭೋಜನವೇ ನಮ್ಮ ಭೋಜನ ನೀನೊಬ್ಬನೇ ಉಂಡು ನಮಗೆ ಮೃಷ್ಟಾನ್ನದ ತೇಗು ಬರುವ ಹಾಗೆ ಮಾಡುತ್ತಿರುವೆ. ಹೊಟ್ಟೆ ದೊಡ್ಡದಾಗಿದೆ. ನಮ್ಮ ಈ ರೋಗವನ್ನು ಉಪಶಮನವಾಗುವಂತೆ ಮಾಡು. ಈ ಪ್ರದರ್ಶನದಲ್ಲಿ ನಾನು ಸೋತಿದ್ದೇನೆ. ಕೌರವರ ಉಪಚಾರಕ್ಕೆ ಮರುಳಾಗಿ ಪಾಂಡವರ ಪರೀಕ್ಷೆ ಮಾಡಲು ಬಂದಿರುವುದು ಅಕ್ಷಮ್ಯ ಅಪರಾಧವಾಗಿದೆ. ಹುಣ್ಣಿಮೆ ಚಂದ್ರನಂತಿರುವ ಧರ್ಮರಾಯನ ಗುಣರಾಶಿಯ ಮುಂದೆ ನಾವು ತಲೆಬಾಗಲೇಬೇಕು.

ಈ ಮೇಲಿನ ಘಟನೆಯು ತುಂಬ ಧಾರುಣ್ಯತೆಯಿಂದ ಕೂಡಿದ್ದಾಗಿದೆ. ಋಷಿಮುನಿಗಳು ಪಾಂಥವರನ್ನು ಭೇಟಿಯಾದಾಗ, ಪಾಂಡವರ ಹಸಿವಿನ ದಾರುಣ್ಯಸ್ಥಿತಿ ಗೋಚರವಾಗುತ್ತದೆ. ಬಂದ ಋಷಿಮುನಿಗಳಿಗೆ ಹಸಿವನ್ನು ನೀಗಿಸಲಾರದಷ್ಟು ದಾರಿದ್ರತೆ ಪಾಂಥವರಿಗೆ ಎದುರಾಗಿರುತ್ತೆ. ಇದೇ ಸಂದರ್ಭದಲ್ಲಿ ಕೃಷ್ಣನ ನಾಟಕೀಯ ಮಾತುಗಳು, ಕೊನೆಗೆ ಸಂದರ್ಭವನ್ನರಿತ ಋಷಿಮುನಿಗಳು, ಮತ್ತೆ ಕೃಷ್ಣನ್ನು ಈ ಹಸಿವಿನ ರೋಗದಿಂದ ಮುಕ್ತಗೊಳಿಸು ಪ್ರಭುವೇ ಎಂದು ಬೇಡಿಕೊಳ್ಳುತ್ತಾರೆ. ಕೌರವರ ಉಪಚಾರಕ್ಕೆ ಮರುಳಾಗಿ ಪಾಂಡವರ ಪರೀಕ್ಷೆ ಮಾಡಲು ಬಂದಿರುವುದು ಅಕ್ಷಮ್ಯ ಅಪರಾಧವಾಗಿದೆ. ಎಂದು ಮನವರಿಕೆ ಮಾಡಿಕೊಳ್ಳುತ್ತಾರೆ. ಇವತ್ತಿಗೂ ಎಷ್ಟೋ ಗ್ರಾಮಗಳು ಹಸಿವಿನಿಂದ ಬಳಲುತ್ತಿದ್ದರೂ, ಅವರ ಗುಣಶ್ರೀಮಂತಿಕೆಗೆ ನಾವು ತಲೆಬಾಗಲೇಬೇಕು. ಹಸಿವಿನಿಂದ ತಮ್ಮ ಮನಸ್ಥಿತಿಗಳನ್ನು ಕೆಡಿಸಿಕೊಳ್ಳದೆ, ದೈವದ ಮೊರೆಹೋಗಿ ತಮ್ಮ ಆಂತರ್ಯದ ಗುಣಶೀಲತೆಯನ್ನು ಮೆರೆಯುವ ಎಷ್ಟೋ ಸಮುದಾಯಗಳು ಮಹಾಭಾರತ ಕಾಲದಿಂದಲೂ, ಇಂದಿನ ಜನ್ಮದ ಶಾಪವೆಂದು ಪರಿಗಣಿಸಿ, ತಮ್ಮ ಗುಣಶೀಲತೆಯನ್ನು ಕಳೆದುಕೊಂಡಿಲ್ಲ. ಹಸಿವಿಗಿಂತ ಗುಣಶೀಲತೆ ಶ್ರೇಷ್ಠ ಎಂಬ ತತ್ವದೊಂದಿಗೆ ಭಾರತದ ಗ್ರಾಮ ಜೀವನದ ಬದುಕಾಗಿತ್ತು. ಆದರೆ ಇವತ್ತಿನ ಹಸಿವಿನ ಹೆಚ್ಚಳಕ್ಕೆ ಹಲವಾರು ಕಾರಣಗಳಿವೆ.

ಹೀಗೆ ಮುಂದುವರಿಯುತ್ತಾ ಮತ್ತೊಂದು ಪ್ರಸಂಗ ಎದುರಾಗುತ್ತದೆ. ಅದು ಶ್ರೀಕೃಷ್ಣನ ಸಹಾಯ ಯಾಚಿಸಲು ದುರ್ಯೋಧನ ಮತ್ತು ಅರ್ಜುನನು ಶ್ರೀಕೃಷ್ಣನ ಬಳಿಗೆ ಬರುತ್ತಾನೆ.

ನಿದ್ರಾವಸ್ಥೆಯಲ್ಲಿದ್ದ ಶ್ರೀ ಕೃಷ್ಣನ ಕಾಲಿನ ಬಳಿ ಅರ್ಜುನನು ಕುಳಿತುಕೊಳ್ಳುತ್ತಾನೆ. ತಲೆಯ ಬಳಿ ದುರ್ಯೋಧನನು ಕುಳಿತುಕೊಂಡಿರುತ್ತಾನೆ. ನಿದ್ದೆಯಿಂದ ಎಚ್ಚರಗೊಂಡ ಶ್ರೀಕೃಷ್ಣನು ಮೊದಲು ಅರ್ಜುನನ್ನು ನೋಡುತ್ತಾನೆ. ಅನಂತರ ತಲೆ ತಿರುಗಿಸಿ, ಹಿಂದೆ ಕುಳಿತಿದ್ದ ದುರ್ಯೋಧನನ್ನು ಹರಿಯು ಕಂಡು ವಿಚಾರಿಸುತ್ತಾನೆ. ಇಬ್ಬರೂ ಸಹಾಯ ಯಾಚನೆಗೆ ಬಂದಿರುವುದನ್ನು ತಿಳಿದ ಶ್ರೀಕೃಷ್ಣನು ಮೊದಲು ತಾನು ಕಂಡ ಅರ್ಜುನನಿಗೆ ಸಹಾಯ ಮಾಡುತ್ತೇನೆ ಎಂದು ಹೇಳುತ್ತಾ ಎರಡು ವಿಚಾರಗಳನ್ನು ಪ್ರಸ್ತಾಪಿಸುತ್ತಾನೆ. ಶ್ರೀ ಕೃಷ್ಣನು ಅರೆಗಳಿಗೆ ಯೋಚಿಸಿ "ಆಗಲಿ ಕಾಲವನ್ನು ಯಾರೂ ಮೀರಲಾರರು. ಸಂಧಿಗಾಗಿ ನನ್ನ ಬಳಿ ಬಂದಿರುವೆ. ಆದರೆ ನಾನು ಶಯನದಿಂದೆದ್ದಾಗ ಅರ್ಜುನನ್ನು ಪ್ರಥಮವಾಗಿ ವೀಕ್ಷಿಸಿದೆ ಇಬ್ಬರೂ ಪ್ರಾಥಮ್ಯಕ್ಕೆ ಅರ್ಹರಾಗುತ್ತೀರಿ. ಆದುದರಿಂದ ಧರ್ಮಪ್ರಕಾರ ನಾನು ಈರ್ವರಿಗೂ ಸಹಾಯ ಮಾಡಬೇಕಾಗಿದೆ. ದೇಹಿ ಎಂದು ಕೇಳಿದವನಿಗೆ 'ನಾಸ್ತಿ ಎನ್ನಲಾಗದು. ಅರ್ಜುನನ್ನು ವಯಸ್ಸಿನಲ್ಲಿ ನಿನಗಿಂತ ಕಿರಿಯವನು. ಅವನ ಅಭಿಷ್ಟವನ್ನು ನಾನು ಮೊದಲಿಗೆ ನೆರವೇರಿಸಬೇಕಾಗಿದೆ. ಈಗ ನನ್ನಲ್ಲಿ ದೇಹಶಕ್ತಿ ಸಂಪೂರ್ಣ ವ್ಯಯವಾಗಿದೆ. ಧರಿತ್ತಿಯಲ್ಲಿದ್ದ ದುಷ್ಟ ದಾನವರನ್ನು ಕೊಂದು ಸುದರ್ಶನ ನಿಷ್ಪ್ರಯೋಜಕವಾಗಿದೆ. ಖೂಳಖಳರನ್ನು ಕೊಲ್ಲುವ ಕಥೊದಿಂದ ಮುನ್ನಡೆದರೆ ನನ್ನ ಶರೀರ ಹೇಳಿದಂತೆ ಸಹಕರಿಸುವುದಿಲ್ಲ. ನಾನು ಇಂದು ಹೊಡೆದಾಡುವ ಭಟನಲ್ಲ, ಉಂಡಾಡುವ ಭಟನಾಗಿದ್ದೇನೆ. ಹೀಗಿದ್ದರೂ ನಾನು ಒಂದು ಪಕ್ಷದಲ್ಲಿ ಇರಬಯಸುತ್ತೇನೆ."

ಇನ್ನು ನಮ್ಮ ಅತಿ ಭಯಂಕರವಾದ ಯದುಸೈನ್ಯವು ಸಂಖ್ಯೆಯಲ್ಲಿ ಏಳು ಅಕ್ಷೋಹಿಣಿಯಷ್ಟಿರಬಹುದು. ಅವರು ರಣಭಯಂಕರರು ಮತ್ತು ಯುದ್ಧವಿಶಾರದರು. ಅವರು ರಣಭಯಂಕರರು ಮತ್ತು ಯುದ್ಧವಿಶಾರದರು. ಅವರ ಅಧಿಪತಿಯಾಗಿರುವ ಸಂಗ್ರಾಮಪ್ರವೀಣ ನನ್ನ ಅಣ್ಣ ಬಲರಾಮದೇವರು ಅಂತಿಂತವರಲ್ಲ. ಮುನಿದರೆ ಮುಕ್ಕಣ್ಣನನ್ನು ಸೋಲಿಸುವ ಮಹಾಶಕ್ತಿವಂತರೂ, ಆ ಪ್ರಳಯಭಯಂಕರ ಸೈನ್ಯ ಸಮೇತ ಅಣ್ಣ ಬಲಭದ್ರದೇವನು ಇನ್ನೊಂದು ಪಕ್ಷದಲ್ಲಿರುವರು. ಅರ್ಜುನ, ಈ ಎರಡು ಪಕ್ಷಗಳಲ್ಲಿ ನಿನಗೆ ಯಾವುದು ಪ್ರಿಯವಾಗ ಬಹುದೆನ್ನುವುದನ್ನು ನೀನು ನಿಶ್ಚಯಿಸಿಕೊ ಎಂದು ಹೇಳುತ್ತಾನೆ. ಆಗ ಅರ್ಜುನನು ಭಗವನ್ ವಾಸುದೇವ– ಇಂದ್ರಪ್ರಸ್ಥವನ್ನು ಕಳೆದುಕೊಂಡು ಕಾಡನ್ನು ಸೇರಿದ ನಮಗೆ ತಿರಿದುಣ್ಣುವುದು ವೃತ್ತಿಯಾಗಿದೆ. ಒಂದು ವೇಳೆ ನಾವು ನಿನ್ನಣ್ಣನನ್ನು ಮತ್ತು ಆ ನಾರಾಯಣೀ ಸೈನ್ಯವನ್ನು ನಾವು ಸಾಕಲು ಅಶಕ್ತರು. ತಿರಿದುಂಬುವ ನಮಗೆ ಉಂಡಾಡುವ ಭಟ್ಟ ನೀನೊಬ್ಬನೇ ಸಾಕು ಎಂದು ಅರ್ಜುನನು ತಮ್ಮ ದಾರಿದ್ರ್ಯತನವನ್ನು, ಈ ರೀತಿಯಾಗಿ ತಿಳಿಸುತ್ತಾನೆ. ತಾವು ಕಾಡುವಾಸದಲ್ಲಿ ಭಿಕ್ಷೆಬೇಡಿ ಜೀವನಸಾಗಿಸಿರುವುದಾಗಿ ತನ್ನ ಹೀನಾಯ ಪರಿಸ್ಥಿತಿಯನ್ನು ಈ ಸಂದರ್ಭದಲ್ಲಿ ಅರ್ಜುನನು ವ್ಯಕ್ತಪಡಿಸುತ್ತಾನೆ.

೩.೩ ರಾಮಾಯಣದಲ್ಲಿ ಹಸಿವಿನ ಹಪಹಪಿಕೆಗಳು

ವಾಲ್ಮೀಕಿ ಮುನಿ ವಿರಚಿತ ಆದಿ ಕಾವ್ಯವನ್ನು ಆಧರಿಸಿ, ಈವರೆಗೆ ಬಹಳಷ್ಟು ರಾಮಾಯಣಗಳು ಹೊರಬಂದಿವೆ. ಸಂಸ್ಕೃತ ಭಾಷೆಯಲಂತು ಈ ಕಾವ್ಯದ ಆಧಾರ ಮೇಲೆ ಹುಟ್ಟಿರುವ ದಿವ್ಯ ಪ್ರಬಂಧಗಳು, ಚಂಪೂಗಳು, ಸ್ತೋತ್ರಗಳು, ಕೀರ್ತನೆಗಳು ಮೊದಲದ ನಾನಾ ಬಗೆಯ ಕಾವ್ಯ ಕೃತಿಗಳಿಗೆ ಕೊನೆ ಮೊದಲೇ ಇಲ್ಲ ಭಾಸ ಕಾಳಿದಾಸಾದಿ ಕವಿಗಳು ಸೇರಿ ನೂರಾರು ಮಂದಿ ಸಂಸ್ಕೃತದಲ್ಲಿ ರಾಮಚರಿತ್ರೆಯನ್ನು ವಿಧವಿಧವಾಗಿ ಬಣ್ಣಿಸಿದ್ದಾರೆ. ಇನ್ನೂ ರಾಮಾಯಣ ಕುರಿತು ಕನ್ನಡ ಜನಪದ ಸಾಹಿತ್ಯದಲ್ಲಿ ಅಪಾರವಾದ ಸಾಮಗ್ರಿ ಲಭ್ಯವಾಗುತ್ತದೆ. ಪುರಾಣ, ಐತಿಹ್ಯ, ಗೀತೆ, ಲಾವಣಿ ಕಾವ್ಯಗಳ ರೂಪದಲ್ಲಿ ಸಿಗುವ ಈ ಸಾಮಾಗ್ರಿಯ ಸಕ್ರಮ ಸಂಗ್ರಹವಾಗಲೀ, ಅಧ್ಯಯನವಾಗಲೀ ಇನ್ನು ನಡೆಯಬೇಕಾಗಿದೆ. ಕರ್ನಾಟಕದ ಯಾವ ಮೂಲೆಗೆ ಹೋದರೂ ಪ್ರಕೃತಿಯ ಅದ್ಬುತಗಳಿಗೆ ಆರೋಪಿಸಿ ರಾಮಾಯಣ ಮಹಾಭಾರತಗಳ ಆದರ್ಶ ವ್ಯಕ್ತಿಗಳ ಅನೇಕ ಕಥೆಗಳನ್ನನು ಹೇಳಲಾಗುತ್ತದೆ. ಚುಂಚನಕಟ್ಟೆ ಕ್ಷೇತ್ರದಲ್ಲಿ ಸೀತಾದೇವಿ ಮಿಂದನೆಲೆ, ಬಾಯಾರಿಕೆಗೆ ಅತ್ತಿಗೆಗೆ ನೀರನ್ನು ಒದಗಿಸಲು ಬಂಡೆಗೆ ಬಾಣವನ್ನು ಎಸೆದು ಲಕ್ಷ್ಮಣ ನೀರು ತರಿಸಿದ ಮೇಲುಕೋಟೆಯ ಧನುಷ್ಕೋಟಿ ಇಂಥ ನೂರಾರು ಕಥೆಗಳು ಕನ್ನಡ ನಾಡಿನಲ್ಲಿ ರಾಮಾಯಣದ ಜನಪ್ರಿಯತೆಯನ್ನು ಸಾದರ ಪಡಿಸುತ್ತವೆ. ಪ್ರಕೃತಿಯ ಮೈಯಲ್ಲಿ ಈ ಪುರಾಣ ಪುರುಷರನ್ನು ಸಾಕ್ಷಾತ್ಕರಿಸಿಕೊಂಡು, ಜನ ಸದಾ ತಮ್ಮ ಬದುಕಿಗೆ ಅವರನ್ನು ಆದರ್ಶವಾಗಿ ಇಟ್ಟುಕೊಂಡ ದೃಷ್ಟಿ ನಮ್ಮನ್ನು ಚಕಿತಗೊಳಿಸುತ್ತದೆ. ಜಡ ಪ್ರಕೃತಿ ಅವರ ಕಲ್ಪನೆಯ ಕಣ್ಣಿಗೆ ಎಂಥ ಕಾವ್ಯದ ಕುಸುರಿಯನ್ನು ನೇದಿದೆ ಎಂಬುದನ್ನು ಇಲ್ಲಿ ಕಾಣಬಹುದು. ಪ್ರಕೃತಿಯಲ್ಲಿ ಕಣ್ಣು ಓಡುವ, ಕಿವಿ ಕೇಳುವ ಇಂಥ ಸುಂದರ ಕಥೆಗಳ ವಿವರವಾದ ಅಧ್ಯಯನದ ಕಡೆ ನಾವು ಗಮನ ಹರಿಸಿದರೆ ಇನ್ನು ಅಪೂರ್ವವಾದ ಕಥೆಗಳು ಲಭ್ಯವಾಗಬಹುದು. ವಿವರಣಾತ್ಮಕ ಕಥೆಗಳ ರೂಪದಲ್ಲಿಯೂ ಈ ಮಹಾಕಾವ್ಯದ ಕಥೆಗಳು ಹರಡಿವೆ. ಅಳಿಲಿನ ಮೈಮೇಲೆ ಮೂಡಿರುವ ಮೂರು ಪಟ್ಟೆಗಳಿಗೆ ಜನ ಕಟ್ಟಿರುವ ಕತೆ ಮೋಹಕವಾದುದು.

ಐತಿಹ್ಯ ರೂಪದ ಈ ಕಥೆಗಳ ಜೊತೆಗೆ ಗಾದೆಗಳ ರೂಪದಲ್ಲಿಯೂ ರಾಮಾಯಣದ ಕತೆಗಳು ಹೆಣೆದುಕೊಂಡಿವೆ. ಗಾದೆಗಳಲ್ಲಿ ರಾಮಾಯಣ ಹಾಗೂ ಮಹಾಭಾರತಗಳ ಒಂದು ಹೊಸ ಪ್ರಯೋಗವನ್ನು ಡಿ. ಎಚ್.ಎಂ. ರಾಮಾರಾಧ್ಯರು ಮಾಡಿದ್ದಾರೆ. ಗಾದೆಗಳಂತೆಯೇ ಗೀತೆಗಳಲ್ಲಿಯೂ ರಾಮಾಯಣ ಸಂಬಂಧವಾದ ರಚನೆಗಳು ಹೇರಳವಾಗಿ ದೊರೆಯುತ್ತದೆ. ಹೆಣ್ಣು ಮಕ್ಕಳ ತ್ರಿಪದಿ ಸಾಹಿತ್ಯದಲ್ಲಿ ಅತ್ಯಂತ ಅರ್ಥವತ್ತಾದ ಪದ್ಯಗಳು, ರಾಮಾಯಣ, ಮಹಾಭಾರತಗಳ ಬಗ್ಗೆ ಲಭ್ಯವಾಗುತ್ತದೆ. ಸಮಗ್ರ ರಾಮಾಯಣದ ಕಲ್ಪನೆಯನ್ನು ಮೂಡಿಸುವ ಅದ್ಭುತ ವರ್ಣನೆಗಳ ತ್ರಿಪದಿಗಳು ನಮಗೆ ಸಿಗುತ್ತವೆ. ಎಷ್ಟೋ ವರ್ಷಗಳು ಮೌಖಿಕವಾಗಿದ್ದ ರಾಮಾಯಣ, ಮಹಾಭಾರತ ಕಾವ್ಯಗಳು ಅನಂತರ ಸಂಗ್ರಹಗೊಂಡಿದ್ದು, ಅಂದಿನ ಗ್ರಾಮಸಮಾಜ

ಹಸಿವಿನಿಂದಲೇ ಮುಕ್ತವಾಗಿರಲಿಲ್ಲ. ತಳಸಮುದಾಯಗಳು ಹಸಿವಿನಿಂಲೇ ಬದುಕುತ್ತಿದ್ದವು. ಕಾಡುವಾಸಿಯಾಗಿದ್ದ ರಾಮನಿಗೆ ಇದರ ಪರಿಚಯವಾಗಿರುತ್ತೆ. ಸ್ವತ ರಾಮನಿಗೆ ಇದರ ಅರಿವು ಇದೆ. ಹಸಿವು, ಬಾಯಾರಿಕೆಯಿಂದ ಬಳಲುತ್ತಿದ್ದ ಸೀತೆಗೆ ಲಕ್ಷ್ಮಣ ಬಂಡೆಗೆ ಬಾಣವನ್ನು ಎಸೆದು ನೀರುತರಿಸಿದ ಐತಿಹ್ಯಗಳು ಭಾರತದ ಮೂಲೆ ಮೂಲೆಗಳಲ್ಲಿ ದೊರೆಯುತ್ತದೆ. ಶಾಪಗ್ರಸ್ಥೆಯಾದ ಶಬರಿ ರಾಮನ ದರ್ಶನ ಪಡೆಯುವ ತನಕ ಅಂದರೆ ಶಾಪವಿಮೋಚನೆ ಪಡೆಯುವ ತನಕ ಹಸಿವಿನಿಂದ ಬಳಲುತ್ತಾ ತಪಸ್ಸಿನಲ್ಲಿ ತೊಡಗಿದ್ದು, ಇಂತಹ ಹಸಿವಿನ ಹಪಹಪಿಕೆಗಳು ಕಾವ್ಯದ ಉದ್ದಕ್ಕೂ ಕಂಡಬರುತ್ತದೆ.

ರಾಮಾಯಣ ರಚನೆಗಾರನಾದ ವಾಲ್ಮಿಕಿ ಒಬ್ಬ ಬೇಡನಾಗಿದ್ದು, ಹಸಿವಿನ ನೆಲೆಯಲ್ಲಿ ಬದುಕು ನಡೆಸಿದವನು. ಹಸಿವಿನ ದಿನಗಳನ್ನು ಕಣ್ಣಾರೆ ಕಂಡವನು. ಹಸಿವನ್ನು ನೀಗಿಸಲು ನಿರಂತರ ಬೇಟೆಯಲ್ಲಿ ತೊಡಗಿದವನು. ವಾಲ್ಮೀಕಿಯ ಹುಟ್ಟಿನೊಂದಿಗೆ ಹಸಿವಿನ ಎಳೆಗಳನ್ನು ಕಾಣಬಹುದು. ಅಂದರೆ ತಳಸಮುದಾಯಗಳ ಹಸಿವಿನ ಹಪಹಪಿಕೆಯನ್ನು ಕಾಣಬಹುದು. ಹಸಿವಿನ ಸೂಚನೆಗಳನ್ನು ರಾಮನ ವನವಾಸದ ಸಂದರ್ಭದಲ್ಲಿ ಮೂಡಿಬರುವ ಮಾತುಗಳು ಅವತ್ತಿನ ಗ್ರಾಮಭಾರತದ ಹಸಿವಿನ ಸಾಮ್ರಾಜ್ಯವೇ ಆಗಿತ್ತು. ವನವಾಸದ ಕಷ್ಟಗಳನ್ನು ಶ್ರೀರಾಮನು ಸೀತೆಗೆ 'ಪರಿಪರಿಯಾಗಿ ತಿಳಿಸಿದರೂ ಶ್ರೀರಾಮನು ಕಾಡಿನಲ್ಲಿ ಸಂಭವಿಸುವ ಕಷ್ಟಗಳನ್ನು ಚಿಂತಿಸಿ ಅವಳನ್ನು ಕರೆದುಕೊಂಡು ಹೋಗಲು ಬಯಸಲಿಲ್ಲ ಸೀತೆ, ನೀನು ಹೆಂಗಸು ಅಬಲೆ, ಮಹಾಕುಲದಲ್ಲಿ ಹುಟ್ಟಿ ಧರ್ಮನಿರತಳಾಗಿದ್ದಿಯೇ, ನೀನು ಇಲ್ಲಿ ಖೇಣಿಗಳ ಕೂಗು ನದಿಗಳಲ್ಲಿ ಮೊಸಳೆಗಳು, ಭಯಂಕರ ಕೂಗು, ನದಿಗಳಲ್ಲಿ ಮೊಸಳೆಗಳು, ಕೆಸರು ತುಂಬಿರುತ್ತದೆ. ಕಾಡುಪ್ರಾಣಿಗಳು ಜನರನ್ನು ಕಂಡರೆ ಅಟ್ಟಿಸಿಕೊಂಡು ಬರುತ್ತವೆ. ಅರಣ್ಯದಲ್ಲಿ ನಡೆಯಲು ಮಾರ್ಗವೆಲ್ಲ ಬರೀ ಮುಳ್ಳು, ಒಣಗಿದ ಎಲೆಯೇ ಹಾಸಿಗೆ ಬೇಕಾದಾಗ ನೀರು ಸಹ ಸಿಗುವುದಿಲ್ಲ, ಮರದಿಂದ ಉದುರಿದ ಕಾಡು ಹಣ್ಣುಗಳೇ ಆಹಾರ, ಕಾಡಿನಲ್ಲಿ ಯಥಾಶಕ್ತಿ ಉಪವಾಸವಿರಬೇಕಾಗುತ್ತದೆ. ಜಡೆಯನ್ನು ಬೆಳಸಿ ನಾರು ಬಟ್ಟೆಯನ್ನುಡಬೇಕಾಗುತ್ತದೆ. ಅಂತಹ ಸ್ಥಳದಲ್ಲಿಯೂ ವ್ರತಗಳನ್ನು, ಹೋಮ ಹವನಾದಿಗಳನ್ನು ಅತಿಥಿ ಸತ್ಕಾರಗಳನ್ನು ಮಾಡಬೇಕು. ಅಲ್ಲಿ ನಿಯಮ ಪೂರ್ವಕವಾಗಿ ಇರಬೇಕಾದುದರಿಂದ ಮೂರು ವೇಳೆ ಸ್ನಾನಮಾಡಿ, ನಿತ್ಯವೂ ತಾನೇ ಬಿಡಿಸಿ ತಂದ ಹೂಗಳಿಂದ ವೇದೋಕ್ತ ವಿಧಿಯಿಂದ ವೇದಿಕೆಯಲ್ಲಿ ಅಗ್ನಿಯನ್ನು ಪೂಜಿಸಬೇಕು. ವನವಾಸ ಬಹಳ ಕಷ್ಟಕರವಾದುದ್ದು, ರಾತ್ರಿಯೆಲ್ಲಾ ಘೋರ ಕತ್ತಲೆ, ಗಾಳಿ, ಮಳೆಗಳ ಹೊಡೆತವನ್ನು ತಾಳಬೇಕು, ವನವಾಸವೆಂಬುದು ಬಹಳ ದುಃಖಮಯ ಕಾಡು ಹುಳಗಳ ಕಾಟ ಹೇಳತೀರದು ನಾನಾ ಬಗೆಯ ಆಪತ್ತುಗಳು ಕಾದಿರುತ್ತವೆ. ಅದರಿಂದ ಸೀತೆ ನೀನು ವನಕ್ಕೆ ಬರುವುದು ಉಚಿತವಲ್ಲ ಹೀಗೆಂದು ಹೇಳಿ ಶ್ರೀರಾಮನು ಸೀತೆಯನ್ನು ಕರೆದೊಯ್ಯಲು ಒಪ್ಪಲಿಲ್ಲ.

ರಾಮನ ಮಾತಿನ ಹಿನ್ನಲೆಯಲ್ಲಿ ಗ್ರಾಮಗಳ ಬಡತನ, ಹಸಿವು ದಾರುಣ್ಯತೆಗಳು ಎದ್ದು ಕಾಣುತ್ತದೆ. ವನವಾಸಕ್ಕೆ ಬರದಂತೆ ಸೀತೆಗೆ ಎಚ್ಚರಿಕೆಯನ್ನು ನೀಡುತ್ತಾನೆ. ಕಠೋರ ಕಾಡುಜೀವನದ ಬದುಕಿನ ಚಿತ್ರಣವನ್ನು ನೀಡುತ್ತಾನೆ. ಹಾಗೆ ಮುಂದುವರಿದು ಬೇಸಿಗೆಯಲ್ಲಿ ನೀರು ಒಣಗಿದಾಗ ಕೊಳದಲ್ಲಿರುವ ಜಲಜಂತುಗಳಂತೆ ಜನ ಕಂಗಾಲಾಗುವರು. ನಾವುಗಳು ರಾಮನಿಲ್ಲದ ಈ ರಾಜ್ಯದಲ್ಲಿ ಇರಲಾರೆವು. ನಾವೆಲ್ಲರೂ ನಮ್ಮ ಪತ್ನಿಯರು ಬಂಧುಬಳಗದವರೊಂದಿಗೆ, ರಾಮನೊಂದಿಗೆ ಕಾಡಿಗೆ ಹೊರಟುಹೋಗೋಣ. ನಾವು ಬಿಟ್ಟು ಹೋದ ಮನೆಗಳೆಲ್ಲಾ ಹಾಳುಬಿದ್ದು ಹೋಗಿ ಪ್ರಾಣಿಗಳ ಬೀಡಾಗುವವು. ಮನೆಗಳಲ್ಲಿ ನಡೆಯಬೇಕಾದ ಬಲಿ ಕರ್ಮ, ಯಜ್ಞ, ಮಂತ್ರಪಾಠ, ಅಗ್ನಿಹೋತ್ರ, ಜಪ, ಯಾವುದು ಇಲ್ಲದೆ, ಬರಗಾಲದಲ್ಲಿ ಹಾಳುಬಿದ್ದಂತೆ ಒಡಕು ಮಡಕೆಗಳಿಂದ ತುಂಬಿದ ಈ ಗೃಹಗಳನ್ನು ಕೈಕೇಯಿ ಅನುಭವಿಸಲಿ, ನಾವು ಹೋಗುವ ಅರಣ್ಯ ಊರಾಗಿ, ಈ ಊರು ಕಾಡು ಪ್ರಾಣಿಗಳಿಂದ ಕೂಡಿದ ಅರಣ್ಯವಾಗಲಿ, ಇಂತಹ ರಾಜ್ಯವನ್ನು ಪಡೆದು, ಕೈಕೇಯಿ ತನ್ನ ಮಗ ಬಂಧುಗಳೊಡನೆ ರಾಜ್ಯಭಾರ ಮಾಡಲಿ, ನಾವೆಲ್ಲರೂ ಶ್ರೀ ರಾಮನನ್ನು ಸ್ಮರಿಸುತ್ತಾ ಅವನೊಡನೆ ಸುಖವಾಗಿರೋಣ ಇದು ಜನರ ಅಭಿಪ್ರಾಯವಾಗಿತ್ತು. ವನವಾಸದಲ್ಲಿ ರಾಮನು ಲಕ್ಷ್ಮಣ, ಸೀತೆಗೆ ಬಹಳ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾನೆ. ಈ ನಿರ್ಜನವಾದ ಪ್ರದೇಶದಲ್ಲಿ ನಾವು ಬಹಳ ಎಚ್ಚರಿಕೆಯಿಂದಿರಬೇಕು. ಲಕ್ಷ್ಮಣ, ನೀನು ನಿಮ್ಮಿಬ್ಬರಿಗೂ ಬೆಂಗಾವಲಾಗಿ ಅವಳ ಹಿಂದೆ ಬರುತ್ತೇನೆ. ಇಲ್ಲಿ ನಾವು ಒಬ್ಬರನೊಬ್ಬರು ರಕ್ಷಿಸಿಕೊಳ್ಳಬೇಕು. ಈ ಅರಣ್ಯವಾದರೋ ಹಳ್ಳತಿಟ್ಟುಗಳಿಂದ ಕೂಡಿದ್ದು, ಸೀತೆಗೆ ಇದು ವನವಾಸದ ಕಷ್ಟ ತಿಳಿಯುವುದು ಎಂದು ಮುಂದೆ ಲಕ್ಷ್ಮಣ, ಅವನ ಹಿಂದೆ ಸೀತೆ, ಅವಳ ಹಿಂದೆ ರಾಮ ಹೀಗೆ ಹೊರಟರು. ಈಗ ಅವರಿಗೆ ಆಹಾರ ಬೇಕೆನಿಸಿತು. ಆಗ ರಾಮಲಕ್ಷ್ಮಣರು ವರಹವನ್ನು, ಋಷ್ಯ ಪೃಷತ ಮಹಾರರು ಎಂಬ ಜಿಂಕೆಯ ಜಾತಿಗಳಲ್ಲಿ ಒಂದೊಂದನ್ನು ಸಂಹರಿಸಿ, ಆ ನಾಲ್ಕು ಮೃಗಗಳ ಪರಿಶುದ್ಧವಾದ ಮಾಂಸವನ್ನು ಸ್ವೀಕರಿಸಿ, ಸಾಯಂಕಾಲ ನಿವಾಸಾರ್ಥ ಒಂದು ಮರದಡಿಯನ್ನು ಸೇರಿದರು.

ಕಾಡುವಾಸದಲ್ಲಿ ರಾಮನು ಭರದ್ವಾಜ ಮುನಿಗಳನ್ನು ಭೇಟಿಮಾಡುತ್ತಾನೆ. ತನ್ನ ವೃತ್ತಾಂತವನ್ನು ಹಾಗೂ ತನ್ನ ತಮ್ಮನು ಸಮಿತ್ರತನಯನೂ ಆದ ಲಕ್ಷ್ಮಣನು ತನ್ನನ್ನು ಹಿಂಬಾಲಿಸಿ ಬಂದಿರುವುದಾಗಿಯೂ ಹಾಗೆಯೇ ಜನಕ ಮಹಾರಾಜನ ಪುತ್ರಿಯು ತನ್ನ ಧರ್ಮ ಪತ್ನಿಯೂ ಆದ ಸೀತೆ ಸಹ ತನ್ನನ್ನು ಅನುಸರಿಸಿ ಬಂದಿದ್ದಾಳೆಂದೂ, ತಾವು ಗೆಡ್ಡೆ ಗೆಣಸುಗಳನ್ನು ತಿಂದು ವ್ರತ ನಿಷ್ಠನಾಗಿರುವುದಾಗಿಯೂ ತಿಳಿಸಿದನು. ಧೀಮಂತನಾದ ರಾಜಪುತ್ರನ ವಚನವನ್ನು ಕೇಳಿ ಭರದ್ವಾಜರು ಮದುಪರ್ಕವನ್ನಿತ್ತು ಸತ್ಕರಿಸಲು ಅರ್ಘ್ಯವನ್ನು ಒಂದು ವೃಷಭವನ್ನು ತರಿಸಿದರು. ಆ ಮುನಿಗಳು ಕಾಡಿನಲ್ಲಿರುವ ಫಲಮೂಲಗಳಿಂದ ನಿರ್ಮಿಸಿದ ರುಚಿಯಾದ ಆಹಾರವನ್ನು

ತರಿಸಿಕೊಟ್ಟರು. ರಾತ್ರಿಯನ್ನು ಕಳೆಯಲು ವಸತಿಯನ್ನೇರ್ಪಡಿಸಿದರು. ಅವರ ಸತ್ಕಾರವನ್ನು ಈ ಮೂವರೂ ಸ್ವೀಕರಿಸುತ್ತಾರೆ.

ಹಾಗೆ ಮುಂದುವರಿಯುತ್ತಾ ಮಹಾತಪಸ್ವಿ ಅನುಸೂಯದೇವಿಯ ಕಷ್ಟಗಳು ಎದುರಾಗುತ್ತವೆ. ಅನುಸೂಯಾದೇವಿಯು ತನ್ನೆಲ್ಲಾ ಕಷ್ಟ ಕೋಟಲೆಗಳನ್ನು ಎದುರಿಸಿ ಹತ್ತು ಸಾವಿರ ವರ್ಷ ತಪಸ್ಸು ಮಾಡಿದಳು. ಚಾಂದ್ರಾಯಣಾದಿ ವ್ರತಗಳನ್ನು ಮಾಡಿರುವ ಸಾಧ್ವಿ ಒಮ್ಮೆ ಮಹಾಬೇಗೆಯಿಂದ ಹತ್ತು ವರುಷಗಳವರೆಗೆ ಮಳೆಯಿಲ್ಲದೆ ಕ್ಷಾಮ ಬಂದಾಗ ಅನುಸೂಯದೇವಿಯು ತನ್ನ ತಪೋಬಲದಿಂದ ಫಲಮೂಲಗಳನ್ನು ಸೃಜಿಸಿ, ಒಣಗಿದ ಗಂಗಾನದಿಯಲ್ಲಿ ನೀರು ಹರಿಯುವಂತೆ ಮಾಡಿದಳು, ಮತ್ತೊಮ್ಮೆ ದೇವತೆಗಳಿಗೆ ಸಹಾಯ ಮಾಡಲು ಧಾವಿಸಿ, ಹತ್ತು ರಾತ್ರಿಗಳನ್ನು ಒಂದೇ ರಾತ್ರಿಯನ್ನಾಗಿಸಿದಳೆಂದು, ಇಂತಹ ಅನುಸೂಯೆಯು ಸಕಲರಿಗೂ ಪೂಜನೀಯ ಸಮಾಜದ ಬಗ್ಗೆ ಕಾಳಜಿ ಇರುವಂತ ವ್ಯಕ್ತಿಗಳನ್ನು ರಾಮಾಯಣ ಕಾವ್ಯದಲ್ಲಿ ಕಂಡುಬರುತ್ತದೆ. ಇಂತಹ ವ್ಯಕ್ತಿಗಳು ತಳಸಮುದಾಯದಿಂದ ಬಂದವರು. ಜಾಗತೀಕರಣ ಸಂದರ್ಭದಲ್ಲಿ ಇಂತಹ ಮಹನೀಯರ ಆಲೋಚನೆಗಳು ಬಹಳ ಮುಖ್ಯ ಹದಗೆಟ್ಟಿರುವ ಭಾರತದ ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಸಂದರ್ಭದಲ್ಲಿ ದೇಸೀ ಕಾವ್ಯಗಳಾದ ರಾಮಾಯಣ, ಮಹಾಭಾರದಲ್ಲಿ ಕಂಡುಬರುವ ಮಾನವೀಯ ಅಂಶಗಳು ಬಹಳ ಮುಖ್ಯ.

ಇನ್ನೊಂದು ಪ್ರಮುಖ ಅಂಶವೆಂದರೆ ಅದು ತಳಸಮುದಾಯಗಳು ತಾವು ಸದಾಕಾಲ ಹಸಿವಿನಿಂದಲೆ ಬಾಳುತ್ತಿರುವುದಾಗಿಯೂ, ಹಸಿವು ನಮ್ಮನ್ನು ಕಾಡುತ್ತಿರುವ ರೋಗ ಈ ತರದ ಇನ್ನೂ ಹಲವು ಒಳಹುಗಳು ರಾಮಾಯಣದ ಕೆಲವು ಭಾಗಗಳು ಹಸಿವಿನ ಚರಿತ್ರೆಗೆ ಪೂರಕವಾಗಿದೆ. ಸೀತೆಯ ಸುಳಿವನ್ನು ತಿಳಿಯಲು ಹನುಮಂತ ತನ್ನ ವಾನರ ಸಮೇತ ಕಾಡಿನಲ್ಲಿ ಸಂಚರಿಸುವಾಗ ಯಾರ ಅನುಮತಿಯನ್ನು ಪಡೆಯದೆ, ತಮ್ಮ ಹಸಿವು ಬಾಯಾರಿಕೆಗಳನ್ನು ತಡೆಯಲಾರದೆ ವಿಚಾರ ಮಾಡದೆ ಒಂದು ಭವ್ಯವಾದ ಬಿಲವನ್ನು ಪ್ರವೇಶ ಮಾಡುತ್ತಾನೆ. ಆಗ ತಪಸ್ವಿ ಸ್ವಯಂ ಪ್ರಭೆ ಎದುರಾಗುತ್ತಾಳೆ. ಆಗ ಹನುಮಂತ ನಿನ್ನ ವೃತ್ತಾಂತವನ್ನು ಹಾಗೂ ಈ ಸ್ಥಳದ ಮಹಿಮೆಯನ್ನು ತಿಳಿಸಬೇಕೆನ್ನಲು ಆಗ ಸ್ವಯಂಪ್ರಭೆ ತನ್ನ, ಹಾಗೂ ಈ ಸ್ಥಳದ ಪೂರ್ವ ಪರಿಚಯ ಮಾಡಿ ಕೊಡುತ್ತಾಳೆ. ಅನಂತರ ಸ್ವಯಂಪ್ರಭೆ ಹನುಮಂತ ಹಾಗೂ ಅವನ ಪರಿವಾರದವರಿಗೆಲ್ಲಾ ಉತ್ತಮ ಫಲಗಳನ್ನು ನೀರನ್ನು ನೀಡಿ ಸತ್ಕರಿಸುತ್ತಾಳೆ.

ತಳವರ್ಗದ ಸಮುದಾಯಗಳಿಗೆ ಹಸಿವೆ ಹೆಚ್ಚು ಎಂಬ ಸೂಕ್ಷ್ಮ ವಿಚಾರಗಳು ರಾಮಾಯಣದ ಕೆಲವು ಘಟನೆಗಳು ಪೂರಕವಾಗಿವೆ. "ಸಂಪಾತಿಯ ಮಾತಿನಿಂದ ಹಿಗ್ಗಿದ ವಾನರರಿಗೆ ಮಾರ್ಗದರ್ಶಿಯಾಗಿದ್ದ ಜಾಂಬವಂತನು. ಇತರ ವಾನರರೊಡನೆ ಗೃಧರಾಜನ ಬಳಿಗೆ ಹೋಗಿ

ಸೀತವೃತ್ತಾಂತವನ್ನು ವಿವರವಾಗಿ ಹೇಳುವಂತೆ ಕೇಳಲು; ಸಂಪಾತಿಯು, ತನ್ನ ಮಗನಾದ ಸುಪಾರ್ಶ್ವನೆಂಬುವನು ತನಗೆ ಆಹಾರಾದಿಗಳನ್ನು ಕಾಲಕಾಲಕ್ಕೆ ಸರಿಯಾಗಿ ತಂದುಕೊಟ್ಟು ಪೋಷಿಸುತ್ತಿರುವುದಾಗಿಯೂ, ಗಂಧರ್ವರಿಗೆ ಕಾಮವು ಹೆಚ್ಚು, ಸರ್ಪಗಳಿಗೆ ಕೋಪವು ಅಧಿಕ, ಮೃಗಗಳಿಗೆ ಭಯವು ಹೆಚ್ಚು, ಗೃಧ್ರಜಾತಿಯ ತಮಗೆ ಹಸಿವು ಹೆಚ್ಚೆಂದು ಹೀಗಿರಲು ಒಂದು ದಿನ ತಾನು ಹಸಿವಿನಿಂದ ಅಹಾರಕ್ಕಾಗಿ ಹಾತೊರೆಯುತ್ತಿರಲು. ಸೂರ್ಯನು ಮುಳುಗಿದ ಮೇಲೆ ತನ್ನ ಪುತ್ರನು ಆಹಾರವನ್ನು ಹುಡುಕುತ್ತಾ, ಸಮುದ್ರ ಸಂಚಾರಿಗಳಾದ ಜಂತುಗಳನ್ನು ಹಿಡಿದು ತರಬೇಕೆಂದುತೀರದಲ್ಲಿ ಕುಳಿತಿರಲು, ಕಾಡಿಗೆಯಂತೆ ಕಪ್ಪಾದ ಒಬ್ಬ ಪುರುಷನು ಕಾಂತಿಮತಿಯಾದ ಸ್ತ್ರೀಯೊರ್ವಳನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ಕಂಡು ಅವನಿಗೆ ಒಳ್ಳೆಯ ಆಹಾರವು ಸಿಕ್ಕಿತೆಂದು ಅವರನ್ನು ಹಿಡಿಯಲು ಹೋಗಲು ಅಪವರುಷನು ದಾರಿ ಬಿಡಬೇಕೆಂದು ವಿನಯವಾಗಿ ಪ್ರಾರ್ಥಿಸಲು ಅವನು ಕರುಣೆಯಿಂದ ದಾರಿಯನ್ನು ಬಿಡಲು ಆ ಪುರುಷನು ಆ ಸ್ತ್ರೀಯನ್ನು ಎತ್ತಿಕೊಂಡು ರಭಸದಿಂದ ಹೊರಟು ಹೋದನೆಂದೂ ನಂತರ ಅಲ್ಲಿ ಸಂಚರಿಸುತ್ತಿದ್ದಸಿದ್ಧಚಾರಣರು, ಆ ಪುರುಷನು ರಾವಣನೆಂದೂ, ಆ ಸ್ತ್ರೀಯು ಶ್ರೀರಾಮನ ಪತ್ನಿಯೆಂದು ನನ್ನ ಮಗನಿಗೆ ತಿಳಿಸಿದರಂತೆ. ಸೀತೆಯು ಕೆದರಿದ ಕೂದಲುಗಳಿಂದಲೂ, ಶೋಕಾವೇಶದಿಂದ ಆಯಾಸಗೊಂಡವಳಾಗಿ ಹಾ, ರಾಮ, ಹಾ ಲಕ್ಷ್ಮಣ ಎಂದು ಕೂಗುತ್ತಿದ್ದಳೆಂದು ತನ್ನ ಮಗನು ತಿಳಿಸಿದನೆಂದು ತಿಳಿಸಿದನು. ಹೀಗೆ ಮಾತುಗಳು ಮುಂದುವರಿಯುತ್ತವೆ.”[೬] ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವ ವಿಷಯವೆಂದರೆ ತಳವರ್ಗಕ್ಕೆ ಸೇರಿರುವ ಗೃಧ್ರಜಾತಿ ಸಮುದಾಯ ತಾವು ಸದಾಕಾಲ ಹಸಿವಿನಿಂದ ಜೀವಿಸುತ್ತಿರುವುದಾಗಿ, ತಮ್ಮ ಸಮುದಾಯಕ್ಕೆ ಹಸಿವು ಜಾಸ್ತಿ ಎಂದು ನೇರವಾಗಿ ತೆರೆದುಕೊಳ್ಳುವ ಮಾತುಗಳು ಬಹಳ ಮುಖ್ಯ ಈ ಮಾತುಗಳು ಚಾರಿತ್ರಿಕವಾಗಿ ಸತ್ಯ ಕೂಡ. ಇವತ್ತಿಗೂ ಈ ಸಮುದಾಯಗಳು ಮತ್ತು ಇದೇ ತರಹದ ತಳಸಮುದಾಯಗಳು ಹಸಿವಿನಿಂದ ಬಳಲುತ್ತಿವೆ. ಸಮಾಜದಲ್ಲಿ ಹಸಿವಿಗೆ ಬಲಿಯಾಗುತ್ತಿರುವುದು ತಳವರ್ಗದ ಸಮುದಾಯಗಳೇ ಹೊರತು ಮೇಲ್ವರ್ಗದ ಸಮುದಾಯಗಳಲ್ಲ.

ಕಾಡುವಾಸ ಕೂಡ ಒಂದು ಭಯಂಕರವಾದ ಅನುಭವಲೋಕ. ನಾವು ತಿಳಿದ ಮಟ್ಟಿಗೆ ರಾಮ, ಸೀತೆ, ಲಕ್ಷ್ಮಣ, ತುಂಬ ವ್ಯವಸ್ಥಿತವಾಗಿ ಬದುಕು ನಡೆಸಿದವರಲ್ಲ. ೧೪ ವರ್ಷ ನೂರಾರು ತೊಂದರೆಗಳಿಗೆ ಒಳಪಟ್ಟವರು. ಹಸಿದ ದಿನಗಳೆಷ್ಟೋ. ಹಸಿವು ನೀಗಿಸಲು ಕೊಂದ ಪ್ರಾಣಿಗಳೆಷ್ಟೋ, ಕಾಡಿನಲೋಕವೇ ಒಂದು ಹಸಿವಿನ ಲೋಕವೆಂದರೆ ತಪ್ಪಾಗಲಾರದು. ಇವತ್ತಿನ ಕಾಲಕ್ಕೆ ಹೋಲಿಸಿ ನೋಡಿದರೆ ಆಧುನಿಕತೆಯೇ ದೊಡ್ಡ ಹಸಿವಿನ ಲೋಕ. ಇವತ್ತಿನ ವೈಜ್ಞಾನಿಕ ಆಹಾರದ ಅನ್ವೇಷಣೆ ವ್ಯಕ್ತಿಯ ಪ್ರಾಣವನ್ನೇ ತೆಗೆಯುತ್ತಿವೆ. ಗೃಧ್ರಜಾತಿಯಂತ ಎಷ್ಟೋ ತಳಸಮುದಾಯಗಳಿಗೆ ಕಾಡೆ ನೆಲೆ. ಇವರ ಬದುಕಿನ ಲೋಕದೊಳಗೆ ಪ್ರವೇಶಿಸಿದ ರಾಮ.

ಲಕ್ಷ್ಮಣ, ಸೀತೆ ಇವರಿಗಿಂತ ಭಿನ್ನವೇನು ಅಲ್ಲ. ನಮ್ಮ ಜನಪದ ಲೋಕದೊಳಗೆ ರಾಮ ಒಂದು ಬದುಕಾಗಿ ಕಾಣಿಸಿದರೆ, ಶಿಷ್ಟರಲ್ಲಿ ದೈವವಾಗಿ ರೂಪಿತ ಗೊಂಡಿರಬಹುದು. ಆದರೆ ವಾಲ್ಮೀಕಿ ಮಾತ್ರ ರಾಮನನ್ನ ಜನಪದವಾಗಿ ಕಂಡಿದ್ದಾನೆ. ಕನಕದಾಸರ ರಚನೆಯಲ್ಲಿ ಇದೇ ಸತ್ಯ ಅಡಗಿದೆ. ರಾಮನ ಮುಖಾಂತರ ವಾಲ್ಮೀಕಿ ಜನಪದರ ಹಸಿವಿನ ಲೋಕವನ್ನೇ ಕಟ್ಟಿಕೊಡುತ್ತಾನೆ. ರಾಮಾಯಣದಲ್ಲಿ ರಾಜಪರಂಪರೆಗಿಂತ, ತಳಸಮುದಾಯಗಳ ಪರಂಪರೆಯೇ ದೊಡ್ಡದು. ರಾಮ ತನ್ನ ಜೀವಿತಾವಧಿಯಲ್ಲಿ ತಳಸಮುದಾಯಗಳ ಜೊತೆ ಬದುಕಿದ್ದೇ ಹೆಚ್ಚು.

ಇಂತ ಸಂದರ್ಭದಲ್ಲಿ ರಾಮನ ನಾಮವನ್ನು ಕೆಲವು ಕೋಮುವಾದಿಗಳು ಹಿಂಸೆಯ ರೂಪಕವಾಗಿ ಪ್ರತಿಬಿಂಬಿಸುತ್ತಿರುವುದು ದೊಡ್ಡದುರಂತ. ಇನ್ನೊಂದು ಪ್ರಮುಖ ವಿಷಯವೆಂದರೆ ರಾವಣ ರಾಕ್ಷಸಲೋಕದ ಪ್ರತಿನಿಧಿ. ವೈಭವದ ಪ್ರತಿನಿಧಿಯಂತೆ ಕಂಡರೂ, ಅವನ ರಾಕ್ಷಸಲೋಕ ಹಸಿವಿನಿಂದಲೇ ಬದುಕುತ್ತಿರುತ್ತದೆ. ಅವನು ಅನೈತಿಕ ನಡವಳಿಕೆ ಅವನ ಸಾವಿಗೆ ಕಾರಣ, ರಾಮ, ರಾವಣನನ್ನು ಕೊಂದು ಜಯಶಾಲಿಯಾಗುತ್ತಾನೆ. ಈ ಜಯ ತಳವರ್ಗಕ್ಕೆ ಸಿಕ್ಕ ಜಯವೇ ಹೊರತು, ರಾಮನಿಗಲ್ಲ. ರಾವಣನ ತಮ್ಮ ವಿಭೀಷಣ, ತನ್ನ ಅಣ್ಣನ ಅನೈತಿಕ, ನಡವಳಿಕೆಯನ್ನು ವಿರೋಧಿಸಿ, ನ್ಯಾಯದ ಪರವಾಗಿ ನಿಲ್ಲುತ್ತಾನೆ. ನ್ಯಾಯ ಎಂಬುದು ಯಾವಾಗಲು ತಳಸಮುದಾಯಗಳ ನೈತಿಕ ಹಕ್ಕು. ಅನೈತಿಕ ನಡವಳಿಕೆಯನ್ನು ವಿರೋಧಿಸುವ ಮೂಲಕ ವಿಭೀಷಣ ತಳವರ್ಗದ ಪ್ರಜ್ಞೆಯಾಗಿ ಕಾಣುತ್ತಾನೆ. ಈ ಪ್ರಜ್ಞೆ ಇವತ್ತಿನ ತಳಸಮುದಾಯಗಳಿಗೆ ಬೇಕಾಗಿದೆ. ಇಂದು ದೇಶದಲ್ಲಿ ನಡೆಯುತ್ತಿರುವ ಅನೈತಿಕ ಹಗರಣಗಳನ್ನು ತಳಸಮುದಾಯಗಳು ಪ್ರಭಟಿಸಲಿಲ್ಲವೆಂದರೆ ತಳಸಮುದಾಯಗಳ ಜೀವನ ತುಂಬ ದಾರುಣತೆಯಿಂದ ಕೂಡಿರುತ್ತದೆ. ಯಾವ ಕಾಲಕ್ಕೂ ಹಸಿವಿನಿಂದ ಮುಕ್ತಿ ಪಡೆಯಲಾಗುವುದಿಲ್ಲ. ಇನ್ನೊಂದು ಚಾರಿತ್ರಿಕ ಸತ್ಯವೆಂದರೆ, ಚರಿತ್ರೆಯನ್ನು ಗಮನಿಸಿದಾಗ ಸೋಲು ಪ್ರಭುತ್ವದ ಪರವಾದರೆ, ಗೆಲುವು ಎಂದೆಂದಿಗೂ ತಳಸಮುದಾಯಗಳ ಪರವೇ.

ಈ ನೆಲೆಯಲ್ಲೇ ಮಹಾಭಾರತವು ಚಲಿಸುತ್ತದೆ. ಭಾರತೀಯರ ಧರ್ಮ–ಸಂಸ್ಕೃತಿ–ನಾಗರೀಕತೆಗಳ ಸಮಗ್ರ ದರ್ಶನವನ್ನು ಮಾಡಿಸಿ ಕೊಡುವ ಜ್ಞಾನ ವಿಜ್ಞಾನಮಯವಾದ ಕಾವ್ಯವಾದರೂ ಅದು ಹಲವಾರು ಸಾಮಾಜಿಕ ಸಮಸ್ಯೆಗಳ ಕಡೆಗೆ ಗಮನ ಹರಿಸುತ್ತದೆ. ನನ್ನ ಅಧ್ಯಯನದ ಸಮಸ್ಯೆಯನ್ನು ಗಮನದಲ್ಲಿಟ್ಟು ನೋಡುವುದಾದರೆ, ಕುರುಕ್ಷೇತ್ರ ಯುದ್ಧಕ್ಕೆ ಮೂಲ ಪ್ರೇರಣೆಗಳಲ್ಲಿ ಹಸಿವು ಕೂಡ ಒಂದಾಗಿತ್ತು. ಇಲ್ಲಿ ಅಧಿಕಾರದ ಹಸಿವಿಗಿಂತ ಒಡಲ ಹಸಿವೆ ಮುಖ್ಯವಾಗಿದ್ದು, ಸಂಧಾನದ ವಿಷಯ ಬಂದಾಗ ಅರ್ಜುನ, ಕಲಿಭೀಮ, ವಿರೋಧಿಸುತ್ತಾರೆ. ಇವರಿಬ್ಬರ ವಿರೋಧಕ್ಕೆ ಮೂಲಕಾರಣ ವನವಾಸದಲ್ಲಿದ್ದಾಗ ತಾವು ಎದುರಿಸಿದ ಅವಮಾನ, ಹಸಿವು ಆಗಿತ್ತು. ಹಾಗಾಗಿ ಕುರುಕ್ಷೇತ್ರಯುದ್ಧಕ್ಕೆ ಹಲವು ಪ್ರೇರಣೆಗಳಲ್ಲಿ

ಹಸಿವು ಒಂದಾಗಿತ್ತು. ಈ ನೆಲೆಯಲ್ಲಿ ನೋಡಿದಾಗ, ಹಸಿವಿನ ಹಲವು ಮುಖಗಳನ್ನು ರಾಮಾಯಣದಂತೆ, ಮಹಾಭಾರತವು ಕೂಡ ತೆರೆದಿಡುತ್ತದೆ. ವನವಾಸಕ್ಕೆ ಬಂದ ರಾಮಲಕ್ಷ್ಮಣ, ಸೀತೆ ಕಾಡುವಾಸದಲ್ಲಿ ಪ್ರತಿದಿನ ಹಸವಿನ ಸಮಸ್ಯೆ ಎದುರಾಗುತ್ತದೆ. ಅದೇ ರೀತಿ ಪಾಂಡವರು ವನವಾಸದ ಸಂದರ್ಭದಲ್ಲಿ ಇದೇ ಹಸಿವಿನ ಸಮಸ್ಯೆ ಎದುರಾಗುತ್ತದೆ. ರಾಮಾಯಣದ ಹಸಿವಿನ ವಿಶಾಲತೆಗಿಂತ, ಮಹಾಭಾರತದ ಹಸಿವಿನ ವಿಶಾಲತೆ ದೊಡ್ಡದು. ಪಾಂಢವರು ಅಜ್ಞಾತವಾಸದಲ್ಲಿ ಸುತ್ತಿದ ಗ್ರಾಮಭಾರತದ ಉದ್ಧಕ್ಕೂ ಹಸಿವಿನ ಗ್ರಾಮಗಳು ಎದುರಾಗಿರುವುದನ್ನು ಕಾಣುತ್ತೇವೆ. ಆಗಿನ ಕಾಲದಲ್ಲೇ ಅಷ್ಟು ಬಹುದೊಡ್ಡಗೆ ಬಡತನ, ಹಸಿವು, ದಾರಿದ್ರ್ಯತನವನ್ನು ಗ್ರಾಮಭಾರತ ಎದುರಿಸುತ್ತಿತ್ತು. ಎಂಬ ಸತ್ಯಗಳನ್ನು ನಮ್ಮ ಈ ದೇಶೀಕಾವ್ಯಗಳು ಐತಿಹಾಸಿಕವಾಗಿ ಮಹತ್ವ ಪಡೆಯುತ್ತವೆ.

ಯುದ್ದ ಮುಗಿದ ಬಳಿಕ ಯುದ್ದದಿಂದಾದ ಅಪಾಯಗಳು ಅರಮನೆಯಿಂದ, ಸಾಮಾನ್ಯ ಮನುಷ್ಯನ ಗುಡಿಸಲಿನವರೆಗೂ, ವಿಸ್ತಾರಗೊಂಡಿತು. ಈ ಯುದ್ಧದಿಂದ ಲಕ್ಷಾಂತರ ಸೈನಿಕರು ಸತ್ತರು. ಇವರ ಕುಟುಂಬಗಳು ಅನಾಥವಾದವು. ಎಷ್ಟೋ ಹೆಂಗಸರು ತಮ್ಮ ಗಂಡಂದಿರನ್ನು ಕಳೆದುಕೊಂಡು ವಿಧವೆಯಾದರು. ಎಷ್ಟೋ ಸೈನಿಕರು ಅಂಗವಿಕಲರಾದರು. ಇವರನ್ನು ನಂಬಿಕೊಂಡ ಕುಟುಂಬಗಳು ಬೀದಿಪಾಲಾದರು. ಹಸಿವು, ಬಡತನ ಇವರನ್ನು ಕಾಡತೊಡಗಿದವು. ಯುದ್ಧದ ನಂತರ ಯಾವ ಪ್ರಭುತ್ವವು ಇವರ ರಕ್ಷಣೆಗೆ ನಿಲ್ಲಲಿಲ್ಲ. ಯುದ್ಧದಿಂದ ಉಂಟಾದ ಅಪಾಯಗಳನ್ನು ಎದುರಿಸಲು ಅಸಹಾಯಕರಾದ ತಳಸಮುದಾಯಗಳನ್ನು ಇಂತಹ ಸ್ಥಿತಿಗೆ 'ಪ್ರಭುತ್ವವೇ' ಮೂಲಕಾರಣ ಎಂದು ತಿಳಿದಿದ್ದರು. ಪ್ರತಿಭಟಿಸಲಾರದೆ ಕಾಡು ಪಾಲಾದರು. 'ಹಸಿವು' ತಳಸಮುದಾಯಗಳನ್ನು ಆಕ್ರಮಿಸಿಕೊಂಡಂತೆ, 'ಪ್ರಭುತ್ವವನ್ನು ತನ್ನ ಕಬಂಧಬಾಹುಗಳಿಂದ ಅಪ್ಪಿಕೊಂಡಿತು. ಹಸಿವಿನ ಭೀಕರತೆಗೆ ಪಾಂಡವರು ಸಿಲುಕಿಕೊಂಡರು. ಹದಿನಾಲ್ಕು ವರ್ಷಗಳ ಕಾಲ ಹಸಿವಿನ ಭೀಕರತೆಯಿಂದ ಬಳಲಿ ಬೆಂಡಾದರು. ಪಾಂಡವರಿಗೆ ಯುದ್ಧದ ಗೆಲುವು ರುಚಿಸಲಿಲ್ಲ. ಇಡೀ ಹಸ್ತಿನಾಪುರ ಸ್ಮಶಾನವಾಗಿಬಿಟ್ಟಿತ್ತು. ಕೊಳೆತ ಶವಗಳ ಮೇಲೆ ಕುಳಿತು ರಾಜ್ಯಭಾರ ಮಾಡಲು ಪಾಂಡವರಿಗೆ ಮನಸ್ಸು ಬರಲಿಲ್ಲ. ಅರಮನೆಯ ಬದುಕು ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಹೋಯಿತು. ತಾವಾಗಿಯೇ ಸಾವನ್ನು ಬಯಸಿ ಕಾಡುಪಾಲಾದವರು ಎಷ್ಟೋ ಮಂದಿ.

ಭಯಂಕರವಾದ ರೋಗರುಜಿನಗಳು ಜನಸಾಮಾನ್ಯರನ್ನು ಆವರಿಸಿಕೊಂಡವು. ಬೀದಿಬೀದಿಗಳಲ್ಲಿ ರೋಗ ಪೀಡಿತರಾದ ಜನರು ಸಾವಿನ ಮನೆಯ ಪ್ರವೇಶಿಸಲು ಕ್ಷಣಗಣನೆ ಕಾಯುತ್ತಿದ್ದರು. ಮಕ್ಕಳು, ಮುದುಕರು, ಹೆಂಗಸರು, ವಿಧವೆಯರು ಹಸಿವಿನ ಬಲೆಗೆ ಬಿದ್ದು ರೋಧಿಸುತ್ತಿದ್ದರು. ಇದು ಯುದ್ದದ ನಂತರ ಕಂಡುಬಂದ ಭೀಕರ ಪರಿಸ್ಥಿತಿ. ಹದಿನೇಳು

ಸಾವಿರ ವರ್ಷಗಳ ಹಿಂದೆ ಯುದ್ಧದ ಭೀಕರತೆ ಹಗೂ ಅಪಾಯಗಳನ್ನು ಮಹಾಭಾರತ ಹಾಗೂ ರಾಮಾಯಣ ಜನಪದ ಮಹಾಕಾವ್ಯಗಳು ನಮಗೆ ತಿಳಿಸುತ್ತವೆ. ಆದರೆ ಪ್ರಭುತ್ವದ ಉನ್ನತ ಹೇಳಿಕೆಗಳ ಸಂಭ್ರಮದಲ್ಲಿ ತಳಸಮುದಾಯಗಳ ಬದುಕು ಛಿದ್ರಗೊಂಡಿರುವುದು ಯಾರ ಕಣ್ಣಿಗೂ ಕಾಣಿಸದು. ಕಾಣಿಸಿದರೂ, ಅವುಗಳಿಗೆ ಸ್ಪಂಧಿಸುವ ಮನಸ್ಥಿತಿ ರಾಜರಲ್ಲಿ ಇರಲಿಲ್ಲವೇನೋ.

ಅಡಿ ಟಿಪ್ಪಣಿ

೧. ಅನಂತರಾಮ್ ರಾವ್.ಕೆ., **ಸಂಪೂರ್ಣ ಮಹಾಭಾರತ,** ಪು.ಸಂ–೫೨.

೨. **ಅದೇ ಪುಸ್ತಕ,** ಪು.ಸಂ–೫೨.

೩. **ಅದೇ ಪುಸ್ತಕ,** ಪು.ಸಂ–೭೮.

೪. ಗೊರೂರು ಆರ್. ಶ್ರೀಮತಿ, **ವಾಲ್ಮೀಕಿ ರಾಮಾಯಣ,** ಪು.ಸಂ–೧೯೨.

❖❖❖

ಅಧ್ಯಾಯ : ನಾಲ್ಕು

ಹಸಿವಿನ ದಲಿತ ನೆಲೆ

೪.೧ ಮಂಟೇಸ್ವಾಮಿ ಕಾವ್ಯದಲ್ಲಿ ಹಸಿವಿನ ಹಪಹಪಿಕೆ

೪.೨ ಮಲೆಮಾದೇಶ್ವರ ಕಾವ್ಯ: ಹಸಿವಿನ ತೊಳಲಾಟ

೪.೩ ಮಲೆಮಾದೇಶ್ವರ ಕಾವ್ಯದಲ್ಲಿ ಹಸಿವು

ಅಧ್ಯಾಯ: ನಾಲ್ಕು

ಹಸಿವಿನ ದಲಿತ ನೆಲೆ

ಭಾರತೀಯ ಗ್ರಾಮ ಸಮಾಜದ ಸಂಸ್ಕೃತಿಯೊಳಗೆ ಹಸಿವಿನ ದಲಿತ ನೆಲೆ ಬಹು ವಿಸ್ತಾರವಾದುದು. ಅಷ್ಟೇ ಕಠೋರವಾದುದು. ವರ್ಗ ಕಲ್ಪನೆ ಹುಟ್ಟುವುದಕ್ಕಿಂತ ಮುಂಚೆ ಮನುಷ್ಯರ ನಡುವೆ ಯಾವುದೇ ಘರ್ಷಣೆ ಇರಲಿಲ್ಲ ಎಂಬ ನಂಬಿಕೆ ನನ್ನದು. ಕೇವಲ ಆಹಾರದ ಹುಡುಕಾಟವೇ ಮೂಲ ಮಾನವರ ಹಸಿವಿನ ಪ್ರಕ್ರಿಯೆ ಆಗಿತ್ತು. 'ಅನ್ವೇಷಣೆ' ಎಂಬುದು ತಳವರ್ಗದ ಸಮುದಾಯಗಳ ಸಾಂಸ್ಕೃತಿಕ ಪ್ರಕ್ರಿಯೆಯಾಗಿತ್ತು. ಎಲ್ಲಾ ಕಲೆಗಳ ಸೃಷ್ಟಿಯ ಹಿಂದೆ ಹಸಿವಿನ ದಲಿತ ನೆಲೆ ಇದ್ದೇ ಇರುತ್ತೆ. ಶ್ರಮಸಂಸ್ಕೃತಿಯ ಒಳಗೆ ಹಸಿವಿನ ದಾರುಣ್ಯತೆ ಅಡಗಿದೆ. ಜಗತ್ತಿನ ನಾಗರೀಕತೆಗಳ ಸೃಷ್ಟಿಗೆ ತಳವರ್ಗಗಳ ಕೊಡುಗೆ ಅಪಾರವಾದದ್ದು. ತಳಸಮುದಾಯಗಳ ಬದುಕಿನ ಅನುಭವಗಳು ಜಗತ್ತಿನ ಸಾಹಿತ್ಯ ಸೃಷ್ಟಿಗೆ ಮೂಲಪ್ರೇರಣೆಯಾದರೆ, ತಳಸಮುದಾಯಗಳ ಬದುಕಿನ ವಿವರಗಳು ಸಾಹಿತ್ಯದಲ್ಲಿ ಆಕರ್ಷಿಸಿದಷ್ಟು, ಮೇಲ್ವರ್ಗದ ಬದುಕಿನ ಅನುಭವಗಳು ಸಾಹಿತ್ಯ ಅಭಿವ್ಯಕ್ತಿಯಲ್ಲಿ ಆಕರ್ಷಿಸಿದ್ದು ಕಡಿಮೆ. ಹಾಗಾಗಿ ಹಸಿವಿನ ದಲಿತ ನೆಲೆ ಬಹುವಿಸ್ತಾರವಾದದ್ದು.

ಭಾರತೀಯರ ಸಾಂಸ್ಕೃತಿಕ ಪುರಾಣವೆಂದರೆ ಅದು ಕೇವಲ ರಾಮಾಯಣ, ಮಹಾಭಾರತಗಳ ಪುರಾಣ ಎಂಬ ಸಾರ್ವತ್ರಿಕ ಅಭಿಪ್ರಾಯ ಬಿಂಬಿಸುವ ಈ ದಿನಮಾನಗಳಲ್ಲಿ ಬುಡಕಟ್ಟು ಮಹಾಕಾವ್ಯಗಳ ಮೂಲಕ ಕನ್ನಡ ಸಂಸ್ಕೃತಿಯನ್ನು ಹುಡುಕುವ ಕೆಲಸಕ್ಕೆ ನಾವು ಕೈ ಹಾಕಿದ್ದೇವೆ. ಮಾತೆತ್ತಿದರೆ ಭಾರತೀಯ ಸಂಸ್ಕೃತಿ ಎಂದು ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರಬಂದು ಪ್ರತಿಯೊಂದು ಭಾಷೆಯ ನೆಲಕ್ಕು ತನ್ನದೇ ಆದ ವೈಶಿಷ್ಟ್ಯತೆ ಇದೆ. ತನ್ನದೇ ಆದ ಸಂಸ್ಕೃತಿ ಇದೆ ಎಂಬ ವಾಸ್ತವದ ನೆಲೆಯಲ್ಲಿ, ನೆಲದ ಗುಣ ಹುಡುಕುವ ಕಾರ್ಯಕ್ಕೆ ನಾವೀಗ ಮುಂದಾಗಬೇಕಾಗಿದೆ. ಅಖಿಲ ಭಾರತೀಯ ಮಟ್ಟದ ರಾಮ, ಕೃಷ್ಣ, ಶಿವ ಅಥವಾ ಇತರೆ ದಶಾವತಾರದ ದೈವಗಳಂತಲ್ಲದೆ ಒಂದು ವಿಶಿಷ್ಟ ಭೂಪ್ರದೇಶದ ಅಥವಾ ಒಂದು ಬುಡಕಟ್ಟಿನ ಪರಂಪರೆಯಲ್ಲಿ ಸೃಷ್ಟಿಯಾಗಿರುವ ದೈವ ಪುರುಷರು ಇವತ್ತಿನ ಸಂಸ್ಕೃತಿ ಚಿಂತಕರಿಗೆ

ಮುಖ್ಯವಾಗಬೇಕಾಗಿದೆ. ಕಾಡು ಮತ್ತು ನಾಡಿನ ಹತ್ತಾರು ಜನ ವರ್ಗಗಳು ಪೂಜಿಸುವ ದೈವಗಳು ಮತ್ತು ಆ ದೈವಗಳ ಬಗ್ಗೆ ಅವರು ಕಟ್ಟಿಕೊಂಡ ಕಥನಗಳು ನೂರಾರು. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಗೆ ಇತಿಹಾಸವನ್ನು ನಿರೂಪಿಸಬಲ್ಲ ಮುಖ್ಯ ಸಂಗತಿಗಳು. ಈ ಕಥನಗಳನ್ನು ಅಭ್ಯಸಿಸುವುದರಿಂದ ಭಾರತ ಇದುವರೆಗಿನ ವ್ಯವಸ್ಥೆಯಲ್ಲಿ ನಿರ್ಲಕ್ಷಿಸಲ್ಪಟ್ಟ ಜನವರ್ಗಗಳಿಗೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆ ಎಂಬುದನ್ನು ಆ ಸಂಸ್ಕೃತಿಗೆ ಒಂದು ಪರಂಪರೆ ಇದೆ ಎಂಬುದನ್ನು ಆ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ನಾವು ತಿಳಿಯುತ್ತೇವೆ.

ಮಹಾಕಾವ್ಯವೆಂದರೆ ಹೀಗೆ ಇರಬೇಕು ಎಂಬ ಕಟ್ಟುಪಾಡಿನ ಕಾಲವೊಂದಿತ್ತು. ಸದ್ವಂಶನಾದ ಒಬ್ಬ ನಾಯಕ ಉದಾತ್ತ ಗುಣಸ್ವಭಾವದ ರಾಜ, ಸದಾ ಕೆಟ್ಟದನ್ನು ಬಯಸುವ ಪ್ರತಿನಾಯಕರು ಅಷ್ಟಾದಶ ವರ್ಣನೆ ಇತ್ಯಾದಿಗಳೆಲ್ಲಾ ಒಂದು ಕಾವ್ಯಕ್ಕೆ ಇರಲೇಬೇಕಾದ ಕಡ್ಡಾಯ ಅಂಶಗಳಾಗಿದ್ದವು. ಇದುವರೆವಿಗೆ ಮಹಾಕಾವ್ಯವನ್ನು ಕುರಿತು ಚರ್ಚೆ ಕನ್ನಡದಲ್ಲೂ ನಡೆದಿದೆ. ಕಾವ್ಯಮಿಮಾಂಸಕರು ಮತ್ತು ಸಾಹಿತ್ಯ ವಿಮರ್ಶಕರು ಮಹಾಕಾವ್ಯದ ಗೊತ್ತು ಗುರಿಗಳನ್ನು ಹಾಗೂ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ಕನ್ನಡದ ಮಹಾಕಾವ್ಯಗಳು ಮತ್ತು ಭಾರತೀಯ ಮಹಾಕಾವ್ಯಗಳಲ್ಲದೆ ಪಾಶ್ಚಾತ್ಯ ಮಹಾಕಾವ್ಯವೆಂದರೆ ಹೀಗಿರಬೇಕು ಎಂಬ ನಿರ್ದಿಷ್ಟ ಕಲ್ಪನೆಯಲ್ಲಿಯೇ ಯೋಚಿಸಿದ ಇವರೆಲ್ಲ ಕೇವಲ ಶಿಷ್ಟಕಾವ್ಯಗಳನ್ನು ಕುರಿತಾದ ಏಕಮುಖ ಚರ್ಚೆಯನ್ನು ಮಾತ್ರ ಬೆಳೆಸುವ ಮೂಲಕ ಸಾಂಸ್ಕೃತಿಕ ವಲಯದ ಬಹುಮುಖ್ಯ ಭಾಗವಾದ ಮೌಖಿಕ ಮಹಾಕಾವ್ಯಗಳನ್ನು ಮರೆತರು ಎಂದೇ ಹೇಳಬಹುದು. ಈ ಮೌಖಿಕ ಪರಂಪರೆ ಅವರಿಗೆ ಮುಖ್ಯವಾಗಿ ಕಂಡಿಲ್ಲದಿರಲೂಬಹುದು.

ಆದರೆ ಪಾಶ್ಚಾತ್ಯ ಮಹಾಕಾವ್ಯಗಳೆನಿಸಿದ ಕಲೇವಾಲಾ, ಗಿಲ್ಗಮಿಷ್ ಮತ್ತು ಬೋವುಲ್‌ಗಳಂತ ಕಾವ್ಯಗಳನ್ನು ಅಪ್ಪಟ ಕಾವ್ಯ ಹೌದ ಎಂದು ಪರಿಗಣಿಸಿದ ಪಾಶ್ಚಾತ್ಯ ವಿದ್ವಾಂಶರು ಆ ಸಾಲಿನಲ್ಲಿ ಅವುಗಳನ್ನು ಸ್ಪಷ್ಟವಾಗಿ ದಾಖಲಿಸಿದರು. ಬಹುಶಃ ಇಂಥ ನಿಷ್ಪಕ್ಷಪಾತ ಧೋರಣೆಯಿದ್ದುದರಿಂದಲೇ. ಸಿ.ಎಂ.ಬೋವ್ರನಂಥ ಒಬ್ಬ ಪ್ರಮುಖ ವಿದ್ವಾಂಸ ಈ ಮೌಖಿಕ ಮಹಾಕಾವ್ಯ ಮತ್ತು ಶಿಷ್ಟ ಮಹಾಕಾವ್ಯದ ಸ್ವರೂಪದ ಬಗ್ಗೆ ಚರ್ಚಿಸುತ್ತಾ "ಈ ಎರಡು ಬಗೆಯ ಮಹಾಕಾವ್ಯಗಳಲ್ಲಿ ವಾಚಿಕ ಮಹಾಕಾವ್ಯವೇ ಶುದ್ಧವಾದ ಸಹಜಸ್ಫೂರ್ತವಾದ ನೇರವಾದ. ನಿರರ್ಗಳವಾದ ನಾಗರೀಕತೆಯಿಂದ ಕಲುಷಿತವಾಗದ ಕವಿಯಾಗಿ ಎಂದು ಘೋಷಿಸಿದ. ಆದರೆ ನಮ್ಮಲ್ಲಿ ಇಂಥ ಅರಿವು ಮೂಡಲು ತಡವಾದದ್ದಾದರೂ ಯಾಕೆ? ಬಹುಶಃ ರಾಮಾಯಣ ಮತ್ತು ಮಹಾಭಾರತಗಳು ಎಂಬ ಸಾರ್ವತ್ರಿಕ ಅಭಿಪ್ರಾಯ ನಮ್ಮದಾಗಿತ್ತು. ಈ ಎರಡು ಮೇರುಕೃತಿಗಳಷ್ಟೇ ಇಡೀ ಭರತ ಖಂಡದ ಸಂಸ್ಕೃತಿಯನ್ನು ಪ್ರತಿನಿಧಿಸುವಂಥ ಶಕ್ತಿಯನ್ನು

ಪಡೆದುಕೊಂಡಿದೆ. ಎಂಬ ನಂಬಿಕೆ ನಮ್ಮದಾಗಿತ್ತು. ಭಾರತದಾದ್ಯಂತ ಅನೇಕ ಬುಡಕಟ್ಟುಗಳು ತಮ್ಮದೇ ಆದ ರಾಮಯಣ, ಮಹಾಭಾರತಗಳನ್ನು ಹಾಡಿಕೊಳ್ಳುತ್ತಿದ್ದ ರಾದರೂ ಸ್ಥಾಪಿತ ಮೌಲ್ಯಗಳಿಗೆ ಅವು ವಿರುದ್ಧವಾಗಿದ್ದುದರಿಂದಾಗಿ ಅವುಗಳನ್ನು ಮಾನ್ಯ ಮಾಡಲಿಲ್ಲ. ಮಹಾಕಾವ್ಯವೆಂದರೆ ಅದು ನೂರಾರು ಘಟನೆಗಳ ಮೊತ್ತವಾದ್ದರಿಂದ ಅಕ್ಷರ ಬಲ್ಲವನು ಮಾತ್ರ ಅಂಥದ್ದನ್ನು ರಚಿಸಬಲ್ಲನೆಂಬ ತಿಳುವಳಿಕೆಯೂ ಈ ನಿರ್ಲಕ್ಷ್ಯಕ್ಕೆ ಕಾರಣವಿರಬಹುದು. ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಇದೆ. ಅದೇ ಭಾರತೀಯ ಸಂಸ್ಕೃತಿ" ಎಂಬೇಕಮುಖೀ ಚಿಂತನೆ ಈ ಅಭಿಪ್ರಾಯಕ್ಕೆ ಕಾರಣವಾಗಿಬಹುದು.

ಆದರೆ ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ, ಅದರಲ್ಲೂ ಭಾರತದಂತ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು, ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು ಅಲ್ಲಿನ ಜನ, ಅವರ ಆಚಾರ ವಿಚಾರಗಳು ರೂಢಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ಸಾವಿರಾರು ಸಂಸ್ಕೃತಿ ವಿಶೇಷಗಳು ಕಣ್ಣ ಮುಂದೆ ತಾಕಲಾಡಿ ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸುತ್ತವೆ. ವಾಸ್ತವವಾಗಿ ಸ್ಥಳೀಯವಾದ, ನೆಲದ ಗುಣ ಪಡೆದ, ಆಯಾ ಜನತೆಯ ಉಸಿರಿನೊಡನೆ ಬೆಳದುಬಂದ ಈ ಸಾಂಸ್ಕೃತಿಕ ವಿಶೇಷಗಳು ಭಾರತೀಯ ಸಂಸ್ಕೃತಿಯ ಜೀವಕೋಶಗಳೇ ಹೊರತು 'ಭಾರತಕ್ಕೆ ಒಂದೇ ಸಂಸ್ಕೃತಿ' ಎಂಬುದು ಸುಳ್ಳು ಎಂದೇ ಹೇಳಬೇಕಾಗುತ್ತದೆ. ಭಾರತದ ಬಹುಮುಖ್ಯ ಕಾವ್ಯಗಳೆಂದು ಪರಿಗಣಿಸಲ್ಪಟ್ಟ ರಾಮಾಯಣ ಮಹಾಭಾರತಗಳು ಒಬ್ಬ ಕರ್ತೃವಿನಿಂದ ರಚಿಸಲ್ಪಟ್ಟ ಕೃತಿಗಳಾದರೂ, ಜನ ಸಾಮಾನ್ಯರ ನಡುವೆ ಅವು ವಿಸ್ತಾರಗೊಂಡ ರೀತಿ ವಿಸ್ಮಯ ಹುಟ್ಟಿಸುವಂಥದ್ದೇ. ಮೂಲತಃ ದೇವಭಾಷೆ ಎಂದು ಪರಿಗಣಿಸಲ್ಪಟ್ಟ ಆದರೆ ಜನಸಾಮಾನ್ಯರ ನಡುವೆ ಇಂದು ಇಲ್ಲವಾಗಿರುವ ಭಾಷೆಗಳಲ್ಲಿ ರಚಿಸಲ್ಪಟ್ಟ ಈ ಕಾವ್ಯಗಳನ್ನು ವಿವಿಧ ದೇಶಭಾಷೆಗಳನ್ನು ಅನುವಾದಿಸಿಕೊಂಡವು ಅಥವಾ ಪುನರ್ ಸೃಷ್ಟಿ ಮಾಡಿಕೊಂಡವು. ಆಯಾ ನೆಲದ ಗುಣ ಸ್ವಭಾವಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಕವಿಗಳು ಈ ಕಾವ್ಯಗಳಲ್ಲಿಯೇ ಪ್ರತಿಬಿಂಬಿಸಿದರಾದರು ತಮ್ಮವರಲ್ಲದೆ, ಇನ್ನೊಂದು ಭಿನ್ನ ಪ್ರದೇಶದ ವೈದಿಕ ವೀರರ ಕಥನಗಳನ್ನಾಗಿಲೀ, ದಶಾವತಾರದ ಹಿನ್ನೆಲೆಯನ್ನಾಗಲೀ, ಆರ್ಯ ಸಂಸ್ಕೃತಿಯ ಗುಣ ವಿಶೇಷಗಳಾಗಲೀ ಅಥವಾ ಅವರ ಸ್ಥಾಪಿತ ಮೌಲ್ಯಗಳನ್ನಗಲೀ, ಬದಲಿಸಲು ಸಾಧ್ಯವಾಗಲಿಲ್ಲ. "ಅಖಿಲ ಭಾರತ' ಪರಂಪರೆಯಲ್ಲಿ ಹರಿದು ಬಂದ ಈ ಎರಡು ಪುರಾಣಗಳು ಆಳುವವರ್ಗಗಳ ನಡುವಿನ ದ್ವೇಶ ವೈಶಮ್ಯಗಳನ್ನು ಪ್ರೀತಿ ಪ್ರೇಮಗಳನ್ನು, ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡವುಗಳು. ಇವುಗಳನ್ನೇ ಮೌಲ್ಯಗಳೆಂದು ಒಪ್ಪಿ ನಮ್ಮ ದೇಶಭಾಷಾ ಕಾವ್ಯಗಳೂ ಪೋಷಿಸಿಕೊಂಡು ಬಂದವು. ಪಂಪನ

ಭಾರತದಿಂದ ಹಿಡಿದು ಕುವೆಂಪುರವರ ರಾಮಾಯಣ ದರ್ಶನದವರೆಗೆ ಈ ಮಾತು ನಿಜ ಎಂದೇ ನನ್ನ ನಂಬಿಕೆ.

ಆದರೆ ಇದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು, ಪವಾಡ ಪುರುಷರು, ಬೈರಾಗಿಗಳು ಸಾಧಕರ ಮಹಿಮೆಗಳನ್ನು ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ್ದ ಮಧ್ಯ, ಮಾಂಸ, ಮೈಥುನ, ಭಂಗಿ ಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು, ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಹಾಗೂ ಈ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ಧೀರ್ಘ ಕಥನಗಳೇ ನಮ್ಮ ಭವ್ಯ ಇತಿಹಾಸ ಎಂದು ಸಾರುತ್ತ ಬಂದಿರುವ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಈ ಕಥನಗಳಿಗಿದೆ. ಪರಂಪರಾಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ದವಾದ ಈ ಕಥನಗಳು ತಮ್ಮದೇ ಮೌಲ್ಯಗಳನ್ನು ಜೀವನದೃಷ್ಠಿಯನ್ನು ಆ ಮೂಲಕ ಒಂದು ನಿರ್ದಿಷ್ಟ ನೆಲದ ಲೋಕದೃಷ್ಠಿಯನ್ನು ಹಾಗೂ ಅವರ ವಿವೇಕವನ್ನು ಹೇಳುತ್ತವೆ. ಜನಸಾಮಾನ್ಯರ ನಡುವಿನ ಸರಳ ವ್ಯಕ್ತಿತ್ವದ ಈ ಕಥನಗಳ ನಾಯಕರು ಸಂದರ್ಭ ಬಂದಾಗ ಮಾತ್ರ ತಮ್ಮ ಅಗಾಧತೆಯನ್ನು ಮೆರಯಬಲ್ಲವರು. ಸ್ವಾಭಿಮಾನಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸಿ ನಿಲ್ಲಬಲ್ಲವರು. ಈ ನಾಯಕರಾದರೂ ಎಂಥವರು? ಮಾದಿಗನೆಂದು ಹೇಳಲಾಗುವ ಮಾದಪ್ಪ, ಹೊಲೆಯನೆಂದು ಕರೆಯಲಾಗುವ ಮಂಟೇಸ್ವಾಮಿ, ಧನ ಕಾಯುವ ಅನಾಥ ಜುಂಜಪ್ಪ, ಕುರಿಕಾಯುವ ಮೈಲಾರಲಿಂಗ, ಕಾಡು ಮತ್ತು ನಾಡಿನ ನಡುವೆ ಸಂಬಂಧ ಸ್ಥಾಪಿಸಿ ಕೊಳ್ಳಲಬಲ್ಲ ಇವರು ಪ್ರಕೃತಿಯಲ್ಲಿನ ದುಷ್ಟ ಮೃಗಗಳನ್ನು ಒಲಿಸಿಕೊಂಡು ಅವುಗಳನ್ನು ಸ್ನೇಹದಿಂದ ಕಾಣಬಲ್ಲವರು ಬೇಟೆಗಾರರಂತೂ ಅಲ್ಲ. ನಾಗರೀಕ ಸಮಾಜದ ಅಥವಾ ಪ್ರಭುತ್ವದ ದಬ್ಬಾಳಿಕೆಯಿಂದ ತಮ್ಮನ್ನು ನಂಬಿದ ಜನವರ್ಗಗಳನ್ನು ರಕ್ಷಿಸಬಲ್ಲವರು, ರಾಜ್ಯ ಆಳುವವರಂತೂ ಅಲ್ಲ. ದುಷ್ಟರು ಅಥವಾ ಹೆಡ್ಡರನ್ನು ಪಳಗಿಸಬಲ್ಲವರು, ಕೊಲ್ಲುವವರಲ್ಲ.

ಮಲೆಮಾದೇಶ್ವರ ಕಾವ್ಯದ ಮಾದಪ್ಪನದು ಸದಾ ಪಯಣದ ಬದುಕು. ಭಿಕ್ಷೆ ಬೇಡುವುದೇ ಅವನ ವೃತ್ತಿ. ಆದರೆ ಅವನಿಗೆ ಒಬ್ಬ ಸಾಮಾನ್ಯ ವ್ಯಕ್ತಿಗಿರಬಹುದಾದ ಆಸೆಗಳಿವೆ. ತನ್ನ ಒಕ್ಕಲುಗಳನ್ನು ಹೆಚ್ಚಿಸಿಕೊಂಡು ಒಂದು ಕಡೆ ನೆಲೆ ನಿಲ್ಲಬೇಕೆಂಬ ತವಕ ಅವನದು. ಈ ಆಸೆಯಿಂದಲೇ ಹಲವು ಜನವರ್ಗಗಳ ಪ್ರಮುಖರನ್ನು ತನ್ನೆಡೆಗೆ ಸೆಳೆಯುವ ಹುನ್ನಾರ ಹೂಡುತ್ತಾನೆ. ಫಲಿಸದಿದ್ದಾಗ ಮಾಟಮಂತ್ರಗಳ ಕಡೆಗೆ ವಾಲುತ್ತಾನೆ. ಅಂತೂ ಹೇಗೋ ಗೆಲ್ಲಬೇಕು. ಅವರನ್ನು ತನ್ನ ಪರಿಧಿಗೆ ಸೇರಿಸಿಕೊಂಡು ಅವರ ಜೀವನ ಹಸನುಗೊಳಿಸಬೇಕು ಎಂಬುದು ಆವನ ಉದ್ದೇಶ. ಮಂಟೇಸ್ವಾಮಿ ಜಗತ್ತನ್ನೇ ಸೃಷ್ಠಿಸಬಲ್ಲ ಒಬ್ಬ ಪವಾಡಕಾರ.

ಆದರೆ ಸದಾನಡೆದಾಡುತ್ತಾ ಭಂಗಿ ಸೇವಿಸುತ್ತಾ ತಿರುಗುವ ಒಬ್ಬ ಬೈರಾಗಿ, ಕಟ್ಟುವ ಲಿಂಗದ ಬದಲಾಗಿ ಆತ್ಮಲಿಂಗದ ಶ್ರೇಷ್ಠತೆಯನ್ನು ಸಾರುವ ಒಬ್ಬ ಜ್ಯೋತಿ ಪುರುಷ. ಎಂಥ ಕಟುಕರನ್ನು ಕರಗಿಸಬಲ್ಲ ಆತ್ಮಬಲ ಪಡೆದವನು.

ಹನ್ನೆರಡನೇ ಶತಮಾನದ ಶರಣರ ಚಳವಳಿ, ಅಲ್ಲಿ ನಡೆದ ವರ್ಣ ಸಂಕರ, ಆ ಮೂಲಕ ಆಶಿಸಲಾಗಿದ್ದ ಕೆಳಜಾತಿಗಳ ಒಗ್ಗಟ್ಟು ಅನೇಕ ವಿಪ್ಲವಗಳ ಕಾರಣ ವಿಫಲವಾದ ನಂತರ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಕ್ಷುಬ್ಧ ವಾತಾವರಣವೇ ತಲೆದೋರಿ ಬಿಟ್ಟಿತ್ತು. ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ, ಹರಳಯ್ಯ, ಕಕ್ಕಯ್ಯಾದಿಗಳ ನಂತರದ ಮೇಲ್ವರ್ಗಗಳಿಗೆ ಸೇರಿದ ಶರಣರ ಗುಂಪು ಕೆಳವರ್ಗಗಳನ್ನು ನಿರ್ಲಕ್ಷಿಸಿದುವೇ ಎಂಬ ಅನುಮಾನವೂ ಇದೆ. ಅಥವಾ ಹನ್ನೆರಡನೇ ಶತಮಾನದ ಕಾಲಕ್ಕೆ ಅತ್ಯಂತ ಪ್ರಗತಿಪರವಾಗಿದ್ದ ಆ ಗುಂಪು ನಂತರ ಕ್ರಮೇಣ ಒಂದು ಜಾತಿಯಾಗಿ ಮಾರ್ಪಟ್ಟು ಕೆಲವು ಕಟ್ಟುಪಾಡುಗಳನ್ನು ವಿಧಿಸಿಕೊಂಡು, ತನ್ನ ಕಂದಕವನ್ನು ತಾನೇ ತೋಡಿಕೊಳ್ಳತೊಡಗಿದಾಗ ಇದರಿಂದ ಬೇಸತ್ತ ಕೆಳವರ್ಗದ ಕೆಲವು ನಾಯಕರು ಆ ಒಕ್ಕೂಟದಿಂದ ಸಿಡಿದು ನಿಂತರೆ? ಎಂಬ ವಿಚಾರವನ್ನು ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಶರಣರ ಜನಪರ ಚಳವಳಿಯ ಮೂಲಕ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಬೀದಿಗೆ ಬಂದ ಕೆಳವರ್ಗದ ಜನ ನಂತರದ ಅನಿರೀಕ್ಷಿತ ಸೋಲಿನಿಂದಾಗಿ ಹತಾಶರಾಗಿ ತಮ್ಮ ತಮ್ಮ ದಾರಿಗಳನ್ನು ತಾವು ಹಿಡಿದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಮಾದೇಶ್ವರ ಮತ್ತು ಮಂಟೇಸ್ವಾಮಿಯವರನ್ನು ನಾವು ನೋಡಬೇಕಾಗಿದೆ. ಈ ಇಬ್ಬರು 'ಉತ್ತರ ದೇಶದಿಂದ ಬಂದವರು ಎಂಬ ಮಾತು ಈ ಎರಡೂ ಕಾವ್ಯಗಳ ಅನೇಕ ಕಡೆ ಉಲ್ಲೇಖಿತವಾಗುತ್ತದೆ. ಅಲ್ಲದೆ, ಬಸವಣ್ಣನವರ ಜೊತೆಗೂ ಸಂಬಂಧ ಕಲ್ಪಿಸುವ ಕಥಾ ಭಾಗಗಳೂ ಸಿಗುತ್ತವೆ. ಆದರೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಆ ಚಳುವಳಿಯ ಒಂದು ಭಾಗವಾಗಿದ್ದರು ಎಂಬುದಕ್ಕಾಗಲೀ ಯಾವುದೇ ಆಧಾರಗಳೂ ಸಿಕ್ಕುವುದಿಲ್ಲ. ಆದರೆ ಈ ಎರಡು ಮಹಾಕಾವ್ಯಗಳ ನಾಯಕರು ಆ ಮಹಾನ್ ಚಳುವಳಿಯ ನಂತರ ಘಟ್ಟಗಳಲ್ಲಿ ಇದ್ದವರು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ.

ಮಾದೇಶ್ವರ ಮತ್ತು ಮಂಟೇಸ್ವಾಮಿ ಕೆಳವರ್ಗಕ್ಕೆ ಸೇರಿದ್ದವರು ಎಂಬುದರಲ್ಲಿ ಯಾವುದೇ ಅನುಮಾನವೂ ಇರುವಂತಿಲ್ಲ. ಈಗಲೂ ಅಸ್ತಿತ್ವದಲ್ಲಿರುವ ಈ ಪಂಥಗಳ ಗುಡ್ಡರ ಸಂಪ್ರದಾಯಗಳು ಹಾಗೂ ಅವರ ಆಚರಣೆಗಳು ಈ ವಾದಕ್ಕೆ ಪುಷ್ಠಿ ನೀಡುತ್ತವೆ. ಆದರೂ ಇವರುಗಳ ಹುಟ್ಟಿನ ಬಗ್ಗೆ ಅನೇಕವಾದ ವಿವಾದಗಳಿವೆ. ಮಾದೇಶ್ವರ ಮತ್ತು ಮಂಟೇಸ್ವಾಮಿ ಚಳವಳಿಯ ಒಂದು ಭಾಗವಾಗಿದ್ದರು ಎಂಬುದಕ್ಕಾಗಲಿ ಯಾವುದೇ ಆಧಾರಗಳು ಸಿಕ್ಕುವುದಿಲ್ಲ. ಆದರೆ ಈ ಎರಡೂ ಮಹಾಕಾವ್ಯಗಳ ನಾಯಕರು ಆ ಮಹಾನ್ ಚಳವಳಿಯ ನಂತರದ ಘಟ್ಟಗಳಲ್ಲಿ ಇದ್ದವರು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಮಾದೇಶ್ವರ ಮತ್ತು ಮಂಟೇಸ್ವಾಮಿ ಕೆಳವರ್ಗಕ್ಕೆ

ಸೇರಿದ್ದವರು ಎಂಬುದರಲ್ಲಿ ಯಾವುದೇ ಅನುಮಾನವೂ ಇರುವಂತಿಲ್ಲ. ಈಗಲೂ ಅಸ್ತಿತ್ವದಲ್ಲಿರುವ ಈ ಪಂಥಗಳ ಗುಡ್ಡರ ಸಂಪ್ರದಾಯಗಳು ಹಾಗೂ ಅವರ ಆಚರಣೆಗಳು ಈ ವಾದಕ್ಕೆ ಪುಷ್ಠಿ ನೀಡುತ್ತವೆ. ಆದರೂ ಇವರುಗಳ ಹುಟ್ಟಿನ ಬಗ್ಗೆ ಅನೇಕವಾದ ವಿವಾದಗಳಿವೆ. ಮಾದೇಶ್ವರ ಮತ್ತು ಮಂಟೇಸ್ವಾಮಿ ಹುಟ್ಟಿನಿಂದ ಯಾವುದೇ ಜಾತಿಯವರಾಗಲೀ ಕೆಳವರ್ಗಗಳ ವೀರ ಪುರುಷರಾಗಿ ಆರಾಧಿಸಲ್ಪಟ್ಟಿದ್ದು ಮಾತ್ರ ನಿಜ. ಈ ಅರಣ್ಯವಾಸಿ ಬೈರಾಗಿಗಳು ಕೇವಲ ಹೊಟ್ಟೆ ಹೊರೆಯುವ ಸನ್ಯಾಸಿಗಳಾಗಿರಲಿಲ್ಲ. ಪಟ್ಟಭದ್ರ ಸಂಸ್ಕೃತಿಗೆ ವಿರುದ್ಧವಾದ ಕೆಳವರ್ಗಗಳ ಅಸ್ತಿತ್ವವನ್ನು ಪುನರ್ ಸ್ಥಾಪಿಸುವ ಪ್ರತಿಸಂಸ್ಕೃತಿಯೊಂದರ ನಿರ್ಮಾಣ ಇವರ ಉದ್ದೇಶದಿಂದಾಗಿಯೇ ಈ ಇಬ್ಬರೂ ಆರಿಸಿಕೊಂಡದ್ದು ಬುಡಕಟ್ಟುಗಳು ಮತ್ತು ಶೂದ್ರಾದಿ ಶೂದ್ರರೇ ಅಧಿಕವಾಗಿದ್ದ ಕರ್ನಾಟಕದ ದಕ್ಷಿಣದ ತುದಿಯನ್ನು, ದಕ್ಷಿಣದ ಹಲವು ಭಾಗಗಳಲ್ಲಿ ಇವರ ಗುರುಪೀಠ ಮತ್ತು ಗದ್ದುಗೆಗಳಿವೆ.

ನಾನು ಇದುವರೆಗೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಇವರಿಬ್ಬರನ್ನು ಒಟ್ಟೊಟ್ಟಿಗೆ ಇಟ್ಟು ನೋಡುತ್ತಾ ಬಂದೆ. ಆದರೆ ಇವರಿಬ್ಬರೂ ಸಮಕಾಲೀನರೆ? ಇವರಿಬ್ಬರ ಗುರಿ ಒಂದೇ ಆಗ ಆಗಿತ್ತೇ? ಎಂಬ ಪ್ರಶ್ನೆಗಳು ಏಳುತ್ತವೆ. ವಾಸ್ತವವಾಗಿ ಇವರಿಬ್ಬರ ಅಂತರಂಗಗಳು ಒಂದೇ ರೀತಿ ತುಡಿದಿರಬಹುದಾದರೂ ಇವರಿಬ್ಬರೂ ಬೇರೆ ಬೇರೆ ಸಂದರ್ಭದಲ್ಲಿ ಹುಟ್ಟಿಕೊಂಡ ಸಾಂಸ್ಕೃತಿಕ ನಾಯಕರು. ಎರಡು ಗುರುಪರಂಪರೆಗಳು ಒಂದಕ್ಕೊಂದು ಪೂರಕವಾಗಿ ಕಂಡರೂ ಆಚರಣೆಗಳಲ್ಲಿ ವ್ಯತ್ಯಾಸಗಳಿವೆ. ಮಾದೇಶ್ವರನ ಗುಡ್ಡರಾದ ಕಂಸಾಳೆ ಗಾಯಕರಿಗೂ ಮಂಟೇಸ್ವಾಮಿ ಗುಡ್ಡರಾದ ನೀಲಗಾರರಿಗೂ ಅನೇಕ ವ್ಯತ್ಯಾಸಗಳಿವೆ. ಒಟ್ಟಾರೆ ಅಂದಿನ ದಟ್ಟಾರಣ್ಯದ ಹಲವು ಬುಡಕಟ್ಟುಗಳ ನಡುವೆ ಆರಂಭವಾದ ಈ ಸಾಂಸ್ಕೃತಿಕ ಮಂಥನ ದೀರ್ಘ ಕಥನಗಳಾಗಿ ರೂಪುಗೊಂಡದ್ದು ಮಾತ್ರ ಕುತೂಹಲಕಾರಿ. ಈ ದೃಷ್ಟಿಯಿಂದ ಈಗ ಮಂಟೇಸ್ವಾಮಿ ಕಾವ್ಯವನ್ನು ನೋಡಬಹುದು.

"ಮಂಟೇಸ್ವಾಮಿಯನ್ನು 'ಧರೆಗೆ ದೊಡ್ಡವರು' ಎಂದು ಕರೆಯುವುದರಲ್ಲಿಯೇ ಒಂದು ತರ್ಕ ಅಡಗಿದೆ. ಸಾಮಾನ್ಯವಾಗಿ ಇಂಥ ಮಹಾತ್ಮರು ತ್ರಿಮೂರ್ತಿಗಳ ವರದಿಂದಲೋ ಇಲ್ಲ ಅವರ ಶಾಪದಿಂದಲೋ, ಇಲ್ಲವೇ ಅವರ ಬೆವರಿಂದಲೋ ಹುಟ್ಟುವುದು ಸಾಂಪ್ರದಾಯಿಕ ಪುರಾಣಗಳ ವಾಡಿಕೆ. ಆದರೆ ಮಂಟೇಸ್ವಾಮಿ ಹುಟ್ಟಿನ ಪುರಾಣ ಇದೆಲ್ಲವನ್ನೂ ಮೀರಿದ್ದು. ಇವನೇ ಜಗತ್ತಿನ ಸೃಷ್ಟಿಕರ್ತ ತ್ರಿಮೂರ್ತಿಗಳು ಭೂಮಿ, ತಾಯಿ, ಸೂರ್ಯ, ಚಂದ್ರರನ್ನು ಸ್ವತಃ ಪಡೆದು ಇಡೀ ವಿಶ್ವದ ಸೃಷ್ಟಿಗೆ ಕಾರಣನಾಗುತ್ತಾನೆ. ಸಾಮಾಜಿಕವಾಗಿ ಎದುರು ನಿಂತಿರುವ ಒಂದು ಪ್ರತಿಷ್ಠಿತ ಧರ್ಮವನ್ನು ಎದುರು ಹಾಕಿಕೊಳ್ಳಲು ಸಾಧ್ಯವಾಗದಾಗ ತಮ್ಮ ಸಾಂಸ್ಕೃತಿಕ ನಾಯಕನೊಬ್ಬನನ್ನು ಅತಿಮಾನುಷನನ್ನಾಗಿ ಸೃಷ್ಟಿಸಿ ಬಸವಣ್ಣನಿಗಿಂತ, ಶಿವನಿಗಿಂತ ಅಥವಾ

ಸೂರ್ಯ ಚಂದ್ರರಿಗಿಂತ ತಮ್ಮವನೇ ದೊಡ್ಡವನೆಂದು ಕರೆದುಕೊಳ್ಳುವ ಸಮಾಧಾನಕರ ಆಶಯ ಇಲ್ಲಿರುವಂತಿದೆ. ಆದುದರಿಂದಲೇ ಅವನು ಬ್ರಹ್ಮಾಂಡವನ್ನೇ ಸೃಷ್ಟಿಸಬಲ್ಲ ಮಾಯಾಕಾರನಾಗಿ ಅವನ ಭಕ್ತರಿಗೆ ತೋಚುತ್ತಾನೆ."

ಮಂಟೇಸ್ವಾಮಿಗೂ ಶರಣ ಚಳುವಳಿಯ ಅಲ್ಲಮಪ್ರಭುವಿಗೂ ಕಾವ್ಯದಲ್ಲಿ ಅವಿನಾಭಾವ ಸಂಬಂಧವಿದೆ. ಅನೇಕ ಬಾರಿ ಅಲ್ಲಮಪ್ರಭು, ಜಗಜ್ಯೋತಿ, ಪರಂಜ್ಯೋತಿ ಎಂಬಂಥ ಪದಗಳು ಪುನರಾವರ್ತಿತವಾಗಿರುತ್ತವೆ. ಅಲ್ಲಮ ಅಂದಿನ ಶರಣರ ಗುಂಪಿನಲ್ಲಿದ್ದೂ ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದ ನಿಷ್ಠುರವಾದಿ, ಕಟ್ಟಿದ ಲಿಂಗಕ್ಕಿಂತ ಆತ್ಮಲಿಂಗಕ್ಕೆ ಒತ್ತು ಕೊಟ್ಟುವನು. ಮಂಟೇಸ್ವಾಮಿಯ ತತ್ವ ಇದೇ, ಅವನು ಜ್ಯೋತಿರ್ಲಿಂಗದ ಹಾಗೆ ನೋಡಿದರೆ ಶೈವ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಒಂದು ಚರ್ಚೆ ವಾಗ್ವಾದ ಇಲ್ಲಿ ಅಡಗಿದೆ. ಕಲ್ಪನೆಯನ್ನು ಪುನರ್ ನಿರ್ವಚನಕ್ಕೆ ಮಂಟೇಸ್ವಾಮಿ ಒಳಪಡಿಸುತ್ತಾನೆ. ಲಿಂಗ ಎನ್ನುವುದು ವೇ ಅಥವಾ ತತ್ವೇ ಈ ಕಲ್ಪನೆ ಅಲ್ಲಮನ ಮುಂದುವರಿಕೆಯಾಗಿಯೇ ಮಂಟೇಸ್ವಾಮಿ ಎಂಬ ವ್ಯಕ್ತಿಯ ರೂಪದಲ್ಲಿ ಬಂದಂತೆ ಕೆಲವಿರುತ್ತದೆ.

ಮಂಟೇಸ್ವಾಮಿ ಕಲ್ಯಾಣ ಪಟ್ಟಣವನ್ನು ಪ್ರವೇಶ ಮಾಡುವ ರೀತಿಯೇ ರೋಚಕ. ಅಸಹ್ಯಕರ ವೇಷದ ರೋಗಿಯಾಗಿ ಕಲ್ಯಾಣ ಪ್ರವೇಶಮಾಡಿ ದಿಗ್ಭ್ರಮೆಗೊಳಿಸುವುದರಿಂದ ಒಡಿದು 'ರಂಡಮುಂಡ ಜಂಗಮ'ರು ಕಟ್ಟಿದ ಲಿಂಗಗಳನ್ನು ಕಲ್ಯಾಣ ಮಾಡುವವರೆಗಿನ ದೃಶ್ಯ ಅನೇಕ ಸಾಂಸ್ಕೃತಿಕ ಚರ್ಚೆಗಳಿಗೆ ದಾರಿ ಮಾಡಿಕೊಡುತ್ತದೆ. ಇಲ್ಲಿ ಅಚಾರಗಳು ಬಹಳ ಪ್ರಮುಖವಾಗುತ್ತವೆ. ಆತ್ಮದಲ್ಲಿ ಶುದ್ಧಿ ಇಲ್ಲದ ಕೆಲವರು ಕಟ್ಟಿದ ಲಿಂಗದ ಹುಸಿಗೊಳಿಸುವ ಆಶಯ ಒಂದನೆಯದಾದರೆ, ಕಲ್ಯಾಣದಲ್ಲಿ ಉಳಿಯಲು ಯೋಗ್ಯರಾದ ಕೇವಲ ಕೆಳವರ್ಗದವರು ಮಾತ್ರ ಎಂಬ ಆಶಯ ಎರಡನೆಯದು. ಕಡೆಗೆ ಮಂಟೇಸ್ವಾಮಿಯ ಪಾಸಾಗಿ ಉಳಿಯುವವರೆಂದರೆ ಹೊಲೆಯರ ಹೊನ್ನಪ್ಪ, ಮಾದಿಗರ ಚನ್ನಯ್ಯ, ಮಡಿವಾಳ ಮಾಚಪ್ಪ ಗಾಣಿಗರ ದಾಸಪ್ಪ, ಅಂಬಿಗರ ಚೌಡಯ್ಯ, ಈಡಿಗರ ಕ್ಯಾತಪ್ಪ, ಕುರುಬರ ಬೀರಯ್ಯ ಶೂದ್ರರು ಮಾತ್ರ ನಿಜವಾದ ಶಿವಶರಣರೆಂದರೆ ಇವರೇ ಎಂಬುದು ಅವನ ಪ್ರತಿಪಾದನೆ. ಇದು ಒಂದು ರೀತಿಯಲ್ಲಿ ಕಲ್ಯಾಣದ ಶರಣ ಸಂಸ್ಕೃತಿಯ ಜೊತೆಗೆ ಜನಪದರು ನಡೆಸಿದ ಸಂವಾದ. ಇವರ ದೃಷ್ಟಿಯಲ್ಲಿ ಕಲ್ಯಾಣ ಕೂಡ ಭ್ರಷ್ಟವಾಗಿತ್ತು. ಅದನ್ನು ಮಂಟೇಸ್ವಾಮಿ ಶುಚಿಗೊಳಿಸಿ ಬಸವಣ್ಣನವರಿಗೆ ಒಪ್ಪಿಸುತ್ತಾರೆ. ವೀರಶೈವ ಪುರಾಣಗಳು ಅಥವಾ ಶೂನ್ಯ ಸಂಪಾದನೆಯಲ್ಲಿ ಕಾಣಲಾಗದ ಈ ಚಿಕಿತ್ಸಕ ಆಶಯವನ್ನು ಮಧ್ಯದಲ್ಲಿ ಕಾಣುತ್ತೇವೆ. ಆದರೆ ಇವರ ದೃಷ್ಟಿಯಲ್ಲಿ ಕಲ್ಯಾಣ ಪೂಜನೀಯವಲ್ಲ. ಎಂದಲ್ಲ. ಕಲ್ಯಾಣವನ್ನು ಗೌರವಿಸುತ್ತಲೇ ಕೆಳಜಾತಿಯವರ ಸಂಬಂಧದಲ್ಲಿ ಅದಿನ್ನೂ ಅಪರಿಪೂರ್ಣವಾಗಿತ್ತು ಎಂಬುದನ್ನು ಪ್ರತಿಪಾಧಿಸುತ್ತಿರುವಂತೆ ಕಂಡು ಬರುತ್ತದೆ.

ಒಟ್ಟಾರೆ ಮಂಟೇಸ್ವಾಮಿ ಕಾವ್ಯದ ಕಲ್ಯಾಣ ಪಟ್ಟಣದ ಸಾಲು ಚಳುವಳಿಯ ನಂತರದ ಕಲ್ಯಾಣ ಪಟ್ಟಣದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿ, ಅಲ್ಲಿನ ಅಜ್ಞಾನಕ್ಕೆ ತಾರತಮ್ಯಕ್ಕೆ ಬರೆದ ಭಾಷ್ಯವಾಗಿ ಕಾಣಿಸುತ್ತದೆ.

ಮಂಟೇಸ್ವಾಮಿಯ ಪರ್ಯಟನೆಯ ಜೊತೆಗೆ ಸಾಗುವ ಈ ಕಥಾನಕ ಮುಖ್ಯವಾಗಿ ಶಿಶು ಮಕ್ಕಳನ್ನು ಸಂಪಾದಿಸುತ್ತಾ ಹೋಗುತ್ತದೆ. ಶಿಶು ಮಕ್ಕಳನ್ನು ಪಡೆಯುವುದು ಇಲ್ಲಿ ಸಾಂಕೇತಿಕ. ಅದರ ಮೂಲಕ ಒಂದೊಂದು ಜನವರ್ಗವೇ ಮಂಟೇಸ್ವಾಮಿಯ ಧಾರ್ಮಿಕ ಪರಿಧಿಯ ಒಳಕ್ಕೆ ಸೇರಿಬಿಡುತ್ತಾರೆ. ರಾಚಪ್ಪಾಜಿ, ತೋಪಿನ ದೊಡ್ಡಮ್ಮ, ಚೆನ್ನಾಜಮ್ಮ, ಮಡಿವಾಳ ಮಾಚಯ್ಯ ಫಲಾರದಯ್ಯ, ಸಿದ್ದಪ್ಪಾಜಿ ಇವರೆಲ್ಲ ಮಂಟೇಸ್ವಾಮಿ ಪಂಥದ ಪ್ರಮುಖ ಅನುಯಾಯಿಗಳು ಇವರನ್ನು ಶಿಶುಮಕ್ಕಳನ್ನಾಗಿ ಪಡೆಯುವುದೇ ಒಂದೊಂದು ಕಥನವಾಗಿ ರೂಪುಗೊಳ್ಳುತ್ತದೆ. ಮೋಡಿ, ಮಾಟ, ತಂತ್ರ, ಮಾಯಕಾರ ವಿದ್ಯೆಗಳು ಇಲ್ಲಿ ಸರಾಗವಾಗಿ ಬಂದು ಹೋಗುತ್ತವೆ. ಮಂಟೇಸ್ವಾಮಿ ಕಾವ್ಯದ ಮುಖ್ಯ ಅಂಶವೆಂದರೆ ಎಲ್ಲಿಯೂ ಅದು ಹಿಂಸೆಯ ರೂಪ ತಾಳುವುದಿಲ್ಲ. ಆದರೆ ಮಂಟೇಸ್ವಾಮಿ ಅಹಂಕಾರಿಗಳನ್ನು ಬಿಡುವವನಲ್ಲ. ಅವರು ಎಷ್ಟೇ ದೊಡ್ಡವರಾದರೂ ಅಂಥವರ ಅಸ್ತಿತ್ವವನ್ನು ಪಲ್ಲಟಗೊಳಿಸಬಲ್ಲ ಶಕ್ತಿ ಅವನಿಗಿದೆ. ಎಂಥದ್ದನ್ನೂ ಅಧೀನ ಮಾಡಿಕೊಳ್ಳಬಲ್ಲ ಚಾತುರ್ಯವಿದೆ. ಇಂಥ ಇಕ್ಕಟ್ಟು ಬಂದಾಗಲೆಲ್ಲಾ ಮಲೆಮಾದೇಶ್ವರ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಕಂಡರೆ ಮಂಟೇಸ್ವಾಮಿ ಒಬ್ಬ ಆಧ್ಯಾತ್ಮಿಕ (ಸ್ಪಿರಿಚುಯಲ್) ನೇತಾರನಾಗಿ ಕಾಣಿಸಿಕೊಳ್ಳುತ್ತಾನೆ. ಸೌಮ್ಯವಾಗಿಯೇ ಎಲ್ಲವನ್ನೂ ಅಧೀನಕ್ಕೆ ತೆಗೆದು ಕೊಳ್ಳುತ್ತಾನೆ. ಯಾವುದಾದರೂ ಸಾಧ್ಯವಾಗದಿದ್ದಾಗ ಅವನು ಮೌನಿಯಾಗುತ್ತಾನೆ. ಕುಂತೂರು ಬೆಟ್ಟ ಹತ್ತುತ್ತಾನೆ. ಅದರ ತುತ್ತತುದಿಯಲ್ಲಿ ಕುರಿತು ತನ್ನ ಭಂಗಿ ಚಿಲುಮೆ ತೆಗೆಯುತ್ತಾನೆ. ಮಂಟೇಸ್ವಾಮಿಯ ಭಂಗಿಸೇವನೆ ಕೇವಲ ಹೊಗೆ ಬಿಡುವ ಕ್ರಿಯೆ ಅಲ್ಲ. ಸಮಸ್ತ ವ್ಯಾಪಾರಗಳೂ ಅದಲ್ಲಿ ಅಡಗಿವೆ. 'ಖಂಡುಗ'ಗಟ್ಟಲೇ ಭಂಗಿಯನ್ನು ಇಲ್ಲವಾಗಿಸಿ ವಾಲುತ್ತಾ, ಜೋಲುತ್ತಾ ಇರುವಾಗ ಅವನಿಗೆ ಪರಿಹಾರಗಳು ಹೊಳೆಯುತ್ತವೆ. ಜ್ಞಾನೋದಯವಾಗುತ್ತದೆ. ಆ ಕ್ಷಣದಲ್ಲಿ ತೆಗೆದುಕೊಂಡ ತೀರ್ಮಾನಗಳು ಫಲಿಸುತ್ತವೆ. ಎಂದು ಕಾವ್ಯದ ದೃಷ್ಟಿಯಲ್ಲಿಯೂ ಮುಖ್ಯ. ಎಲ್ಲೆಲ್ಲಿ ಕಾವ್ಯ ಬಡವಾಗ ತೊಡಗುತ್ತದೆಯೋ ಏಕತಾನವಾಗ ತೊಡಗುತ್ತದೋ ಅಂಥ ಸಂದರ್ಭಗಳಿಂದ ರೋಚಕತೆಗೆ ಎಳೆದೊಯ್ಯುತ್ತದೋ ಅಂಥ ಸಂದರ್ಭಗಳಿಂದ ರೋಚಕತೆಗೆ ಎಳೆದೊಯ್ಯುವುದು ಈ ಭಂಗಿಸೇವನೆಯೇ.

ಇಲ್ಲಿ ರಾಚಪ್ಪಾಜಿಯ ಸಾಲಿನಲ್ಲಿ ಬರುವ ಮೋಡಿಯ ವಿಚಾರಗಳು, ಫಲಧಾರಯ್ಯನ ಸಾಲಿನ ರೋಚಕ ನರಬಲಿ ಮತ್ತು ಬಲಿಯಾಗುವ ಹುಡುಗ ಫಲಾರದಯ್ಯನಾಗಿ ಪರಿವರ್ತಿತವಾಗುವ ಸಾಂಸ್ಕೃತಿಕ ಸಂದರ್ಭ, ದೊಡ್ಡಮ್ಮ ತಾಯಿಗೆ ಹೇಳುವ ಕಾಲಜ್ಞಾನ

ವಿಚಾರಗಳು ಇವೆಲ್ಲವೂ ಅಧ್ಯಯನಕ್ಕೆ ಯೋಗ್ಯವಾದ ವಿಚಾರಗಳು. ಆದರೂ ಬಹುಮುಖ್ಯವಾಗಿ ಇಲ್ಲಿ ನಾನು ಪ್ರಸ್ತಾಪಿಸಬೇಕಾಗಿರುವ ವಿಚಾರ ಕೆಂಪಾಚಾರಿ ಮತ್ತು ಸಿದ್ಧಪ್ಪಾಜಿಯದು. ಕೆಂಪಾಚಾರಿಯಾಗಿದ್ದವನು ಸಿದ್ದಪ್ಪಾಜಿಯಾಗಿ ಪರಿವರ್ತಿತವಾಗುವ ಅವಧಿ ಕಾವ್ಯದ ದೃಷ್ಠಿಯಿಂದ, ಸಾಂಸ್ಕೃತಿಕವಾದ ಕಾಲಘಟ್ಟಗಳ ದೃಷ್ಟಿಯಿಂದ ಅತ್ಯಂತ ಮುಖ್ಯವಾಗುತ್ತದೆ. ಪಾಂಚಾಳ ಜನವರ್ಗವನ್ನು ತನ್ನ ಪರಿಧಿಗೆ ಸೇರಿಸಿಕೊಳ್ಳುವ ಮೂಲಕ ಕಬ್ಬಿಣ ಉತ್ಪಾದಿಸುವ ವರ್ಗವೊಂದನ್ನು ಒಲಿಸಿಕೊಳ್ಳುವುದು ಮಂಟೇಸ್ವಾಮಿಯ ಅಪೇಕ್ಷೆ ಇದ್ದಂತೆ ಕಾಣುತ್ತದೆ. ಅವನು ಕೇಳುವ ಕಬ್ಬಿಣದ ಭಿಕ್ಷೆ ತೀರಾ ಸಾಂಕೇತಿಕವಾಗಿದೆ. ಕಾಡು ನಾಡಾಗಿ ಪರಿವರ್ತಿತವಾಗುತ್ತಿರುವ, ಆಹಾರ ಸಂಗ್ರಾಹಕರು ಮತ್ತು ಪಶುಸಂಗೋಪಕರು ಕೃಷಿಯ ಕಡೆಗೆ ವಾಲುವ ಮತ್ತು ಈಗಾಗಲೇ ಕೃಷಿಕರಾಗಿದ್ದವರು. ತಮ್ಮ ವ್ಯವಸಾಯಕ್ಕೆ ಕಬ್ಬಿಣದ ಉಪಯೋಗ ಮಾಡಿಕೊಳ್ಳುವ ಸಂಕ್ರಮಣ ಕಾಲದಲ್ಲಿ ಕಬ್ಬಿಣಕ್ಕೆ ಇದ್ದ ಬೇಡಿಕೆಯನ್ನ ಹಾಗೂ ಕಬ್ಬಿಣ ಉತ್ಪಾದಿಸುವವರಿಗೆ ಇದ್ದ ಹೆಚ್ಚುಗಾರಿಕೆಯನ್ನು ನಾವು ಗಮನಿಸಬೇಕಾಗುತ್ತದೆ.

ಹೀಗಾಗಿಯೇ ಪಾಂಚಾಳರು ಉತ್ಪಾದಿಸುವವರಿಗೆ ಇದ್ದ ಹೆಚ್ಚುಗಾರಿಕೆಯನ್ನು ನಾವು ಗಮನಿಸಬೇಕಾಗುತ್ತದೆ. ಹೀಗಾಗಿಯೇ ಪಾಂಚಾಳರು ದೊರೆಗಳಾಗಿ ಮೆರೆಯುತ್ತಿರುತ್ತಾರೆ. ಇಂಥವರಿಂದ ಕಬ್ಬಿಣದ ಭಿಕ್ಷೆ ಪಡೆಯುವುದೆಂದರೆ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದೆಂದೇ ಅರ್ಥ, ಒಂದು ರೀತಿಯಲ್ಲಿ ಇದು ಕಬ್ಬಿಣವನ್ನು ಕಂಡುಹಿಡಿದು ಅದನ್ನು ಉತ್ಪಾದಿಸುವ ಜನವರ್ಗಕ್ಕೂ ಹಾಗೂ ಕಬ್ಬಿಣದ ಅವಶ್ಯಕತೆ ಇರುವ ಜನವರ್ಗಕ್ಕೂ ಇರುವ ವ್ಯವಹಾರದ ಕಥೆ, ಕೆಂಪಾಚಾರಿಯ ಕುಲುಮೆಯ ವರ್ಣನೆ, ಅಲ್ಲಿನ ಅವನ ದರ್ಪ, ಅಹಂಕಾರ ಖಂಡಿತವಾಗಿಯೂ ಕಥೆ, ಕೆಂಪಾಚಾರಿಯ ಕುಲುಮೆಯ ವರ್ಣನೆ, ಅಲ್ಲಿನ ಅವನ ದರ್ಪ, ಅಹಂಕಾರ ಖಂಡಿತವಾಗಿಯೂ ಉತ್ಪಾದನಾ ವರ್ಗವೊಂದರ ಧೋರಣೆಯಾಗಿಯೇ ಕಂಡು ಬರುತ್ತವೆ. ಆದರೆ ಅಂಥ ಕೆಂಪಾಚಾರಿ ಎಂಬ ಬಿಸಿರಕ್ತದ ಹುಡುಗನನ್ನು ಪಳಗಿಸಿ ತನ್ನಂಥ ಬೈರಾಗಿಯನ್ನಾಗಿ ಮಾಡುವುದು ಸುಲಭವೇ? ಮಂಟೇಸ್ವಾಮಿಯನ್ನು ಹಾಡುವ ಕಲಾವಿದರಿಗೆ ಈ ಕುಲುಮೆ ಕೇವಲ ಕುಲುಮೆಯಲ್ಲ, ಕೆಂಪಾಚಾರಿ ಎಂಬ ಅಹಂಕಾರಿಯೊಬ್ಬ ತನ್ನ ದರ್ಪ ಕಳೆದುಕೊಂಡು ತನ್ನದೆಂಬ ಸರ್ವಸ್ವವನ್ನು ನಿರಾಕರಿಸಬಲ್ಲ ತ್ಯಾಗಮೂರ್ತಿಯನ್ನಾಗಿ ಎರಕಗೊಳಿಸುವ ಕುಲುಮೆ ಅದು. ಹಾಗೆಯೇ ಕೆಂಪಾಚಾರಿ ಎಂಬ ಪಾಂಚಾಳ ತ್ಯಾಗಮೂರ್ತಿಯನ್ನಾಗಿ ಎರಕಗೊಳಿಸುವ ಕುಲುಮೆ ಅದು. ಹಾಗೆಯೇ ಕೆಂಪಾಚಾರಿ ಎಂಬ ಪಾಂಚಾಳ ಹುಡುಗ ಹನ್ನೆರಡು ವರ್ಷ ಕಾಳಿಂಗ ಗುಹೆಯಲ್ಲಿದ್ದು ಸಿದ್ದಪ್ಪಾಜಿಯಾಗಿ ಪರಿವರ್ತಿತವಾಗಿ ಹೊರಬರುವ ದೃಶ್ಯ ಒಂದು ರಸಘಳಿಗೆ. ಚಾಮರಸನ ಪ್ರಭುಲಿಂಗಲೀಲೆಯ ಅಲ್ಲಮ ಗುಹೆಯಲ್ಲಿ ಜ್ಞಾನೋದಯ ಪಡೆಯುವ ಕ್ರಿಯೆಗೂ, ಇಲ್ಲಿ ಸಿದ್ದಪ್ಪಾಜಿಯ ಜ್ಞಾನೋದಯ ಕ್ರಿಯೆಗೂ ಸಾಮ್ಯತೆಗಳಿವೆ.

ಗುಹಾವಾಸದ ವರ್ಣನೆ ಅಲ್ಲಿನ ಹಾವು ಚೇಳುಗಳನ್ನೇ ಆಹಾರವನ್ನಾಗಿ ಸೇವಿಸುವ ರೀತಿಗಳು ಅನಾದಿ ಕಾಲದ ಜೀವನವೊಂದರ ಪಳೆಯುಳಿಕೆಗಳಂತೆ ಕಾಣುತ್ತವೆ. ಹಾಗೆಯೇ ಹಲಗೂರು ಪವಾಡದ ಸಂದರ್ಭದಲ್ಲಿ ನಿರ್ಮಿಸಲಾಗುವ ನಾನಾ ಬಗೆಯ ಉಕ್ಕಿನ ವಸ್ತುಗಳು ಅಂದಿನ ಕಬ್ಬಿಣ ತಯಾರಿಕೆಯ ವಿವಿಧ ಹಂತಗಳನ್ನು ಸಾಂಕೇತಿಕವಾಗಿ ಚಿತ್ರಿಸುತ್ತವೆ.

"ಈ ಮೌಖಿಕ ಮಹಾಕಾವ್ಯಗಳನ್ನು 'ಜನಪದ ಮಹಾಕಾವ್ಯಗಳು ಎಂತಾಗಲೀ ಇಲ್ಲವೆ' 'ಬುಡಕಟ್ಟು ಮಹಾಕಾವ್ಯಗಳು ಎಂತಾಗಲೀ ಕರೆಯುತ್ತೀರಿ. ಹೀಗೆ ಕರೆಯುವುದೇ ಕೀಳರಿಮೆ. ಬದಲಾಗಿ ಕನ್ನಡದ ಮಹಾಕಾವ್ಯಗಳೆಂದೇ ಏಕೆ ಪರಿಗಣಿಸಬಾರದು ಎಂದು ಕೆಲವು ಗೆಳೆಯರು ವಾದಿಸುತ್ತಾರೆ. ಜನಪದ ಕಾವ್ಯಗಳ ಬಗ್ಗೆ ಹಲವರ ತಾತ್ಸಾರ ಇದ್ದ ಸಂದರ್ಭದಲ್ಲಿ ಕೀಳರಿಮೆ ಇದ್ದುದು ನಿಜ. ಆದರೆ ಈಗ ಅಂಥ ಸ್ಥಿತಿಇಲ್ಲ. ಆದರೆ ಕಾವ್ಯಗಳಿಗೆ ಇರುವ ಅನನ್ಯತೆಯ ದೃಷ್ಟಿಯಿಂದ ಹೀಗೆ ಕರೆದರೆ ತಪ್ಪೇನಾಗುತ್ತದೆ? ಜನಪದ ಕಾವ್ಯವೆಂದರೆ ಅದೊಂದು ಮೌಖಿಕ ಪರಂಪರೆಯಿಂದ ಬಂದುದಾಗಿದ್ದು, ಜನಸಾಮಾನ್ಯರ ಪರವಾದದ್ದು, ಅನ್ನುವ ಕಾರಣಕ್ಕಾಗದರೂ ನಾವು ಹಾಗೆ ವಿಂಗಡಿಸಿ ಹೇಳಬೇಕೇ ಹೊರತು ಕೀಳರಿಮೆಯ ಕಾರಣಕ್ಕೆ ಖಂಡಿತ ಅಲ್ಲ. ಇನ್ನೊಂದು ಮುಖ್ಯ ವಿಚಾರ, ಇವುಗಳನ್ನು 'ಬುಡಕಟ್ಟು ಮಹಾಕಾವ್ಯ' ಎಂದು ನಾವು ಕ ರೆದಿರುವುದಕ್ಕೆ ಕೂಡ ಕಾರಣಗಳಿವೆ. ಬುಡಕಟ್ಟು ಜನರೇ ಆಡಿದ ಕಾವ್ಯ ಬುಡಕಟ್ಟು ಕಾವ್ಯವಾಗುತ್ತದೆ, ನಿಜ. ಹಾಗೆಯೇ ಯಾವುದೇ ಕಾವ್ಯದಲ್ಲಿ ಬುಡಕಟ್ಟು ಸಂಸ್ಕೃತಿಯ ಹೇರಳವಾದ ಅಂಶಗಳಿದ್ದಲ್ಲಿ ಅದು ಬುಡಕಟ್ಟು ಕಾವ್ಯವಾಗುವುದಿಲ್ಲವೇ? ಈ ಹಿನ್ನೆಲೆಯಲ್ಲಿ ಮಲೆಮಾದೇಶ್ವರ ಕಾವ್ಯವಾಗಲೀ, ಕುಮಾರ ರಾಮ ಅಥವಾ ಸಿರಿ ಕಾವ್ಯವಾಗಲೀ ಒಂದು ಕಾಲದ ಬುಡಕಟ್ಟು ಸಂಸ್ಕೃತಿಗಳ ನಡುವಿನ ಮೌಲ್ಯಗಳ ಸಂಘರ್ಷದ ಕಥಾನಕಗಳೇ ಆಗಿವೆ."

೪.೧ ಮಂಟೇಸ್ವಾಮಿ ಕಾವ್ಯದಲ್ಲಿ ಹಸಿವಿನ ಹಪಹಪಿಕೆ

ಭಾರತದ ಇದುವರೆಗಿನ ವ್ಯವಸ್ಥೆಯಲ್ಲಿ ನಿರ್ಲಕ್ಷಿಸಲ್ಪಟ್ಟ ಜನವರ್ಗಗಳಿಗೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆ ಎಂಬುದನ್ನು, ಆ ಸಂಸ್ಕೃತಿಗೆ ಒಂದು ಪರಂಪರೆ ಇದೆ ಎಂಬುದನ್ನು, ಆ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ನಾವು ತಿಳಿಯುತ್ತೇವೆ. ಮಂಟೇಸ್ವಾಮಿ ಮಲೆಮಾದೇಶ್ವರ, ಜುಂಜಪ್ಪ ಇಂಥ ಸಾಂಸ್ಕೃತಿಕ ದಲಿತ ನಾಯಕರ ದೀರ್ಘ ಕಥಾನಕಗಳು ಮಹಾಕಾವ್ಯಗಳ ರೂಪದಲ್ಲಿ ದೊರೆತಿರುವುದು ಅಧ್ಯಯನದ ದೃಷ್ಟಿಯಿಂದ ಹೊಸ ಬೆಳಕು ಮೂಡಿದಂತೆ ಭಾರತದ ಗ್ರಾಮ ಸಮಾಜದ ಹಸಿವು ಮತ್ತು ಬಡತನ ಎದುರಾಗುವುದೇ ಮಂಟೇಸ್ವಾಮಿಯ ಅಲೆಮಾರಿ ಜೀವನದಲ್ಲಿ, ದಲಿತ ಸಮುದಾಯದ ಸಾಂಸ್ಕೃತಿಕ ಪ್ರತಿನಿಧಿಯಾದ ಮಂಟೇಸ್ವಾಮಿ ಯಾವುದೇ ಬಿರುದಿಗೆ, ಅಧಿಕಾರದ ಆಸೆಗೆ ಒಳಗಾಗುವುದಿಲ್ಲ. ಸದಾಕಾಲ ಜನರ ಕಷ್ಟ ಸುಖಗಳಿಗೆ

ಸ್ಪಂದಿಸಿದವನು. ಜನರ ಮಧ್ಯೆ ಬಾಳಿ ಬದುಕಿದವನು. ಭಾರತದ ಗ್ರಾಮಗಳಲ್ಲಿ ಚಲಿಸಿದವನು. ಒಬ್ಬ ಜನನಾಯಕ ಸದಾ ಜಂಗಮನಾಗಿರಬೇಕು. ತನ್ನ ಕಣ್ಣಿಂದ ಗ್ರಾಮಗಳನ್ನು ನೋಡಬೇಕು. ಬಡತನ, ಹಸಿವಿಗೆ ಪರಿಹಾರವನ್ನು ಸೂಚಿಸಬೇಕು. ಬಸವಣ್ಣ ಇದೇ ಕೆಲಸವನ್ನು ಮಾಡಿದವನು. ಗಾಂಧಿ ಕೂಡ ಇದೇ ಕೆಲಸವನ್ನು ಮಾಡಿದವರು. ಹಾಗಾಗಿ ಮಂಟೇಸ್ವಾಮಿ ಇವತ್ತಿಗೂ ನಮಗೆ, ನಮ್ಮ ಸಮಾಜಕ್ಕೆ ಮಾದರಿಯಾಗುತ್ತಾನೆ. ಮಂಟೇಸ್ವಾಮಿಯ ಸಾಂಸ್ಕೃತಿಕ ರಾಜಕಾರಣ ಜನಮುಖಿಯಾದುದು. ವೈಭವದ ಚರಿತ್ರೆಯ ಕಣ್ಣಿಗೆ ಕಾಣಿಸದ ತಳಸಮುದಾಯಗಳ ಬಡತನ, ಹಸಿವು ನಮ್ಮ ಜನಪದ ಮಹಾಕಾವ್ಯಗಳಲ್ಲಿ ಸುಧೀರ್ಘವಾಗಿ ಕಾಣುತ್ತೇವೆ. ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಬರುವ ಒಂದು ಸಂದರ್ಭವನ್ನು ನೋಡಬಹುದು. ಮಂಟೇಸ್ವಾಮಿ ವಿಜಯನಗರದ ಮುಂದಿನ ಒಂದು ಮರದ ಬಳಿ ಕುಳಿತಿರುತ್ತಾನೆ. ಒಬ್ಬ ವ್ಯಕ್ತಿ ಹಸಿದುಕೊಂಡು ಬರುತ್ತಾನೆ. ಅವನು ಭಿಕ್ಷೆ ಬೇಡಲು ವಿಜಯನಗರದ ಬೀದಿಗಳ ಕಡೆಗೆ ಹೊರಡುತ್ತಾನೆ. ಆಗ ಮಂಟೇಸ್ವಾಮಿಯು ಆ ವ್ಯಕ್ತಿಯನ್ನು ನಿಲ್ಲಿಸಿ, ಹೋಗುವುದು ಬೇಡ ಎಂದು ತಿಳಿಸುತ್ತಾನೆ. ಆದರೂ ಆ ವ್ಯಕ್ತಿ ಮಂಟೇಸ್ವಾಮಿ ಮಾತನ್ನು ನಿರಾಕರಿಸಿ, ಭಿಕ್ಷೆ ಬೇಡಲು ವಿಜಯನಗರಕ್ಕೆ ಹೋಗುತ್ತಾನೆ. ಆದರೆ ಯಾರೂ ಅವನಿಗೆ ಭಿಕ್ಷೆಯನ್ನು ನೀಡುವುದಿಲ್ಲ. ಹಿಂತಿರುಗಿ ಹಸಿದು ಬಂದ ಭಿಕ್ಷುಕನಿಗೆ ಮಂಟೇಸ್ವಾಮಿ ತಿನ್ನಲು ಕಾಡಿನ ಹಣ್ಣುಗಳನ್ನು ಕೊಡುತ್ತಾನೆ. ಶ್ರೀಮಂತಿಕೆಯಿಂದ ಕೂಡಿದ್ದ ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ತುತ್ತು ಅನ್ನ ನೀಡದ ಹೃದಯಹೀನ ಸಮಾಜವನ್ನು ಕಾಣುತ್ತೇವೆ. ಆದರೆ ಇತಿಹಾಸದಲ್ಲಿ ವಿಜಯನಗರದ ಗತವೈಭವವನ್ನು ಕೊಂಡಾಡುತ್ತೇವೆ. ಚರಿತ್ರೆ ಇರುವುದೇ ಪ್ರಭುತ್ವಶಾಹಿ ವ್ಯವಸ್ಥೆಯನ್ನು ವಿಜೃಂಭಿಸುವುದಕ್ಕೆ ಹೊರತು, ತಳ ಸಮುದಾಯಗಳ ಬದುಕಿನ ಧಾರುಣ್ಯತೆಗಳನ್ನು ತೆರೆದಿಡುವುದಕಲ್ಲ. ಒಂದು ವೇಳೆ ಇತಿಹಾಸದಲ್ಲಿ ತಳಸಮುದಾಯಗಳ ಬದುಕಿನ ದಾರುಣ್ಯತೆಗಳನ್ನು ದಾಖಲಿಸಲು ಪ್ರಭುಗಳು ನಿರಾಕರಿಸುತ್ತಿದ್ದರೇನೋ, ಅಥವಾ ರಾಜ ಮಹಾರಾಜರಿಂದ ಬಹುಪರಾಕ್ ಗಳಿಸಲು ಇತಿಹಾಸ ಬರೆದವರ್ಗ ಮಾಡಿದ ಮೋಸವೇ ಆಗಿದೆ. ಈ ಹೊಗಳಿಕೆಯಲ್ಲಿ ಪ್ರತಿಯೊಂದು ಸಾಮ್ರಾಜ್ಯದಲ್ಲಿ ವಾಸವಾಗಿದ್ದ ತಳವರ್ಗ ಸಮುದಾಯಗಳು ಎಲ್ಲರ ಕಣ್ಣಿಗೆ ನಿರ್ಲಕ್ಷಿಸಲ್ಪಟ್ಟವೇನೋ. ಇತಿಹಾಸ ಸೃಷ್ಠಿಸಿದ ಅಸಹಿಷ್ಣುತೆಯ ನೆಲೆಯಲ್ಲೇ ಇವತ್ತಿನ ರಾಜಕೀಯ ಪಕ್ಷಗಳು ನಡೆಯುತ್ತಿವೆ.

ಮಂಟೇಸ್ವಾಮಿ ಕಾವ್ಯದಲ್ಲಿ ಹಸಿವಿನ ದಲಿತ ನೆಲೆಯಾಗಿ ನಿಲುಗಟ್ಟದ ದೇವ ಗ್ರಾಮದ ಬಸವಚಾರಿ ಮತ್ತು ಆತನ ಮಡದಿ ಮುದ್ದಮ್ಮನ ಕುಟುಂಬ ಎದುರಾಗುತ್ತದೆ. ತನ್ನ ಅಲೆಮಾರಿ ಜೀವನದಲ್ಲಿ ಮಂಟೇಸ್ವಾಮಿ ಬಪ್ಪಗೌಡ್ನಪುರ ಬಿಟ್ಟು ನಿಲುಗಟ್ಟದ ದೇವಾ ಗ್ರಾಮಕ್ಕೆ ಬರುತ್ತಾನೆ. ಆ ನಿಲಘಟ್ಟದ ಊರೊಳಗೆ ಅರಳೀಕಟ್ಟೆ ಜಗುಲಿ, ಹೊನ್ನರಳಿಯ ಮರ, ಆ ಮರದ ಬುಡದಲ್ಲಿ ಬಸವಾಚಾರಿ ಮತ್ತು ಆತನ ಮಡದಿ ಮುದ್ದಮ್ಮ ಕುಟುಂಬ ದರ್ಶನವಾಗುತ್ತದೆ. ಹಸಿವು, ಬಡತನದ ಪ್ರತಿರೂಪವಾದ ಬಸವಾಚಾರಿಯು ನಿಲಘಟ್ಟದ ಜಗುಲಿಯ ಮೇಲೆ

ಕುಳಿತುಕೊಂಡಿದ್ದ ಗಂಡ, ಹೆಂಡತಿ ಒಬ್ಬರ ಮುಖವನ್ನೊಬ್ಬರು ನೋಡುತ್ತಾ ಕುಳಿತ್ತಿದ್ದರು. ಆಗ ಬಸವಾಚಾರಿಯು ತನ್ನ ಹೆಂಡತಿ ಮುದ್ದಮ್ಮನ ಮುಖವನ್ನು ನೋಡಿ

"ಮುದ್ದಮ್ಮ ನಿನ್ನ ತಂದಕಾಲಕ್ಕೂ
ಬಂದ ಕಾಲಕ್ಕೂ
ಮದುವೆಯಾದ ಕಾಲಕ್ಕೂ
ಶೋಭಾನವಾದ ಕಾಲಕ್ಕೂ
ಮಕ್ಕಳುಟ್ಟಿದ ಕಾಲದಿಂದ ಮಡದಿ
ನಮ್ಮ ಸತಿಪತಿಗಳಿಗೆ
ಆ ಭಗವಂತ ನಮಗೆ ಮಕ್ಕಳು ಕೊಟ್ಟುವಲ್ಲಾ
ಮಕ್ಕಳು ಕೊಟ್ಟಂತ ಶಿವಾ
ಅನ್ನ ನಮಗೆ ಕೊಡುನಿಲ್ಲ

(ಮಂಟೇಸ್ವಾಮಿ, ಪು.ಸಂ–೨೬೧)

ಬಸವಚಾರಿಯ ತನ್ನ ಹೆಂಡತಿಯಾದ ಮುದ್ದಮ್ಮನನ್ನು ಕುರಿತು ಈ ರೀತಿಯಾಗಿ ಹೇಳುತ್ತಾನೆ. ನಮಗೆ ಮಕ್ಕಳ ಫಲವನ್ನು ನೀಡಿದ ಆ ಶಿವನು ನಮಗೆ ತಿನ್ನುವುದಕ್ಕೆ ಅನ್ನವನ್ನು ಕೊಡಲಿಲ್ಲ. ಉಡುವುದಕ್ಕೆ ಬಟ್ಟೆಯನ್ನು ಕೊಡಲಿಲ್ಲ. ಕುಡಿಯುವುದಕ್ಕೆ ನೀರು ಕೂಡ ಇಲ್ಲದಷ್ಟು ಬಡತನ ಎದುರಿಸುತ್ತಿರುವುದನ್ನು ತಿಳಿಸುತ್ತಾನೆ. ತನ್ನ ಬಡತನದ ಬಾಳನ್ನು ವಿವರಿಸುತ್ತಾ, ತನ್ನ ಹೆಂಡತಿ ಮುದ್ದಮ್ಮನಿಗೆ ಈ ರೀತಿಯಾಗಿ ಹೇಳುತ್ತಾನೆ. ತಮ್ಮ ಮಕ್ಕಳಿಗೆ ಬಹುದಿನಗಳಿಂದ ತಿನ್ನುವುದಕ್ಕೆ ಅನ್ನ ಕೂಡ ಇರದೇ ತುಂಬ ಬಡತನದ ಬದುಕನ್ನು ಎದುರಿಸುತ್ತಿದ್ದೇವೆ ಎಂದು ತನ್ನ ಹೆಂಡತಿ ಮುದ್ದಮ್ಮನಿಗೆ ಹೇಳುತ್ತಾನೆ. ಈ ಬಡತನ ನಮಗೆ ಇನ್ನೂ ಕಳೆಯಲಿಲ್ಲ, ಹಸಿವು, ಬಡತನದಿಂದ ಇನ್ನೂ ಬಿಡುಗಡೆ ಪಡೆಯಲಿಲ್ಲ ಎಂದು ತುಂಬ ನೋವಿನಿಂದ ಹೇಳುತ್ತಾನೆ.

ಕೇಳು ಮಡದಿ ಮುದ್ದಮ್ಮ
ನಮಗೆ ಮಕ್ಕಳ ಫಲಕೊಟ್ಟಂತಾ ಶಿವನು
ನಮಗೆ ಉಣ್ಣಕೆ ಅನ್ನ ಕೊಡ್ನಿಲ್ಲ
ಉಡುವುದಕ್ಕೆ ಬಟ್ಟೆ ಕೊಡಲ್ನಿಲ್ಲ
ಕುಡಿಯುವುದಕ್ಕೆ ನೀರಿಲ್ಲ
ಆರುಜನ ಗಂಡುಮಕ್ಕಳು
ತಂದೆ ಬಸವಾಚಾರಿ

ಆಗಲೀಗಾ ಹಸುವ ತಡಿಯನಾರಿಯಪ್ಪ
ಅಯ್ಯಾ ಕೆಳುಲೇ ಮಡದಿ
ಕೇಳುಲೇ ನನ ಮಡದಿ

(ಮಂಟೇಸ್ವಾಮಿ, ಪು.ಸಂ–೨೬೧)

ಮಡದಿ ಮುದ್ದಮ್ಮ
ನಮಗೆ ಉಣ್ಣಕೆ ಅನ್ನ
ನಮಗಿಲ್ಲ ಮಡದಿ
ಈ ಭಂಗ ಬಡಸ್ತಾನ ನಮುಗೆ
ತಪ್ಪುಲಿಲ್ಲಾ ಎಂದುರಲ್ಲಾ
ನಮಗೆ ಭಂಗ ಬಡುಸ್ತಾನಾ
ಇನ್ನಾದ್ರು ಮಡದಿ ತಪ್ಪುನಿಲ್ಲ ಮಡದಿ ಹಾಗಂತೇಳಿ
ಗುರುವು ಬಾಚಿ ಬಸುವಯ್ಯ
ಅವನು ಮಡದಿ ಮಕವ ನೋಡುತ್ತಾನೆ
ಗುಳುಗುಳುನೆ ಅಳುತ್ತಾನೆ"[೫]

(ಪು.ಸಂ–೨೬೨)

ಮಂಟೇಸ್ವಾಮಿಯು ತನ್ನ ಅಲೆಮಾರಿ ಜೀವನದಲ್ಲಿ ಕರ್ನಾಟಕದ ಉದ್ದಕ್ಕೂ ಇಂಥ ಹಸಿವಿನ ಕುಟುಂಬಗಳನ್ನು ಕಣ್ಣಾರೆ ಕಂಡವನು. ಇವತ್ತಿಗೂ ಇದೇ ಪರಿಸ್ಥಿತಿಯನ್ನು ನಮ್ಮ ಗ್ರಾಮಗಳು ಎದುರಿಸುತ್ತಿವೆ. ಅಂದು ಬಸವಚಾರಿ ಎದುರಿಸಿದ ಹಸಿವಿನ ಪರಿಸ್ಥಿತಿಯನ್ನು ಇಂದು ದಲಿತ ಸಮುದಾಯಗಳು ಎದುರಿಸುತ್ತಿವೆ. ಇವತ್ತು ಎಷ್ಟೋ ಕುಟುಂಬಗಳು ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿವೆ. ಒಂದೊಂದು ಗ್ರಾಮಗಳು ಹಸಿವಿನ ಕಥನಗಳನ್ನೇ ಹೇಳುತ್ತವೆ. ಹಸಿವಿಲ್ಲದ ಗ್ರಾಮಗಳು ಯಾವಾಗ ನಾವೆಲ್ಲ ನೋಡುತ್ತೇವೆಯೋ ಎಂಬ ಆಸೆ ಪ್ರತಿಯೊಬ್ಬ ಸಾಮಾಜಿಕ ಚಿಂತಕನಿಗೆ ಕಾಡುತ್ತದೆ.

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಯೋಜನೆಗಳು ನೆಲಕಚ್ಚುತ್ತಿವೆ. ಕೋಟ್ಯಾಂತರ ರೂಪಾಯಿ ಯೋಜನೆಗಳು ಭ್ರೂಣಾವಸ್ಥೆಯಲ್ಲೇ ಗರ್ಭಪಾತವಾಗುತ್ತಿದೆ. ಅರ್ಧಕ್ಕೆ ನಿಂತಿರುವ ಯೋಜನೆಗಳು, ಪೂರ್ಣಗೊಳ್ಳದ ಕಾರ್ಯಗಳು, ಸಾವಿರಾರು ಕೋಟಿ ಹಣ ಇಂದು ದುಂದುವೆಚ್ಚಕ್ಕೆ ಕಾರಣವಾಗಿದೆ. ಎಲ್ಲಾ ರಾಜ್ಯಗಳು ಭ್ರಷ್ಟಾಚಾರದ ಕೊಂಪೆಗಳಾಗಿವೆ. ಇಂದು ಕರ್ನಾಟಕದ ಗ್ರಾಮಗಳು ಬಸವಾಚಾರಿ ಹೇಳುವಹಾಗೆ 'ಹಸುವಿನ ಬಾದಿ ತಡೆಯಲಾರೆ ತಂದೆ. ಇವಾಗ ನಮಗೆ ಉಣ್ಣಕ್ಕೆ ಅನ್ನ ಕೊಡಪ್ಪ, ಕುಡಿಯುವುದಕ್ಕೆ ನೀರು ಕೊಡು ಗುರುವೆ. ಎಂದು ತನ್ನ

ಆರುಜನ ಮಕ್ಕಳ ಬಂದು ನನ್ನ ಪಾದದ ಹತ್ತಿರ ಕೂತ್ಕಂಡು ದುಃಖ ಪಡುತ್ತಾರೆ. ಇದನ್ನು ನಾನು ಕಣ್ಣಾರೆ ನೋಡಲಾರೆ ಎಂಬ ಸ್ಥಿತಿಯಾಗಿದೆ. ಇಂದು ಹಸಿವಿನ ಸಮಸ್ಯೆ, ಜಗತ್ತಿನ ಸಮಸ್ಯೆಯಾಗಿ ಬಿಟ್ಟಿದೆ. ಬಹುತೇಕ ರಾಷ್ಟ್ರಗಳು 'ಹಸಿವಿನ' ಸಮಸ್ಯೆಯಿಂದ ಇನ್ನೂ ಬಿಡುಗಡೆ ಪಡೆದಿಲ್ಲ. ನಮ್ಮಂತ ಎಷ್ಟೋ ಬಡರಾಷ್ಟ್ರಗಳಲ್ಲಿ ಸಾಮಾನ್ಯ ಜನಕ್ಕೆ ಆಹಾರ ಸಿಕ್ಕದೇ ದಿನನಿತ್ಯ ಸಾಯುತ್ತಿದ್ದಾರೆ. ಇಂತ ವರದಿಗಳು ಮಾಧ್ಯಮದಲ್ಲಿ ಪ್ರಕಟಗೊಳ್ಳುತ್ತಿವೆ. ಆದರೆ ಪರಿಹಾರ ದೊರಕುವಂತ ಸ್ಥಿತಿ ಸತ್ಯಕ್ಕೆ ದೂರವಾಗಿಬಿಟ್ಟಿದೆ.

ವೈಧಿಕ ಸಾಹಿತ್ಯದಲ್ಲಿ ಪ್ರಕಟಗೊಳ್ಳದ ಹಸಿವಿನ ದಾರುಣ್ಯತೆ, ನಮ್ಮ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಕಂಡುಬರುತ್ತದೆ. ಜನಪದರ ಬದುಕು, ಹಾಡು-ಪಾಡು ಒಂದೇ ಆಗಿತ್ತು. ಜಗತ್ತಿನ ಅತಿದೊಡ್ಡ ಸಾಹಿತ್ಯ ಸಂಪತ್ತು ಯಾವುದು ಎಂದರೆ, ಅದು ಜನಪದ ಸಾಹಿತ್ಯ ಸಂಪತ್ತು ಎಂದು ಹೇಳುತ್ತೇನೆ. ಅದು ಹಸಿವಿನ ಚರಿತ್ರೆಯೇ ಆಗಿರುತ್ತದೆ. ಪ್ರಭುತ್ವಶಾಹಿ ವ್ಯವಸ್ಥೆಯನ್ನು ನಮ್ಮ ಜನಪದರು ಎಲ್ಲಾ ಕಾಲಕ್ಕೂ ಸಂರಕ್ಷಿಸಿಕೊಂಡು ಬಂದವರು. ಪ್ರಭುಗಳೇ ದೇವರೆಂದು ಆರಾಧಿಸಿವರು. ಆದರೆ ಪ್ರಭುತ್ವ ಜನಪದರ ಬದುಕಿನಲ್ಲಿ ಸಂತೋಷವನ್ನು ನೀಡಲಿಲ್ಲ. ಕಷ್ಟಗಳನ್ನು ನೀಡಿದರು. ಆದರೆ ಜನಪದರ ಮಧ್ಯೆ ಹುಟ್ಟಿದಂತ ನಮ್ಮ ಮಂಟೇಸ್ವಾಮಿ, ಮಲೆ ಮಾದೇಶ್ವರ, ಇವರುಗಳು ತಮ್ಮ ಬಾಳನ್ನೇ ಸಮುದಾಯಕ್ಕೋಸ್ಕರ ಮೀಸಲಿಟ್ಟವರು, ಜನಪದರ ಕಷ್ಟ-ಸುಖಗಳಿಗೆ ಸ್ಪಂದಿಸಿದವರು. ಜನರ ಹಸಿವನ್ನು ನೀಗಿಸಲು ಗಂಜಿಯ ಕೇಂದ್ರಗಳನ್ನು ಸ್ಥಾಪಿಸಿದರು. ಇವು ಜನಪರವಾದ ಕೆಲಸಗಳು

"ಹಾಗೆ ಮುಂದುಮರೆಯುತ್ತಾ ಬಸವಚಾರಿ,
ಕೇಳು ಮಡದಿ ಮದ್ದಮ್ಮ
ಹಸುವಿನ ಬಾದಿನೆ ತಡಿಲಾರೆ ತಂದೆ
ಇವಾಗ ನಮಗೆ ಉಣ್ಣಕೆ ಅನ್ನ ಕೊಡಪ್ಪ
ಕುಡಿಯುದಕ್ಕೆ ನೀರು ಕೊಡಿ ಗುರುವೆ ಎನುತೇಳಿ
ಆರುಜನ ಮಕ್ಕಳು ಬಂದು
ಮುಂಭಾಗದಲ್ಲಿ ಕೂತ್ಕಂಡು
ನನ್ನ ಪಾದದ ಮೇಲೆ ಬಿದ್ದುಕೊಂಡು
ವಿಧವಿಧವಾದ ದುಃಖ ಪಡುತ್ತಾರೆ ಮಡದಿ
ಮಕ್ಕಳಾ ದುಃಖ ನಾನು
ಕಣ್ಣಾರೆ ನೋಡಲಾರೆ
ಮಕ್ಕಳ ದುಃಖ ಕಷ್ಟಗಳ ಮಡದಿ

ನಾನು ಕಣ್ಣಿಂದ ನೋಡಲಾರೆ
ಮಡದಿ ಮುದ್ದಮ್ಮ
ಈ ಮಕ್ಕಳ ಕಟ್ಟಿಕಂಡು
ನಿನ್ನ ಕಟ್ಟುಗಂಡು
ಫಲವಿಲ್ಲ ಮಡದಿ
ಈ ಬಡಸ್ತಾನ ಬಂದು ನಮಗೆ
ಹನ್ನೇರಡು ವರುಷ ತುಂಬೋಯ್ತು
ಈ ಬಡತನ ನಾನು
ತಾಳಲಾರೆ ಎಂದರಲ್ಲ"[೬]

(ಪು.ಸಂ-೨೬೨, ೨೬೩)

ಹನ್ನೆರಡು ವರ್ಷಗಳ ಕಾಲ ಬಸವಚಾರಿಯ ಕುಟುಂಬ ಹಸಿವು, ಬಡತನದ ಸಮಸ್ಯೆಗೆ ಒಳಗಾಗಿರುವುದನ್ನು ಬಸವಚಾರಿಯ ಮಾತಿನಲ್ಲೇ ಗೊತ್ತಾಗುತ್ತದೆ. ಇದು ಕೇವಲ ಹನ್ನೆರಡು ವರ್ಷಗಳ ಕಥೆಯಲ್ಲ, ತಳಸಮುದಾಯಗಳ ಹನ್ನೆರಡು ಯುಗಗಳ ಹಸಿವಿನ ಕಥೆ ಎಂದರೆ ತಪ್ಪಾಗಲಾರದು. ಈ ಸ್ಥಿತಿಗೆ ಅಂದಿನ ಗ್ರಾಮಗಳು ಅರ್ಥಿಕವಾಗಿ ಅಷ್ಟೇನು ಪ್ರಬಲವಾಗಿರಲಿಲ್ಲ. ದುಡಿದ ಆಹಾರದ ಪದಾರ್ಥಗಳು ರಾಜನ ಉಗ್ರಾಣಕ್ಕೆ ಸೇರಿಕೊಳ್ಳುತ್ತಿದ್ದವು. ರಾಜ ಕೊಟ್ಟ ಬೊಗಸೆಯಷ್ಟು ಧಾನ್ಯದಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಜನಪದ, ಒಂದು ವೇಳೆ ಭೀಕರ ಕ್ಷಾಮಗಳು ಉಂಟಾದಾಗ, ಚಂಡಮಾರುತಗಳು ಅಪ್ಪಳಿಸಿದಾಗ, ಹಸಿವಿನ ಭೀಕರತೆ ಎದುರುಗೊಂಡಾಗ, ಈ ಭೀಕರತೆಯಲ್ಲಿ ಸಾವನಪ್ಪುತ್ತಿದ್ದದು ಜನಪದರೇ ಹೊರತು ರಾಜನ ಕುಟುಂಬವಲ್ಲ.

ಇಂಥ ಪರಿಸ್ಥಿತಿಯಲ್ಲಿ ನೆರವಿಗೆ ಬಾರದ ಪ್ರಭುತ್ವಶಾಹಿಗಳು, ಅಂದಿನ ಜನಸಾಮಾನ್ಯರ ಬದುಕು ಘೋರವಾಗಿರುವುದಕ್ಕೆ ಕಾರಣವಾಗಿದೆ. ರಾಜವರ್ಗ ಹೊರತುಪಡಿಸಿದರೆ, ಎಲ್ಲಾ ತಳಸಮುದಾಯಗಳ ಬದುಕು ಘೋರವಾದುದೇ. ಭಾರತೀಯ ಚರಿತ್ರೆಯೊಳಗೆ ರಾಜ ಪರಂಪರೆಯ ವೈಭವ ಕಾಣುತ್ತೇವೆ. ಆದರೆ ಜನಸಾಮಾನ್ಯರ ಹಸಿವಿನ ಭವಣೆ ಕಾಣಲಾಗದು. ಜನಸಾಮಾನ್ಯರ ಹಸಿವಿನ ಭವಣೆ ಕಂಡುಬರುವುದು ಅದು ಜನರ ಹಾಡುಪಾಡಿನ ಸಾಹಿತ್ಯದಲ್ಲಿ ಮಂಟೇಸ್ವಾಮಿಯಷ್ಟೆ ಗ್ರಾಮಸಮಾಜದ ನಿಜವಾದ ಹಸಿವು, ಬಡತನವನ್ನು ಕಣ್ಣಾರೆ ಕಂಡವರು ಹನ್ನೆರಡನೇ ಶತಮಾನದ ವಚನಕಾರರು. ಜೊತೆಗೆ ತಾವುಗಳೇ ಆ ಸ್ಥಿತಿಯಲ್ಲಿ ಬೆಂದು, ನೊಂದವರು ಕೂಡ, ಬಹುಶಃ ಜನಪರವಾದ ಹೋರಾಟಗಳು ಸುರುವಾಗಿದ್ದೇ ಇದೇ ಕಾಲಮಾನದಲ್ಲಿ. ಅದು ಬಸವಣ್ಣನ ನೇತೃತ್ವದಲ್ಲಿ. ಸಾಮಾಜಿಕ ಅಸಮಾನತೆಯ ಜೊತೆಗೆ, ಹಸಿವಿನ ಸಮಸ್ಯೆಯು ಕೂಡ ಒಂದಾಗಿತ್ತು. ಈ ನೆಲೆಯಲ್ಲಿಯೇ ನಮ್ಮ ಆದ್ಯ ವಚನಕಾರ

ಜೇಡರ ದಾಸಿಮಯ್ಯ ಹಸಿವನ್ನು ಕಂಡವನು, ಉಂಡವನು, ಅವನು ಹೇಳುವ ಮಾತುಗಳು ಹಸಿವಿಗೆ ಬರೆದ ಭಾಷ್ಯದಂತಿವೆ.

"ಒಡಲು ಗೊಂಡವ ಹಸಿವ, ಒಡಲುಗೊಂಡವ ಹುಸಿವ
ಒಡಲು ಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ!
ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೊಡೆ
ವಿಷವೇರಿತಯ್ಯ ಅಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷಯನಿಳಹ ಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣ ರಾಮನಾಥ!"[೭]

ಇವು ಹಸಿವನ್ನು ಕುರಿತ ಅತ್ಯಂತ ಶಕ್ತ ಪ್ರಾತಿನಿಧಿಕ ಮಾತುಗಳು. ಹಸಿವೆಂಬ ಹೆಬ್ಬಾವಿಗೆ ಅನ್ನವನಿಕ್ಕುವ ಕೆಲಸವಾಗಬೇಕಿದೆ. ಮಂಟೇಸ್ವಾಮಿಯ ನೆಲೆಯಲ್ಲೆ ನಮ್ಮ ವಚನಕಾರರ ಸಾಮಾಜಿಕ ಚಿಂತನೆಗಳು ಮುಂದುವರಿಯುತ್ತವೆ. ಇಲ್ಲಿ ಮಂಟೇಸ್ವಾಮಿಯ ವಿಚಾರ, ಹಾಗೂ ವಚನಕಾರರ ವಿಚಾರಗಳು, ಆಲೋಚನೆಗಳು ಒಂದೇ ಆಗಿವೆ. ಬಸವಣ್ಣ ಹಾಗೂ ಮಂಟೇಸ್ವಾಮಿಯ ನಡೆಗೆ ತಳವರ್ಗಗಳ ವಿಮೋಚನೆಯಾಗಿತ್ತು. ಪ್ರಭುತ್ವಕ್ಕಿಂತ, ಪ್ರಜಾಪ್ರಭುತ್ವ ದೊಡ್ಡದು ಎಂಬ ಸಿದ್ಧಾಂತವನ್ನು ಕಟ್ಟಿದವರು. ಜನಪರವಾದ ಆಲೋಚನೆಗಳು ಪಂಪನ ಕಾಲದಿಂದಲೇ ಶುರುವಾಯಿತು ಎನಿಸುತ್ತದೆ. ಯುದ್ಧಗಳು ಹಸಿವನ್ನು ಹೆಚ್ಚಿಸುತ್ತವೆ ಎಂಬ ಕಾರಣಕ್ಕೋ, ನಿರಪರಾಧಿಗಳಾದ ಜನಸಾಮಾನ್ಯರ ಕಗ್ಗೊಲೆ ಎಂಬುದಕ್ಕೋ, ಯುದ್ಧವನ್ನು ನಿರಾಕರಿಸುತ್ತಾನೆ. ಪ್ರಭುಗಳ ಆಶ್ರಯದಲ್ಲಿದ್ದು ಪ್ರಭುಗಳ ಆಶಯಗಳನ್ನು ಧಿಕ್ಕರಿಸುತ್ತಾನೆ. ಪಂಪನ ಕಾವ್ಯಗಳಿಂದಲೇ ಹಸಿವಿನ ದಲಿತ ನೆಲೆ ಸೃಷ್ಟಿಗೊಂಡಿದೆ ಎಂದು ಹೇಳಬಹುದು. ಪಂಪನ ಕಾವ್ಯಗಳು ಜನಪದ ಕಾವ್ಯಗಳೆಂದೆ ಹೇಳುತ್ತೇನೆ.

ಹಸಿವಿನ ಭಾರತದ ಬಗ್ಗೆ ಮಾತನಾಡುವಾಗೆಲ್ಲಾ ಮತ್ತೆ ಬಸವಾಚಾರಿಯ ಮಾತು ಎದುರಾಗುತ್ತದೆ. ಸಾವಿರಾರು ವರ್ಷಗಳಿಂದ ಮೌನವಾಗಿದ್ದ ಹಸಿವಿನ ದಲಿತ ಸಂವೇಧನೆ ಅನಾವರಣಗೊಳ್ಳುತ್ತದೆ. ಈ ಮಾತುಗಳು ಶತಶತಮಾನಗಳ ಹಸಿವು, ಬಡತನದ ಚರಿತ್ರೆ ಎಂದರೆ ತಪ್ಪಾಗಲಾರದು. ಈ ಬಡತನ ನಾನು, ತಾಳಲಾರೆ ಎಂದರಲ್ಲ, ಇದು ತಳಸಮುದಾಯಗಳ ನೋವು, ಸಂಕಟ, ಹಸಿವಿನ ಭವಣೆ. ಕರ್ನಾಟಕದ ಇಂದಿನ ಪರಿಸ್ಥಿತಿ. ಉತ್ತರ ಕರ್ನಾಟಕದ ಹಳ್ಳಿಗಳು ಇಂದಿಗೂ ಹಸಿವು, ಬಡತನಗಳಿಂದ ಬಿಡುಗಡೆ ಹೊಂದಿಲ್ಲ. ಮುರಿದ ಮನೆಗಳು, ರಸ್ತೆಗಳಿಲ್ಲದ ಬೀದಿಗಳು, ತಿನ್ನಲು ಅನ್ನವಿಲ್ಲದ ಮನೆಗಳು, ಎಲ್ಲ ರೀತಿಯ ಸಮಸ್ಯೆಗಳಿಂದ ಬಳಲುತ್ತಿವೆ. ಕರ್ನಾಟಕದ ತೀರ ಹಿಂದುಳಿದ ಜಿಲ್ಲೆಯಾದ ಬೀದರ್‌ನ ಹಳ್ಳಿಗಳ ಪರಿಸ್ಥಿತಿಯನ್ನು ಕಂಡಾಗ ಎಂತವರಿಗೂ ಕರುಳು ಕಿತ್ತುಬರುತ್ತದೆ. ನಾನು ಹದಿನೈದು ವರ್ಷಗಳ ಹಿಂದೆ

ಬೀದರಿನ ಕಮಲಾಪುರ ಹತ್ತಿರದ ಅಕ್ಕ, ಪಕ್ಕ ಹಳ್ಳಿಗಳನ್ನು ಭೇಟಿಮಾಡಿದ್ದೆ. ಆ ಹಳ್ಳಿಗಳು ಕೈಗಾರಿಕಾ ಪ್ರದೇಶದೊಳಗೆ ಅವಿತುಕೊಂಡಿವೆ. ಅಲ್ಲಿ ಕುಡಿಯುವ ನೀರು ವಿಷದಿಂದ ಕೂಡಿದೆ. ಉಸಿರಾಡುವ ಗಾಳಿ ವಿಷವಾಗಿದೆ. ಹಳ್ಳಿಗಳು ತುಂಬ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಊಟಕ್ಕೆಂದು ನಾನು ಒಂದು ಮನೆಗೆ ಹೋದೆ. ಆ ಮನೆ ಯಾವ ಸ್ಥಿತಿಯಲ್ಲಿತ್ತು ಎಂದರೆ ಆ ಮನೆಗೆ ಯಾವುದೇ ಅಡಿಪಾಯವಿರಲಿಲ್ಲ. ನಾಲ್ಕೈದು ಉದ್ದನೆಯ ತೆಳುವಾದ ರೇಕುಗಳನ್ನು ನಿಲ್ಲಿಸಿ ಅದರ ಮೇಲೆ ನಾಲ್ಕು ರೇಕುಗಳನ್ನು ಬಿಸಿಲು, ಮಳೆಗೆ ಅಡ್ಡಲಾಗಿ ಇಡಲಾಗಿತು. ಒಳಗೆ ಸಗಣಿ ಸಾರಿಸಿದ ನೆಲ. ಒಂದು ಪಕ್ಕದಲ್ಲಿ ಮಣ್ಣಿನ ಒಲೆ, ಕಪ್ಪು ಕಟ್ಟಿದ ನಾಲ್ಕೈದು ಪಾತ್ರೆಗಳು, ಮಾಸಿದ ಬಟ್ಟೆಗಳು, ಆ ಮನೆಗೆ ಬಾಗಿಲುಗಳೆ ಇರಲಿಲ್ಲ. ನಾನು ಆ ಮನೆಗೆ ಬಂದಾಗ ಒಲೆಯ ಮೇಲೆ ಆ ಮನೆಯ ಮುದುಕಿ ರೊಟ್ಟಿ ಸುಡುತ್ತಿದ್ದಳು. ಕುಳಿತುಕೊಳ್ಳಲು ಮುರಿದ ಚಾಪೆ ಹಾಸಿದಳು. ಅದರ ಮೇಲೆ ಕುಳಿತುಕೊಂಡೆ. ಸ್ವಲ್ಪ ಹೊತ್ತಿಗೆ ತಟ್ಟೆಯಲ್ಲಿ ಜೋಳದ ರೊಟ್ಟಿ, ಹೆಸರುಬೇಳೆ ಸಾರು ತಂದು ನನ್ನ ಮುಂದೆ ಇಟ್ಟಳು.

ನಾನು ನಿಧಾನವಾಗಿ ರೊಟ್ಟಿ ತಿನ್ನುತ್ತಾ ಇದ್ದೆ. ಆಕೆ ನನಗೆ ಇನ್ನೊಂದು ರೊಟ್ಟಿ ಹಾಕಿದಳು. ರುಚಿಯಾದ ಜೋಳದ ರೊಟ್ಟಿ ನನಗೆ ತುಂಬ ಇಷ್ಟವಾಗಿತ್ತು. ನನ್ನ ಅಜ್ಜಿಯ ನೆನಪು ತಂದಿತು. ರೊಟ್ಟಿ ತಿಂದ ಮೇಲೆ ಆ ಅಜ್ಜಿ ನನಗೆ ಅನ್ನ ಬಡಿಸಲು ಬಂದಳು. ನಾನು ಸ್ವಲ್ಪ ಹಾಕಿ ಎಂದೆ. ಆ ಅನ್ನ ನನಗಾಗಿ ಮಾಡಿದ್ದು ಎಂದಳು. ಆದರೆ ವಿಷಯವೇನೆಂದರೆ. ಮುಂಜಾನೆ ಆಕೆ ಅಂಗಡಿಯಿಂದ ನನಗಾಗಿ ಅರ್ಧ ಕೆ.ಜಿ ಅಕ್ಕಿ ತಂದು ಅನ್ನಮಾಡಿದ್ದು ಇಲ್ಲವಾದರೆ ಆಕೆ ತಾನು ತಿನ್ನಲು ಪ್ರತಿದಿನ ಜೋಳದ ರೊಟ್ಟಿ ಮಾಡುತ್ತಿದ್ದಳು. ಅನ್ನವೇನಿದ್ದರೂ ಹಬ್ಬದ ದಿನಗಳಲ್ಲಿ ಮಾತ್ರ ಮಾಡುವುದಾಗಿ ತಿಳಿಸಿದಳು. ಏಕೆಂದರೆ ಅಕ್ಕಿ ಕೊಳ್ಳುವಷ್ಟು ಹಣ ಆಕೆಯ ಬಳಿ ಇರಲಿಲ್ಲ. ಇಲ್ಲಿ ಎಷ್ಟೋ ಕುಟುಂಬಗಳ ಪರಿಸ್ಥಿತಿ ಇದೇ ಎಂದು ತಿಳಿಸಿದಳು. ಏಕೆಂದರೆ ಇಲ್ಲಿ ಬಹುತೇಕ ಕುಟುಂಬಗಳು ಕೂಲಿ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಒಂದು ದಿನ ಕೂಲಿಗೆ ಹೋಗಲಿಲ್ಲವೆಂದರೆ ಅವತ್ತು ಮನೆಯಲ್ಲಿ ಉಪವಾಸ. ಬರುತ್ತಿದ್ದ ಕೂಲಿ ಕೇವಲ ಮೂವತ್ತು ರೂಪಾಯಿಗಳು. ಈ ಹಣದಲ್ಲಿ ದಿನದ ಬದುಕು ನೆಡೆಯಬೇಕು ಎಂದು ಆ ಮುದುಕಿ ನನಗೆ ತಿಳಿಸಿದಳು. ಆಕೆಗೆ ಒಂದು ನಮಸ್ಕಾರ ತಿಳಿಸಿ ಬಂದುಬಿಟ್ಟಿದ್ದೆ. ಆ ಮುದುಕಿ ನೆನಪಾದಾಗಲೆಲ್ಲ ಅನ್ನವಿಲ್ಲದ ಎಷ್ಟೋ ಕುಟುಂಬಗಳು ನನ್ನ ಕಣ್ಣೆದುರು ಬರುತ್ತವೆ. ಇದು ನಾನು ಕಣ್ಣಾರೆ ಕಂಡ ಗ್ರಾಮಭಾರತದ ಜೀವನ. ಇಲ್ಲಿ ಮುದ್ದಮ್ಮ ಬೇರೆಯಲ್ಲ. ಈ ಅಜ್ಜಿ ಬೇರೆಯಲ್ಲ. ಇವತ್ತಿಗೂ ಅನ್ನವಿಲ್ಲದ ಕುಟುಂಬಗಳು ಎಷ್ಟೋ ಇದ್ದಾವೆ! ನಾವು ಬಸವಚಾರಿ, ಮುದ್ದಮ್ಮನ ಕುಟುಂಬವನ್ನು ನೋಡಿದಾಗ ಕರ್ನಾಟಕದ ಹಲವಾರು ಬಡತನ, ಹಸಿವು ಒಳಗೊಂಡ ತಳಸಮುದಾಯಗಳ ಕುಟುಂಬಗಳು ಕಂಡುಬರುತ್ತವೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಬಡತನ, ಹಸಿವಿನ ಸಮಸ್ಯೆ ಕುರಿತಂತೆ ಕೆಲವು ವರ್ಷಗಳ ಹಿಂದೆ ಮಾಧ್ಯಮಗಳಲ್ಲಿ ಪ್ರಕಟವಾಯಿತು. ಬೆಂಗಳೂರಿನ ಮಹಿಳಾ ಸಂಘಟನೆಯೊಂದು ತನ್ನ ಕಾರ್ಯಕರ್ತರೊಂದಿಗೆ ಆ ಹಳ್ಳಿಗಳನ್ನು ಭೇಟಿಮಾಡಿ ಅಲ್ಲಿನ ನಿಜವಾದ ಪರಿಸ್ಥಿತಿಯನ್ನು ಕಂಡು ದೊಡ್ಡಪ್ರಮಾಣದಲ್ಲಿ ಹೋರಾಟ ಮಾಡಿದರು. ಆ ಹಳ್ಳಿಗಳಲ್ಲಿ ಎಷ್ಟೋ ಕುಟುಂಬಗಳಿಗೆ ತಿನ್ನಲು ಅನ್ನವಿಲ್ಲದ ಪರಿಸ್ಥಿತಿ, ಬಡವರಿಗಾಗಿ ತೆರೆದಿದ್ದ ನ್ಯಾಯಬೆಲೆ ಅಂಗಡಿಗಳು ಶ್ರೀಮಂತರ ಪಾಲಾಗಿವೆ. ಕಲ್ಲು, ಮರಳು ಮಿಶ್ರಿತ ಅಕ್ಕಿ, ದವಸ ಧಾನ್ಯಗಳು ಬಡವರಿಗೆ. ಜನರು ಕಲುಶಿತ ಆಹಾರ ತಿಂದು ಕಾಯಿಲೆಗಳಿಂದ ಬಳಲುತ್ತಿದ್ದಾರೆ. ರಸ್ತೆಗಳಿಲ್ಲ, ಹಳ್ಳಿಗಳು ಕೊಳಚೆಗುಂಡಿಗಳಾಗಿವೆ. ಮನೆಗಳು ಹಾಳಾಗಿವೆ. ಇದು ಉತ್ತರ ಕರ್ನಾಟಕದ ಹಳ್ಳಿಗಳ ಪರಿಸ್ಥಿತಿ. ಹೀಗೆ ಹನ್ನೆರಡು ವರ್ಷಗಳ ಕಾಲ ಬಸವಾಚಾರಿಯ ಕುಟುಂಬ ಹಸಿವು, ಬಡತನದ ಸಮಸ್ಯೆಗೆ ಒಳಗಾಗಿತ್ತೋ ಹಾಗೆ ಹನ್ನೆರಡು ದಶಕಗಳಿಂದ ಕರ್ನಾಟಕ ಇದೇ ಸಮಸ್ಯೆಯನ್ನು ಎದುರಿಸುತ್ತಿದೆ. ಈಗಲೂ ಇದೇ ಪರಿಸ್ಥಿತಿಯಾಗಿದೆ. ಇದಕ್ಕೆ ಬಲವಾದ ಹೊಣೆ ಆಗಿನ ಸಂದರ್ಭದಲ್ಲಿ ಪ್ರಭುತ್ವಶಾಹಿಗಳಾದರೆ, ಇಂದು ರಾಜಕಾರಣಿಗಳು ಕಾರಣವಾಗಿದ್ದಾರೆ. ಜನಪರವಾಗಿದ್ದ ಬಸವಣ್ಣ, ಬಿಜ್ಜಳನ ಆಸ್ಥಾನದಲ್ಲಿದ್ದು, ಜನಪರವಾದ ಕಾರ್ಯಗಳಲ್ಲಿ ತೊಡಗಿದವನು. ಲೋಕಕಲ್ಯಾಣವೆಂದರೆ, ಅದು ಹಸಿವು ಬಡತನ ನಿರ್ಮೂಲನೆಯೇ, ಲೋಕಕಲ್ಯಾಣವಾಗಿತ್ತು. ಇದು ಬಸವಣ್ಣ, ಮಂಟೇಸ್ವಾಮಿ ಮುಂತಾದ ಮಹನೀಯರ ಸಿದ್ಧಾಂತವಾಗಿತ್ತು. ಆದರೆ ಇವತ್ತಿನ ರಾಜಕಾರಣಿಗಳ ಲೋಕಕಲ್ಯಾಣವೆಂದರೆ, ನೂರಾರು ಎಕರೆ ರೈತರ ಜಮೀನುಗಳನ್ನೂ ದೋಚುವುದು, ಸರಕಾರದ ಜಮೀನುಗಳನ್ನು ಕಬಳಿಸುವುದು, ಕೊಟಿ ಕೋಟಿ ಹಣ ಲೂಟಿ ಮಾಡುವುದು, ಪ್ರಾಮಾಣಿಕ ಅಧಿಕಾರಿಗಳನ್ನು ತಮ್ಮ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವುದಾಗಿದೆ. ಸಾರ್ವಜನಿಕರ ಹಣವನ್ನು ತಿಂದು, ಅವರು ಹಸಿವು, ಬಡತನದಲ್ಲಿ ಇರುವಂತೆ ಮಾಡುವುದಾಗಿದೆ.

ಸಮುದಾಯದ ಪ್ರತಿನಿಧಿಯಾದ ಬಸವಚಾರಿ ತನ್ನ ಪರಿಸ್ಥಿತಿಗೆ ದೇವರೆ ಹೊಣೆ ಹೊರತು, ಯಾವುದೇ ಪ್ರಭುತ್ವಶಾಹಿಯಲ್ಲ ಎಂದು ಹೇಳುತ್ತಾನೆ. ತನ್ನ ಹಸಿವು, ಬಡತನ ನಿರ್ಮೂಲನೆ ಮಾಡಬೇಕಿದ್ದ ರಾಜಮನೆಯಲ್ಲಿ ಭೋಗಜೀವನದಲ್ಲಿ ತೊಡಗಿದರೆ, ಹಸಿವಿನಿಂದ್ದ ಸಾಯುತ್ತಿದ್ದ ಜನರು ದೇವರ ಮೊರೆ ಹೋಗುವುದು ಸಹಜ. ಬಸವಾಚಾರಿಯಲ್ಲಿ ಹೇಳುವುದಾದರೆ,

ಮಡದಿ ಮುದ್ದಮ್ಮ
ಮಕ್ಕಳ ಫಲಕೊಟ್ಟಂತಾ ಶಿವನು
ಉಣ್ಣಾಕೆ ಅನ್ನ ಕೊಡ್ತಿಲ್ಲ

(ಪು.ಸಂ-೨೬೧)

ಇದೇ ನಂಬಿಕೆ ಈಗಲೂ ನಮ್ಮ ಹಳ್ಳಿ ಜನರಲ್ಲಿ ಕಾಣುತ್ತೇವೆ. ಹಸಿವು, ಬಡತನ ಇದು ದೇವರು ಕೊಟ್ಟ ಶಾಪ ಎಂದು ಭಾವಿಸಿದ್ದಾರೆ. ಇದೇ ಮಾತನ್ನು ಬಸವಾಚಾರಿ ತನ್ನ ಮಡದಿಗೆ ತಿಳಿಸುವುದು. ಮಕ್ಕಳನ್ನು ಕೊಟ್ಟಂತ ಶಿವನು, ನಮಗೆ ತಿನ್ನಲು ಅನ್ನವನ್ನು ಕೊಡಲಿಲ್ಲ ಎಂದು ಹೇಳುವುದು. ಅಂದು ಪ್ರಭುಗಳ ಆಳ್ವಿಕೆಯ ಕಾಲದಲ್ಲಿ ಜನರು ತಮ್ಮ ದಾರಿದ್ರತೆಗೆ ತಮ್ಮ ಹಿಂದಿನ ಜನ್ಮದ ಶಾಪ ಎಂದು ಭಾವಿಸಲಾಗಿತ್ತು. ಆದರೆ ಪ್ರಭಗಳಿಂದಲೇ ಈ ದಾರಿದ್ರತ್ರೆ ಉಂಟಾಗಿರುವುದು ಎಂಬತಿಳವಳಿಕೆ ಜನಸಾಮಾನ್ಯರಿಗೆ ತಿಳಿಯದಾಗಿತ್ತು. ಅಂದು ಜನರಿಂದಲೇ ಖಜಾನೆಗಳು ತುಂಬುತ್ತಿದ್ದವೇ ಹೊರತು, ರಾಜ ಪರಿವಾದವರಿಂದಲ್ಲ. ಆದರೆ ಅದು ಜನಸಮುದಾಯಗಳಿಗೆ ವಿನಿಯೋಗವಾಗುತ್ತಿರಲಿಲ್ಲ. ಆದರೆ ಇಲ್ಲಿ ಮಂಟೇಸ್ವಾಮಿ ಬಸವಾಚಾರಿ ಕುಟುಂಬಕ್ಕೆ ಭಿಕ್ಷೆ ನೀಡಲು ಸಾರುತ್ತಾರೆ. ಭಿಕ್ಷೆಯಿಂದ ಮುದ್ದಮ್ಮನ ಕುಟುಂಬ ಹಸಿವಿನ ಸಮಸ್ಯೆಯಿಂದ ಪಾರಾಗುತ್ತದೆ. ಇದು ಕೇವಲ ಮುದ್ದಮ್ಮನ ಕುಟುಂಬವಲ್ಲ, ಇಂಥ ಎಷ್ಟೋ ಕುಟುಂಬಗಳಿಗೆ ಮಂಟೇಸ್ವಾಮಿ ಸೂಚಿಸುತ್ತಿದ್ದ ಸಲಹೆ, ಒಂದು ಸಾಮಾಜಿಕ ಜವಾಬ್ದಾರಿ ಎಂದು ಹೇಳುತ್ತೇನೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ಹಣಸಂಗ್ರಹ ಗೊಳ್ಳುತ್ತದೆ. ಆ ಹಣ ಪ್ರಜೆಗಳಿಗಾಗಿಯೇ ಉಪಯೋಗವಾಗಬೇಕು. ಈ ರೀತಿ ಆದಾಗ ಮಾತ್ರ ಸಮಾಜದಲ್ಲಿ ಬಡತನ, ಹಸಿವು ನಿರ್ಮೂಲನೆಯಾಗುತ್ತದೆ. ಆದರೆ ಸರ್ಕಾರದ ಹಣ ಜನಸಾಮಾನ್ಯರ ಕೈಸೇರುತ್ತಿಲ್ಲ. ರಾಜಕಾರಣಿಗಳ ಭ್ರಷ್ಟಾಚಾರದಲ್ಲಿ ಜನಸಾಮಾನ್ಯರ ಹಣ ಕರಗಿಹೋಗುತ್ತಿದೆ. ಸಮಾಜದಲ್ಲಿ ಹಸಿವು, ಬಡತನ ತುಂಬಿದೆ. ಅನ್ನವಿಲ್ಲದೆ ಜನರು ಸಾಯುತ್ತಿದ್ದಾರೆ. ಜನಸಾಮಾನ್ಯರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇದು ಇಂದಿನ ವಾಸ್ತವಸ್ಥಿತಿ.

೪.೨ ಮಲೆಮಾದೇಶ್ವರ ಕಾವ್ಯ: ಹಸವಿನ ತೊಳಲಾಟ

ಮಾನವನ ಮನಸ್ಸು ಸೃಷ್ಠಿ ಸೌಂದರ್ಯವನ್ನು ಅನುಭವಿಸಿ ಸೃಷ್ಟಿ ರಹಸ್ಯವನ್ನು ಅರಿಯಲು ಪ್ರಾರಂಭಿಸಿದಾಗಲೆ ತನ್ನ ಅಪೂರ್ವ ಅನುಭವಗಳನ್ನು ಅಭಿವ್ಯಕ್ತಿ ಪಡಿಸಲು ಪ್ರಯತ್ನಿಸಿದ ಫಲವಾಗಿ ಕಲೆ ಹಾಗೂ ವಿಜ್ಞಾನಗಳು ಉದಯವಾದವು. ಕಲ್ಪನಾ ಪ್ರಧಾನವಾದ ಪ್ರಾಚೀನ ಮಾನವ ಮನಸ್ಸು ವಿಶ್ವದ ಎಲ್ಲ ವಿಷಯಗಳಿಗೂ ವಿವರಣೆ ಕೊಡಲು ಯತ್ನಿಸಿದಾಗ ಪುರಾಣಗಳನ್ನು ಸೃಷ್ಟಿಸಿತು. ಅನಾದಿಯೆಂದು ಪೂಜ್ಯತೆ ಪಡೆದ ವೇದಗಳಿಗಿಂತಲೂ ಹಿಂದೆಯೇ ಪುರಾಣ ಕಲ್ಪನೆ ಮೂಡಿರಬೇಕು. ವೇದಗಳಂತಹ ವಿಶ್ವಕೋಶಗಳ ಹಿನ್ನೆಲೆಯಲ್ಲಿ ಮಾನವ ಮನಸ್ಸು ಪುರಾಣ ಕಲ್ಪನೆಗಳನ್ನು ಸೃಷ್ಟಿಸಿ ವಿಕಾಸಗೊಂಡಿರುವಂತೆ ಕಾಣುವುದಲ್ಲದೆ ಈಗ ದೊರೆತಿರುವ ಪುರಾಣಗಳು ಭಾರತೀಯ ಮನೋವಿಕಾಸವನ್ನು ಚಿತ್ರಿಸುವ ಅತ್ಯುತ್ತಮ ಲಿಖಿತಗಳಾವೆ. ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡು ಪುರಾಣ ಕಲ್ಪನೆ ತನ್ನ ಆಶಯ

ಆದರ್ಶಗಳಿಗೆ ಅನುಸಾರವಾಗಿ ಆದರ್ಶ ದೇವತೆಗಳ ಬೃಹತ್ ಪ್ರತಿಮೆಗಳನ್ನು ನಿರ್ಮಿಸಿದೆ. ಪುರಾಣ ಕಲ್ಪನೆಗಳನ್ನು ಪೊಳ್ಳೆಂದು ತಳ್ಳುವುದಕ್ಕೆ ಬದಲಾಗಿ ಅವುಗಳು ಸಮೃಷ್ಟಿ ಮನಸ್ಸಿನ ಬಹುಮುಖ ಪ್ರತಿಭೆಯಿಂದ ಅವಿರ್ಭವಿಸಿದ ಜ್ಞಾನದೀಪಿಕೆಗಳು ಎಂಬ ದೃಷ್ಟಿಯಿಂದ ವಿವೇಚಿಸಬೇಕಾಗುತ್ತದೆ.

ಒಂದು ಜನಾಂಗದ ಸಾಂಸ್ಕೃತಿಕ ಇತಿಹಾಸವು ಜನತೆಯ ಹೃದಯಾಂತರಾಳವನ್ನು ಸೂರೆಗೊಂಡಾಗ ಐತಿಹ್ಯ ಪುರಾಣಗಳಾಗಿ ಪರಿವರ್ತನೆ ಹೊಂದಿ ಕಥನ ರೂಪದಲ್ಲಿ ಅಭಿವ್ಯಕ್ತಗೊಂಡಾಗ ವಸ್ತುನಿಷ್ಠ ಕಾವ್ಯವೊಂದು ರೂಪುಗೊಳ್ಳುತ್ತದೆ. ಈ ಕಾವ್ಯ ಪರಂಪರೆಯು ನುಡಿನಾಲೆಯಲ್ಲಿ ಹರಿದು ಬರುವಾಗ ಕಾಲಕಾಲಕ್ಕೆ ಬದಲಾವಣೆಗಳನ್ನು ಹೊಂದುತ್ತ ಬೆಳೆಯುತ್ತ ತನ್ನ ಗಾತ್ರ, ಪಾತ್ರ ಮತ್ತು ಸೂತ್ರಗಳನ್ನು ವಿಸ್ತರಿಸಿಕೊಳ್ಳುತ್ತ ಹೋಗುತ್ತದೆ. ಹೀಗೆ ಬೆಳೆದು ಕಾವ್ಯ ಒಬ್ಬ ವ್ಯಕ್ತಿಯದಾಗದೆ ಸಮಗ್ರ ದೇಶದ ಅಥವಾ ಜನಾಂಗದ ವಾಣಿಯಾಗಿದ್ದು, ಮಹಾವೃಕ್ಷದಂತೆ ಆ ಜನಾಂಗಕ್ಕೆ ಆಶ್ರಯಚ್ಛಾಯೆಯನ್ನು ದಾನ ಮಾಡುವಂತೆ ತೋರುತ್ತದೆ. ಅದು ಆ ನಾಡಿನ ಆಜನಾಂಗದ ಆ ಭಾಷೆಯ ಜೀವನಾಡಿಯಂತಿರುವ ಸಂಸ್ಕೃತಿ, ಆಚಾರವಿಚಾರ, ನಂಬಿಕೆ ಸಂಪ್ರದಾಯ ಹೀಗೆ ಇಡೀ ರಾಷ್ಟ್ರದ ಸಮಷ್ಟಿ ಪ್ರಜ್ಞೆಯ ಪ್ರತಿನಿಧಿಯಾಗಿ ಆ ರಾಷ್ಟ್ರದ ಔನ್ನತ್ಯದ ಸಂಕೇತವಾಗಿ ಅವರ್ಭವಿಸುವ ಕೃತಿ ವಿಭೂತಿಯನ್ನು ನಾವು ಮಹಾಕಾವ್ಯ ಎಂದು ಕರೆಯುತ್ತೇವೆ.

ಜನಪದ ಮಹಾಕಾವ್ಯದ ಬೆಳವಣಿಗೆಯು ಒಬ್ಬರ ಬಾಯಲ್ಲಿ ಒಂದು ಘಟನೆ ನಿರ್ಮಾಣವಾಗಿ ಮತ್ತೊಬ್ಬರಿಂದ ಮತ್ತೊಂದು ಘಟನೆ ಸೃಷ್ಟಿಯಾಗಿ ಹಲವಾರು ವ್ಯಕ್ತಿಗಳಿಂದ ಬೆಳೆಯುತ್ತಲೇ ಹೋಗುತ್ತದೆ. ಒಂದು ಘಟನೆಯ ಮೇಲೆ ಮತ್ತೊಂದು ಘಟನೆ ಹೋಗುತ್ತದೆ. ಒಂದು ಘಟನೆಯ ಮೇಲೆ ಮತ್ತೊಂದು ಘಟನೆ ಮೈಚಾಚುತ್ತ ಹುತ್ತದಂತೆ ಬೆಳೆಯುವ ಇದನ್ನು (Accretion Epic) ಎಂದು ಕರೆಯುತ್ತಾರೆ. ಇದೇ ನೈಜ ಮಹಾಕಾವ್ಯ ಹಾಗೂ ಸಹಜ ಮಹಾಕಾವ್ಯ. ಈ ಕೃತಿ ಅನಾಗರೀಕ ಜನಾಂಗದವರಿಂದ ಅನೇಕ ತಲೆಮಾರುಗಳಲ್ಲಿ ಬೆಳೆದುಬಂದುದಾದ್ದರಿಂದ (primitive Epic) ಎಂಬ ಪದವೂ ಬಳಕೆಯಲ್ಲಿದೆ. ಒಬ್ಬರ ಬಾಯಿಂದ ಒಬ್ಬರ ಬಾಯಿಗೆ ಪಠಣ ರೂಪದಲ್ಲಿ ಹರಿದು ಬಂದುದರಿಂದ (oral Epic) ಎಂದು ಕರೆಯುತ್ತಾರೆ. ಹಲವಾರು ಹೃದಯಗಳ ಚಿತ್ತ ಸ್ಪಂದನದಿಂದ ಸೃಷ್ಟಿಯಾದ ಕಾರಣದಿಂದ (Invented Epic) ಎಂದೂ ಕರೆಯಲಾಗಿದೆ. ಅಲ್ಲದೆ ಇಡೀ ಜನಪದದ ಆಚಾರ, ವಿಚಾರ, ರೀತಿ, ನೀತಿ ನಡಾವಳಿಗಳೆಲ್ಲವನ್ನೂ ಧ್ವನಿಸುವುದರಿಂದ ಸಾಂಸ್ಕೃತಿಕ ಮಹಾಕಾವ್ಯವೆಂದೂ ಕರೆಯಬಹುದು. ಕರ್ನಾಟಕದ ವ್ಯಾಪ್ತಿಗೊಳಪಡುವ ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ಪ್ರಮುಖವಾದ ಅವಳಿ ಮಹಾಕಾವ್ಯಗಳೆಂದರೆ 'ಮಲೆಯ ಮಾದೇಶ್ವರ ಮಹಾಕಾವ್ಯ' ಮತ್ತು

'ಮಂಟೇಸ್ವಾಮಿ ಮಹಾಕಾವ್ಯ' ಇವೆರಡೂ ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳವ್ಯಾಪ್ತಿಯಲ್ಲಿ ಬೆಳೆದುಳಿದು ಬಂದಿದೆ. ರಾಷ್ಟ್ರೀಯ ಮಹಾಕಾವ್ಯಗಳ ಸಾಲಿನಲ್ಲಿ ಇವುಗಳನ್ನು ನಿಲ್ಲಿಸಲು ಸಾಧ್ಯವಿಲ್ಲವಾದರೂ ಸ್ಥಳೀಯ ಜನಪದ ಮಹಾಕಾವ್ಯಗಳೆಂದಾದರೂ ಒಪ್ಪಬೇಕಾಗುತ್ತದೆ.

ಮಲೆಯ ಮಾದೇಶ್ವರ ಮಹಾಕಾವ್ಯ ಗಾತ್ರದಲ್ಲಿ ಹೆಚ್ಚು-ಕಡಿಮೆ ಕೆಲೇವಲದಷ್ಟೆ ಇದೆ. ಈ ಕಾವ್ಯದ ಪ್ರತಿಯೊಂದು ಕಥನ ಭಾಗವನ್ನು 'ಸಾಲು' ಎಂದು ಕರೆಯುತ್ತಾರೆ. ಅಂದರೆ ಒಂದು ಕಥೆಯು ಏಕಘಟನಾತ್ಮಕವಾಗಿದ್ದು ಅದು ಪರಿಪೂರ್ಣತೆಯನ್ನು ಸುರಿಸುವುದರಿಂದ ಪ್ರತಿಯೊಂದು 'ಸಾಲು' ಒಂದೊಂದು ಕಾವ್ಯ ಎಂದು ಹೇಳಬಹುದು. ಈ ಮಹಾಕಾವ್ಯದಲ್ಲಿ ಒಟ್ಟು ಹದಿನಾಲ್ಕು ಕಾವ್ಯಭಾಗಗಳು ಮೇಳಗೊಂಡಿವೆ. (Ballad Epic) ಎಂಬ ಅರ್ಥದಲ್ಲಿ ಶ್ರೀ ರಾಗೌ ಅವರು ಇದನ್ನು 'ಲಾವಣಿಗಳ ಸರಣಿ' ಅಥವಾ 'ಲಾವಣಿ ಮಹಾಕಾವ್ಯ' ಎಂದು ಕರೆದಿದ್ದಾರೆ. ಕನ್ನಡನಾಡಿನ ಮಹಾಮಹಿಮನಾಗಿ ಮೆರೆದ ಮಲೆಯ ಮಾದೇಶ್ವರನ ಪ್ರಭಾವಶಾಲಿ ವ್ಯಕ್ತಿತ್ವ ಜನ ಸಾಮಾನ್ಯರ ಮೇಲೆ ಉಂಟು ಮಾಡಿರಬಹುದಾದ ಅದ್ಭುತ ಪರಿಣಾಮ ಇಂತಹ ಮಹಾಕಾವ್ಯದ ಸೃಷ್ಟಿಗೆ ಕಾರಣವಾಗಿದೆ.

ಮಂಟೇಸ್ವಾಮಿ ಮತ್ತು ಮಾದೇಶ್ವರ ಉತ್ತರ ದೇಶದಿಂದ ದಕ್ಷಿಣಕ್ಕೆ ಬಂದವರೆಂದು ಜನಪದ ಸಾಹಿತ್ಯ ಸಾರಿ ಹೇಳುತ್ತದೆ. ಬಂದವರೆಂಬುದಕ್ಕೆ ಮಾದೇಶ್ವರ ಮಹಾಕಾವ್ಯದಲ್ಲಿ ಆಧಾರವಿದ್ದರೂ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಎಲ್ಲೂ ಪ್ರಸ್ತಾಪವಾಗಿಲ್ಲ. ಮಂಟೇಸ್ವಾಮಿ ಮೈಸೂರಿಗೆ ಬಂದಾಗ ಕಾರಗಳ್ಳಿ ಮಾರನಾಯಕನನ್ನು ಸಂಹರಿಸಲು ಅರಸು ಮನೆತನದವರಿಗೆ ನೆರವಾದ್ದು. ದೊಡ್ಡಮ್ಮ ತಾಯಿಯನ್ನು ದತ್ತು ಪಡೆದದ್ದು ಐತಿಹಾಸಿಕ ಸತ್ಯವಾಗಿದ್ದು ಮಂಟೇಸ್ವಾಮಿ ೧೪ ಹಾಗೂ ೧೫ನೇ ಶತಮಾನದ ಅಂತರದಲ್ಲಿ ಜೀವಿಸಿದ್ದಿರಬಹುದೆಂದು ಹೇಳಬಹುದು. ಮಂಟೇಸ್ವಾಮಿಯನ್ನು ಧರೆಗೆ ದೊಡ್ಡವರು ಎಂದು ಕರೆಯುವುದರಿಂದ ಮಾದೇಶ್ವರ ಅವರ ಕಾಲದಲ್ಲಿ ಇನ್ನೂ ಚಿಕ್ಕ ಹುಡುಗನಾಗಿದ್ದನೆಂದು ಕಾಣುತ್ತದೆ. ಮಂಟೇಸ್ವಾಮಿಗೂ ಮಾದೇಶ್ವರನಿಗೂ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದು ಅವರು ಒಡೆದು ಕವಲಾಗಿರಬಹುದೇ? ಎಂಬ ಅನುಮಾನವೂ ತಲೆ ದೋರುತ್ತದೆ. ಆದರೆ ಇದಕ್ಕೆ ಸರಿಯಾದ ಆಧಾರಗಳಿಲ್ಲ. ಮಂಟೇಸ್ವಾಮಿ ಹರಿಜನರಲ್ಲಿ ಬಲಗೈ ಪಂಗಡಕ್ಕೆ ಸೇರಿದವನೆಂದು ಮಾದೇಶ್ವರ ಎಡಗೈ ಪಂಗಡಕ್ಕೆ ಸೇರಿದವನೆಂದು ಜನಪದ ಸಾಹಿತ್ಯದಿಂದ ತಿಳಿದುಬರುತ್ತದೆ. 'ರಾಜಾವಳಿ' ಕಥೆಯ ಕರ್ತೃ ದೇವಚಂದ್ರನು ಅವನ ಕಾಲದ ಹಿರಿಯರಲ್ಲಿ ವಿಷಯವನ್ನು ಸಂಗ್ರಹಿಸಿ ಮಾದೇಶ್ವರನ ಬಗೆಗೆ ಬರೆದಿರಬಹುದಾದರೂ ಅವನ ಎಲ್ಲ ಹೇಳಿಕೆಗಳು ಒಪ್ಪುವಂತಿಲ್ಲ. ಮಾದೇಶ್ವರ ಮಾದಿಗರವನೆಂಬುದಕ್ಕೆ ಜನಪದ ಸಾಹಿತ್ಯದಲ್ಲೂ ಆಧಾರ ಇರುವುದರಿಂದ ಈ ವಿಷಯದಲ್ಲಿ ಸಮಸ್ಯೆಯೇ ಇಲ್ಲ. ಶ್ರವಣನನ್ನು ಸಂಹರಿಸಿದ ವಿಷಯವು ಐತಿಹಾಸಿಕ ಘಟನೆಯೇ ಸರಿ.

ಮಾದೇಶ್ವರನ ತಂದೆ ತಾಯಿಗಳ ಬಗ್ಗೆ ಜನಪದ ಸಾಹಿತ್ಯ ಉತ್ತರದೇಶದ ಉತ್ತಮಪುರದ ಕಾಳೆಕಲ್ಯಾಣದೇವರು ಮತ್ತು ಉತ್ತರೋಜಮ್ಮ ಎಂದು ಹೇಳುತ್ತದೆ. ಕಾಂತೂರಿನ ಸಿದ್ದಪ್ಪ ಶಾಸ್ತ್ರಿಗಳ 'ಮಲೆ ಮಹದೇಶ್ವರನ' ನಿಜಪುರಾಣದಲ್ಲಿ ಚುಂಚ ದಂಪತಿಗಳೆಂದು ಹೇಳಲಾಗಿದೆ.

ಮಾದೇಶ್ವರ ತನ್ನ ಮಹಾಮಹಿಮೆಯಿಂದ ಜನಪದವನ್ನೆಲ್ಲ ತನ್ನಡೆಗೆ ಸೆಳೆದುಕೊಂಡು ಅವನು ಈಶ್ವರನೆನಿಸಿಕೊಂಡ ಮೇಲೆ ಎಲ್ಲಾ ಮಠಗಳನ್ನು ಮಾದೇಶ್ವರ ನಮ್ಮವನು ತಮ್ಮವನು ಎಂದು ಕೊಂಡಾಡಿದಂತೆ ಕಾಣುತ್ತದೆ. ಆದರೆ ಜನಪದ ಸಾಹಿತ್ಯ ಸತ್ಯವನ್ನು ಹೇಳುವಲ್ಲಿ ಹಿಂದೇಟು ಹೊಡೆದಿಲ್ಲವಾದ ಕಾರಣ ಮಾದೇಶ್ವರ ಸುತ್ತೂರು, ಕುಂತೂರು, ಬದನಾಳ ಇತ್ಯಾದಿ ಮಠಗಳಿಗೆ ಬಂದಾಗ ಆ ಮಠಗಳು ಅವನ ಯೋಗ್ಯತೆಯನ್ನು ಗುರುತಿಸದೆ ಅವನಿಗೆ ತಕ್ಕ ಸ್ಥಾನಮಾನಗಳನ್ನು ಕೊಡಲಿಲ್ಲವೆಂದು ಒಪ್ಪಬೇಕಾಗುತ್ತದೆ. ಈ ಮಠಗಳಲ್ಲಿ ಅವನ ಯೋಗ್ಯತೆಗೆ ಪುರಸ್ಕಾರ ಸಿಕ್ಕಿದ್ದರೆ ಅವನು ಏಳು ಮಲೆಗೆ ಹೋಗಿ ನೆಲೆಗೊಳ್ಳುವ ಅವಶ್ಯಕತೆಯೇ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಈ ಮಠದ ಅಯ್ಯಗಳು ಅವನಲ್ಲಿ ಕೆಲವು ವಿಶೇಷ ಗುಣಗಳನ್ನು ಗಮನಿಸಿದರೂ ಮಠವನ್ನು ಮರೆಯಲಾಗದೆ ಅವನಿಗೆ ಕೊಟ್ಟು ಊಳಿಗವಾದರೋ ರಾಗಿ ಬೀಸುವುದು, ಸೌದೆ ತರುವುದು, ದನಕಾಯುವುದು ಹೂ ತರುವುದು ಇತ್ಯಾದಿ. ಅವನು ವೀರಶೈವನಾಗಿರದೆ ಶೈವದೀಕ್ಷೆಗಾಗಿ ಈ ಮಠಗಳಲ್ಲೆಲ್ಲ ಅಡ್ಡ ಜಾತೀಯ ಭೂತದ ಹೊಡೆತದಿಂದ ಪಾರಾಗಲು ದುರ್ಗಮವಾದ ಏಳುಮಲೆ ನಡುವೆ ನೆಲೆಸಿದನೆಂದು ಕಾಣುತ್ತದೆ.

೪.೩ ಮಲೆಮಾದೇಶ್ವರ ಕಾವ್ಯದಲ್ಲಿ ಹಸಿವು

ಮಂಟೇಸ್ವಾಮಿ ಕಥನದಷ್ಟೇ ಪ್ರಧಾನವಾದ ಜನಪದ ಮಹಾಕಾವ್ಯ 'ಮಲೆಯ ಮಾದೇಶ್ವರ ಕಾವ್ಯ.' ಹಸಿವಿನ ನೆಲೆಯಲ್ಲಿ ರೂಪಿತಗೊಂಡ ಈ ಕಥನ ಭಾರತೀಯ ಗ್ರಾಮ ಸಮಾಜದ ಹಸಿವಿನ ಪ್ರತಿರೂಪವಾಗಿದೆ. ಹಸಿವಿನ ನೆಲೆಯಿಂದ ಬಂದ ಮಾದೇಶ್ವರ, ದೈವತ್ವದ ನೆಲೆಗೇರುತ್ತಾನೆ. ಇಲ್ಲಿ ನನಗೆ ಬಹುಮುಖ್ಯವಾಗಿ ಬೇಕಾಗಿರುವ ಸಂಗತಿ ಹಸಿವು. ಈ ಹಸಿವು ಮಲೆಮಾದೇಶ್ವರ ಕಾವ್ಯದಲ್ಲಿ ಹೇಗೆ ಚಿತ್ರಿತಗೊಂಡಿದೆ ಎಂಬುದರ ಜೊತೆಗೆ ಇವತ್ತಿನ ತಳಸಮುದಾಯಗಳ ಹಸಿವಿನ ಸಮಸ್ಯೆ ಹಾಗೂ ಈ ಹಸಿವಿನ ಸಮಸ್ಯೆಗೆ ಕಾರಣವಾಗಿರು ಇವತ್ತಿನ ರಾಜಕಾರಣ ಈ ವಿಚಾರಗಳ ಕಡೆಗೆ ನನ್ನ ಗಮನವಾಗಿದೆ. ಇವತ್ತಿನ ತಳಸಮುದಾಯಗಳ 'ಹಸಿವಿನ' ರೂಪಕವೊಂದನ್ನು ಮಲೆಯ ಮಾದೇಶ್ವರ ಕಾವ್ಯದ ಆರಂಭದಲ್ಲಿ ಕಂಡುಬರುತ್ತದೆ. ಅದು ಎಡಗೈ ಬಲಗೈಯವರು ಹುಟ್ಟಿದ ಕವಟ್ಲು ಎಂಬ ಭಾಗದಲ್ಲಿ ಬರುತ್ತದೆ.

"ಕಾಮಜೇನು ಕೊಟ್ಟಂತ ಗಟ್ಟಿ ಹಾಲನ್ನು ತಂದು
ಚೆನ್ನಾಗಿ ಕಾಯಿಸ್ಬುಟ್ಟು

ಪಾರ್ವತಿ ಪರಮೇಶ್ವರರು ಕುಡಿದಿದ್ದಾರೆ
ಮಿಕ್ಕನಾದ ಸೀಕನು ಕೆರ್ದು
ಮಾತಾಯಿ ಗೂಡ್ನಲ್ಲಿ ಮಡುಗಿದ್ದಾಳೆ
ಮಿಕ್ಕನಾದ ಸೀಕ ಗೂಡ್ನಲ್ಲಿ ಮಾತಾಯಿ ಮಡುಗುತಿದ್ದಲ್ಲ
ಈ ಹೊಲೇಮಗ ಅದುನ್ನ ನೋಡುದ್ನಂತೆ
ಮಾತಾಯಿ ಅತ್ಲಾಗೆ ಮರೆಯಾದ ಪೆಟ್ನೆ
ಈ ಹುಡ್ಗ ಆ ಸೀಕನ್ನ ತಿಂದ್ಬುಡ್ತಂತೆ
ಪರಮಾಸಿ ರುತಿ ನಾಲುಗ್ಗೆ ಹತ್ತುತು
ಆಹಾ! ಈ ಕಾಮಧೇನು ಕೊಡೊ ಹಾಲುನ ಸೀಕೆ ಇಷ್ಟು ರುಚಿಯಾಗದಲ್ಲ
ಇದರ ಮಾವ್ಸವನ್ನು ತಿಂದುದ್ದೆ ಆದ್ರೆ
ಇನ್ನೆಷ್ಟರ ಮಟ್ಗೆ ರುತಿಯಾಗಿರಬೋದು?
ಕಾಮಜೇನುವಿನ ಮಾವ್ಸವನ್ನು ತಿನ್ನಬೇಕೆಂಬುದಾಗಿ
ಅವುನು ಬಾಳ ಸಂತೋಷ ಪಡುವಾನು
ನೋಡಿ ನಮ್ಮ ಶಿವನಾ!
ಕಾಮಜೇನುವನ್ನು ಅಟ್ಕೊಂಡು
ಮೇಯ್ಸಕೆ ಅಂತ ಬಂದನಲ್ಲ
ನಾನು ಈ ಕಾಮಜೇನುವಿನ ಮಾವ್ಸವನ್ನು ತಿನ್ನಬೇಕಾರೆ
ಹೆಂಗೆ ಮಾಡಿ ಪ್ರಾಣ ತಗೀಬೇಂಬುದಾಗಿ
ಬೆಟ್ಟದ ಮೇಲೆ ಮನುಗಿ ಮೊಲ್ಕಾಕು ಕಾಮಜೇನ
ಕಲ್ತಕ್ಕಂಡು ಕೈಲಿಡ್ಕೊಂಡು ಹೊಡ್ತಿದ್ದಾನೆ
ಅಳ್ಳೆಪರೀಗೆ ನೋಡಿ ಹೊಡುದ್ನಲ್ಲ."

ಕಾಮಜೇನು ಕೊಟ್ಟಂತ ಹಾಲನ್ನು ತಂದು ಚೆನ್ನಾಗಿ ಕಾಯಿಸಿ ಪಾರ್ವತಿ, ಪರಶಿವನು ಕುಡಿಯುತ್ತಿರುತ್ತಾರೆ. ಕೊನೆಯಲ್ಲಿ ಉಳಿದಿರುವಂತ ಸೀಕನು ಕೆರೆದು ಮಹಾತಾಯಿಯಾದ ಪಾರ್ವತಿಯು ಮನೆಯ ಗೂಡೊಂದರಲ್ಲಿ ಅದನ್ನು ಮಡಗುತ್ತಾಳೆ. ಇದನ್ನು ಹೊಲೆಮಗ ನೋಡಿಬಿಡುತ್ತಾನೆ. ಪಾರ್ವತಿಯು ಹೋದ ತಕ್ಷಣ ಆ ಹೊಲೆ ಮಗ ಅಲ್ಲಿಗೆ ಬಂದು ಗೂಡಲ್ಲಿ ತಾಯಿ ಪಾರ್ವತಿಯು ಇಟ್ಟಿದ್ದ ಸೀಕನ್ನು ತೆಗೆದುಕೊಂಡು ತಿನ್ನುಬಿಡುತ್ತಾನೆ. ಆದರ ಅಗಾಧವಾದ ರುಚಿಯು ಹೊಲೆಮಗನ ನಾಲಿಗೆಗೆ ಹತ್ತುಬಿಡುತ್ತೆ. ಈ ಕಥನ ಇವತ್ತಿನ ವಾಸ್ತವ ಸ್ಥಿತಿಗೆ ಎಷ್ಟು ಹತ್ತಿರವೆಂದರೆ ಇವತ್ತಿಗೂ ನಮ್ಮ ಗ್ರಾಮಭಾರತದಲ್ಲಿ ತಳಸಮುದಾಯದ ಕುಟುಂಬಗಳಲ್ಲಿ ಮಕ್ಕಳ ಬಾಯಿಗೆ ಈ ಸೀಕೆ ಚಾಕಲೇಟು ಆಗಿಬಿಟ್ಟಿದೆ. ಸೀಕು ತಿಂದು

ಹೊಲಗಳಲ್ಲಿ ದುಡಿಯಲು ಹೋಗುವ ಮಹಿಳೆಯರು, ಪುರುಷರು, ಮಕ್ಕಳು ಭಾರತದ ಉದ್ದಕ್ಕೂ ಕಂಡುಬರುತ್ತಾರೆ. ಈ ಸೀಕು ನಮ್ಮ ಹಳ್ಳಿಗಾಡಿನ ಜನರ ಹಸಿವು, ಬಡತನ, ಅವಮಾನಗಳಿಂದ ಸಂಕೇತವಾಗಿ ನಮ್ಮ ಸಾಹಿತ್ಯ ಬರವಣಿಗೆಯಲ್ಲಿ ಕಂಡುಬರುತ್ತದೆ. ಇವತ್ತಿಗೂ ತಳವರ್ಗದ ಕುಟುಂಬಗಳು ಸೀಕು ತಿಂದು ಬದುಕುತ್ತಿದ್ದಾರೆ.

ನಮ್ಮ ಜನಪದರು ಹಸಿವು, ಬಡತನ, ಅವಮಾನಗಳನ್ನು ತಮ್ಮ ಹಾಡುಗಳಲ್ಲಿ, ಕಥಾನಕಗಳಲ್ಲಿ ಕಟ್ಟಿಕೊಡುತ್ತಾರೆ. ಆದರೆ ಇವೆಲ್ಲಕ್ಕೆ ಕಾರಣೀಭೂತರಾದ ಪ್ರಭುಗಳ ವಿರುದ್ಧ ಸಿಡಿದೇಳಲಿಲ್ಲ. ಸಿಡಿದೇಳುವ ಅವಕಾಶಗಳು ಬಂದಾಗಲೆಲ್ಲ, ಆ ವ್ಯಕ್ತಿಗಳನ್ನು, ಸಮುದಾಯಗಳನ್ನು ನಿಯಂತ್ರಿಸುವ ಶಕ್ತಿ ಸಾಮರ್ಥ್ಯಗಳನ್ನು ಪ್ರಭುತ್ವಶಾಹಿಗಳು ಹೊಂದಿರುತ್ತಾರೆ. ನಿಯಂತ್ರಿಸಲು ಬಂದ ಪ್ರಭುತ್ವಶಾಹಿಗಳ ವಿರುದ್ಧ ನಿಂತು ಹೋರಾಟ ಮಾಡುವ ಪ್ರಕ್ರಿಯೆಗಳು ಭಾರತದ ಉದ್ದಕ್ಕೂ ಕಾಣುತ್ತೇವೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಈ ತರದ ಪ್ರಕ್ರಿಯೆಗಳು ನಡೆಯುತ್ತಿವೆ. ಹಾಗೆ ಮುಂದುವರಿಯುತ್ತಾ ಆ ಹೊಲೆಮಗ ಸೀಕಿನ ರುಚಿಯಿಂದ ಪ್ರಭಾವಿತನಾಗಿ, ಅದರ ಮಾಂಸ ಇನ್ನೆಷ್ಟು ರುಚಿಯಾಗಿರಬೇಕು ಎಂದು ತಿಳಿದು ಅದನ್ನು ಕೊಂದು ಅದರ ಮಾಂಸ ತಿನ್ನುವ ಆಸೆಯಿಂದ ಅದನ್ನು ಮೇಯಿಸಲು ಹೋಗುತ್ತಾನೆ. ಹೇಗಾದರು ಮಾಡಿ ಅದರ ಮಾಂಸ ತಿನ್ನಬೇಕು ಎಂದು ಆಸೆಯಲ್ಲಿ ಅದರ ಪ್ರಾಣವನ್ನು ತೆಗೆಯಲು ದೊಡ್ಡದೊಂಡು ಕಲ್ಲು ಕೈಯಲ್ಲಿ ಹಿಡಿದು ಅದಕ್ಕೆ ಹೊಡೆಯುತ್ತಾನೆ. ಅದು ಗಟ್ಟಿಯಾಗಿ ಅರಚ್ಕೊಂಡು ಪ್ರಾಣಬಿಡುತ್ತದೆ.

"ಅದು ಅರಚ್ಕೊಂಡು ಪ್ರಾಣ ಬಿಡುವಾದು
ನೋಡಿ ನಮ್ಮ ಶಿವನಾ
ಹೊಲಮಗ ಓಡ್ಬಂದು ಶಿವುನ ಮುಂದಾರ್ನಲ್ಲಿ ನಿಂತಿದ್ದಾನೆ
ಶಿವನ ದ್ರಿವ್ಯದ್ರಿಷ್ಠಿಗೆ
ಇವನ ಆಸೆಯೆಲ್ಲ ಅರುವಾಗೋಗ್ಯೆತೆ
ಅಪ್ಪಾ ಆಯ್ತು, ನಿನ್ನಾಸೆ ಎಷ್ಟರಮಟ್ಟಗದೊ ಅಷ್ಟು ತೀರುಸ್ಕೋ ಹೋಗು
ಅಂತ ಹೇಳುದ್ರು ಶಿವಾ
ತಂದೆಯವುರೆ ಆಸೆಯನ್ನು ತೀರುಸ್ಕೊ ಅಂತೀರಲ್ಲ
ಕುಯ್ಯಕ್ಕೇನು? ಕೊರಿಯಕ್ಕೇನು?
ಆಯ್ದ ಅನ್ನುವಂತಾದ್ದು ನನ್ಹತ್ರ ಮೊದಲೇ ಇಲ್ಲ
ಕುಯ್ದು ತಿನ್ನುವಂತ ಕೆಲ್ಸ ನನ್ನಿಂದಾಗದಲ್ಲ ಸ್ವಾಮಿ-
ನನಗೆ ಸಾಯವ ತೋರುಕೊಡಿ ಅನುತಾನೆ
ನೋಡಿ ನಮ್ಮ ಶಿವನಾ

ಹೊಲುಮಗನ ಮಾತ ಪರಮೇಶ್ವರ ಕೇಳುದ್ರಲ್ಲ
ಅವುರ ಕಂಕ್ಳಲ್ಲಿ ಜಲಜಲನೆ ಹರೀತಿತ್ತಲ್ಲ ಮದುದ ಬೇವುರು
ಆ ಬೆವುರ ತಗುದು ಕೇಳೀಕೆ ಎಸೆದಿದ್ದಾರೆ
ಪರಮೇಶ್ವರನ ಮದದ ಬೆವುರ್ನಲ್ಲಿ
ಮಾಯದ ಹುಡುಗ ಎದ್ದು ನಿಂತ್ನಂತೆ
ಕತ್ತಿ ಕಠಾರಿಯನ್ನು ಹಿಡ್ಕೊಂಡು
ಗುಡುಗುಡನೆ ಸದ್ದು ಮಾಡ್ಕೊಂಡು
ಅಲುಕೊಂಡು ಕೂಕ್ಕೊಂಡು ಕಾಕ್ವಾಕಿ ಮೇಲುಕೆದ್ನಂತೆ
ಇವುನು ಅಬ್ರುಸೋದು ನೋಡಿ
ಹೊಲುಮಗನ ಗುಂಡ್ಗೆ ಒಡುದೊದಂಗಾಯ್ತಂತೆ
ಅವ್ನು ಕಾಲೀಗೆ ಬುದ್ಧಿ ಹೇಳುವಾನು
ನೋಡಿ ನಮ್ಮ ಶಿವನಾ।
ಬಿದ್ದಂಬೀಕ ಓಡಕತ್ತುದ ಹೊಲಮಗನ
ಓಡ್ಬಂದು ಮಾಶಿವ ಬಲಗೈಲಿ ಹಿಡ್ಕೋಂಡ್ನಂತೆ
ಅಪ್ಪಾ ನನ್ನ ಮದದ ಬೆವುರ್ನಲಿ ಹುಟ್ಟಿದ ಮದನೆ
ಈ ಹೊಲುಮಗ ಕಾಮಜೇನು ತಿನ್ಬೇಕು ಅಂತ ಬಯುಸವ್ನೆ
ಅ ಮನೆ ಕುದು ಕೊರುದು–
ಕೊಟ್ಬು ಬಾ ಅಂತವುರೆ ಜಗದೀಸ
ನೋಡಿ ನಮ್ಮ ಶಿವನಾ।
ಎರಡು ಮಕ್ಕಳು ಬಂದು
ಸತ್ತು ಮನುಗಿರುವಂತ ಕಾಮಜೇನುವನ್ನು ನೊಡ್ತಿದ್ದಾರೆ
ಎಡಗೈಯವನು ಕೂದು ಕೂದು ಕೊಡ್ತಿದ್ರೆ
ಬಲಗೈಯವನು ತಿಂದಿದ್ದಾನೆ
ಎಡಗೈಯವನು ಕಾಮಜೇನುನ ಚರ್ಮನೆಲ್ಲ ಹೊತ್ಕೊಂಡು
ಬಲಗೈಯ್ಯವುನ ಜೋತೆಲಿ ಕರುಕೊಂಡು
ಶಿವುನ ಹತ್ತಿರಕ್ಕೆ ಬಂದಿದ್ದಾನೆ
ಪರಮೇಶ್ವರ ಅವರನ್ನು ನೋಡಿ ಹೇಳ್ತಿದ್ದಾರೆ
ಅಪ್ಪಾ ಮಕ್ಳೆ ನೀವಿನ್ನು ಈ ಕೈಲಾಸದಲ್ಲಿರ ಕಾಗ್ಬು
ನಾನು ಬಲಗೈ ಹಿಡಿದಿದ್ದಂತ ಹೊಲುಮಗ

ಕಾಮಜೇನುವನ್ನು ತಿಂದಿದ್ದಾನೆ
ನಾನು ಎಡಗೈಲಿ ಹಿಡ್ಕೊಂಡಿದ್ದ ಮದಮಗ
ಹನ್ನೆರಡಾಯ್ದುವನ್ನು ತೊಟ್ಕೊಂಡು
ನೀನು ಕಾಮಜೇನುವನ್ನು ಕುಯ್ದುದ್ದಿಯಲ್ಲಪ್ಪ
ನೀನು ಭೂಲೋಕಕ್ಕೆ ಹೋಗಿ ನೆಲೆಗೊಂಡು
ಅಣ್ಣ ತಮ್ಮದೀರಾಗಿ ಬಾಳಾಟ ಮಾಡ್ರಪ್ಪ
ಕಾಮಜೇನುವಿನ ಮಾವ್ಸವನ್ನು ತಿಮದ ಹೊಲಮಗ
ಗೇಯ್ಕೊಂಡಿದ್ದು ಲೆಕ್ಕ ತೀರುಸ್ಲಪ್ಪ
ಚರ್ಮದಿಂದ ಬಾರ್ಕೊಲು ಸಿದ್ದುಗೆ, ತಿತ್ತಿಮಾಡು
ಕೊಂಬು ತಕ್ಕಂಡು ಎರಂಡೆ ಮಾಡಪ್ಪ
ಕಣ್ಣಿಗೆ ಬದಲಾಗೆ ಕಣ್ಣು ಕೊಟ್ವಂತೆ ಜನುಗಳ್ಗೆ
ಪಾದ್ರಾಕ್ಷಿ ಮಾಡಪ್ಪ."[೧೦]

ಕಾಮಜೇನು ಪ್ರಾಣ ಬಿಟ್ಟ ಮೇಲೆ, ಹೊಲಮಗ ಓಡಿಬಂದು ಶಿವನ ಮುಂದೆ ನಿಲ್ಲುತ್ತಾನೆ. ಶಿವನು ತನ್ನ ದೃಷ್ಠಿಯನ್ನು ಬಿಟ್ಟು ನೋಡುತ್ತಾನೆ. ಹೊಲಮಗನ ಆಸೆಯೆಲ್ಲ ಶಿವನಿಗೆ ಅರಿವಾಗುತ್ತದೆ. ಆಗ ಶಿವನು ಹೊಲಮಗನನ್ನು ಕುರಿತು ಅಪ್ಪಾ ಆಯ್ತು, ನಿನ್ನಾಸೆ ಎಷ್ಟರಮಟ್ಟದೊ ಅಷ್ಟು ತೀರುಸ್ಕೋ ಹೋಗು ಅಂತ ಹೇಳುತ್ತಾನೆ ಶಿವಾ. ಆಗ ಹೊಲಮನ ತನ್ನ ಮನಸಿನಲ್ಲಿ ತಂದೆಯವರೆ ಆಸೆಯನ್ನು ತೀರುಸ್ಕೊ ಅಂತೀರಲ್ಲ ಎಂದು ಯೋಚಿಸುತ್ತಾ, ತನ್ನ ಕೈಯಲ್ಲಿ ಮಾಂಸವನ್ನು ಕೊಯ್ಯುವಂತ ಆಯುಧವಿಲ್ಲವಲ್ಲ ಎಂದು ಬೇಡಿಕೊಳ್ಳುತ್ತಾನೆ. ಆಗ ಶಿವನ ತನ್ನ ಕಂಕುಳಲ್ಲಿ ಜಲಜಲನೆ ಹರಿಯುತ್ತಿದ್ದ ಮದದ ಬೆವರಿನಿಂದ ಮಾಯದ ಹುಡುಗನನ್ನು ಸೃಷ್ಠಿಸುತ್ತಾನೆ. ಆ ಮಾಯದ ಹುಡುಗ ಕತ್ತಿ, ಕಠಾರಿಯನ್ನು ಹಿಡ್ಕೊಂಡು ಕೇಕೆ ಹಾಕುತ್ತಾ ಎದ್ದು ನಿಲ್ಲುತ್ತಾನೆ. ಇದನ್ನು ಕಂಡು ಹೊಲಮಗನ ಎದೆ ಹೊಡೆದುಹೋಗುತ್ತದೆ. ಅಲ್ಲಿಂದ ಹೊಲಮಗ ಭಯಬಿದ್ದು ಓಡಲು ಸುರುಮಾಡುತ್ತಾನೆ.

ಆಗ ಶಿವನು ಬಂದು ಹೊಲಮಗನ ಬಲಗೈ ಹಿಡಿದು ಅಪ್ಪಾ ನನ್ನ ಮದದ ಬೆವ್ರುರ್ನಲಿ ಹುಟ್ಟಿದ ಮದನೆ, ಈ ಹೊಲಮಗ ಕಾಮಜೇನು ತಿನ್ಬೇಕು ಅಂತ ಬಯಸವ್ನೆ, ಆ ಮನೆ ಕುದು ಕೊರುದು. ಕೊಟ್ಬು ಬಾ ಅಂತವುರೆ ಜಗದೀಸ ಆಗ ಆ ಇಬ್ಬರು ಸತ್ತಿರುವ ಕಾಮಜೇನುವಿನ ಬಳಿ ಬರುತ್ತಾರೆ. ಎಡಗೈಯವನು ಕೊಯ್ದು ಕೊಯ್ದು ಕೊಡುತ್ತಿದ್ದರೆ, ಬಲಗೈಯವನು ತಿನ್ನುತ್ತಾನೆ. ಕೊನೆಗೆ ಎಡಗೈಯವನು ಕಾಮಜೇನುವಿನ ಚರ್ಮವನ್ನು ಹೊತ್ಕೊಂಡು ಶಿವನ ಬಳಿ ಬರುತ್ತಾರೆ. ಆಗ ಶಿವನ ಅವರಿಬ್ಬರನ್ನು ಕಂಡು ಅಪ್ಪಾ ಮಕ್ಳೆ ನೀವಿನ್ನು ಈ ಕೈಲಾಸದಲ್ಲಿರಕಾಗ್ದು ಎಂದು ಹೇಳಿ ಶಿವನು. ನೀವಿಬ್ಬರು ಭೂಲೋಕಕ್ಕೆ ಹೋಗಿ ಅಣ್ಣ

ತಮ್ಮಂದಿರಾಗಿ ಬಾಳಿ ಎಂದು ಹೇಳಿ ಕಳುಹಿಸುತ್ತಾನೆ. ಇಂದು ಆ ಎರಡು ಗುಂಪುಗಳು ತಮ್ಮ ತಮ್ಮಗಳ ನಡುವೆ ವೈಷಮ್ಯದಿಂದ ಜೀವನ ನಡೆಸುತ್ತಿದ್ದಾರೆ. ಕೆಲವರು ಈ ಎರಡು ಗುಂಪುಗಳಿಂದ ರಾಜಕೀಯ ಲಾಭ ಪಡೆದುಕೊಂಡಿದ್ದಾರೆ. ಆದರೆ, ಈ ಎರಡು ಗುಂಪುಗಳು ಬದುಕು ಮೇಲಿನ ಕಥನಕ್ಕಿಂತ ಭಿನ್ನವೇನಿಲ್ಲ. ಹಸಿವಿನ ಸನ್ನಿವೇಶ ಮತ್ತೆ ಕಂಡು ಬರುವುದು ಕಲ್ಯಾಣದಲ್ಲಿ ನಿತ್ಯ ಜಂಗಮರಿಗೆ ಭೋಜನದ ವ್ಯವಸ್ಥೆಯನ್ನು ಬಸವಣ್ಣ ಏರ್ಪಡಿಸಿರುತ್ತಾನೆ. ಮಾದೇಶ್ವರ ಕಲ್ಯಾಣಕ್ಕೆ ಬಂದಂತ ಸಂದರ್ಭದಲ್ಲಿ.

"ಬಲಗೈಯವನೆ ಮಾವ್ಸ ನಿನದಪ್ಪ ಅಂದವುನೆ ಜಗದೊಡಿಯ
ನೋಡಿ ನಮ್ಮ ಶಿವನಾ।
ಶಿವನಾಡಿದ ಮಾತ ಕೇಳ್ಕೊಂಡು ಆಮಕ್ಳು
ಸೋಕುವನ್ನ ಮಾಡ್ತಿದ್ದಾರಲ್ಲ ಗುರುವೆ
ಅಪ್ಪಾ ಮಕ್ಳೆ ಇನ್ನು ಅತ್ತು ಕರುದ್ರೆ ಬಂದತ?
ನೀವು ದುಕ್ಕಾಸೋಕಮಾಡಿ ಅಳೋದು ತರವಲ್ಲ
ನೀವಿನ್ನು ಚಿಂತೆ ಮಾಡೋದು ಬುಟ್ಟು ಬುಟ್ಟು
ಭೂಮ್ಗೋಗ್ತಪ್ಪ ಅಂದವುರೆ ಜಗದೀಶ
ನೋಡಿ ನಮ್ಮ ಶಿವನಾ।
ಎಡಗೈಯವ ಮಾದುಗರ ಹುಡುಗ ಹೇಳ್ತಿದ್ದಾನೆ
ಸ್ವಾಮಿ ನಾನು ನಿಮ್ಮ ಅಪ್ಲೆಯಂತೆ
ಕೂದು ಕೊರುದು ಕೊಟ್ನೆ ಹೊರ್ತು
ತಿಂದೋನಲ್ವಲ್ಲ? ನಂದೇನು ಅಪ್ರಾಧ ಗುರುವೆ?
ನನ್ನ ಭೂಮ್ಗೆ ಕಳುಸೋದು ತರುವಾ ಶಿವನೆ? ಅದ್ನಂತೆ
ಅಯ್ಯೋ ನನಕಂದ ಮಾದಗ
ಕೂದ ಪಾಪ್ವ ಪಾದ್ರಾಕ್ಷಿ ಹೊಲ್ಕೊಟ್ಟು ಕಳಿಯೋಗಪ್ಪ
ನಿನ್ನ ಪಾಪ ಪರಿಯಾರ ಅಂದ್ರಂತೆ ಜಗದೀಶ
ನೋಡಿ ನಮ್ಮ ಶಿವನಾ।
ಅಯ್ಯೋ ಪರಮಾತ್ಮ

(ಮಲೆಯ ಮಾದೇಶ್ವರ, ಪು.ಸ–೪೪, ೪೮)

ನಿಮ್ಮಾಗ್ಳೆ ಹೋರ್ಟೆ ನಾನು ಕೂದುಕೊಟ್ಟಿದ್ಕೆ
ನನ್ನದೊಂದುಸಣ್ಣ ಪ್ರಾರ್ಥನೆ ಐತಲ್ಲ ಗುರುವೆ
ಅದೇನಪ್ಪ?"[1]

ಹೀಗೆ ಈ ಕಥನ ಮುಂದುವರಿಯುತ್ತದೆ. ಪಾರ್ವತಿ ದೇವಿಯ ಸೂತಕದ ಬಟ್ಟೆಯಲ್ಲಿ ಹುಟ್ಟಿರುವಂತ ಮಗು ಹೊಲೆಯವನಾಗುತ್ತಾನೆ. ಈ ಹೊಲೆ ಮಗುವಿನ ಕೆಲಸ ಪ್ರತಿದಿನ ಕಾಮದೇನುವನ್ನು ಕಾಯುವುದು ಅನಂತರ ಕಾಮದೇನುವನ್ನು ತಂದು ಕೈಲಾಸದಲ್ಲಿ ಕಟ್ಟುವುದು. ಅನಂತರ ಪಾರ್ವತಿದೇವಿ ಬಂದು ಹಾಲು ಕರೆಯುವುದು, ಅದನ್ನು ಕಾಯಿಸಿ ಪಾರ್ವತಿ ಪರಮೇಶ್ವರ ಕುಡಿಯುತ್ತಾರೆ. ಪಶುಪಾಲನ ಸಂಸ್ಕೃತಿಯ ನೆಲೆಯಲ್ಲಿ ಈ ಕಥನ ಮೂಡಿದೆ. ಒಂದು ಹಳ್ಳಿಯ ಗ್ರಾಮೀಣ ಜೀವನದ ಬದುಕಿನ ಕುಟುಂಬದ ವಿವರಣೆಯಾಗಿದೆ.

ಪಾರ್ವತಿ ಪರಮೇಶ್ವರ ಹಾಲು ಕುಡಿದು ಉಳಿದ ಸೀಕನ್ನು ತಾಯಿ ಪಾರ್ವತಿ ಗೂಡಿನಲ್ಲಿ ಹಿಡುತ್ತಾಳೆ. ಇದನ್ನು ಹೊಲೆಮಗ ನೋಡುತ್ತಾನೆ. ಪಾರ್ವತಿ ಹೋದ ನಂತರ ಗೂಡಲ್ಲಿ ಹಿಟ್ಟಿದ್ದ ಸೀಕನ್ನು ಹೊಲೆಮಗ ತಿನ್ನುತ್ತಾನೆ. ಅದರ ರುಚಿಗೆ ಬೆರಗಾಗಿ, ಈ ಕಾಮಧೇನು ಕೊಡುವ ಹಾಲಿನ ಸೀಕು ಇಷ್ಟು ರುಚಿಯಾಗಿದ್ದರೆ, ಇನ್ನು ಇದರ ಮಾಂಸ ಎಷ್ಟು ರುಚಿಯಾಗಿರಬಹುದು ಎಂದು ಹೊಲೆಮಗ ತಿಳಿದು ಬಹಳ ಸಂತೋಷದಿಂದ ಕಾಮದೇನುವನ್ನು ಮೇಯಿಸುವುದಕ್ಕೆ ಬೆಟ್ಟಕ್ಕೆ ಬರುತ್ತಾನೆ. ಈ ಕಾಮಧೇನುವಿನ ಮಾಂಸ ತಿನ್ನಬೇಕಾದರೆ ತಾನು ಇದರ ಪ್ರಾಣವನ್ನು ತೆಗೆಯಬೇಕು ಎಂದು ತಿಳಿದು ಕಲ್ಲಿನಿಂದ ಅದಕ್ಕೆ ಹೊಡೆದು ಪ್ರಾಣ ತೆಗೆಯುತ್ತಾನೆ. ಇದು ಶಿವನಿಗೆ ಗೊತ್ತಾಗುತ್ತೆ. ಹೊಲೆ ಮಗ ಶಿವನ ಮುಂದೆ ಬಂದು ನಿಲ್ಲುತ್ತಾನೆ. ತಾನು ಕಾಮದೇನುವಿನ ಮಾಂಸ ತಿನ್ನುವ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಇದಕ್ಕೆ ಶಿವನ ಒಪ್ಪಿಗೆ ಸಿಗುತ್ತದೆ. ಆದರೆ ಹೊಲೆಮಗ ಅದನ್ನು ಕೊಯ್ದು ತಿನ್ನಲು ಆಯ್ದ ತನ್ನ ಬಳಿ ಇಲ್ಲ ಎಂದು ಹೇಳುತ್ತಾನೆ. ಅದನ್ನು ತಿಳಿದ ಪರಮೇಶ್ವರ ನನ್ನ ಕಂಕುಳಿನಲ್ಲಿ ಹರಿಯುತ್ತಿದ್ದ ಮದದ ಬೆವರಿನಿಂದ ಮಾಯದ ಹುಡುಗನನ್ನು ಸೃಷ್ಟಿಸುತ್ತಾನೆ. ಕತ್ತಿ, ಕಠಾರಿ ಹಿಡಿದ ಮಾಯದ ಹುಡುಗನನ್ನು ಕಂಡು ಹೊಲೆ ಮಗ ಭಯದಿಂದ ಓಡಿಬಂದು ಶಿವನ ಬಳಿ ನಿಲ್ಲುತ್ತಾನೆ. ಆಗ ಶಿವ ಆ ಮಾಯದ ಹುಡುಗನಿಗೆ, ಅಪ್ಪಾ ನನ್ನ ಮದದ ಬೆವರಲ್ಲಿ ಹುಟ್ಟಿದ ಮಗನೆ, ಈ ಹೊಲೆಮಗ ಕಾಮದೇನು ತಿನ್ನಬೇಕು ಅಂತ ಬಯಸುವನೆ. ಅವನಿಗೆ ಕೊಯ್ದು ಕೊಡು ಎಂದು ಹೇಳುತ್ತಾನೆ. ಪರಮೇಶ್ವರ ಆಗ ಇಬ್ಬರು ಸತ್ತು ಮಲಗಿರುವ ಕಾಮಧೇನು ಬಳಿ ಬರುತ್ತಾರೆ. ಮಾಯದ ಹುಡುಗ ಕಾಮದೇನ ಮಾಂಸವನ್ನು ಕೊಯ್ದು ಕೊಯ್ದು ಕೊಡುತ್ತಾನೆ. ಹೊಲೆಮಗ ಅದನ್ನು ತಿನ್ನುತ್ತಾನೆ. ಹೀಗೆ ಕಥನ ಮುಂದುವರಿಯುತ್ತದೆ.

ಈ ಮೇಲಿನ ಕಥನ ಇವತ್ತಿನ ದಲಿತ ಕುಟುಂಬಗಳ ಹಸಿವಿನ ಸ್ಥಿತಿ-ಗತಿಗಳನ್ನು ತಿಳಿಸುತ್ತದೆ. ಇವತ್ತಿಗೂ ಹಳ್ಳಿಗಳಲ್ಲಿ ಸತ್ತ ದನವನ್ನು ಹೊತ್ತು ಅದರ ಮಾಂಸವನ್ನು ತಿಂದು ತನ್ನ ಕುಟುಂಬದ ಹಸಿವನ್ನು ನೀಗಿಸುವ ದಲಿತ ಕುಟುಂಬಗಳನ್ನು ನಾವು ಕಾಣುತ್ತೇವೆ. ಆದರೆ ಇವತ್ತು ಆಹಾರ ರಾಜಕಾರಣ ಒಂದು ಸಮುದಾಯದ ಆಹಾರ ಪದ್ಧತಿಯನ್ನು ಧಾರ್ಮಿಕ

ಹಿನ್ನಲೆಯಲ್ಲಿ ನಿಷೇಧಿಸುವ ಕೆಲಸ ಮಾಡುತ್ತಿದೆ. ಇದಕ್ಕೆ ಪ್ರತಿರೋಧವಾಗಿ ನಮ್ಮ ಜನಪದ ಮಹಾಕಾವ್ಯಗಳು ಆಹಾರ ಸಂಸ್ಕೃತಿಯನ್ನು ಸಾಮಾಜಿಕ ನೆಲೆಯಲ್ಲಿ ಸಮಾನತೆಯನ್ನು ಕಾಪಾಡಿಕೊಂಡು ಬರುತ್ತಿದೆ. ಶಿವ ಸಂಸ್ಕೃತಿಯಲ್ಲಿ ಆಹಾರ ಸಂಸ್ಕೃತಿಯ ಸಮಾನತೆಯನ್ನು ಕಾಣುತ್ತೇವೆ. ತನ್ನ ಆಹಾರ ಸಂಸ್ಕೃತಿಯ ಸಮಾನತೆಯನ್ನು ಕಾಣುತ್ತೇವೆ. ತನ್ನ ಆಹಾರ ಸಂಸ್ಕೃತಿಯ ಆಧಾರವಾಗಿದ್ದ ಕಾಮಧೇನ ಹಾಲನ್ನು ಅವಂತರ ಹೊಲಮಗ ಆಹಾರ ಸಂಸ್ಕೃತಿಯಾದ ಅದರ ಮಾಂಸವನ್ನು ಯಾವುದೇ ಪ್ರತಿರೋಧವಿಲ್ಲದೆ ಒಪ್ಪಿಕೊಳ್ಳುವ ಶಿವಸಂಸ್ಕೃತಿ ಶ್ರೇಷ್ಠವಾದದ್ದು. ಅನಂತರ ಅದು ಒಂದು ಸಮುದಾಯದ ಆಹಾರ ಪದ್ಧತಿಯಾಗಿರುವುದು ಕೂಡ ಕಾಣುತ್ತೇವೆ.

ಹಸಿವಿನ ಸನ್ನಿವೇಶ ಮತ್ತೆ ಕಂಡು ಬರುವುದು ಕಲ್ಯಾಣದಲ್ಲಿ ನಿತ್ಯ ಜಂಗಮರಿಗೆ ಭೋಜನದ ವ್ಯಸ್ಥೆಯನ್ನು ಬಸವಣ್ಣ ಏರ್ಪಡಿಸಿರುತ್ತಾನೆ. ಮಾದೇಶ್ವರ ಕಲ್ಯಾಣಕ್ಕೆ ಬಂದಂತ ಸಂದರ್ಭದಲ್ಲಿ

"ನಿಮ್ಮ ಜಂಗಮ್ದಲ್ಲ ನೀಲಮ್ಮನವರು
ಒಕ್ಕುಳಕ್ಕಿ ಹಾಕಿ ಒಂದು ಬದನೆಕಯಾಕಿ
ಲಕ್ಕುಸದ ಮ್ಯೇಲೆ ತೊಂಬತ್ತೇಳು ಕೋಟಿ ಗಣಂಗಳಿಗೆ
ನಿಚ್ಚು ಭೋಜನ ಮಾಡಿ
ಮಿಕ್ಕುದ ಪರಸಾದ್ವ ಕಲ್ಬಂಡೆಗೆ ಕಟ್ಟಿ ಕೈಲಾಸಕ್ಕೆ ಕಳುಗ್ತಾ ಇದ್ದೀರಿ
ಈವತ್ತು ನಾನು ಈ ಕಲ್ಯಾಣ ಪಟ್ಣದಲ್ಲಿ
ಇಲ್ಲಿರುವಂತ ಗಣಂಗಳಿಗೆಲ್ಲ
ನಾನು ಊಟ ಕೋಡ್ತೀನಿ ಅಂದವರೆ ಮಾದೇವ
ನೋಡಿ ನಮ್ಮ ಶಿವನಾ
ಆ ಮಾತ್ಗೆ ಬಸವಣ್ಣೋರು ನೀಲಮ್ಮಯ್ಯ ಒಪ್ಕೆ ಕೊಟ್ರಂತೆ
ಕಲ್ಯಾಣ ಪಟ್ಣಕ್ಕೆಲ್ಲ ಸಾರ್ಕೆ ಸಾರ್ಸವುರೆ
ಲಕ್ಕು ಸದ್ಮೇಲೆ ತೊಂಬತ್ತೇಳು ಕೋಟಿಗಣಂಗಳೆಲ್ಲ ಬಂದು ಸೇರಿದ್ದಾರೆ
ಸ್ವಾಮಿ ಎಲ್ಲಾ ಬಂದಿದ್ದೀವಲ್ಲ ಗುರುವೆ
ಅಪ್ಪಾ ಗಣಂಗಳೆ ಈವತ್ತುನ ಜಿವ್ಸ
ನಿಮುಗಳ್ಗೆಲ್ಲ ಆ ಜಂಗುಮ್ರು ಎಡೆ ಪಡುಸ್ತರಂತೆ
ನೀವೆಲ್ರು ಅಲ್ಲೆ ಊಟಕ್ಕೆ ದಯಮಾಡಿ
ಈವತ್ತುನ ಜಿವ್ಸ ನಮ್ಮದಿಲ್ಲ ಆರಜ್ಜಣಿ ಅಂದರಂತ ಬಸವಣ್ಣ ಮಕ್ಕ

ಮರೀನೆಲ್ಲ ಕಟ್ಕೊಂಡು ಎಲ್ಲಾ ಗಣಗಳೂ
ಕಲ್ಯಾಣದ ತೋಪ್ಗೆ ಬಂದಿಳುದ್ರಂತೆ
ಎಲ್ಲಾರ್ರೂ ಪಂತಿ ಕುಣುಸ್ಬುಟ್ಟು
ಏನ್ರಪ್ಪ ಎಲ್ಲ ಕುಂತಿದ್ದೀರಪ್ಪ ಸಭೆ
ಸ್ವಾಮಿ ಕುಂತಿದ್ದೀವಿ
ನಮ್ಮಪ್ಪಾಜಿ ಏಳ್ಮಲೆಕರ್ತು, ಏಕಾಂಗಿ ವಸ್ತು ಮಾಯ್ಕಾರ
ಮಾದೇವತಾಯಿ ಉತ್ರಾಜಮ್ಮಯ್ಯ ಕಟ್ಟಿಕೊಟ್ಟಿದ್ದಂತ ಬುತ್ತಿಯನ್ನು
ಈಗ ಬಿಜ್ಜಿ ಹಿಡ್ಕೊಂತರಲ್ಲಪ್ಪ ಮಾದೇವ
ನೋಡಿ ನಮ್ಮ ಶಿವನಾ!"[೮]

ಮಾದೇಶ್ವರ ಕಲ್ಯಾಣಕ್ಕೆ ಬಂದಂತ ಸಂದರ್ಭದಲ್ಲಿ ಕಲ್ಯಾಣದಲ್ಲಿ ಬಸವಣ್ಣ ನೀಲಮ್ಮನವರು ನಿತ್ಯ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ. ಲಕ್ಷಾಂತರ ಜನರಿಗೆ ಊಟದ ವ್ಯವಸ್ಥೆ. ಇದು ಪ್ರಭುತ್ವಕ್ಕೆ ವಿರುದ್ಧವಾದ ಜನಪರವಾದ ಕೆಲಸ. ಬರಗಾಲ, ಕ್ಷಾಮಗಳು ದೇಶವನ್ನು ಸಾಕಷ್ಟು ಕುಗ್ಗಿಸುವ ಸಂದರ್ಭಗಳಾಗಿದ್ದವು. ಇಂತಹ ಸಂದರ್ಭದಲ್ಲಿ ಬಸವಣ್ಣ ಪ್ರಭುತ್ವಶಾಹಿಯ ಒಳಗಿದ್ದು ಜನಪರವಾದ ಕೆಲಸಕ್ಕೆ ತೊಡಗಿದ್ದು ಚಾರೀತ್ರಿಕವಾಗಿ ಮಹತ್ವಪೂರ್ಣವಾದುದು. ಅದರರ್ಥಳು ಬಸವಣ್ಣ ಮೊದಲು ಜನಸಾಮಾನ್ಯರ ಹಸಿವನ್ನು ನೀಗಿಸುವ ಪ್ರಯತ್ನ ಮಾಡುತ್ತಾನೆ. ಯಾಕೆಂದರೆ ವಚನಕಾರರು ಬಹುತೇಕ ಹಸಿವು, ಬಡತನಗಳ ನಡುವೆ ಬದುಕಿದವರು. ಹಾಗಾಗಿ ಶಿವಶರಣರಿಗೆಲ್ಲ ಜನಸಾಮಾನ್ಯರ ಹಸಿವು ಒಂದು ಶಾಪವಾಗಿ ಕಾಡುತ್ತಿತ್ತೇನೊ. ಇದನ್ನು ಸಮಾಜದಿಂದ ದೂರಮಾಡಬೇಕೆಂದು ಪ್ರಯತ್ನಿಸಿದವರು. ಹಾಗೆಯೇ, ಮಾದೇಶ್ವರ ಗ್ರಾಮ ಭಾರತದ ಅಲೆಮಾರಿ ಜೀವನದಲ್ಲಿ ಜನರ ಬಡತನ, ಹಸಿವು, ಅವಮಾನಗಳನ್ನು ಕಣ್ಣಾರೆ ಕಾಣುತ್ತಾನೆ. ಎಲ್ಲಕ್ಕಿಂತ ಮುಖ್ಯವಾಗಿ ಹಸಿವು ಎಲ್ಲರನ್ನು ಕಂಗೆಡಿಸಿದ ಸಮಸ್ಯೆ. ಇವತ್ತಿನ ಗಂಜಿ ಕೇಂದ್ರಗಳು, ಅಂದೇ ರೂಪುಗೊಂಡಿದ್ದವು. ಇಲ್ಲಿ ನಡೆಯುವ ಪವಾಡ ಪರೀಕ್ಷೆಗಳು ಜನರಿಗಾಗಿಯೇ ಹೊರತು ವೈಯಕ್ತಿಕ ಲಾಭವೇನಿಲ್ಲ.

ಕೊನೆಗೆ ಮಾದಪ್ಪ ಉತ್ರಾಜಮ್ಮ ಕಟ್ಟಿಕೊಟ್ಟ ಬುತ್ತಿಯ ಅನ್ನದ ಅಗುಳು ಪ್ರಸಾದ ಎಂಬಂತೆ ಎಲ್ಲರಿಗೂ ಹಂಚುತ್ತಾನೆ. ಇದು ಜಂಗಮರಿಗೆಲ್ಲ ಹಾಸ್ಯವನ್ನುಂಟು ಮಾಡುತ್ತದೆ. ಆಗ ಕುಳಿತವರೆಲ್ಲ " ಏನಯ್ಯ ಆ ಬುತ್ತಿ ನೋಡುದ್ರೆ ಒಬ್ಬುಂಗೂ ಸಾಲಕ್ಕಿಲ್ಲ, ಊಟಕ್ಕಿಕ್ತೀನಿ ಅಂತ ಕರಕ್ಕೊಂಡ್ಬಂದು. ಬರೀ ಮಾಳದಲ್ಲಿ ಕುಂಡ್ರಿಸಿ. ಮಕ್ಕಳ ಬಾಯ್ಗೂ ಸಾಲದ ಪ್ರಸಾದವನ್ನು ಹಾಕ್ತಾ ಇದ್ದಾನಲ್ಲ ಎಂತೇವನಿರಬಹುದು ಇವನು ? ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಾರೆ. ಕೊನೆಗೆ ಒಂದೊಂದು ಅನ್ನದ ಅಗಳು ಉಕ್ಕುತ್ತಾ ಬೆಟ್ಟದ ಹಾಗೆ ಬೆಳೆಯತೊಡಗುತ್ತದೆ. ತನ್ನ ಪವಾಡದಿಂದಲೇ ಮಾದಪ್ಪ ಜನಗಳಿಗೆ ಅನ್ನ ಕೊಟ್ಟು, ಜನಪ್ರತಿನಿಧಿಯಾಗುತ್ತಾನೆ.

"ಅಮ್ಮಾ ತಾಯಿ ನೀನು ಪತಿ ರೊತಾಸಿರೋಮಣಿಯಾಗಿದ್ರೆ ನೀನು ಕಟ್ಟಿರುವಂತ ಬುತ್ತಿ
ಲಕ್ಕಸದ್ಮೇಲೆ ತೊಂಬತ್ತೇಳು ಕೋಟಿ ಗಣಂಗಳಿಗೆಲ್ಲ ಎಡೆಯಾಗ್ಬೇಕು ಅಂತ್ಹೇಳಿ
ತಮ್ಮ ಜರಜಡೆಯೊಳಗಿದ್ದಂತ ಬುತ್ತಿಯನ್ನು ತಗ್ದು ಸೀಗೆ
ಎಲೆಯನ್ನು ಸಿಗ್ದು ಎಲ್ಲಾರ್ಗೂ ಕೊಟ್ಕೊಂಡ್ಬಂದ್ರು
ಸೀಗೆಯೆಲೆಯನ್ನು ಒಚ್ಚೋರಿಯಿಂದ ಕೊಡ್ತ ಬಂದ್ರೆ
ಎಲ್ಲಾ ಇಸ್ತ್ರಿ ಎಲೆ ಆಯ್ತು ಇದ್ದವಂತೆ
ಬುತ್ತಿಯನ್ನು ಕೆಳಗಡೆ ಮಡುಗ್ಬುಟ್ಟು
ಬುತ್ತಿಗೆ ಮಂಗಳಾರ್ತಿ ಯನ್ನು ಮಾಡಿದ್ದಾರೆ.
ಬಸವಣ್ಣ ಬುತ್ತಿಯನ್ನು ಹಿಡ್ಕೊಳಪ್ಪ ಅಂದ್ರು
ಬಸವಣ್ಣ ಬುತ್ತಿಯನ್ನು ಹೊಡ್ಕೊಂಡಿದ್ರೆ
ಬುತ್ತಿಯನ್ನು ಮಾದಪ್ಪ ಇಕ್ಕೊಂಡೋಯ್ತಿದ್ದಾರೆ.
ನಮ್ಮಪ್ಪಾಜಿ ಮಾಯೇಶ್ವರ
ಒನೊಂದು ಅಗುಳು ಪ್ರಸಾದವನ್ನು ಮಡೀಕೊಂಡು ಬಂದ್ರಂತೆ
ಒನೊಂದು ಅಗುಳು ಅನ್ನವನ್ನು ನೋಡಿ
ಊಟಕ್ಕೆ ಕುಂತಿರುವಂತ ಭಕ್ತರು
ಅಸ್ಯವನ್ನು ಮಾಡುದ್ರು ಆಸ್ಯವ!
ಏನಯ್ಯ ಆ ಬುತ್ತಿ ನೋಡುದ್ರೆ ಒಬ್ಬುಂಗೂ ಸಾಲಕಿಲ್ಲ
ಊಟಕ್ಕಿಕ್ತೀನಿ ಅಂತ ಕರಕೊಂಡ್ಬಂದು
ಬರೀ ಮಾಳದಲ್ಲಿ ಕುಂಡ್ರಿಸಿ
ಮಕ್ಕಳ ಬಾಯ್ಗೂ ಸಾಲದ ಪ್ರಸಾದವನ್ನು ಹಾಕ್ತಾ ಇದ್ದಾನಲ್ಲ
ಎಂತೇವನಿರಬಹುದು ಇವುನು?
ಅಂತ್ಹೇಳಿ ಎಲ್ಲಾ ಲಿಂಗಾ ಜಂಗುಮ್ರು ಮಾತಾಡ್ಕೋತಾ ಇದ್ರೆ
ಪಂತಿ ಕೂಡ್ತಾ ಬಂತಂತೆ
ನಮ್ಮ ಸ್ವಾಮೀಜಿಯವರು ಬೆಳ್ಳಿ ಬೆತ್ತವನ್ನು ಕೈಲಿಡ್ಕೊಂಡು
ಡಮರು ತ್ರಿಸೂಲವನ್ನು ಕೈಲಿಡ್ಕೊಂಡು
ಹುಟ್ಟರೆ ಕಲ್ಗೆ ತ್ರಿಸೂಲವನ್ನು ನೆಟ್ಬುಟ್ರು
ಆಗ ಗಂಗಾ ಭವಾನಿ ಉದ್ಬವುಸ್ಬುಟ್ಟು
ಆ ಗಂಗಮ್ಮ ಯಾವ ಪ್ರಕಾರ ಉದ್ಬವುಸ್ತಾ ಅಮಳೋ

ಅದೇ ಪ್ರಕಾರ್ದಲ್ಲಿ ಲಿಂಗಾ ಜಂಗಮರೆಲೆ ಒಳಗೆ ಅನ್ನ ಉಕ್ತ ಇತ್ತಂತೆ
ಒನ್ನೊನ್ದು ಅಗಳಾಗಿರುತಕ್ಕಾಂತಾದ್ದು
ಬಗೆಬಗೆಯಾದ ಅಡ್ಗೆಯಾಗಿ
ಬೆಟ್ಟ ಬೆಳಿಯೋ ಹಂಗೆ ಬೆಳೀತಾ ಇತ್ತಂತೆ
ಅಪ್ಪಾ ಲಿಂಗಾ ಜಂಗುಮುರೆ
ಒಂದಗುಳ್ನೂವೆ ಬುಡದ ರೀತೀಲಿ
ಅಚ್ಚುಕಟ್ಟಾಗಿ ಊಟ ಮಾಡ್ಬೇಕ್ರಪ್ಪ
ಒಂದಗುಳ್ನೂವೆ ಎರೀನ ಬಾಯ್ಗೆ ಕೊಡಬಾರುದ್ರಪ್ಪ
ಮನಸಾರ ನಿರೊಮ್ಮಳದಿಂದ ಊಟ ಮಾಡ್ರಪ್ಪ
ಎಲೇಲಿ ಮಾತ್ರ ಬುಡ್ಬೇಡಿ ಅಂತ ಹೇಳ್ತಿದ್ರೆ
ಹೆದುರೋದ್ರಲ್ಲಪ್ಪ ಗಣಗೋಳು
ನೋಡಿ ನಮ್ಮ ಶಿವನಾ!"[೧೩]

ಹಸಿವು, ಬಡತನ, ಅವಮಾನಗಳ ಬಗ್ಗೆ ಮಾತನಾಡುವ ನಮ್ಮ ಜನಪದ ಮಹಾಕಾವ್ಯಗಳು, ಅವು ನಿಜವಾಗಿಯೂ ಜನಪರವಾದ ಕಾವ್ಯಗಳು ಎಂಬುದರಲ್ಲಿ ಅತಿಶಯವೇನು ಇಲ್ಲ. ಈ ಕಾವ್ಯಗಳು ಹಿಂಸೆಯ ಗಡಿಯಾಚೆ ನಿಂತು, ಜನಜೀವನದ ದರ್ಶವನ್ನು ವೈಭವೀಕರಿಸದೆ ವಾಸ್ತವಿಕ ನೆಲೆಯಲ್ಲಿ ಚಿತ್ರಿಸುತ್ತವೆ. ರಾಮಾಯಣ, ಮಹಾಭಾರತ ಪ್ರಭುತ್ವಶಾಹಿ ನೆಲೆಯಲ್ಲಿ ಮಾತನಾಡುತ್ತವೆ. ಹಿಂಸೆ, ಅಧಿಕಾರದ ಸುತ್ತಾ ಹೆಣೆಯಲ್ಲಪಟ್ಟ ಕಾವ್ಯಗಳು ಇಲ್ಲಿ ಅಧಿಕಾರ ಎಂಬುದಿಲ್ಲ. ರಾಜ ಸಂಸ್ಕೃತಿಗಿಂತ ಭಿನ್ನವಾದ ಕೃತಿಗಳು ಜನಸಂಸ್ಕೃತಿಯ ನೆಲೆಗೊಂಡಂತವು. ನಮ್ಮ ಜನಪದ ಮಹಾಕಾವ್ಯಗಳು ಮಾಟ. ಮೋಡಿಗಳಿಂದ, ಕೆಟ್ಟದನ್ನು ಮಾಡದೇ, ಅನ್ನದ ಮೋಡಿ ಮಾಡಿದವರು. ಜನಪರವಾದ ಆಲೋಚನೆ ಮಾಡುವ ಈ ಕಾವ್ಯಗಳು ಎಲ್ಲಾ ಕಾಲಕ್ಕೂ ಸರ್ವಶ್ರೇಷ್ಠವಾದಂತವುಗಳು. ಸಾಕು ಸಾಕು ಎನ್ನುವಷ್ಟರಮಟ್ಟಿಗೆ ಅನ್ನ ನೀಡುವಂತ ಮನಸ್ಸುಳ್ಳವರು. ಈ ಮೇಲಿನ ಸಾಲುಗಳ ಅರ್ಥವಾಗಿದ್ದು, ಬೇಂದ್ರೆಯವರ 'ಅನ್ನಯಜ್ಞ' ಕವಿತೆಯ ಸಾಲುಗಳ ನೆನಪು ತರಿಸುತ್ತವೆ.

"ನಮ್ಮಪ್ಪಾಜಿ ಏನ್ ಹೇಳ್ತಾ ಅವ್ರೆ.
ಹೋಗಿ ನಿಮ್ಮ ಬಸ್ವಣ್ಣನ ಕರ್ಕೊಂಡ್ಬನ್ನಿ ಅಂತ್ಹೇಳಿ
ಕರಿಯಕೆ ಕಳುಸವ್ರೆ ಮುದ್ದು ಮಾದೇವ
ನೋಡಿ ನಮ್ಮ ಶಿವನಾ!
ಒಬ್ಬ ಬಂದ ಬಸವಣ್ಣೋರ ತಾವ್ಕೆ
ಬಸವಣ್ಣೋರೆ ಮಾತ್ಮುರು ಕರ್ಕೊಂಡ್ಬರಕೇಳವೆ

ನಮ್ಮ ಗಲ್ಲಿಕ್ಕಿರೊ ಅನ್ನ ಎಷ್ಟುಂಡ್ರೂ ಮುಗಿಲ್ಲ ಸ್ವಾಮಿ
ವ ಉಣ್ಣಿ ಉಣ್ಣಿ ಅಂತ ಹಿವ್ಸ ಕೊಡ್ತಾ ಅವ್ನೆ
ನಮ್ಮಕೈಲಿ ಆಯ್ತಾ ಇಲ್ಲ ಸ್ವಾಮಿ
ಈ ಸೆರೆಯನ್ನು ತಪ್ಸಿ ಬನ್ನಿ ಸ್ವಾಮಿ ಅಂದನಂತೆ
ಈ ಮಾತು ಕೇಳಿ ಬಸ್ವಣ್ಣೋರ್ಗೆ ನಡುಗುಲು ಬಂತು
ಆ ಉರೀ ಗದ್ಗೆ ಬುಟ್ಟ ಕೈಕಟ್ಕಂಡು
ಆಸ್ತಾನುಕ್ಕೆ ಬಂದ್ರಂತೆ ಬಸವಣ್ಣೋರು
ಬಸವಣ್ಣೋರೆ ನಮುಸ್ಕಾರ
ಮಾತ್ಮರೆ ನಿಮುಗೆ ನಮಸ್ಕರ ಗುರುವೆ
ನಿಮ್ಮ ಮೈಮೆ ನಿಮ್ಮ ಸಾಸ ನಮಗರುವಾಗದೆ ಸ್ವಾಮಿ
ನಾವಂದುದ್ದು ಸರ್ವೆಂಟು ತಪ್ಪಾಯ್ತು.
ನೀವು ಇಂತೆ ಮತ್ಮರು ಅಂತ ಕಾಣ್ಣಿಲ್ಲ
ಸವುರ್ಸಿ ಗಣಂಗಳ ಕಾಪಾಡ್ಬೇಕು
ಅಂತ್ಹೇಳಿ ಬಸವಣ್ಣ ನಮುಸ್ಕಾರ ಮಾಡುದ್ರಂತೆ
ಅಯ್ಯಾ ಬಸ್ವಣ್ಣ ನನಗ್ಯಾಕೆ ನಮುಸ್ಕರ ಮಾಡ್ತಿಯಪ್ಪ
ನಿನಗೆ ಮತ್ತೊಂದು ನಮಸ್ಕಾರ.
ಲಕ್ಕುಸದ್ಮೇಲೆ ತೊಂಬತ್ತೇಳು ಕೋಟಿ ಗಣಂಗಳಿಗೆ
ನಿಮ್ಮ ಪಟ್ಟದಲ್ಲಿ ನಿಚ್ಚು ಭೋಜ್ನ ಕೊಡ್ತಿದ್ದೀರಿ
ನಾನು ಭಿಕ್ಷುಕ ನಾನೆಲ್ಲಿ ತರ್ಲಪ್ಪ
ಸ್ವಾಮಿ ನಾವಂದುದು ಸರ್ವೆಂಟು ತಪ್ಪು
ಮಾಪ್ ಮಾಡ್ಕೋ ಬೇಕು ಗುರುವೆ
ಅಯ್ಯಾ ಬಸವಣ್ಣ
ಕಲ್ಯಾಣದಲ್ಲಿ ಕಂದುಕದ ಬಾವಿ ತೋಡ್ಸಿ
ಹನ್ನೆರಡಾಳುದ್ದ ಬಾವಿಗೆ ಇವುರುಂಡಿರೋ ಪ್ರಸಾದವನೆಲ್ಲ
ಕಲ್ಲು ಬಂಡಿಗೆ ತುಂಬಿ
ಎರೀನ ಬಾಯ್ಗೆ ಕೊಡುದ ರೀತೀಲಿ
ಎಲ್ಲಾನು ಕಂದುಕದ ಬಾವಿಗೆ ಸುರಸಪ್ಪ
ಬಸವಣ್ಣೋರು ಹಂಗೆ ಮಾಡುದ್ರಂತೆ
ಬಾವಿ ತುಂಬಿ ಬರ್ತಿ ಆಗ್ಬುಡ್ತು

ಮ್ಯಾತಿಗಾರೆ ಕಚ್ಚಣೆ ಹಾಕಿ ಮುಚ್ಚುಡ್ರಪ್ಪ
ಈಗಲಾದ್ರೂ ಬಸವಣ್ಣ
ನಮ್ಮ ಸಾಸವ ನೋಡುದ್ರ್ಯ ಅಂದವ್ರೆ ಮಾದೇವ.
ನೋಡಿ ನಮ್ಮ ಶಿವನಾ!"[೧೪]

ಬುದ್ಧನ ಹಾದಿಯಲ್ಲೇ ಹೆಜ್ಜೆ ಹಾಕಿದ ಮಂಟೇಸ್ವಾಮಿ, ಮಾದಪ್ಪ, ಜುಂಜಪ್ಪ, ಮೈಲಾರಲಿಂಗ ಇವರುಗಳ ಆಲೋಚನೆ, ಆದರ್ಶ ತತ್ವಗಳು ಒಂದೇ ಆಗಿದ್ದವು. ಸರ್ವ ಧರ್ಮ ಸಮಾನತೆ, ಶ್ರಮ ಸಂಸ್ಕೃತಿ, ಸಮಾನ ತತ್ವಗಳು ಜನರನ್ನು ಒಗ್ಗೂಡಿಸುವ, ಎಲ್ಲಕ್ಕಿಂತ ಮುಖ್ಯವಾಗಿ 'ಮನುಷ್ಯತ್ವ'ದ ಭಾವನೆಗಳನ್ನು ಬಿತ್ತಿದ್ದವರು. ಲೋಕ ಕಲ್ಯಾಣವೇ ಇವರ ಅಂತಿಮ ದರ್ಶನವಾಗಿತ್ತು. ಈ ನೆಲೆಯಲ್ಲಿ ಬಸವಣ್ಣ ಮತ್ತು ನೀಲಮ್ಮನವರನ್ನು ಪರೀಕ್ಷಿಸುವ ಸಂದರ್ಭಗಳು. ತಾವು ಸೃಷ್ಟಿಸುವ ಪವಾಡಗಳು, ಲೋಕ ಕಲ್ಯಾಣಕ್ಕೆ ಆಗಿತ್ತು. ಮಾದೇಶ್ವರ ಬಸವನಹಳ್ಳಿಯನ್ನು ಬಿಟ್ಟು ಭೀಮನಕೊಲ್ಲಿ ಗ್ರಾಮಕ್ಕೆ ಬರುತ್ತಾರೆ. ಭೀಮನಕೊಲ್ಲಿಯ ಹಲಗೆಗೌಡ, ಮಾದೇವಮ್ಮ ಬಹಳ ಭಕ್ತಿವಂತರಾಗಿರುತ್ತಾರೆ. ಆದರೆ, ಅವರಿಗೆ ತಿನ್ನಲು ಅನ್ನವಿರುವುದಿಲ್ಲ. ಉಡುವುದಕ್ಕೆ ಬಟ್ಟೆ ಇರುವುದಿಲ್ಲ. ತುಂಬ ಬಡತನದ ಬದುಕನ್ನು ಎದುರಿಸುತ್ತಿದ್ದಾರೆ.

"ಗುರುವೆ ಗುರುಪಾದ್ವೆ
ನೋಡುದಂಗಾಯ್ತು ಸ್ವಾಮಿ"
ಅಂತ ಬಸವಣ್ಣೋರು ಹೇಳ್ತಾ ಇರೋಣ
ಮಾಯ್ಕಾರ ಗಂಡ ನಮ್ಮಪ್ಪಾಜಿ ಮಾದೇವ
"ಬಸವಣ್ಣ ನಾನಿನ್ನು ಬರ್ತೀನಪ್ಪ ಅಂದ್ರಂತೆ
ಆಗಲೀಗ ಗುರುವೆ ಗುರುಪಾದ್ವೆ
ಲಿಂಗವಂತ್ರೆಲ್ಲ ಬಂದು ಸರಣು ಮಾಡಿದ್ದಾರೆ
ಆಗಲೀಗ ನಮ್ಮಪ್ಪಾಜಿ ಮಾದೇವ
ಎಲೋ ಜಂಗಮರೇ
ನಾನು ಬಸವಣ್ಣೋರ ಸಾಸ ತಿಳೀಬೇಕೂಂತ ಇಕರರೂಪ್ನಲ್ಲಿ
ಬಂದುದ್ಕೆ
ನೀವೆಲ್ಲ ಅಸಯ್ಯ ಮಾಡ್ಕೊಂಡ್ರಲ್ಲಪ್ಪ
ನೀವು ಇನ್ನೆಂತೆ ಸರಣ್ರಪ್ಪ ? ಹೊರುಡುವರಾಗಿ ಅಂದ್ರಂತೆ
ಅಯ್ಯಾ ಜಂಗುಮರುಗಳೇ ನಿಮಗೆ ಲಿಂಗವನ್ನು ಕೊಡೋದಿಲ್ಲ
ಮಾದೇವನ ಮಾತ್ರ ಹೊರುಡ್ರಪ್ಪ
ಮಾದೇವನ ಮತ ಕೇಳುದುರು ಲಿಂಗವಂತ್ರು

ಎಂತೆ ಜಂಗುಮಯ್ಯ ಬಂದುನ್ರಪ್ಪ
ನಮ್ಮ ನಮ್ಮ ಲಿಂಗವನ್ನು ಕಳೀಸಿ
ಕೊಳುಕ್ಕೆತೂದಿ ಎಸೀರಿ ಅಂದ ಎಸುದೊ
ನಮ್ಮ ಕತ್ತುಗೆ ಮಾತ್ರ ಲಿಂಗ ಇಲ್ವಲ್ಲ ಪ್ಪ
ಏನು ಗತಿ ಮಾಡ್ಬೇಕಂಬುದಾಗಿ
ದಾನ ಮಡಿರೋರು ಧರ್ಮ ಮಾಡಿರೋರು
ಪಾಪ ಅನ್ಯಾಯ ಮಾಡಿರೋರು"[೧೪]

(ಪು.ಸ-೧೪೨, ೧೪೭)

ಅನ್ನದಾನವನ್ನು ಮಾಡು ಅಂದ್ರೆ ಮಣ್ಣುದಾನ ಮಾಡಿರೋರು ಕುಂಟ ಕುರುಡ್ರು ಹೆಡ್ಡ ಹೆಳಮರುಗೆಲ್ಲ ಅನ್ನದಾನ ಮಾಡಿರೋರು ಅಂಬ್ಲಿದಾನ ಮಾಡಿರೋರು ಕಂಬ್ಳಿದಾನ ಮಾಡಿರೋರು ಹೆಣ್ಣು ದಾನ ಮಾಡಿರೋರು ಹೊನ್ನುದಾನ ಮಾಡಿರೋರು ವಸ್ತ್ರ ದಾನ ಮಾಡಿರುವಂತ ಮಾನ್ಯರುಗಳೆಲ್ಲ. ಮಾದೇಶ್ವರ ಬಸವನಹಳ್ಳಿಯನ್ನು ಬಿಟ್ಟು, ಭೀಮನಕೊಲ್ಲಿ ಗ್ರಾಮಕ್ಕೆ ಬರುತ್ತಾರೆ. ಭೀಮನಕೊಲ್ಲಿಯ ಹಲಗೆಗೌಡ, ಮಾದೇವಮ್ಮ ಬಹಳ ಭಕ್ತಿವಂತರಾಗಿರುತ್ತಾರೆ. ಆದರೆ ಅವರಿಗೆ ತಿನ್ನಲು ಅನ್ನವಿರುವುದಿಲ್ಲ. ಉಡುವುದಕ್ಕೆ ಬಟ್ಟೆ ಇರುವುದಿಲ್ಲ. ತುಂಬ ಬಡತನದ ಬದುಕನ್ನು ಎದುರಿಸುತ್ತಿದ್ದಾರೆ.

ಬೀರಂಕೊಲ್ಲಿಗೆ ನಮ್ಮಪ್ಪಾಜಿ ಬಂದ್ರಲ್ಲ
ಬೀರಂಕೊಲ್ಲೀಲಿ ಹಲಗೇಗೌಡ ಮಾದೇವಮ್ಮ ಬಾಳ ಭಕ್ತಿವಂತರು.
ಉಂಡುವರೆ ಅನ್ನವಿಲ್ಲ ಉಡುವುದಕ್ಕೆ ಬಟೆ ಇಲ್ಲ
"ಬಾಳ ವನವಾಸದಲ್ಲಿದ್ದಾರೆ ಆ ಮನೆಗೆ
ದ್ರಿಷ್ಠಿ ಮಡಗವುರಲ್ಲೋ ಮುದ್ದು ಮಾದೇವ
ನೋಡಿ ನಮ್ಮ ಶಿವುನಾ
ಇವುರ್ನ ಒಕ್ಕಲು ಪಡ್ಕೊಂಡು ಮುಂದಕ್ಕೆ ಹೋಗ್ಬೇಕು
ಇವುರ ಬಡಸ್ತಾನ ಬಯಲು ಮಾಡ್ಬೇಕು
ಇವುರ್ಗೆ ಸಿರಿಸಂಪತ್ತನ್ನು ಕೊಡಬೇಕು ಅಂದ್ಬುಟ್ಟು
ಆ ಮನೆಗೆ ದ್ರಿಷ್ಟಿ ಮಡುಗವುರೆ ಮುದ್ದು ಮಾದೇವ
ನೋಡಿ ನಮ್ಮ ಶಿವುನಾ !
ಗಂಡ ಹಲಗೇಗೌಡ ಏರ್ಕಟ್ಕೊಂಡು ಹೊಲುಕ್ಕೆ ಹೊಂಟೋದ
ಹೆಂಡ್ತಿ ಮಾದೇವಮ್ಮ ಅಡ್ಗೆ ಮಾಡ್ಕೊಂಡು
ಗಂಡುಂಗೆ ಊಟ ತತ್ತಳಲ್ಲಪ್ಪ ಮಾದೇವಮ್ಮ

ನೋಡಿ ನಮ್ಮ ಶಿವುನಾ !
ಮಾದೇವಮ್ಮ ಊಟ ತಕ್ಕಂಬಂದು ಹೊಲುದಲ್ಲಿ ಮಡುಗ್ದ
ನಮ್ಮ ಸ್ವಾಮಿಯವರು
ಮುಪ್ಪಿನ ಕಾಲದ ಮುದುಕಯ್ಯನಾಗಿ
ಅವುರ ಹಿಟ್ಟಿನ ಕುಕ್ಕೆ ದಂಡೇಲೋಗಿ
ಅಲ್ಲೆ ಕೂತನವರಲ್ಲಪ್ಪ ಮಾದೇವ
ನೋಡಿ ನಮ್ಮ ಶಿವುನಾ !
ಅಷ್ಟೊತ್ಗೆ ಗಂಡ ಹಲಗೇಗೌಡ ಏರ್ ನಿಲ್ಲುಸ್ಬುಟ್ಟು
ಅಲ್ಲಿಗೆ ಬಂದು ಕೂತ್ಕೊಂಡ
ನಮ್ಮ ಸ್ವಾಮಿಯವರು ಬಂದು ಕುತ್ಕೊಂಡ್ರು
ತಂದಿರೋದು ಒಂದು ಮುದ್ದೆ ಹಿಟ್ಟು
ಈ ಒಂದು ಮುದ್ದೆ ಹಿಟ್ಟು ಏಡು ಬಾಗ ಮಾಡಿ ಇಕ್ಬೇಕು
ಅವುರು ಏನು ತಿಳಿಕೊಂಡ್ರೂ ಸರಿಯೆ ಅಂತ್ಹೇಳಿ
ಮಾದೇವಮ್ಮ ಊಟಕ್ಕೆ ಬಡುಸ್ಬುಟ್ಟು
ಈ ಸಲ ಊಟ ಮಾಡಿ ಅಂತಳಲ್ಲೊ ಮಾದೇವಮ್ಮ
ನೋಡಿ ನಮ್ಮ ಶಿವುನಾ!
ಮಾದೇವಮ್ಮುಂಗೆ ಇನ್ನು ಊಟ್ಟಿ ಇಲ್ಲ
ಊಟ ಮಾಡ್ಬುಟ್ಟು ಹಲಗೇಗೌಡ ಎದ್ದೋಗಿ ಏರ್ ಹಿಡ್ಕೊಂಡ
ನಮ್ಮ ಸ್ವಾಮಿ ಮ್ಯಾಲುಕ್ಕೇಳ್ನಿಲ್ಲ
ಅಮ್ಮ ಹಸುದು ಬಂದಿವ್ನಿ ನನಕಂದ
ನನಗೆ ಇನ್ನೊಂದ್ಸಲ್ಪ ತಂದು ನೀಡವ್ವ
ನೋಡಿ ನಮ್ಮ ಶಿವುನಾ!"[೧೫]

ಮಾದೇಶ್ವರ ಭೀಮನಕೊಲ್ಲಿ ಗ್ರಾಮಕ್ಕೆ ಬರುತ್ತಾರೆ. ಭೀಮನಕೊಲ್ಲಿಯ ಹಲಗೆಗೌಡ, ಮಾದೇವಮ್ಮ ಬಹಳ ಭಕ್ತಿವಂತರಾಗಿರುತ್ತಾರೆ. ಆದರೆ ಅವರಿಗೆ ತಿನ್ನಲು ಅನ್ನವಿರುವುದಿಲ್ಲ, ಉಡುವುದಕ್ಕೆ ಬಟ್ಟೆ ಇರುವುದಿಲ್ಲ. ತುಂಬ ಕಷ್ಟದಲ್ಲಿ ಇದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಗ್ರಾಮಕ್ಕೆ ಬಂದಂತ ಮಾದೇಶ್ವರನ ಕಣ್ಣು ಆ ಕುಟುಂಬದ ಮೇಲೆ ಮೂಡುತ್ತದೆ. ಆಗ ಮಾದೇಶ್ವರು ತಾನು ಇವರನ್ನು ಒಕ್ಕಲು ಪಡೆದುಕೊಂಡು ಮುಂದಕ್ಕೆ ಹೋಗಬೇಕು. ಇವರ ಕಷ್ಟಗಳಿಗೆ ಸಹಕಾರಿಯಾಗಬೇಕು ಎಂದು ಯೋಚಿಸುತ್ತಾರೆ. ಹಲಗೇಗೌಡ ಹೊಲಕ್ಕೆ ನೇಗಿಲು ತೆಗೆದುಕೊಂಡು ಹೋಗುತ್ತಾನೆ. ಇತ್ತ ಮಾದೇವಮ್ಮ ಅಡಿಗೆ ಮಾಡಿಕೊಂಡು ಗಂಡನಿಗೆ

ಊಟ ತೆಗೆದುಕೊಂಡು ಹೊಲಕ್ಕೆ ಬರುತ್ತಾಳೆ. ಹಿಟ್ಟಿನ ಬುಟ್ಟಿಯನ್ನು ಬಂಡೆಯ ಮೇಲೆ ಇಟ್ಟು ಹೊಲಕ್ಕೆ ಬರುತ್ತಾಳೆ. ಇದೇ ಸಮಯದಲ್ಲಿ ಮಾದೇಶ್ವರ ಮುಪ್ಪಿನ ಮುದುಕನಾಗಿ ಹಿಟ್ಟಿನ ಬುಟ್ಟಿಯ ಹತ್ತಿರ ಬಂದು ಕುಳಿತ್ತಿರುತ್ತಾನೆ. ಅಷ್ಟರಲ್ಲಿ ಹಲಗೆಗೌಡ ನೇಗಿಲನ್ನು ನಿಲ್ಲಿಸಿ ಬಂದು ಊಟಕ್ಕೆ ಕುಳಿತ. ತಂದಿರೋದು ಒಂದು ಮುದ್ದೆ ಹಿಟ್ಟು. ಅದರಲ್ಲಿ ಎರಡು ಭಾಗ ಮಾಡಿ ಒಂದು ಭಾಗ ಗಂಡನಿಗೆ, ಇನ್ನೊಂದು ಭಾಗ ಮಾದೇಶ್ವರನಿಗೆ ಹಿಡುತ್ತಾಳೆ. ಹಲಗೆಗೌಡ ತಿಂದು ನೇಗಿಲ ಕಡೆಗೆ ಹೊರಟ. ಮುದುಕನ ವೇಷದಲ್ಲಿದ್ದ ಮಾದೇಶ್ವರ ಮೇಲೇಳದೇ "ಅಮ್ಮ ಹಸುದು ಬಂದಿವ್ನಿ ನನಕಂದ ನನಗೆ ಇನ್ನೊಂದ್ಸಲ್ಪ ತಂದು ನೀಡವ್ವ ನೋಡಿ ನಮ್ಮ ಶಿವನಾ" ಎಂದು ಹೇಳುತ್ತಾನೆ. ಮಾಸಾರಣೆ ಮಾದೇವಮ್ಮ ಅದೇ ಅನ್ಲೂ ಇಲ್ಲ. ಇಲ್ಲ ಅನ್ಲೂ ಇಲ್ಲ. ತಂದಿದ್ದು ಒಂದೇ ಮುದ್ದೆ ಹಿಟ್ಟಲ್ಲ. ನಾಚ್ಕೆ ಆಗ್ಬುಟ್ಟು ನಿಂತವ್ಳೆ ಮಾದೇವಮ್ಮ ನೋಡಿ ನಮ್ಮ ಶಿವನಾ !

"ಮಾಸಾರಣೆ ಮಾದೇವಮ್ಮ ಅದೆ ಅನ್ಲೂ ಇಲ್ಲ ಇಲ್ಲಾ ಅನ್ಲೂ ಇಲ್ಲ
ತಂದಿದ್ದು ಒಂದೇ ಮುದ್ದೆ ಹಿಟ್ಟಲ್ಲ
ನಾಚ್ಕೆ ಆಗ್ಬುಟ್ಟು ನಿಂತವ್ಳೆ ಮಾದೇವಮ್ಮ
ನೋಡಿ ನಮ್ಮ ಶಿವುನಾ !
ನಾ ಎಷ್ಟೊತ್ತು ಕುಂತ್ಕೊಳ್ಳಂವ್ ನನಕಂದ
ಹೊಟ್ಟೆ ಬಾಳ ಹಸೀತೈತೆ ಕಂದಮ್ಮ
ಊಟ ಮಾಡುದ್ರೆ ಹೊಟ್ಟಂಬ ಊಟ ಮಾಡ್ಬೇಕು
ಕಂಡೋರ ಮಕ್ಳ ಹೊಡುದ್ರೂ ಕೈತುಂಬ ಹೋಡೀಬೇಕು
ಆ ಕುಕ್ಕೆಗೆ ಕೈಹಾಕಿ ನೋಡು ನನಕಂದ
ಅನ್ನುವಂತ ಗ್ಯಾನ ಕೊಟ್ಬುಟ್ರು
ಕೈ ಹಾಕೋದ್ರಲ್ಲಿ ಇನ್ನೂ ಒಂದು ಮುದ್ದ ಹಿಟ್ಟು ಪ್ರತೇಕ್ಷಾಗಿತ್ತು
ಆ ಹಿಟ್ಟು ತಕ್ಕಂಬಂದು ಆ ಮುದ್ದೆನೂವೆ ಬಡುಸ್ಬುಟ್ಟು ಮಾದೇವಮ್ಮ
"ತಂದಿರೋದು ನೋಡುದ್ರೆ ಒಂದ್ಮುದ್ದೆ ಹಿಟ್ಟು
ಇಲ್ಲಿ ಎರಡ್ಮುದ್ದೆ ಆಗ್ಬುಟ್ವಲ್ಲ ಭಗವಂತ
ಯಾರ ಮಾಯ್ಯೋ ಕಾಣೆ ಇಲ್ಲ ಸಾಕ್ಷಾದು ಭಗವಂತನೋ ಕಾಣೆ
ಇಲ್ಲ ನಮ್ಮಪ್ಪನ ಮನೇದೇವ್ರೋ ಕಾಣೆ
ನನಗೊಂದು ಗೊತ್ತಿಲ್ಲ ಅಂತಳಲ್ಲೋ ಮಾದೇವಮ್ಮ
ನೋಡಿ ನಮ್ಮ ಶಿವುನಾ!"೧೬

ಮಾದಪ್ಪನ ಮಾತಿಗೆ ಮಾದೇವಮ್ಮ ಏನನ್ನು ಪ್ರತಿಕ್ರಿಯೆ ನೀಡದೆ ಸುಮ್ಮನೆ ನಿಲ್ಲುತ್ತಾಳೆ. ಯಾಕೆಂದರೆ, ತಂದದ್ದು ಒಂದು ಮುದ್ದೆ ಮಾತ್ರ. ತುಂಬ ನಾಚಿಕೆ ಆಗಿಬಿಡುತ್ತೆ. ಅದನ್ನು ಕಂಡು ಮುದುಕನ ವೇಶದಲ್ಲಿದ್ದ ಮಾದೇಶ್ವರ ನಾ ಎಷ್ಟೊತ್ತು ಕುಂತ್ಕೊಳ್ಳಂವ್ ನನಕಂದ, ಹೊಟ್ಟೆ ಬಾಳ ಹಸೀತ್ತೈತೆ ಕಂದಮ್ಮ, ಊಟ ಮಾಡುದ್ರೆ ಹೊಟ್ಟುಂಬ ಊಟ ಮಾಡ್ಬೇಕು ಎಂದು ಹೇಳುತ್ತಾರೆ. ಅಂದರೆ ಇಲ್ಲಿ ಮಾದೇಶ್ವರ ನಿಜವಾದ ಗ್ರಾಮಭಾರತದ ಹಸಿವಿನ ಚಿತ್ರಣವನ್ನು ನೀಡುತ್ತಾರೆ. ಅನಂತರ ಮಾದೇವಮ್ಮನಿಗೆ ಕುಕ್ಕೆಯೊಳಗೆ ಕೈಹಾಕಲು ಹೇಳುತ್ತಾರೆ. ಆಗ ಮಾದೇವಮ್ಮ ಕುಕ್ಕೆಯೊಳಗೆ ಕೈಹಾಕಿದಾಕ್ಷಣ ಮುದ್ದೆ ಪ್ರತ್ಯಕ್ಷವಾಗುತ್ತದೆ. ಆ ಮುದ್ದೆಯನ್ನು ತಂದು ಮಾದೇಶ್ವರನಿಗೆ ಬಡಸುತ್ತಾಳೆ. ಆದರೆ ಇನ್ನೊಂದು ಮುದ್ದೆ ಎಲ್ಲಿಂದ ಬಂತು ಎಂಬ ಯೋಚನೆ ಬರುತ್ತದೆ. ಕೊನೆಗೆ ತನ್ನ ಮನೆ ದೇವರು ಕೃಪೆ ಎಂದು ಭಾವಿಸಿಕೊಂಡಳು.

"ಊಟ ಮಾಡಿ ಹಸ್ತ ತೊಳುದ್ಬುಟ್ಟು ನಮ್ಮ ಸ್ವಾಮಿ
ಮ್ಯಾಕೆ ಎದ್ದು ಬತ್ತವ್ರಲ್ಲ ಮುದ್ದು ಮಾದೇವ
ನೋಡಿ ನಮ್ಮ ಶಿವುನಾ !
ಹಲಗೇಗೌಡನ ಹೊಲ ಬುಟ್ಟು
ಮುಂದುಲೋಣಿಗೆ ಬಂದ್ಬುಟ್ರು ಪರಮಾತ್ಮ ಮಾದೇವಮ್ಮ ಹಿಟ್ಟುನ ಕುಕ್ಕೆ ಹೊತ್ಕೊಂಡು
ಅವ ಬಂದ ದಾರೀಲಿ ಬಂದ
ಮಾದೇವಮ್ಮ ಕಂಡ್ಕೋತಳೆ ಅಂತ್ಹೇಳಿ
ಮರೆಯಾಗಿ ಕುಂತ್ಕೊಂಡ್ರು ಪರಮಾತ್ಮ
ಅವಳು ಮನೆಗೆ ಬತ್ತಳಲ್ಲೋ ಮಾದೇವಮ್ಮ
ನೋಡಿ ನಮ್ಮ ಶಿವುನಾ!
ಮನೆಗೆ ಬಂದು ಹಿಟ್ಟುನ ಕುಕ್ಕೆಯ ಮಡುಗ್ಬುಟ್ಟು
ಮನೇಲಿ ಹೋಗಿ ಅಸ್ಸೊ ಅಂತ ಕೂತ್ಕೊಂಡ
'ಅಸ್ಸೋ' ಅಂತ ಕೂತ್ಕೊಂಡ ಕಾಲದಲ್ಲಿ
ನಮ್ಮ ಸ್ವಾಮಿಗಳು ಸಾದೂ ಸನ್ಯಾಸಿಗಳಾಗಿ ಮಠಾಪತಿಗಳಾಗಿ
ಮುತ್ತುನ ಜೋಳ್ಗೆ ಮುಂಗೈಗಾಧಾರ ಮಾಡ್ಕೊಂಡು
ಬೆರಳಿ ಕಟ್ಟಿನ ನಾಗ ಬೆತ್ತವನ್ನು ಹಿಡ್ಕೊಂಡು
ಕೊರಳ ತುಂಬ ರುದ್ರಾಕ್ಷ ಹಣೆ ತುಂಬ ಈಬುತ್ತಿ ಧರುಸ್ಕೊಂಡು
ಅವಳಟ್ಟೀಗೆ ದಯಮಡವ್ರೆ ಮುದ್ದು ಮಾದೇವ
ನೋಡಿ ನಮ್ಮ ಶಿವುನಾ!

ಯಾರವ್ವ ಮನೇ ಒಳಿಗೆ ನನಕಂದ?
ಅದ್ಯಾರು ಸ್ವಾಮಿ
ನಾವು ಕಣವ್ವ ಸಾದುಸನ್ನೇಸಿಗಳು
ನಮಗೆ ಕಣ್ಣ ಕಾಣೊದಿಲ್ಲ ಕಿವಿ ಕೇಳೋದಿಲ್ಲ
ಅಮ್ಮ ರುತಾಪದ ಕಾಲವಾಗಿದ್ದೀನಿ ತಾಯಿ
ಸ್ವಾಮಿ ಏನಂದ್ರಪ್ಪ
ಅಮ್ಮಾ ಆ ಮಾದೇವಮ್ಮನ ಮನೆ ತೋರುಸ್ಕೊಡವ್ವ
ನಿನಗೆ ಬಾಳ ಕೋಟಿ ಧರ್ಮ ಬತ್ತದೆ ನನಕಂದ
ಸ್ವಾಮಿ ಯಾತುಕ್ಕೆ ಸ್ವಾಮಿ
ಅಮ್ಮಾ ತಾಯಿ ಆ ಮಾದೇವಮ್ಮ
ನಮ್ಮಂತ ಸಾಧು ಸನ್ನೇಸಿಗಳ ಕಂಡ್ರೆ ಬಾಳ ಪಕ್ಷವಾಗಿ ನೋಡ್ತಳಂತೆ
ಎಲ್ಲಾ ಸಾಧು ಸನ್ನೇಸಿಗಳು
ಅಲ್ಗೇ ಹೋಗಿ ಇನ್ನೇಲ್ಲೂ ಹೋಗ್ಬೇಡಿ ಅಂತ ಕಳುಸವ್ರೆ
ಅದಕೋಸ್ಕರವಾಗಿ ಆ ಮದೇವಮ್ಮನ ನೋಡಕೆ ಬಂದೆ ನನಕಂದ
ಸ್ವಾಮಿ ಮಾದೇವಮ್ಮ ಅನ್ನೋಳು ನಾನೇ ಸ್ವಾಮಿ
ಈ ಊರಲ್ಲಿ ಬ್ಯಾರೆ ಯರೂ ಇಲ್ಲ
ನೀನು ಭಾಗ್ಯವಂತೆಯಾಗು ನನಕಂದ
ಸ್ವಾಮಿ ಏನ್ ಬಂದ್ರಿ?
ಅಮ್ಮಾ ಮದೇವಮ್ಮ ನನಗೆ ಅನ್ನವಿಲ್ಲ ಅರವಿಲ್ಲ
ಕಣ್ಗೆ ನಿದ್ರೆಯಿಲ್ಲ ನನಕಂದಮ್ಮ
ನಿಮನೆಗೆ ಊಟುಕ್ಕೆಬಂದಿವ್ನಿ ಕಂದ ಮಾದೇವಮ್ಮ
ನೋಡಿ ನಮ್ಮ ಶಿವುನಾ!
ಊಟವೇ ಸ್ವಾಮಿ ಆಗ್ಲಿ ಪರಮಾತ್ಮ
ಊಟ ಕಿತ್ತಿನಿ ಸ್ವಾಮಿ
ಊರೆಲ್ಲ ಭಿಕ್ಷುವನ್ನು ಮಾಡ್ಕೊಂಡು
ಮದ್ದಾನದ ಹೊತ್ಗೆ ನೀವು ಬನ್ನಿ
ನಾನು ಅಡ್ಗೆಯನ್ನು ಮಾಡಿರ್ತೀನಿ ಸ್ವಾಮಿ
ಕಂದ ಏನೇನು ಅಡ್ಗೆಯನ್ನು ಮಾಡ್ತಿಯಮ್ಮ ?
ನೆಲ್ಲಕ್ಕಿ ಅನ್ನ ವನ್ನು ಮಾಡಿ ಮಡುಗ್ತೀನಿ ಬುದ್ಧಿ

ಸಾವಕ್ಕಿ ಅನ್ನ ಮಾಡಿ ಮಡುತ್ತೀನಿ ದಮ್ಮಯ್ಯ
ಚಪ್ಪರದವರೇಕಾಯಿ ಎಸ್ರೂ ಮಾಡ್ತೀನಿ ಗುರುವೆ
ಹಿಂಡುಗ್ಮೇಲಾದಂತ ದೊಡ್ಡ ಬಿಳೀ ಹಸುನಲ್ಲಿ
ಒಂದಸೇರು ಹಾಲ್ತಂದು ಮಡುಗ್ತೀನಿ
ನೀವು ಬಿನ್ಯ ಸಲ್ಸಿ ಅನ್ತಳಲ್ಲ ಮಾದೇವಮ್ಮ
ನೋಡಿ ನಮ್ಮ ಶಿವನಾ!
ಹನ್ನೇರಡು ಗಂಟಿ ಪ್ರಾತಕಾಲಕ್ಕೆ ನನಕಂದ
ಖಂಡಿತವಗ್ಲೂ ಬತ್ತೀನಿ ಕಂದಮ್ಮ
ಅವುಳ ಕಣ್ಣೆದುರ್ಗೆ ಹೋಗೋದು ಹೋಯ್ತೀನಿ ಅಂದ್ಬುಟ್ಟು
ಬೆಳೀಪಲ್ಲಿಯಾಗಿ ನಮ್ಮಪ್ಪಾಜಿ ಮಾದೇವ
ಅವಳ ಮನೇ ಹೊಳೆದಟ್ಟನ ಮೇಲೆ
ಅಲ್ಲೋಗಿ ಮಾಯ್ದಲ್ಲಿ ಕುಂತವರಲ್ಲ ಮಾದೇವ
ನೋಡಿ ನಮ್ಮ ಶಿವನಾ!"೧೬

ಮಾದೇಶ್ವರನು ಊಟಮಾಡಿ ಕೈತೊಳೆದುಕೊಂಡು ಅನಂತರ ಎದ್ದು ಹೊರಟ. ಅಷ್ಟರಲ್ಲಿ ಹಲಗೇಗೌಡ ಹೊಲಬಿಟ್ಟು ಮನೆಯ ಕಡೆಗೆ ಹೊರಟ. ಮಾದೇವಮ್ಮ ಹಿಟ್ಟಿನ ಕುಕ್ಕೆ ಹೊತ್ಕೊಂಡು ಮನೆಯ ಹಾದಿ ಹಿಡಿದಳು. ಮಾದೇವಮ್ಮ ಹೋದ ದಾರಿಯಲ್ಲಿ ಮಾದೇಶ್ವರನು ಬಂದ. ಮಾದೇವಮ್ಮ ನೋಡುತ್ತಾಳೆ ಎಂದು ತಿಳಿದು ಮರೆಯಲ್ಲಿ ಕುಳಿತುಕೊಳ್ಳುತ್ತಾನೆ. ಮನೆಗೆ ಬಂದ ಮಾದೇವಮ್ಮ ಹಿಟ್ಟಿನ ಕುಕ್ಕೆಯನ್ನು ನೆಲದ ಮೇಲಿಟ್ಟು ಅಲ್ಲೇ ಪಕ್ಕದಲ್ಲಿ ಕುಳಿತು ಆಯಾಸವನ್ನು ಕಳೆಯುತ್ತಿರುತ್ತಾಳೆ. ಅದೇ ಸಂದರ್ಭದಲ್ಲಿ ನಮ್ಮ ಮಾದೇಶ್ವರನು ಸಾಧು ಸನ್ಯಾಸಿಗಳ ವೇಷ ತೊಟ್ಟು ಮುತ್ತಿನ ಜೋಳುಗೆ, ನಾಗಬೆತ್ತವನ್ನು ಹಿಡ್ಕೊಂಡು, ಕೊರಳ ತುಂಬ ರುದ್ರಾಕ್ಷಿ ಮಾಲೆಯನ್ನು, ಹಣೆಯ ತುಂಬ ಈ ಬುತ್ತಿಯನ್ನು ಧರಿಸಿಕೊಂಡು ಮಾದೇವಮ್ಮನ ಹಟ್ಟಿಗೆ ಬರುತ್ತಾರೆ. ಬಂದ ಮಾದೇಶ್ವರನು ಯಾರಮ್ಮ ಮನೆಯೊಳಗೆ ಎಂದು ಕೇಳುತ್ತಾನೆ. ಮನೆಯೊಳಗಿಂದ ಮಾದೇವಮ್ಮ ಯಾರು ಎಂದು ಬರುತ್ತಾಳೆ. ಆಗ ಮಾದೇಶ್ವರನು ನಾನು ಸಾಧು ಸನ್ಯೇಸಿ ತಾಯಿ. ತುಂಬಾ ವಯಸ್ಸಾಗಿದೆ. ನನಗೆ ತಿನ್ನಲು ಅನ್ನವಿಲ್ಲ. ಉಡಲು ಬಟ್ಟೆಯಿಲ್ಲ, ಕಣ್ಣಿಗೆ ನಿದ್ದೆಯಿಲ್ಲ. ನಿಮ್ಮನೆಗೆ ಊಟಕ್ಕೆ ಬಂದಿದ್ದೀನಿ ತಾಯಿ ಎಂದು ಹೇಳುತ್ತಾನೆ ಮಾದೇಶ್ವರ. ಆಗ ಮಾದೇವಮ್ಮ ಆಯಿತು ಸ್ವಾಮಿ ನೀವು ಊರೆಲ್ಲಾ ಭಿಕ್ಷೆ ಬೇಡಿಕೊಂಡು ಬನ್ನಿ ಅಷ್ಟರಲ್ಲಿ ಊಟ ತಯಾರು ಮಾಡುತ್ತೇನೆ ಎಂದು ಹೇಳುತ್ತಾಳೆ. ಆಗ ಮಾದೇಶ್ವರ ಮಗಳೇ ಏನು ಅಡಿಗೆ ಮಾಡುತ್ತೀಯಾ ಎಂದು ಕೇಳುತ್ತಾನೆ. ಆಗ ಮಾದೇವಮ್ಮ ಸೆಲ್ಲಕ್ಕಿ, ಸಾವಕ್ಕಿ ಅನ್ನಮಾಡಿ ಚಪ್ಪರದವರೆಕಾಯಿ ಸಾರು ಮಾಡುತ್ತೀನಿ ಎಂದು ಹೇಳುತ್ತಾಳೆ. ಮತ್ತೆ

ಬಿಳಿ ಹಸುವಿನ ಹಾಲು ತಂದು ಮಡಗುತ್ತೀನಿ ಎಂದು ಹೇಳಿದಳು. ಆಗ ಮಾದೇಶ್ವರ ಮಧ್ಯಾಹ್ನದ ಹೊತ್ತಿಗೆ ಬರುತ್ತೀನಿ ಎಂದು ಹೇಳಿ ಹೋದ ಹಗೆ ಮಾಡಿ, ಬಿಳಿಯ ಹಲ್ಲಿಯಾಗಿ ಅವಳ ಹಟ್ಟಿಯಲ್ಲಿ ನಿಲ್ಲುತ್ತಾನೆ.

"ಇಲ್ಲ ಅಡ್ಗೆ ಮಾಡ್ತಳೋ ಮಾಡಕಿಲ್ಲವೋ
ಇವಳ ದುಡಾ ಮನಾ ತೀಳಿಬೇಕು ಅಂತ ಕುಂತವ್ರೆ
ಸಾಧುಗಳು ಹೊಂಟೋದ್ರಲ್ಲ
ನಾನು ಏನಡ್ಗೆ ಮಾಡ್ಲಪ್ಪ ಗುರುವೆ?
ಮನೇ ಒಳ್ಗೆ ಒಂದು ಕಾಳೂ ಅಕ್ಕಿಲ್ಲ
ಒಂದು ಚಪ್ಪರದವರೇ ಕಾಯಿಲ್ಲ
ಹಿಂಡುಗೆ ಮೇಲಾದ ಬೆಳೀ ಹಸೂನ ಹಾಲಿಲ್ಲ
ಬೇಕು ಅಂತ ಬಾಯಿಗೆ ಬಂದುದು ಹೇಳ್ಬುಟ್ಟಿ
ಸಾಧುಗಳು ಬಂದ್ರೆ ನಾನೇನು ಮಾಡ್ಲಪ್ಪ
ನಾನು ಯಾರನ್ನ ಕೇಳಲಪ್ಪ
ಸಾಧು ಸನ್ನೇಸಿಗಳ ಹೆಸ್ತೇಳ್ಕೊಂಡು ಅಕ್ಕಪಕ್ಕದ
ಮನೇಲಾದ್ರೂ ಕೇಳಬೇಕು.
ಅಂತ್ಹೇಳ್ಬುಟ್ಟು ಮಾಸರಣೆ ಮಾದೇವಮ್ಮ
ಅಕ್ಕಪಕ್ಕದ ಮನೇಲೋಗಿ
ಅಕ್ಕಿ ಕೇಳ್ತವ್ಳಲ್ಲಪ್ಪ ಮಾದೇವಮ್ಮ
ನೋಡಿ ನಮ್ಮ ಶಿವನಾ!
ಅಮ್ಮಾ ತಾಯಿ ಮಾದೇವಮ್ಮ
ಯಾವತ್ತೂ ಬಂದಿದ್ದೋರಲ್ಲ ಏನು ಬಂದಿದ್ದೀರಿ ತಾಯಿ?
ಅವ್ವಾ ಒಂದ್ಬಾವಕ್ಕಿ ಬೇಕಿತ್ತು
ಮಾದೇವಮ್ಮ ಒಂದ್ಬಾವಕ್ಕಿ ಕೇಳುದ್ರಲ್ಲ
ಒಂದ್ಸೇರಕ್ಕಿ ಕೋಡ್ತೀವಿ ತಕ್ಕಂಡೋಗಿ ತಾಯಿ
ಒಂದ್ಸೇರಕ್ಕಿ ತಂದು ಕೊಟ್ರಲ್ಲೊ ಜಗದೀಶ
ನೋಡಿ ನಮ್ಮ ಶಿವನಾ!
ಅಕ್ಕಿ ಈಸ್ಕೊಂಡು ಮಾದೇವಮ್ಮ
ಚಪ್ಪರದವುರೆ ಕಾಯ ಯಾರು ಹಾಕಿದ್ದರೋ ಕಾಣ್ಣಲ್ಲ ಅಂತ್ಹೇಳಿ
ಚಪ್ಪರದವುರೆ ಹಾಕಿದ್ದೋರ ಹಟ್ಟಿಗೆ ಬಂದು

ನನಗಿಷ್ಟು ಚಪ್ಪರದವರೆ ಕಾಯಿ ಕೊಡಿ ಅವ್ವಅಂತ ಕೇಳುದ್ಲು
ಎಂದು ಬರದ ಮಾದೇವಮ್ಮ ಇಂದು ಬಂದು
ನಮ್ಮತ್ರ ಚಪ್ಪರದವರೆ ಕಾಯಿ ಕೇಳ್ತಿದ್ದಾಳಲ್ಲ
ನಾವು ಕೈಯಿಂದ ಕೊಡಬಾರದು
ನೀವಿಷ್ಟ ಬಂದಷ್ಟು ಕುಯ್ಕಂಡೋಗಿ ಅಂತಿದ್ದಾರೆ
ಆಗ ಮಾದೇವಮ್ಮ ಚಪ್ಪರದವರೆ ಕಾಯಿ ಕುಯ್ಕೊಂಡು
ಅವಳು ಮನೆಗೆ ಬತ್ತವಳಲ್ಲೋ ಮಾದೇವಮ್ಮ
ನೋಡಿ ನಮ್ಮ ಶಿವನಾ।
ಮನೆಗೆ ಬರುವ ಕಾಲದಲ್ಲಿ ಹಿಂಡುಗೆ ಮೇಲಾದ ಬೆಳ್ಳಸ
ಕರಾಹಾಕಿ ಮೂರು ದಿನ ಆಗಿತ್ತಂತೆ
ಅವಟ್ಟೀಗೆ ಬತ್ತಳಲ್ಲ ಮಾದೇವಮ್ಮ
ನೋಡಿ ನಮ್ಮ ಶಿವನಾ।
ಮಾದೇವಮ್ಮ ಯಾವತ್ತೂ ಬರದೋಳು
ನಮ್ಮನೆಗೆ ಈವತ್ತು ಬಂದಿದ್ದೀರಲ್ಲ ತಾಯಿ
ಏನ್ ಬಂದ್ರ ತಾಯಿ?
ಅವ್ವಾ ನನಗೆ ಒಂದು ಪಾವು ಹಾಲುಬೇಕು ಅಂತ ಬಂದಿವ್ನಿ
ಗೋದಾನ್ಯ ಕೊಡಿ ಅಂತಳಲ್ಲ ಮದೇವಮ್ಮ
ನೋಡಿ ನಮ್ಮ ಶಿವನಾ
ಅವ್ವಾ ಕಂಚುನಂಡೆ ಕೈಲಿ ಕೊಡ್ತೀವಿ ತಾಯಿ
ನಿಮ್ಮಷ್ಟ ಬಂದಷ್ಟು ಹಾಲ
ಕರ್ಕೊಂಡೋಗಿ ಅಂತರಲ್ಲ ಮಾದೇವ
ನೋಡಿ ನಮ್ಮ ಶಿವನಾ।"[೧೭]

ಹಲ್ಲಿಯಾಗಿ ಮಾದೇಶ್ವರನು ಆಕೆಯ ಮನೆಯ ಬಾಗಿಲಲ್ಲಿ ನಿಲ್ಲುತ್ತಾನೆ. ಮಾದೇವಮ್ಮ ಅಡುಗೆ ಮಾಡುತ್ತಾಳೋ, ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಅಲ್ಲೆ ಹಲ್ಲಿಯಾಗಿ ಕುಳಿತ್ತಿದ್ದಾರೆ. ಸಾಧುಗಳು ಹೊರಟು ಹೋದರಲ್ಲ ಎಂದು ತಿಳಿದ ಮಾದೇವಮ್ಮ ಈಗ ತಾನು ಏನ್ ಅಡ್ಗೆ ಮಾಡಲಿ ಶಿವನೆ ಎಂದು ಯೋಚಿಸುತ್ತಾಳೆ. ಮನೆಯೊಳಗೆ ಒಂದು ಕಾಳು ಅಕ್ಕಿ ಇಲ್ಲ ಒಂದೂ ಚಪ್ಪರದವರೆಕಾಯಿಲ್ಲ, ಮನೆಯಲ್ಲಿ ಜಳಿ ಹಸುವಿನ ಹಾಲಿಲ್ಲ, ಬೇಕು ಅಂತ ಬಾಯಿಗೆ ಬಂದುದನ್ನು ಹೇಳಿಬಿಟ್ಟೆನಲ್ಲಾ ಎಂದು ಯೋಚಿಸುತ್ತಾ ಸಾಧುಗಳು ಬಂದುಬಿಟ್ಟರೆ ಏನು ಮಾಡುವುದು ಎಂದು ತಿಳಿಯದೆ ಇದ್ದಳು. ಆನಂತರ ಸಾಧುಸಂತರ ಹೆಸರನ್ನು ಹೇಳಿ

ಅಕ್ಕಪಕ್ಕದ ಮನೆಯವರಿಂದ ಅಕ್ಕಿ, ಚಪ್ಪರದವರೆಕಾಯಿ ಪಡೆಯುವುದು ಎಂದು ತಿಳಿದು ಬರುತ್ತಾರೆ. ಬಂದವಳು ಅವ್ವಾ ಒಂದ್ಪಾವಕ್ಕಿ ಬೇಕಿತ್ತು ಎಂದು ಕೇಳಿದರೆ ಒಂದು ಸೇರು ಅಕ್ಕಿ ತಂದು ಕೊಟ್ಟರು. ಅಕ್ಕಿ ತೆಗೆದುಕೊಂಡು ಮಾದೇವಮ್ಮ ಚಪ್ಪರದವರೆ ಕಾಯಿ ಯಾರು ಹಾಕಿದ್ದರೋ ಅವರ ಮನೆಯ ಬಳಿ ಬಂದು ನಿಲ್ಲುತ್ತಾರೆ. ನನಗಿಷ್ಟ ಚಪ್ಪದರವರೆ ಕಾಯಿ ಕೊಡಿ ಅವ್ವ ಅಂತ ಕೇಳಿದಳು. ನಿನಗೆ ಬೇಕಾದಷ್ಟು ಕಾಯಿ ಕಿತ್ತುಕೊಂಡು ಹೋಗು ತಾಯಿ ಎಂದು ಹೇಳಿದರು. ಆಗ ಮಾದೇವಮ್ಮ ಚಪ್ಪರದವರೆ ಕಾಯಿ ಕಿತ್ತುಕೊಂಡು ಬರುತ್ತಿರುವಾಗ ಹಿಂಡಿನ ಜಿಳಿ ಹಸುವೊಂದು ಮೂರು ದಿನದ ಹಿಂದೆ ಕರುಹಾಕಿರುತ್ತದೆ. ಅಲ್ಲಿಗೆ ಮಾದೇವಮ್ಮ ಬರುತ್ತಾಳೆ. ಬಂದವಳು ಅವ್ವಾ ನನಗೆ ಒಂದು ಪಾವು ಹಾಲು ಬೇಕು ಅಂತ ಬಂದಿವ್ವಿ, ಗೋದಾನ್ಯ ಕೊಡಿ ಎಂದು ಕೇಳಿದರು. ಆಗ ಆ ಮನೆಯವರು ತಾಯಿ ನಿನ್ನ ಕೈಗೆ ಕಂಚನಂಡೆ ಕೊಡುತ್ತೀನಿ. ನಿನಗೆ ಎಷ್ಟು ಬೇಕು ಹಾಲು ಕರೆದುಕೊಂಡು ಹೋಗು ಎಂದು ಹೇಳಿದರು. ತಾಯಿ ಒಂದು ಕಂಚಿನ ಗಡಿಗೆ ತುಂಬ ಹಾಲನ್ನು ಕರೆದುಕೊಂಡು ಮನೆಗೆ ಬಂದು ಸ್ನಾನ ಮಾಡಿ ಅಡಿಗೆಯನ್ನು ಮಾಡಲು ಸುರುಮಾಡುತ್ತಾಳೆ.

"ಆಗ ಕಂಚುನಂಡೆ ಕೈಲಿಡ್ಕೊಂಡು
ಎಣ್ಣೆ ಬಟ್ಲು ತೊಡೆ ಮಾಲೆ ಮಡೀಕೊಂಡು ಎಣ್ಣಸವುರ್ಕೊಂಡು
ಹಾಲ ಕರುದಳಲ್ಲ ಮಾದೇವಮ್ಮ
ನೋಡಿ ನಮ್ಮ ಶಿವನಾ।
ಕಂಚುನಂಡೆ ತುಂಬ್ಕೊತು
ಅಮ್ಮ ಈ ಸಲ ಹೋಯ್ತೀನಿ ಕಣ್ರಮ್ಮ ಅಂದ್ಬುಟ್ಟು
ಏಳಟ್ಟಿಯಿಂದೀಚ್ಕೆ ಬತ್ತಳಲ್ಲ ಮಾದೇವಮ್ಮ
ತನ್ನ ಮನೆಗೆ ಹೋದಳಂತೆ
ಆಡ್ಗೆ ಸಾಮಾನ್ನೆಲ್ಲ ಅಮುರಸ್ಕೊಂಡು
ಮನೇಲಿ ಮಡುಗ್ಬುಟ್ಟು
ತಾನ ಮಾಡಿದಳಲ್ಲ ಮದೇವಮ್ಮ
ನೋಡಿ ನಮ್ಮ ಶಿವನಾ।
ಮನೇ ತಾರ್ಸಿ ಕೈಯೆಣ್ಣೆ ಜ್ಯೋತಿಯನ್ನು ಹಸ್ಸಿ
ಕೊಂಡ ಮೌವುನ ಪತ್ರೆ ಬಿಲ್ಪತ್ರೆ ತುಂಬೇ ಪುಷ್ಪ
ಇವು ಮೂರ್ನಾ ತೆಕ್ಕೊಂಡೋಗಿ ಸೊಳ್ಳು ಗೂಡ್ಗೆ ಧರುಸ್ಬುಟ್ಟು
ಗಂಧದ ಕಡ್ಡಿಯನ್ನು ಹಸ್ಸಿ ಕೈ ಮುಗುದ್ಬುಟ್ಟು

ಅಡ್ಗೆ ಮಾಡೋದಕ್ಕೆ ದುಡುಕಿದಳಲ್ಲೊ ಮಾದೇವಮ್ಮ
ನೋಡಿ ನಮ್ಮ ಶಿವನಾ।"[೧೯]

(ಪು.ಸಂ-೧೮೫, ೧೯೨)

ಮಾದೇವಮ್ಮನ ಗಂಡ ಹಲಗೇಗೌಡ ಏರ್ಕಟ್ಕೊಂಡು ಹೊಲಕ್ಕೆ ಹೋಗುತ್ತಾನೆ. ಮಾದೇವಮ್ಮ ಅಡಿಗೆ ಮಾಡಿಕೊಂಡು, ಗಂಡನಿಗೆ ಊಟ ತೆಗೆದುಕೊಂಡು ಹೊಲಕ್ಕೆ ಬರುತ್ತಾಳೆ. ಹೊಲದ ಬದುವಿನ ಬಳಿ ಊಟವನ್ನು ಇಟ್ಟು ಆಕೆ ಹೊಲದಲ್ಲಿ ಕೆಲಸಕ್ಕೆ ತೊಡಗುತ್ತಾಳೆ. ಇದೆ ಸಂದರ್ಭದಲ್ಲಿ ಮಾಯದ ಮುದುಕನ ವೇಷವನ್ನು ತೊಟ್ಟ ಮಾದಪ್ಪ ಊಟದ ಕುಕ್ಕೆ ಬಳಿ ಬಂದು ಕುಳಿತ್ತಿರುತ್ತಾರೆ. ಅಷ್ಟರಲ್ಲಿ ಮಾದೇವಮ್ಮನ ಗಂಡ ಹಲಗೇಗೌಡ ಏರ್ ನಿಲ್ಲಿಸಿ ಊಟ ಮಾಡಲು ಬರುತ್ತಾನೆ. ಬಂದವನು ಹಿಟ್ಟಿನ ಕುಕ್ಕೆ ಬಳಿ ಕುಳಿತುಕೊಂಡನು. ಮಾದಪ್ಪನು ಅಲ್ಲೇ ಕುಳಿತು ಕೊಂಡಿದ್ದಾನೆ. ಕುಕ್ಕೆಯಲ್ಲಿ ಇರೋದು ಒಂದು ಮುದ್ದೆ ಹಿಟ್ಟು ಮಾದೇವಮ್ಮ ಒಂದು ಮುದ್ದೆ ಹಿಟ್ಟನ್ನು ಎರಡು ಭಾಗ ಮಾಡಿ ತನ್ನ ಗಂಡನಿಗೆ ಅರ್ಧ, ಮಾದಪ್ಪನಿಗೆ ಇನ್ನರ್ಧ ಹಿಟ್ಟು ಮುರಿದು ಹಿಡುತ್ತಾಳೆ. ಮಾದೇವಮ್ಮನ ಊಟ ಇನ್ನೂ ಆಗಿರುವುದಿಲ್ಲ. ತಿನ್ನಲು ಹಿಟ್ಟಿನ ಮುದ್ದೆ ಇರುವುದಿಲ್ಲ. ಅರ್ಧ ಮುದ್ದೆ ತಿಂದು ಹಲಗೇಗೌಡ ಕೆಲಸಕ್ಕೆ ಹೋಗುತ್ತಾನೆ. ತಿನ್ನಲು ಹಿಟ್ಟಿಲ್ಲದೆ ಮಾದೇವಮ್ಮ ಹಸಿದಿರುತ್ತಾಳೆ. ಆದರೆ ಮಾದೇಶ್ವರ ಮಾತ್ರ.

"ಅಮ್ಮ ಹಸಿದು ಬಂದಿವ್ನಿ ನನಕಂದ ನನಗೆ ಇನ್ನೊಂದ್ಸಲ್ಪ ತಂದು ನೀಡವ್ವ ಎಂದು ಹೇಳುತ್ತಾಳೆ ಆದರೆ ಮಾದೇವಮ್ಮ ಇದೆ ಅನ್ನಲಿಲ್ಲ ಇಲ್ಲ ಇಲ್ಲ ಅಂತಲ್ಲೂ ಇಲ್ಲ ತಂದಿದ್ದು ಒಂದೇ ಮುದ್ದೆ ಹಿಟ್ಟು ಏನೊಂದು ಮಾತನಾಡದೆ ಮೌನವಾಗಿ ನಿಂತು ಬಿಡುತ್ತಾಳೆ. ಆಗ ಮಾದೇಶ್ವರ ನಾ ಎಷ್ಟೊತ್ತು ಕುಂತ್ಕೊಳ್ಳಂದ್ ನನಕಂದ ಹೊಟ್ಟೆ ಬಾಳ ಹಸೀತೈತೆ ಕಂದಮ್ಮ ಊಟ ಮಾಡುದ್ರೆ ಹೊಟ್ಟುಂಬ ಊಟ ಮಾಡ್ಬೇಕು"[೨೦] ಹೀಗೆ ಹೇಳುತ್ತಾನೆ. ಇಲ್ಲಿ ಮಾದೇವಮ್ಮನ ಹಸಿವಿನ ಬಾಳನ್ನು ಬಯಲು ಮಾಡುತ್ತಾನೆ. ಮಾದೇಶ್ವರ. ಭಾರತದ ಹಳ್ಳಿಗಳು ಸದಾಕಾಲ ಹಸಿವು, ಬಡತನದಿಂದ ಬಳಲುತ್ತಿವೆ ಎಂಬ ಸತ್ಯ ಈ ಕಾವ್ಯದಿಂದ ತಿಳಿದುಬರುತ್ತವೆ. ಸ್ವತಃ ಮಾದೇಶ್ವರ ಸ್ವಾಮಿಗಳ ವೇಷವನ್ನು ಹಾಕಿಕೊಂಡು ಮತ್ತೊಮ್ಮೆ ಮಾದೇವಮ್ಮನನ್ನು ಪರೀಕ್ಷಿಸಲು ಬರುತ್ತಾರೆ.

"ಅಮ್ಮ ಮಾದೇವಮ್ಮ ನನಗೆ ಅನ್ನವಿಲ್ಲ ಅರವಿಲ್ಲ
ಕಣ್ಣಗೆ ನಿದ್ರೆಯಿಲ್ಲ ನನಕಂದಮ್ಮ
ನಿಮ್ಮನೆ ಊಟಕ್ಕೆ ಬಂದಿವ್ನಿ ಕಂದ ಮಾದೇವಮ್ಮ
ನೋಡಿ ನಮ್ಮ ಶಿವುನಾ।
ಆಗ ಮಾದೇವಮ್ಮ

ಊಟುವೆ ಸ್ವಾಮಿ ಆಗ್ಲಿ ಪರಮಾತ್ಮ
ಊಟುಕಿಕ್ತೀನಿ ಸ್ವಾಮಿ
ಊರೆಲ್ಲ ಭಿಕ್ಷವನ್ನು ಮಾಡ್ಕೊಂಡು
ಮದ್ದಾನದ ಹೊತ್ಗೆ ನೀವು ಬನ್ನಿ
ನಾನು ಅಡ್ಗೆಯನ್ನು ಮಾಡಿರ್ತೀನಿ ಸ್ವಾಮಿ"[೨೧]

ಎಂದು ಹೇಳುತ್ತಾಳೆ. ಮಾದೇಶ್ವರ ಭಿಕ್ಷೆ ಬೇಡಲು ಹೋಗುತ್ತಾರೆ. ಆದರೆ ಮಾದೇಶ್ವರ ಮಾದೇವಮ್ಮ ಅಡುಗೆ ಮಾಡುತ್ತಾಳೋ ಇಲ್ಲ, ಮಾಡುವುದಿಲ್ಲವೋ ಎಂದು ಪರೀಕ್ಷಿಸಲು ಹೋಗುತ್ತಾರೆ. ಆದರೆ ಮಾದೇವಮ್ಮನ ಮನೆಯೊಳಗೆ ಒಂದು ಕಾಳೂ ಅಕ್ಕಿಲ್ಲ ಒಂದು ಚಪ್ಪರದವರೇ ಕಾಯಿಲ್ಲ

"ಮನೇ ಒಳ್ಗೆ ಒಂದು ಕಾಳೂ ಅಕ್ಕಿಲ್ಲ
ಒಂದು ಚಪ್ಪರದವರೇ ಕಾಯಿಲ್ಲ
ಹಿಂಡುಗೆ ಮೇಲಾದ ಬೆಳೀ ಹಸೂನ ಹಾಲಿಲ್ಲ
ಬೇಕು ಅಂತ ಬಯಿಗೆ ಬಂದುದು ಹೇಳ್ಬುಟ್ಟಿ
ಸಾಧುಗಳು ಬಂದ್ರೆ ನಾನೇನು ಮಾಡ್ಲಪ್ಪ
ನಾನು ಯಾರನ್ನ ಕೇಳಲಪ್ಪ"[೨೨]

ಎಂದು ಯೋಚಿಸುತ್ತಾ ಮಾದೇವಮ್ಮ ಮನೆ ಮನೆಗೂ ಹೋಗಿ ಬೇಡಿ ಅಕ್ಕಿ, ಚಪ್ಪರದವರೇಕಾಯಿ ಬಿಳಿ ಹಸೂನ ಹಾಲು ತರುತ್ತಾಳೆ. ಮಾದೇಶ್ವರನಿಗಾಗಿ ಅಡುಗೆ ಮಾಡುತ್ತಾಳೆ. ಇದೆಲ್ಲ ಜನಪದ ಜಗತ್ತಿನ ಹಸಿವಿನ ಸಾಂಸ್ಕೃತಿಕ ಲೋಕ ಎಂದರೆ ತಪ್ಪಾಗಲಾರದು. ಇವತ್ತಿನ ಹಸಿವಿಗೆ ಮೂಲಕಾರಣ ಕೃಷಿ ಚಟುವಟಿಕೆಗಳು ಹಳ್ಳಿಗಳಲ್ಲಿ ನಿಧಾನವಾಗಿ ಸ್ಥಗಿತಗೊಳ್ಳುತ್ತಿದೆ. ಹಳ್ಳಿಯ ಜನರು ನಗರಗಳಿಗೆ ಹೊಲಸೆ ಬರುತ್ತಿದ್ದಾರೆ. ಸಾಮಾನ್ಯವಾಗಿ ಆಹಾರ ಪದಾರ್ಥಗಳು ಕಡಿಮೆ ಉತ್ಪಾದನೆಯಾಗುತ್ತಿದೆ. ಜನಸಂಖ್ಯೆಯ ಮಟ್ಟ ಏರುತ್ತಿದೆ ದಿನದಿಂದ ದಿನಕ್ಕೆ ಹಸಿವಿನ ಪ್ರಮಾಣ ಹೆಚ್ಚುತ್ತಾ ಹೋಗುತ್ತಿವೆ. ಹಾಗೆ ಮುಂದುವರಿಯುತ್ತಾ ಮಾದೇಶ್ವರ ಕುಂತೂರು ಪ್ರಭೂ ಸ್ವಾಮಿಗಳಿಗೆ ನಮಸ್ಕಾರವನ್ನು ಹೇಳುತ್ತಾ ಮುಂದಕ್ಕೆ ಸಾರುತ್ತಾರೆ.

"ಮಾಯ್ಕಾರ ಗಂಡ ನಮ್ಮಪ್ಪಾಜಿ ಮಾದೇವ
ಸಪ್ಪಟ್ಟು ಸರುರಾತ್ರೆ ಹೊತ್ತು ಆಗ
ಕಲ್ಲೂ ನೀರು ಕರುಗವ ಹೊತ್ತು
ದೇವ ದೇವಮಾನ್ರು ಚಂಚಾರ ಮಾಡೋ ಹೊತ್ತು ಅಂತಾ ಹೊತ್ನಲ್ಲಿ ಕೌದಳ್ಳಿ ಕಡ್ಡು

ಅವುರೋಗೋ ದಾರೀ ಒಳುಗೆ ಕಡ್ಡಿಮಾಳದ ಹದ್ಗೆ ಒಳುಗೆ
ಗಂಡ ಕೆಂಡೇಗೌಡ ಹೆಂಡ್ತಿ ಬೇವುನಕಾಳಮ್ಮ
ಆ ದಾರೀ ಒಳುಗೆ ಸೊಪ್ಪುನ ಗುಳ್ಳಾ ಕೊಂಡು ವಾಸುಸ್ತಾನ
ಮಾಡ್ತಿದ್ದಾರೆ.
ಉಣ್ಣಕೆ ಅನ್ನವಿಲ್ದೆ ಉಡಕೆ ಬಟ್ಟೆಯಿಲ್ದೆ
ಕಾಳಮ್ಮಂಗೆ ತಿಪ್ಪೆ ಮ್ಯಾಗಳ ಬಟ್ಟೆ ಹೊದುಪಾಗಿ
ಅವುಳ ಗಂಡನಾದ ಕೆಂಡೇಗೌಡಂಗೆ
ಒಡಕೆ ಹುಲ್ಲು ಒಡದಾರವಗಿ ಕಂಬ್ಳಿಕಟ್ಟಿ ಪೌಡೆ
ಕಂಟ್ಕೊಂಡು
ಸಜ್ಜಳ್ಳಿ ಭದ್ರಳ್ಳಿ ಕಾಡುಗೋಗಿ
ಒಂದೊಂದು ಹೊರೆಹುಲ್ ಕಿತ್ಕೊಂಡು
ಒನೊನ್ದು ದುಡ್ಗೆ ಮಾರ್ಬುಟ್ಟು ಕೌದಳ್ಳಿ ಪ್ಯಾಟೆ ಒಳುಗೆ
ಒಂದ್ದುಡ್ಗೆ ರಾಗಿ ತಕ್ಕೊಂಡು
ಎರಡು ಕಾಸುನ ಉಪ್ಪು ಮೆಣಸುನಕಾಯಿ ತಕ್ಕೊಂಡು
ಗಂಡೊಂದ್ಕಾಸ್ಗೆ ಹೆಂಡ್ತೊಂದ್ಕಸ್ಗೆ ಕಳ್ಳೆಪುರಿ ತಕ್ಕಂಡು
ಸಂತೇಖಾನಿ ಒಳಗೆ ಬಂದು
ಘಟಾಫಟ್ನೆ ಮೂರು ಸ್ಯಾರೆ ನೀರ್ ಕುಡ್ಕೊಂಡು
" ಅಯ್ಯೋ ಪರಮಾತ್ಮ"
ಉಣ್ಣೋದ್ಕೆ ಅನ್ನವಿಲ್ಲ ಉಡೋದ್ಕೆ ಬಟ್ಟೆಯಿಲ್ಲ
ಅಂಬ್ಲಿ ಪಾಯಸವಾಗದೆ ಹಿಟ್ಟು ಬೆಲ್ಲವಾಗದೆ
ಅಯ್ಯೋ ನಮ್ಮ ಬಡುಸ್ತಾನ ಬಯಲ್ಮಾಡೋ ದೇವ್ರಿಲ್ಲವಲ್ಲಪ್ಪ"
ಅಂತ ದುಕ್ಕಾ ಮಡ್ತಾವುಲ್ಲೊ ಮಾದೇವ
ನೋಡಿ ನಮ್ಮ ಶಿವನಾ!
" ಯಜಮಾನ ಏಳಿ ಏಳಿ ಏಳಿ
ಯಾವ ದೇವ್ರೊ ಕಾಣಿ ಹೋಯ್ತಾ ಅದೆ ಇಲ್ಲಿ
ಆ ದೇವುರ ಪಾದ ಹಿಡೀಬೇಕು ಏಳಿ
ಭಾಗ್ಯ ಕೇಳ್ಕೋಬೇಕು" ಅಂತಳೆ ಕಾಳಮ್ಮ
ನೋಡಿ ನಮ್ಮ ಶಿವನಾ!
ತರಬರ್ನೆ ಮೇಲುಕ್ಕೆದ್ದು ಇಬ್ರೂವೆ

ಗಂಡ ಒಂದು ಪಾದ ಹೆಂಡ್ತಿ ಒಂದು ಪಾದ ಹಿಡುದ್ರು
ನಮ್ಮ ಸ್ವಾಮಿಯವರು ನೋಡಿ
"ನೀವು ಗಾಳಿಯೋ ಗ್ರಹಾಗಳೊ
ಬುಡಿ ನಮ್ಮ ಪಾದ್ವ" ಅಂತರಲ್ಲ ಮಾದೇವ
ನೋಡಿ ನಮ್ಮ ಶಿವನಾ ।
"ನಾವು ಗಾಳಿಯೂ ಅಲ್ಲ ಗ್ರಹಾಗಳು ಅಲ್ಲ ಬುದ್ದಿ
ನನ್ಹೇಸ್ರು ಬೇವುನ ಕಾಳಿ
ನನ್ನ ಗಂಡನ ಹೆಸ್ರು ಕೆಂಡೇಗೌಡ
ನಮ್ಮ ಬಂದು ಬಳ್ಗ ನಮ್ಮುನ್ನ ಸೇರುಸ್ನಿಲ್ಲ
ನಮ್ಗೆ ಉಣ್ಣೋಕೆ ಅನ್ನವಿಲ್ಲ ಉಡೋಕೆ ಬಟ್ಟೆಯಿಲ್ಲ
ಎಲ್ಲಾ ದೇವುರ್‍ನೊವೆ ಭಾಗ್ಯ ಕೇಳ್ದೊ
ಯವ ದೇವ್ರಾವೆ ಭಾಗ್ಯ ಕೊಡ್ನಿಲ್ಲ
ನೀವಾರು ಭಾಗ್ಯಕೊಡಿ" ಅಂತಳಲ್ಲ ಕಾಳಮ್ಮ
ನೋಡಿ ನಮ್ಮ ಶಿವನಾ ।
"ಅಯ್ಯೋ ನನಕಂದ ಕಾಳಮ್ಮ
ಭಾಗ್ಯ ಕೊಡು ಅಂದ್ರೆ ನಾನೆಲ್ಲಿಂದ ಕೊಡ್ಲಮ್ಮ
ನಾನು ಭಾಗ್ಯವ ಹೊತ್ಕಂಡು ಬಂದಿದ್ದೆನ ನಿನ್ಗೆ?
ಭಾಗ್ಯ ಕೊಡುಬೇಕಾದ್ರೆ ನನಕಂದ ನಿನ್ಗೆ
ನಾ ಏಳ್ಮಲೆಗೋಗಿ ನೆಲೆಗೊಂಡ್ತಿದ್ದಿನಿ
ಗುಡುಗೋಪು ಗೇಯುಸ್ಕೊಂತಾ ಇದ್ದೀನಿ
ಆಗ ತಿಂಗ ತಿಂಗಳ್ಗೊನೆ
ನಿನ ಗಂಡ ಹೆಡ್ತೀರಿಬ್ರೂವೆ
ಅಗ್ಗಿಷ್ಟೆ ಧೂಪವ ತಲೆಮೇಲೆ ಹೊತ್ಕೊಂಡು
ಮಡ್ಡೀ ಧೂಪ ಹಾಕ್ಕೊಂಡು
ಹನ್ನೆರಡು ತಿಂಗಳು ಹನ್ನೆರಡು ಸ್ಯಾಮೆ ಮಾಡುದ್ರೆ
ಆಗ ನನಕಂದ ಕಾಳಮ್ಮ
ನಿನ್ಗೆ ಭಾಗ್ಯ ಕೊಡ್ತೀನಿ" ಅಂತ್ರಲ್ಲೊ ಮಾದೇವ
ನೋಡಿ ನಮ್ಮ ಶಿವನಾ ।
ಕಾಳಮ್ಮುನ ಕೆಂಡೇಗೌಡ್ನುವೆ

ನಮ್ಮಪ್ಪಾಜಿ ಮಾತ್ಗೆ ಒಪ್ಕೊಂಡು
ಅವುರ ಪಾದವನ್ನು ಬುಟ್ರಂತೆ
ಅಲ್ಲಿಂದ ಮುಂದ್ಕೆ ಬತ್ತರಲ್ಲಪ್ಪ ಮಾದೇವ
ನೋಡಿ ನಮ್ಮ ಶಿವನಾ ।

(ಪು.ಸಂ-೨೮೨, ೨೮೫)

ಮಾದೇಶ್ವರ ಕುಂತೂರು ಪ್ರಭೂಸ್ವಾಮಿಗಳಿಗೆ ನಮಸ್ಕಾರವನ್ನು ಮಾಡುತ್ತಾ ಕೌದಳ್ಳಿ ಮಾರ್ಗವಾಗಿ ಬರುತ್ತಿರುವಾಗ ದಂಡೇಲಿ ಒಂದು ಮುಸಲ್ಮಾನ್ರ ಮಸೀದಿ ಸಿಗುತ್ತದೆ. ಆ ಮಸೀದಿಗೆ ಮೂರು ಸಾರಿ ಪ್ರದರ್ಶನ ಮಾಢಿದ್ರು ಹಾಗೆ ಮುಂದೆ ಸಾಗುತ್ತಾರೆ. ಸರಿರಾತ್ರಿ ಹೊತ್ತಿನಲ್ಲಿ ಕಲ್ಲೂ ನೀರು ಕರಗುವ ಹೊತ್ತು, ದೇವಮಾನವರು ಸಂಚಾರ ಮಾಡುವ ಹೊತ್ತಿನಲ್ಲಿ ಕೌದಳ್ಳಿ ಬಿಟ್ಟು ಮಾದೇಶ್ವರ ಬರುತ್ತಿರುವ ಹೊತ್ತಿನಲ್ಲಿ ಕಡ್ಡಿ ಮಾಳದ ಗುಡಿಸಿಲಿನೊಳಗೆ ಗಂಡ ಕೆಂಡೇಗೌಡ ಹೆಂಡ್ತಿ ಬೇವುನ ಕಾಳಮ್ಮ ಆ ದಾರಿಯೊಳಗೆ ಸೊಪ್ಪಿನ ಗುಡಿಸಲು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆ. ತಿನ್ನುವುದಕ್ಕೆ ಅನ್ನವಿಲ್ಲದೆ, ಉಡುವುದಕ್ಕೆ ಬಟ್ಟೆಯಿಲ್ಲದೆ, ಕಾಳಮ್ಮನಿಗೆ ತಿಪ್ಪೆ ಮೇಲಿನ ಬಟೆ ಹೊದ್ದುಕೊಂಡಿರುತ್ತಾಳೆ. ಅವಳ ಗಂಡ ಲೆಂಡೇಗೌಡ ಒಡಕೆ ಹುಲ್ಲು ಒಡದಾರನಾಗಿ ಕಂಬ್ಳಿ ಕಟ್ಟಿ ಪೌಡೆ ಕಟ್ಕೊಂಡು ಸಟ್ಟಳ್ಳಿ ಭದ್ರಳ್ಳಿ ಕಾಡುಗೋಗಿ ಒಂದೊಂದು ಹೊರೆ ಹುಲ್ಲು ಕಿತ್ಕೊಂಡು ಒಂದೊಂದು ದುಡ್ಡಿಗೆ ಆ ಹುಲ್ಲಿನ ಹೊರೆಯನ್ನು ಮಾರಿ, ಕೌದಳ್ಳಿ ಪೇಟೆಯಲ್ಲಿ ಒಂದು ಕಾಸಿಗೆ ರಾಗಿ ತೆಗೆದು ಕೊಂಡು ಎರಡು ಕಾಸಿಗೆ ಉಪ್ಪು ಮೆಣಸಿನಕಾಯಿ ತೆಗೆದುಕೊಂಡು ಗಂಡ ಒಂದು ಕಾಸಿಗೆ, ಹೆಂಡತಿ ಒಂದು ಕಾಸಿಗೆ ಕಳ್ಳೆಪುರಿ ತೆಗೆದುಕೊಂಡು ಸಂತೆಬೀದಿಯೊಳಗೆ ಬಂದು ಮೂರು ಸ್ಯಾರೆ ನೀರ್ ಕುಡ್ಕೊಂಡು

"ಅಯ್ಯೋ ಪರಮಾತ್ಮ
ಉಣ್ಣೆಲಾದ್ಕೆ ಅನ್ನವಿಲ್ಲ ಉಡೋದ್ಕೆ ಬಟ್ಟೆಯಿಲ್ಲ.
ಅಂಬ್ಲಿ ಪಾಯಸವಾಗದೆ ಹಿಟ್ಟು ಬೆಲ್ಲವಾಗದೆ
ಅಯ್ಯೋ ನಮ್ಮ ಬಡುಸ್ತಾನ ಬಯಲ್ಮಾಡೋ ದೇವ್ರಿಲ್ಲವಲ್ಲಪ್ಪ"

ಎಂದು ದುಃಖಪಡುತ್ತಾ ಕುಳಿತ್ತಿರುತ್ತಾರೆ. ಇದೇ ಸಂದರ್ಭದಲ್ಲಿ ಮಾದೇಶ್ವರ ಆ ಸೊಪ್ಪಿನ ಗುಡಿಸಲಿನ ಬಳಿಗೆ ಬರುತ್ತಾರೆ. ಆಗ ಗಂಡ, ಹೆಂಡ್ತಿ ಇಬ್ಬರು ಮಾದೇಶ್ವರನ ಪಾದಗಳನ್ನು ಓಡಿದು ತನ್ನ ಬಡತನದ ಬಗ್ಗೆ ಹೇಳಿಕೊಳ್ಳುತ್ತಾರೆ.

"ನಾವು ಗಾಳಿಯೂ ಅಲ್ಲ ಗ್ರಹಗಳು ಅಲ್ಲ ಬುದ್ಧಿ
ನನ್ಹೇಸು ಬೇವುನಕಾಳಿ
ನನ್ನ ಗಂಡನ ಹೆಸ್ರು ಕೆಂಡೇಗೌಡ
ನಮ್ಮ ಬಂಧು ಬಳ್ಗ ನಮ್ಮುನ್ನ ಸೇರುಸ್ನಿಲ್ಲ

ನಮ್ಗೆ ಊಣ್ಣೊಕೆ ಅನ್ನವಿಲ್ಲ ಉಡೋಕೆ ಬಟ್ಟೆಯಿಲ್ಲ
ಎಲ್ಲಾ ದೇವ್ರೂವೆ ಭಾಗ್ಯ ಕೇಳ್ದೊ
ಯಾವದೇವ್ರೂವೆ ಭಾಗ್ಯ ಕೊಡ್ನಿಲ್ಲ
ನೀವಾರು ಭಾಗ್ಯ ಕೊಡಿ" ಅಂತಳಲ್ಲ ಕಾಳಮ್ಮ
ನೋಡಿ ನಮ್ಮ ಶಿವನಾ ।

ತಮ್ಮ ಹಸಿವು, ಬಡತನದ ಬಗ್ಗೆ ಪ್ರಲಾಪಗೊಳಿಸುತ್ತಾರೆ. ಆಗ ಮಾದೇಶ್ವರ ಆ ಕುಟುಂಬಕ್ಕೆ ಆತ್ಮವಿಶ್ವಾಸವನ್ನು ತುಂಬುವ ಕೆಲಸ ಮಾಡುತ್ತಾರೆ. ಬಡತನ, ಹಸಿವಿನ ಸಂದರ್ಭದಲ್ಲಿ ವ್ಯಕ್ತಿ ತನ್ನ ಬಂದು ಬಳಗದಿಂದ ಸಮುದಾಯದಿಂದ ದೂರ ಉಳಿಯುತ್ತಾನೆ. ನಿರ್ಲಕ್ಷಕ್ಕೆ ಒಳಗಾಗುತ್ತಾನೆ. ಎಂಬ ಸತ್ಯವನ್ನು ಈ ಸಂದರ್ಭ ಚಿತ್ರಿಸುತ್ತದೆ. ಹಾಗೆ ಮುಂದುವರೆದು ಮಾದೇಶ್ವರ ಕಲ್ಯಾಣನಗರವನ್ನು ಪ್ರವೇಶಿಸುತ್ತಾನೆ.

ಜಗದ್ಯೈಮ ಮಾದೇವ ಜಲಸೂತ್ರಧಾರಿಯ
ಕಲ್ಯಾಣ ಕಡೆ ಬಾಕ್ಲಲ್ಲಿ ನೋಡುತ್ತಾರೆ
ಗುಡುಗುಡುನೆ ಓಡಿಬಂದು ನಂದಿ ಬಸವಣ್ಣನವರು
ಮಾದೇವ್ನ ಪಾದಕ್ಕೆ ಸರಣ ಮಾಡುವರು
ಎಂದೂ ಇಲ್ಲದ ನೀವು ಇಂದೇನು ಬಂದೀರಿ
ಬಂದಂತ ಬಗೆಯ ಒಡದೇಳಿ ।
ಬಂದಂತ ಬಗೆಯ ಒಡದೇಳಿ ಮಾತ್ಮರೆ
ನೀವು ನಿಮ್ಮಾಪೀಠಕ್ಕೆ ದಯಮಾಡಿ ।
ಅಯ್ಯಾ ಘನಶರಣ ಬಸವಣ್ಣ
ಕೂತ್ಕೊಳ್ಳುವಂತ ಮಾತು ಹಂಗಿಲ್ಲಯಪ್ಪ
ಹತ್ತಾರು ಸೀಮೆನೆಲ್ಲ ಸುತ್ತಿ ಹಸಿದು ಬಂದಿದ್ದೀನಪ್ಪ
ನನ್ನ ಹೊಟ್ಟೆಗೇನಾದ್ರು ಸೊಲ್ಪ ಹದಮಾಡಪ್ಪ
ಮಾದೇವ್ನ ಮಾತಕೇಳಿ ನಂದಿ ಬಸವಯ್ಯನವರು
ಅವ್ರು ಗುಡುಗುಡುನೆ ಓಡಿ ಬರುತ್ತಾರೆ.
ಸತ್ಯುವಂತೆ ನೀಲಮ್ಮನವರು
ಒಕ್ಕಳಕ್ಕಿ ಹಾಕಿ ಒಂದು ಬದನೆ ಕಾಯಾಕಿ
ಲಕ್ಕುಸದ್ಮೇಲೆ ತೊಂಬತ್ತೇಳು ಕೋಟಿ ಜಂಗಮರ್ಗೆಲ್ಲ
ನಿತ್ಯ ಭೋಜುಣವನ್ನು ಮಾಡ್ಸಿ
ಮಿಕ್ಕಿದ ಪರ್ಸಾದವನ್ನು ಕಲ್ಯಾಣಿಗೆ ಕಟ್ಟಿ ಕೈಲಾಸುಕ್ಕೆ ಕಳಿಸ್ತಿದ್ದಾರೆ

ಮಡಕಿ ಕುಡುಕೆಯೆಲ್ಲ ಬರುದಾಗ್ಯೆತೆ
ಎಲಾ ಮಡದಿ ದೊಡ್ಡೋರು ಬಂದು ಹಸ್ವಾಯ್ತಾದೆ ಅಂತಿದ್ದಾರಲ್ಲ
ಈಗೇನು ಮಾಡ್ಬೇಕು? ಅಂತಹೇಳುದ್ರು
ಸ್ವಾಮಿ ಮನೇಲಿ ಒಂದ್ಕಾಳು ಅಕ್ಕ್ಯ ಇಲ್ವಲ್ಲ
ಈಗೇನು ಮಾಡೋದು
ಅಯ್ಯೋ ಅಯ್ಯೋ ಮಡದಿ
ಅಕ್ಕನಾಗಮ್ಮನ್ನ ಅದಕೆ ಮಾರಯ್ಯನ ಮನೆಗೆ ಕಳುಗಿ
ಬ್ಯಾಗ ಬ್ಯಾಗನೆ ಅಕ್ಕಿ ತರ್ಸಿ ಅಡುಗೆಗೆ ದುಡುಕು ಅಂದ್ರು
ಬಸವಣ್ಣನವರು ಗುಡುಗುಡನೆ ಖಡ್ಬಂದು
ಸ್ವಾಮಿ ತಮ್ಮ ಪಾದ್ಪೂಜೆಯನ್ನು ಮಾಡ್ತಿದ್ದೀವಿ
ನಮ್ಮನೆ ಭಿನ್ಯ ಆಳ್ದು ಮುಂದುಕ್ಕೆ ದಯಮಾಡಿ ಗುರುವೆ
ಅಂದ್ರಲ್ಲ-

(ಮ.ಸಂ-೩೪೨, ೩೪೩)

ಬಂದಂತ ಮಾದೇಶ್ವರನನ್ನು ಬಸವಣ್ಣನನ್ನು ಬರಮಾಡಿಕೊಳ್ಳುತ್ತಾರೆ. ನಿಮ್ಮ ಪೀಠದಲ್ಲಿ ಕುಳಿತುಕೊಳ್ಳಲು ಹೇಳುತ್ತಾರೆ. ಆಗ ಮಾದೇಶ್ವರ

ಅಯ್ಯ ಘನಶರಣ ಬಸವಣ್ಣ
ಕೂತ್ಕೊಳ್ಳವಂತ ಮಾತು ಹಂಗಿಲ್ಲಿಯಪ್ಪ
ಹತ್ತಾರು ಸೀಮೆನೆಲ್ಲ ಸುತ್ತಿ ಹಸಿದು ಬಂದಿದ್ದೀನಪ್ಪ
ನನ್ನ ಹೊಟ್ಟೆಗೇನದ್ರೂ ಸೊಲ್ಪ ಹದ ಮಾಡಪ್ಪ

ಎಂದಾಗ ಮಾದೇಶ್ವರ, ಆಗ ಬಸವಣ್ಣ ಓಡಿ ಬಂದು ನೀಲಮ್ಮನವರಿಗೆ ವಿಷಯವನ್ನು ತಿಳಿಸಲು ಆಗ ತಾನೆ ನೀಲಮ್ಮ ಲಕ್ಷದ ಮೇಲೆ ತೊಂಬತ್ತೇಳು ಕೋಟಿ ಜಂಗಮರನೆಲ್ಲ ನಿಚ್ಚ ಭೋಜನವನ್ನು ಮಾಡಿಸಿ, ಮಿಕ್ಕ ಪ್ರಸಾದವನ್ನು ಕಲ್ಲು ಬಂಡೆಗೆ ಕಟ್ಟಿ ಬಂದಿರುತ್ತಾರೆ. ಮಡಕೆ, ಕುಡುಕೆ ಯೆಲ್ಲ ಬರಿದಾಗಿರುತ್ತದೆ. ಆಗ ಬಸವಣ್ಣ

ಎಲಾ ಮಡದಿ ದೊಡ್ಡೋರು ಬಂದು ಹಸ್ವಾಯ್ತದೆ ಅಂತಿದ್ದಾರಲ್ಲ

ಈಗೇನು ಮಾಡ್ಬೇಕು? ಅಂತ ಹೇಳುದ್ರು ಆಗ ನೀಲಮ್ಮ ಸ್ವಾಮಿ ಮನೇಲಿ ಒಂದ್ಕಾಳು ಅಕ್ಕ್ಯ ಇಲ್ವಲ್ಲ

ಈಗೇನು ಮಡೋದು?
ಅಯ್ಯೋ ಅಯ್ಯೋ ಮಡದಿ

ಅಕ್ಕನಾಗಮ್ಮನ್ನ ಅದಕ್ಕೆ ಮಾರಯ್ಯನ ಮನೆಗೆ ಕಳುಗಿ ಬ್ಯಾಗ ಬ್ಯಾಗನೆ ಅಕ್ಕಿ ತರ್ಸಿ ಅಡುಗೆಗೆ ದುಡುಕು ಅಂದ್ರು ಹೀಗೆ ಹೇಳುತ್ತಾರೆ. ೧೨ನೇ ಶತಮಾನದಲ್ಲಿ ಇದ್ದಂತ ಜಾತಿ, ಅಸಮಾನತೆಗಿಂತ ದೊಡ್ಡ ಸಮಸ್ಯೆ ಎಂದರೆ ಹಸಿವಿನ ಸಮಸ್ಯೆ. ಬಡಬಗ್ಗರಿಗಾಗಿ ನಿತ್ಯ ಅನ್ನದ ಸೇವೆಯನ್ನು ಕಲ್ಯಾಣದಲ್ಲಿ ಬಸವಣ್ಣನ ನೇತೃತ್ವದಲ್ಲಿ ಏರ್ಪಡಿಸಲಾಗುತ್ತದೆ. ಈ ನಿತ್ಯ ಭೋಜನಕ್ಕೆ ಸಂಗ್ರಹಗೊಳ್ಳುತ್ತಿದ್ದ ದವಸಧಾನ್ಯಗಳು ತಳಸಮುದಾಯಗಳ ಬೆವರಿನ ದುಡಿಮೆಯ ಫಲವಾಗಿರುತ್ತದೆ.

ಅಡಿ ಟಿಪ್ಪಣಿ

೧. ಬೋರಲಿಂಗಯ್ಯ.ಡಿ.ಜಿ., **ಮಂಟೇಸ್ವಾಮಿ ಕಾವ್ಯ,** ಪು.ಸಂ–೨೬೧

೨. **ಅದೇ ಪುಸ್ತಕ,** ಪು.ಸಂ–೨೬೨

೩. **ಅದೇ ಪುಸ್ತಕ,** ಪು.ಸಂ–೨೬೨, ೨೬೩

೪. **ಅದೇ ಪುಸ್ತಕ,** ಪು.ಸಂ–೨೬೧

೫. ರಾಜಾಶೇಖರ.ಪಿ.ಕೆ., **ಮಲೆಯ ಮಾದೇಶ್ವರ.** ಪು.ಸಂ ೪೪–೪೮

೬. **ಅದೇ ಪುಸ್ತಕ,** ಪು.ಸಂ ೧೪೨–೧೪೭

೭. **ಅದೇ ಪುಸ್ತಕ,** ಪು.ಸಂ ೧೮೫–೧೯೨

೮. **ಅದೇ ಪುಸ್ತಕ,** ಪು.ಸಂ ೨೮೨–೨೮೫

೯. **ಅದೇ ಪುಸ್ತಕ,** ಪು.ಸಂ–೩೪೨, ೩೪೩

❖❖❖

ಅಧ್ಯಾಯ : ಐದು

ಹಸಿವಿನ ಪಶುಪಾಲಕ ನೆಲೆ

೫.೧ ಜುಂಜಪ್ಪ ಕಾವ್ಯದಲ್ಲಿ ಹಸಿವಿನ ಕಥನ

೫.೨ ಮೈಲಾರಲಿಂಗ ಕಾವ್ಯದಲ್ಲಿ ಹಸಿವಿನ ನಿವೇಧನೆ

೫.೩. ಮೈಲಾರಲಿಂಗ ಕಾವ್ಯದಲ್ಲಿ ಹಸಿವಿನ ನೆಲೆಗಳು

ಅಧ್ಯಾಯ: ಐದು

ಹಸಿವಿನ ಪಶುಪಾಲಕ ನೆಲೆ

ವಿಶ್ವದ ಅನೇಕ ಸಮುದಾಯಗಳಿಗಿಂತ ಭಿನ್ನವಾದ ಮತ್ತು ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆಯುಳ್ಳ ಜನಸಮುದಾಯಗಳು ನಮ್ಮ ದೇಶದಲ್ಲಿ ಕಂಡುಬರುತ್ತವೆ. ಇಂತಹ ಸಮುದಾಯಗಳನ್ನು ಸಮಾಜಶಾಸ್ತ್ರಜ್ಞರು ಮತ್ತು ಮಾನವ ಶಾಸ್ತ್ರಜ್ಞರು ಬಹಳ ಹಿಂದಿನಿಂದಲೂ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಆದರೆ ಕೆಲವು ಸಮುದಾಯಗಳ ಸಂಸ್ಕೃತಿ ಸ್ಥಿತಿಗತಿ ಮತ್ತು ಸಾಮಾಜಿಕ ಸಂಚಲನೆ ಅಥವಾ ಪರಿವರ್ತನೆಯನ್ನು ದಾಖಲಿಸದೆ ನಿರ್ಲಕ್ಷಿತ ಸಮುದಾಯ ಗಳಾಗಿಯೇ ಉಳಿದವು. ಇತ್ತೀಚೆಗೆ ಅವಣಗಣನೆಗೆ ಬೆಳಗಾದ ಸಮುದಾಯಗಳ ಅಧ್ಯಯನ ಮತ್ತು ದಾಖಲಾತಿ ಕಾರ್ಯ ಸರ್ಕಾರದ ವತಿಯಿಂದ ಮತ್ತು ವಿದ್ವಾಂಸರುಗಳಿಂದ ನಡೆಯುತ್ತಿದೆ. ಕರ್ನಾಟಕದಲ್ಲಿನ ಜನಸಮುದಾಯಗಳು ಇತ್ತೀಚೆಗೆ ಅಸ್ಮಿತೆ (identity) ಗೋಸ್ಕರ ಚಳುವಳಿಗಳ ರೂಪದಲ್ಲಿ ಸಾಮಾಜಿಕ ಸಂಚಲನೆಯನ್ನು ಹೊಂದುತ್ತಿದೆ. ಕೆಲವು ಸಮುದಾಯಗಳು ಹೊಸ ಐಡೆಂಟಿಟಿಯ ಹುಡುಕಾಟದಲ್ಲಿ (each for new identity) ತೊಡಗಿದರೆ, ಇನ್ನೂ ಕೆಲವು ಸಮುದಾಯಗಳು ಐಡೆಂಟಿಟಿಯ ಬಿಕ್ಕಟ್ಟಿನಲ್ಲಿ (identity crisiss) ಸಿಲುಕಿದೆ ಸಾಮಾಜಿಕವಾಗಿ ದುರ್ಬಲವಾಗಿರುವ ಸಮುದಾಯಗಳು ಅಂಚಿನ ಗುಂಪುಗಳಾಗಿ (marginalised) ಮಾರ್ಪಟ್ಟಿವೆ. ಇಂತಹ ಅಂಚಿನ ಗುಂಪುಗಳಾಗಿ ಮಾರ್ಪಟ್ಟಿರುವ ಸಮುದಾಯಗಳು ಅತ್ತ ತನ್ನ ಪರಂಪರೆ ಮತ್ತು ಮೂಲ ಸಂಸ್ಕೃತಿ ಯನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಇತ್ತ ಆಧುನಿಕ ಸಮಾಜದ ಸಂಸ್ಕೃತಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ತೊಳಲಾಟದಲ್ಲಿ ಸಿಲುಕಿವೆ. ಇಂತಹ ಅಂಚಿನ ಸಮುದಾಯ (marginalized commity) ಗಳಲ್ಲಿ ಕರ್ನಾಟಕ ಗೊಲ್ಲ ಸಮುದಾಯವೂ ಒಂದಾಗಿದ್ದು, ಐಡೆಂಟಿಟಿಯ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಗೊಲ್ಲ ಸಮುದಾಯವು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ, ಹಿಂದುಳಿದಿದ್ದು, ತನ್ನದೇ ಆದ ಸಾಮಾಜಿಕ ಸಂಘಟನೆಯನ್ನು ಹೊಂದಿದೆ. ಇತ್ತೀಚೆಗೆ ಸಮಾಜದಲ್ಲುಂಟಾದ ಪರಿವರ್ತನೆಯಿಂದಾಗಿ ಈ ಸಮುದಾಯವು ಸಾಮಾಜಿಕ ಸಂಚಲನೆ

(Social mobility)ಯನ್ನು ಹೊಂದುತ್ತಿದ್ದು, ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ. ಈ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿ ಬೇರೆ ಸಮುದಾಯಗಳಿಗಿಂತ ಭಿನ್ನವೂ ವಿಶಿಷ್ಟವೂ ಆಗಿದೆ.

ಎಲ್ಲಾ ಜಾತಿ, ಜನಾಂಗ, ಬುಡಕಟ್ಟುಗಳ ಮೂಲ ಹುಟ್ಟಿನ ಸ್ಥಳದ ಬಗ್ಗೆ ಇರುವ ಐತಿಹ್ಯ ಮತ್ತು ಪುರಾಣಗಳ ಹಾಗೆಯೇ ಗೊಲ್ಲ ಜನಾಂಗದ ಮೂಲ ಉಗಮದ ಬಗ್ಗೆ ಹಲವು ಪುರಾಣಗಳಿವೆ. ಇವರ ಮೂಲಸ್ಥಳ ಹುಡುಕ ಹೊರಟರೆ ದೆಹಲಿ ಮತ್ತು ಸುತ್ತಮುತ್ತಲಿನ ಗ್ರಾಮಪಟ್ಟಣಗಳಲ್ಲಿ ವಾಸಿಸುತ್ತಿದ್ದರು ಎಂಬುದು ಆಶ್ಚರ್ಯ ಮೂಡಿಸುವಂತಾದರೂ ಮೊಗಲರ ಕಾಲಕ್ಕೆ ಅವರ ಹಿಂಸೆ ತಾಳಲಾರದೆ ಬುಡಕಟ್ಟಿನ ಪ್ರಮುಖರನ್ನು ಒಳಗೊಂಡಂತೆ ಎಲ್ಲರೂ ದಕ್ಷಿಣ ಭಾರತಕ್ಕೆ ವಲಸೆ ಬಂದು ಕರ್ನಾಟಕದ ಬಯಲು ಪ್ರದೇಶಗಳಾದ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು, ರಾಯಚೂರು, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ವಾಸಿಸಲು ಪ್ರಾರಂಭಿಸಿದರು ಎಂಬುದು ಅವರ ಬದುಕಿನ ಅಧ್ಯಯನವೊಂದು ತಿಳಿಸುತ್ತದೆ. ಥರಸ್ಟನ್, ಎಡ್ಗರ್, (೧೯೭೫) ರವರ ಪ್ರಕಾರ ಕಾಡುಗೊಲ್ಲರು ಉತ್ತರ ಭಾರತದಿಂದ ಬಂದವರೆಂದೂ, ಕಾಡುಗೊಲ್ಲರ ಸಂಪ್ರದಾಯಗಳು ಕಾಡು ಕುರುಬರ ಸಂಪ್ರದಾಯಗಳನ್ನು ಹೋಲುತ್ತವೆ ಎಂದೂ ಹೇಳಿದ್ದಾರೆ. ಆದರೆ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರದ ದೃಷ್ಟಿಕೋನದಿಂದ ನೋಡುವುದಾದರೆ ಕರ್ನಾಟಕದ ಬಹುತೇಕ ಗೊಲ್ಲ ಜನಾಂಗ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವುದರಿಂದ ಇವರು ಈ ಪ್ರದೇಶದ ಮೂಲನಿವಾಸಿಗಳೆಂದೂ ತಿಳಿದು ಬರುತ್ತದೆ. ಗೊಲ್ಲ ಜನಾಂಗದ ಹುಟ್ಟಿನ ಬಗ್ಗೆ ಏನೇ ವಾದ ಅಥವಾ ಐತಿಹ್ಯಗಳಿರಲಿ ಇವರು ಶತಶತಮಾನಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿದ್ದಾರೆ.

ದೇಶದಲ್ಲಿ ಧರ್ಮವು ಕ್ಷೀಣಿಸುತ್ತಿದ್ದಾಗ ಮತ್ತು ದುಷ್ಟ ಶಕ್ತಿಗಳ ಹಾವಳಿಯು ಹೆಚ್ಚಾದಾಗ ಅವುಗಳನ್ನು ನಿಗ್ರಹಿಸುವುದಕ್ಕೆ ಮತ್ತು ಧರ್ಮವನ್ನು ರಕ್ಷಿಸಲು ದೇವರು ಭೂಲೋಕದಲ್ಲಿ ಅವತರಿಸುತ್ತಾನೆ ಎಂಬ ಐತಿಹ್ಯವಿದೆ. ಇದೇ ರೀತಿ ಇತಿಹಾಸವನ್ನು ಬಗೆದು ನೋಡಿದರೆ ಭಾರತದ ಪ್ರತಿಯೊಂದು ಸಮುದಾಯದಲ್ಲಿ ಒಬ್ಬೊಬ್ಬ ಮಹಾತ್ಮರು ಅವತರಿಸಿ ಆ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾಗಿರುವುದು ಕಂಡು ಬರುತ್ತದೆ. ಉದಾಹರಣೆ ಡಾ. ಬಿ.ಆರ್.ಅಂಬೇಡ್ಕರ್‌ರವರುಜ್ಯೋತಿ ಬಾಫುಲೆ, ಶ್ರೀ ನಾರಾಯಣಗುರು, ಪೆರಿಯಾರರು, ಬಸವೇಶ್ವರರು, ಯೇಸುಕ್ರಿಸ್ತ, ಮಹಮದ್ ಪೈಗಂಬರ್, ಶಂಕರಾಚಾರ್ಯರು ಮುಂತಾದವರು ಜನಾಂಗದ ರಕ್ಷಣೆ ಮತ್ತು ಉದ್ಧಾರಕ್ಕಾಗಿ ಅವತರಿಸಿರುವುದು ಮತ್ತು ಅವರ ತತ್ವ ಆದರ್ಶಗಳು ಜನಾಂಗಗಳ ಮೇಲೆ ಪರಿಣಾಮ ಬೀರಿರುವುದು ಸಾಮಾಜಿಕ ಐತಿಹಾಸಿಕವಾಗಿ ತಿಳಿದು ಬರುತ್ತದೆ. ಇದೇ ರೀತಿಯಲ್ಲಿ ಯಾದವರು ಅಥವಾ ಗೊಲ್ಲ ಸಮುದಾಯದವರು

ದ್ವಾಪರಯುಗದಲ್ಲಿ ರಾಜ್ಯಭಾರ ಮಾಡುತ್ತಿರುವಾಗ ಶ್ರೀ ಕೃಷ್ಣ ಪರಮಾತ್ಮನು ಯಾದವ ಜನಾಂಗದವರನ್ನು ಉದ್ಧಾರ ಮಾಡಲೆಂದು ದುಷ್ಟ ನಿಗ್ರಹ ಮತ್ತು ಧರ್ಮವನ್ನು ರಕ್ಷಿಸುವುದಕ್ಕೋಸ್ಕರವಾಗಿ ದ್ವಾಪರ ಯುಗದಲ್ಲಿ ಅವತರಿಸಿ ರಾಜ್ಯಭಾರ ಮಾಡುತ್ತಿದ್ದನೆಂದು ಮಹಾಕಾವ್ಯಗಳು ಮತ್ತು ಪುರಾಣಗಳು ಹೇಳುತ್ತವೆ. ಇತ್ತ ಪಾಂಡವರಿಗೂ ಮತ್ತು ಕೌರವರಿಗೂ ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುತ್ತದೆ. ಈ ಯುದ್ಧದಲ್ಲಿ ಕೃಷ್ಣನು ಪಾಂಡವರ ಪಕ್ಷವಹಿಸಿ ಜಯಗಳಿಸಿ ಕೊಡುವುದು, ಮತ್ತು ಯುದ್ಧದ ನಂತರ ಕೃಷ್ಣ ಪರಮಾತ್ಮನು ಇಹಲೋಕವನ್ನು ತ್ಯಜಿಸಿದಾಗ ಯಾದವರಲ್ಲಿ ಯಾದವ ಕಲಹ ಹೆಚ್ಚಾಗಿ ಅಧಿಕಾರ ಮತ್ತು ರಾಜ್ಯದ ಮೋಹದಿಂದ ಒಬ್ಬರಿಗೊಬ್ಬರು ಕಿತ್ತಾಡುತ್ತಾ ಇವರಲ್ಲಿ ಬಲಿಷ್ಟರಾದವರು ಉತ್ತರ ಭಾರತದಲ್ಲಿ ಇದ್ದು ಇತರರು ತಮ್ಮ ಪ್ರಾಣವನ್ನುಳಿಸಿಕೊಳ್ಳಲು ದಕ್ಷಿಣದ ಕಡೆ ವಲಸೆ ಬಂದು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆ ನಿಲ್ಲಲು ಪ್ರಾರಂಭಿಸಿದರು ಎಂಬುದಾಗಿ ಯಾದವರ ಅಥವಾ ಗೊಲ್ಲ ಸಮುದಾಯದ ಹುಟ್ಟಿನ ಬಗ್ಗೆ ಪುರಾಣಗಳು ಹೇಳುತ್ತವೆ.

(the divine heritage of yadavas) ಎಂಬ ಕೃತಿಯಲ್ಲಿ ಡಾ. ಖೇದ್‌ಕರ್‌ರವರು ಗೊಲ್ಲರು ಯಾರು? ಕೃಷ್ಣಯಾರು? ಮುಂತಾಗಿ ಗೀತೆ, ಭಾರತ ಮುಂತಾದ ಪುರಾಣಗಳಿಂದಲೂ ಐತಿಹಾಸಿಕ ಆಧಾರಗಳಿಂದಲೂ ಒಂದು ಪ್ರೌಢವಾದ ಖಚಿತವಾದ ವಾದಗಳೊಡನೆ ಪ್ರತಿಪಾದಿಸಿದ್ದಾರೆ. ಅವರು ದಕ್ಷಿಣದಲ್ಲಿದ್ದವರಿಗೆ "ಗೋಪ-ಯಾದವ" ಎಂದು ಹೆಸರಿಸಿದ್ದಾರೆ. ಬಹುಶಃ ಉತ್ತರದಲ್ಲಿದ್ದ ಕ್ಷತ್ರಿಯ ಯಾದವರು ಮಹಾಭಾರತದ ಯುದ್ಧದಲ್ಲಿ ತೊಡಗಿ ನಾಶವಾದರು. ಉಳಿದ ಗೋಪಾಲಕರು ತಮ್ಮ ದನಗಳಿಗೆ ಆಹಾರವಾಗಿದ್ದ ಪ್ರಕೃತಿಯು ಮುನಿಯುತ್ತಿದ್ದಂತೆ ಆಹಾರ ಹುಡುಕಿಕೊಂಡು ದಕ್ಷಿಣದ ಕಡೆಗೆ ಅರಸಿ ಬಂದರು. ತಮ್ಮ ದನಗಳ ಸಮೇತ ಉಳಿದ ಕೆಲವು ಯಾದವರು ಕಾರಣಾಂತರಗಳಿಂದ ಕರ್ನಾಟಕದ ಕಡೆ ಬಂದಿರಬಹುದೆಂದು ಅಧ್ಯಯನಗಳು ತಿಳಿಸುತ್ತವೆ.

ಪ್ರತಿಜಾತಿ, ಜನಾಂಗ ಮತ್ತು ಬುಡಕಟ್ಟುಗಳಲ್ಲಿರುವಂತೆ ರಾಜ್ಯದ ಗೊಲ್ಲ ಸಮುದಾಯದಲ್ಲಿ ಉಪವಿಭಾಗಗಳು ಅಥವಾ ಸ್ತರವಿನ್ಯಾಸವನ್ನು ಕಾಣಬಹುದು. ಪ್ರತಿಯೊಂದು ಜಾತಿ ಅಥವಾ ಉಪಜಾತಿಗಳ ಹುಟ್ಟು ಹಾಗೂ ಅನುಸರಿಸುತ್ತಿರುವ ಉದ್ಯೋಗಕ್ಕೆ ಅದರದೇ ಆದ ಕಥೆಯ ಹಿನ್ನಲೆಯಿದೆ. ಕರ್ನಾಟಕ ರಾಜ್ಯದ ಗೊಲ್ಲ ಸಮುದಾಯದವರು ಉದ್ಯೋಗ, ನೆಲೆ ಮತ್ತು ಬುಡಕಟ್ಟು ಲಕ್ಷಣಗಳ ಆಧಾರದ ಮೇಲೆ ಬೇರೆ ಬೇರೆ ಗುಂಪುಗಳಾಗಿ ಗುರುತಿಸಿಕೊಳ್ಳುತ್ತಾರೆ. ಕಾಡುಗೊಲ್ಲರು ಕರ್ನಾಟಕದ ಪ್ರಮುಖ ಬುಡಕಟ್ಟು ಸಮುದಾಯವಾಗಿದ್ದು, ಚಿತ್ರದುರ್ಗ, ತುಮಕೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇವರ ನೆಲೆಗಳು ಬಯಲು ಪ್ರದೇಶಗಳ ದಿಣ್ಣ, ಗುಡ್ಡಗಳಿಂದ ಕೂಡಿದ್ದು ಮುಖ್ಯ

ಹಳ್ಳಿಗಳಿಂದ ಬಹುದೂರವಿರುತ್ತವೆ. ಕಾಡುಗೊಲ್ಲ ಬುಡಕಟ್ಟಿನವರು ಇತರೆ ಜಾತಿ ಜನಾಂಗದವರಿಂದ ಸಂಪೂರ್ಣ ಪ್ರತ್ಯೇಕವಾಗಿದ್ದು ತಮ್ಮ ಬುಡಕಟ್ಟಿನ ಅಸ್ಮಿತೆ (identity)ಯನ್ನು ಉಳಿಸಿಕೊಂಡಿದ್ದಾರೆ. ಇವರು ವಾಸಿಸುವ ನೆಲೆಗಳಿಗೆ ಗೊಲ್ಲರ ಹಟ್ಟಿಗಳೆಂದು ಕರೆಯಲಾಗುತ್ತದೆ. ಯಾವುದೇ ಇತರ ಸಮುದಾಯಗಳ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡದ ಇವರ ವಾಸಸ್ಥಳಗಳು ಊರ ಸಂಸ್ಕೃತಿಯಿಂದ ಸದಾದೂರ. ಕಾಡುಗೊಲ್ಲರು ನೂರಕ್ಕೆ ನೂರರಷ್ಟು ಅನಕ್ಷರಸ್ಥರಾಗಿ ಹೊರ ಜಗತ್ತಿನ ಯಾವುದೇ ಅರಿವಿಲ್ಲದ ಅಪ್ಪಟ ಬುಡಕಟ್ಟು ಜನರಾಗಿದ್ದಾರೆ. ಗೊಲ್ಲರ ಹಟ್ಟಿಯಲ್ಲಿರುವ ಕಾಡುಗೊಲ್ಲರ ಜೀವನವೆಲ್ಲ ಬೇರೆ ಜಾತಿ ಹಾಗೂ ಇತರೆ ಬಗೆಯ ಗೊಲ್ಲ ಜನಾಂಗಕ್ಕಿಂತ ಭಿನ್ನವಾಗಿರುತ್ತದೆ. ಕುರುಚಲು ಕಾಡುಗಳ ಸಾಮಾನ್ಯ ಗುಡ್ಡ ಬೆಟ್ಟಗಳ ಹುಲ್ಲುಗಾವಲುಗಳೇ ಪ್ರಧಾನವಾದ ಇವರ ಪಶುಪಾಲನ ವೃತ್ತಿಗೆ ಪೂರಕವಾದದ್ದು ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ ಹಟ್ಟಿಗಳ ಸಂಸ್ಕೃತಿಯನ್ನು ಪೋಷಿಸುತ್ತಾ, ಯಾವ ಕಾರಣಕ್ಕೂ ಊರಿನ ರೂಪಗಳ ಜೊತೆ ಒಂದಾಗದ ಇವರಿಗೆ ಊರಿನ ಜನರು ಮೈಲಿಗೆಯವರು ಎಂದೇ ಕರೆಯುತ್ತಾರೆ. ಕಾಡುಗೊಲ್ಲರ ಮನೆಗಳು ನೂರಕ್ಕೆ ನೂರರಷ್ಟು ಹುಲ್ಲಿನ ಗುಡಿಸಲುಗಳಾಗಿವೆ. ಇವರ ಜೀವನವೆಲ್ಲಾ ನಗರ ಪಟ್ಟಣ ಮತ್ತು ಹಳ್ಳಿ ಜನರಿಗಿಂತ ದೂರ ಇವರು ಅತ್ಯಂತ ಹಿಂದುಳಿದ ಅಲೆಮಾರಿ ಬುಡಕಟ್ಟಿಗೆ ಸೇರಿದವರಾಗಿದ್ದು, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ.

ಊರುಗೊಲ್ಲರು ಹೆಸರೇ ಹೇಳುವಂತೆ ಊರುಗೊಲ್ಲರು ಊರಿನಲ್ಲಿ ವಾಸಿಸುವ ಗೊಲ್ಲ ಜನಾಂಗದ ಒಂದು ಮುಖ್ಯವಾದ ಪಂಗಡವಾಗಿದ್ದಾರೆ. ಇವರು ಎಲ್ಲಾ ಜಾತಿ ಜನಾಂಗದವರಂತೆ ಊರುಗಳಲ್ಲಿ ವಾಸಿಸುತ್ತಿದ್ದು ಇವರ ಆಚಾರ, ವಿಚಾರ, ಸಂಸ್ಕೃತಿ ಜೀವನಶೈಲಿ, ಜೀವನ ವಿಧಾನಗಳೆಲ್ಲವೂ ಮುಖ್ಯವಾಹಿನಿಯ ಸಮಾಜದಲ್ಲಿರುವ ಜಾತಿ–ಜನಾಂಗದವರಂತೆ ಇರುತ್ತವೆ. ಐತಿಹ್ಯಗಳ ಪ್ರಕಾರ ಉತ್ತರ ಭಾರತದಿಂದ ದಕ್ಷಿಣದ ಕಡೆಗೆ ಬಂದ ಗೊಲ್ಲ ಜನಾಂಗ ಕಾಲಾನಂತರ ಎರಡು ಗುಂಪುಗಳಾಗಿ ವಿಭಾಗವಾಗಿ ಕೆಲವರು ಕಾಡಿನಲ್ಲಿ ದನ ಮತ್ತು ಕುರಿಗಳನ್ನು ಮೇಯಿಸಲು ಪ್ರಾರಂಭಿಸಿದ್ದರಿಂದ ಅವರನ್ನು ಕಾಡುಗೊಲ್ಲರೆಂದೂ ಊರಿನಲ್ಲಿ ಕೆಲವರು ಉಳಿದುಕೊಂಡಿದ್ದರಿಂದ ಅವರು ಊರು ಗೊಲ್ಲರೆಂದು ಕರೆಯಲ್ಪಟ್ಟರು. ಆದರೆ ಈ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರದ ದೃಷ್ಟಿಕೋನದಿಂದ ನೋಡಿದರೆ ಕಾಡುಗೊಲ್ಲರಿಗೂ ಮತ್ತು ಊರುಗೊಲ್ಲರಿಗೂ, ಸಾಂಸ್ಕೃತಿಕ ಮತ್ತು ಜನಾಂಗಿಯ ಭಿನ್ನತೆಯನ್ನು ಕಾಣಬಹುದು. ಊರುಗೊಲ್ಲರನ್ನು ಕೃಷ್ಣಗೊಲ್ಲರೆಂದೂ ಮತ್ತು ಯಾದವರೆಂದೂ ಕರೆಯುವ ವಾಡಿಕೆಯಿದೆ. ಇವರೂ ಸಹ ಆರ್ಥಿಕವಾಗಿ ಹಿಂದುಳಿದ ಪಂಗಡವಾಗಿದ್ದು ಇವರಲ್ಲಿ ಬಹುತೇಕ ಮಂದಿ ಕೂಲಿ ಕಾರ್ಮಿಕರೂ ಮತ್ತು ವ್ಯವಸಾಯಗಾರರಾಗಿದ್ದಾರೆ.

ಹನುಮಗೊಲ್ಲರು ಗೊಲ್ಲ ಜನಾಂಗದ ಒಂದು ಪಂಗಡವಾಗಿದ್ದು ಆಂಜನೇಯ ದೇವರನ್ನು ಪೂಜಿಸುತ್ತಾರೆ. ಇವರು ಹನುಮಗೊಲ್ಲರೆಂದು ನಾಮಾಂಕಿತವನ್ನು ಇಟ್ಟುಕೊಂಡು ಊರ ಹೊರಗೆ ವಾಸಿಸುತ್ತಾ ಹಲವು ವೇಷ ಹಾಕಿಕೊಂಡು ಜೀವನ ನಡೆಸುತ್ತಾರೆ. ಹನುಮಗೊಲ್ಲರು, ಹಾವುಗೊಲ್ಲರಂತೆ ಹಾವುಗಳನ್ನು ಹಿಡಿದು ಹಾವಾಟ ಆಡಿಸುತ್ತಾರೆ. ಅಲ್ಲದೆ ಚಾಪೆ, ಬುಟ್ಟಿಗಳನ್ನು ಹೆಣೆಯುತ್ತಾ ತಮ್ಮ ಜೀವನ ಸಾಗಿಸುತ್ತಾರೆ. ಹಾವುಗೊಲ್ಲರು ಇವರು ಹಾವನ್ನು ಹಿಡಿದು ಅದರ ಚರ್ಮವನ್ನು ಸುಲಿದು ಮಾರಿ ಜೀವನ ಸಾಗಿಸುತ್ತಾರೆ. ಹವುಗೊಲ್ಲರು ಕೆಲವು ಕಡೆ ಹಾವನ್ನು ಪಳಗಿಸಿ ಊರಿಂದೂರಿಗೆ ತೆಗೆದುಕೊಂಡು ಹೋಗಿ ಕೊಳಲು ಅಥವಾ ಪಿಳ್ಳಂಗೋವಿ ಬಾರಿಸಿ ಹಾವು ಎಡೆ ಎತ್ತುವಂತೆ ಮಾಡಿ ಸಾರ್ವಜನಿಕರಲ್ಲಿ ಕುತೂಹಲ ಕೆರಳಿಸಿ ಭಿಕ್ಷೆ ಬೇಡಿ ಜೀವನ ನಿಭಾಯಿಸುತ್ತಾರೆ. ಇವರಲ್ಲಿ ಕೆಲವರು ಕಾಡಿನಲ್ಲಿ ದೊರೆಯುವ ಈಚಲು ಗರಿಯಿಂದ ಚಾಪೆ, ಪೊರಕೆ, ಬುಟ್ಟಿ, ಮತ್ತು ಇತರೆ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಾರೆ. ಭಜಂತ್ರಿಗೊಲ್ಲ ಅಥವಾ ಹಸುಗೊಲ್ಲ ಜನಾಂಗದವರಿಗೆ ಮನೆ ಮಠವೆಂಬುದಿಲ್ಲ ಪಿತ್ರಾರ್ಜಿತವಾಗಿ ಬಂದ ಹಸು ಅಥವಾ ಎತ್ತಿಗೆ ತರಬೇತಿ ನೀಡಿ ಮನೆಮನೆಗೆ ಮೆರವಣಿಗೆ ಮಾಡಿಕೊಂಡು ರಾಮಾಸೀತಾ ಕಲ್ಯಾಣದ ಆಟವನ್ನು ಆಡಿಸಿ ಜೀವನ ಮಾಡುವ ಗೊಲ್ಲರು ಇವರಾಗಿದ್ದಾರೆ. ಭಜಂತ್ರಿ ಗೊಲ್ಲರು ಹಸುವಿಗೆ ಮೈಮೇಲೆ ಬಟ್ಟೆ ಮತ್ತು ಕೊಂಬುಗಳಿಗೆ ಅಲಂಕಾರ ಮಾಡಿ ಊರಿಂದ ಊರಿಗೆ ಸಂಚರಿಸುತ್ತಾ ಹಾಡುಗಳನ್ನು ಹಾಡುತ್ತಾ ಹಸುಗಳಿಗೆ ರಾಮ–ಸೀತಾ ಪಾತ್ರವನ್ನು ಕೊಟ್ಟು ಆಟವಾಡಿಸುತ್ತಾ ಜನರಿಂದ ಬಟ್ಟೆ ಬರೆಗಳನ್ನು, ದವಸ–ಧಾನ್ಯಗಳನ್ನು ಪಡೆದು ಅಲೆಯುತ್ತಾ ಅಲೆಮರಿ ಜನಾಂಗದವರಾಗಿ ಜೀವಿಸುತ್ತಾರೆ.

ವೈದ್ಯಗೊಲ್ಲ ಇವರು ಮಾಡುತ್ತಿರುವ ವೃತ್ತಿಯಿಂದಾಗಿ ಇವರಿಗೆ ವೈದ್ಯ ಗೊಲ್ಲ ಎಂದು ಕರೆಯುತ್ತಾರೆ. ವೈದ್ಯಗೊಲ್ಲರು ಕಾಡು ಮೇಡುಗಳಲ್ಲಿ ವಾಸಿಸುತ್ತಾ ಅಲ್ಲಿ ಸಿಗುವ ಗಿಡಮೂಲಿಕೆಗಳನ್ನು (medical plant) ಉಪಯೋಗಿಸಿಕೊಂಡು ನಾಟಿ ಔಷಧ (ಜಾನಪದ) ತಯಾರು ಮಾಡುತ್ತಾರೆ. ಹೆಂಗಸರು ಮಕ್ಕಳಾದಿಯಾಗಿ ಊರಿನಿಂದ ಊರಿಗೆ ಹೋಗಿ ಕಾಯಿಲೆಗೆ ತಕ್ಕಂತಹ ಔಷಧಿಯನ್ನ ಕೊಟ್ಟು ಬಂದ ಹಣದಿಂದ ಜೀವನ ಮಾಡುತ್ತಾರೆ. ಬೇರೆ ಸಮುದಾಯದ ಜನರು ತಮ್ಮ ಜಾನುವಾರುಗಳಿಗೆ ಕಾಯಿಲೆ ಅಥವಾ ರೋಗ ರುಜಿನಗಳು ಬಂದಾಗ ವೈದ್ಯಗೊಲ್ಲರಿಂದ ಔಷಧಿಯನ್ನು ಕೊಡಿಸಿ ಅವರಿಗೆ ದವಸ ಮತ್ತು ಹಳೆ ಬಟ್ಟೆ ಕೊಡುವುದು ವಾಡಿಕೆಯಲ್ಲಿದೆ. ಗೊಲ್ಲರು ತಮ್ಮ ಮಗುವಿಗೆ ಐದು ಅಥವಾ ಎಂಟು ವರ್ಷಗಳಾದೊಡನೆ ಔಷಧಿಯ ಜಾಡು (ದಾರಿ) ಹಿಡಿದುಕೊಂಡು ಹೋಗುವಂತೆ ರೂಢಿ ಮಾಡಿಸುತ್ತಾರೆ. ಗೊಲ್ಲ ಜನಾಂಗದವರು ಮನುಷ್ಯ ಸಂಬಂಧಿತ ಕಾಯಿಲೆಗಳಿಗೆ ಮತ್ತು ಜಾನುವಾರುಗಳಿಗೆ ಔಷಧಿ ಕೊಟ್ಟು ಗ್ರಾಮೀಣ ಪ್ರದೇಶದಲ್ಲಿ ದೇಸಿ ಔಷಧಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಿದ್ದಾರೆ. ಇಂದಿಗೂ ನಾಟಿ ವೈದ್ಯ ಪದ್ಧತಿಗೆ ಗೊಲ್ಲ ಸಮುದಾಯದ ಕೊಡುಗೆ ಅಪಾರವಾದದು ಎಂದು ಹೇಳಿದರೆ

ಅತಿಶಯೋಕ್ತಿಯಾಗಲಾರದು ಆದರೆ ಇಂತಹ ಅಲಕ್ಷಿತ ಸಮುದಾಯ (neglected community) ದ ಸಾಮಾಜಿಕ ಆರ್ಥಿಕ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಇಡೀ ಔಷಧ ಪ್ರಪಂಚದ ಬಗ್ಗೆ ಜ್ಞಾನವುಳ್ಳಂತಹವರಿಗೆ ಅವರ ಜ್ಞಾನ ಪ್ರಸಾರದಿಂದ ಎರಡೊತ್ತು ಊಟವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ನಮ್ಮ ಸಮಾಜದ ಜವಾಬ್ದಾರಿಯನ್ನು ತೋರಿಸುತ್ತದೆ.

ಎಳವ ಗೊಲ್ಲರು ಕರ್ನಾಟಕದಲ್ಲಿ ಕಂಡು ಬರುವ ಗೊಲ್ಲ ಜನಾಂಗದ ಒಂದು ಪಂಗಡವಾಗಿದ್ದು, ಇವರು ಜೋಪಡಿಗಳಲ್ಲಿ ವಾಸ ಮಾಡುತ್ತಾ ಊರಿಂದ ಊರಿಗೆ ಅಲೆಯುತ್ತಾ ಭೀಕ್ಷಾಟನೆ ಮಾಡಿ ಜೀವನ ಸಾಗಿಸುತ್ತಾರೆ. ಇವರಲ್ಲಿ ಇರುವ ಒಂದು ಆಚರಣೆಯೆಂದರೆ ಮಹಿಳೆಯರಿಗೆ ವಿವಾಹವಾದರೆ ವಿವಾಹವಾದ ಮಹಿಳೆ ತಾನು ವಾಸವಾಗಿರುವ ಪ್ರದೇಶವನ್ನು ಬಿಟ್ಟು ಊರಿನಿಂದ ಊರಿಗೆ ಅಲೆಯುತ್ತಾ ಭಿಕ್ಷೆಯನ್ನು ಬೇಡಿ ಅದರಿಂದ ಬಂದ ಹಣದಿಂದ ಇವರೆ ಎಲ್ಲಾ ಜನಾಂಗದವರಿಗೆ ಊಟವನ್ನು ಬಡಿಸಬೇಕು. ದಾಸಗೊಲ್ಲರು ಅತ್ಯಂತ ಹಿಂದುಳಿದ ಸಮುದಾಯವಾಗಿದ್ದು, ಶ್ರೀಕೃಷ್ಣಪರಮಾತ್ಮನ ಕೀರ್ತನೆಗಳನ್ನು ಹಾಡಿಕೊಂಡು ತಂಬೂರಿ ಬಾರಿಸಿಕೊಂಡು ಭಿಕ್ಷೆ ಬೇಡಿ ಜೀವನ ನಡೆಸುತ್ತಾರೆ. ಮಹಿಳೆ ಪುರುಷರಾಧಿಯಾಗಿ ಹಣೆಗೆ ನಾಮ ಹಚ್ಚಿಕೊಂಡು ದಿನನಿತ್ಯ ಊರೂರು ಸುತ್ತಿ ಭಿಕ್ಷೆ ಬೇಡುತ್ತಾರೆ. ಮಗು ಹುಟ್ಟಿ ಮೂರು ವರ್ಷವಾಗುವುದೇ ತಡ ಕೈಲಿ ಒಂದು ತಟ್ಟೆ ಕೊಟ್ಟು ನಾಮ ಹಚ್ಚಿ ಭಿಕ್ಷೆಗೆ ಕಳುಹಿಸುತ್ತಾರೆ. ಇವರ ಅಮೂಲ್ಯ ಆಸ್ತಿ ಎಂದರೆ ತಂಬೂರಿ ಮತ್ತು ಸಾಮಾನು ಸಾಗಿಸಲು ಇರುವ ಒಂದೆರಡು ಕುದುರೆಗಳು. ದಾಸಗೊಲ್ಲರು ಸ್ವಭಾತಃ ಅಲೆಮಾರಿ ಜನಾಂಗವಾಗಿದ್ದು, ಇವರಿಗೆ ಹುಟ್ಟಿದ ಊರೆಂಬುದಿಲ್ಲ ನಿಂತ ಕಡೆಯೇ ಸ್ವಂತ ಊರು

ಪೆದ್ದಟ್ಟಿಗೊಲ್ಲರು ಅಥವಾ ಕಂಚಿಗೊಲ್ಲರು ಇವರು ಜದೂ, ಮಾಟ, ಮಂತ್ರ ಮತ್ತು ಕೈಚಳಕದಿಂದ ಹಾವು ಚೇಳು ಇತ್ಯಾದಿಗಳನ್ನು ಕೃತಕವಾಗಿ ರೂಪಿಸಿ ಜಾದು ಮಾಡಿ ಮಂತ್ರ ಶಕ್ತಿಯಿಂದ ಜನರನ್ನು ನಂಬಿಸಿ ಅಥವಾ ಹೆಸರಿಸಿ ಒತ್ತಾಯ ಪೂರ್ವಕವಾಗಿ ಜನರಿಂದ ಭಿಕ್ಷೆ ಪಡೆದು ಜೀವನ ನಡೆಸುತ್ತಾರೆ. ಎಂಬ ನಂಬಿಕೆಯಿದೆ. (nomadic) ಕಂಚಿಗೊಲ್ಲರು ಕನ್ನಡ ತೆಲುಗು ಮಾತನಾಡುತ್ತಾರೆ. ಇವರು ಊರಿನಿಂದ ಊರಿಗೆ ಅಲೆಯುವ ಅಲೆಮಾರಿ ಜನಾಂಗವಾಗಿದ್ದು, ಜೀವನ ನಿರ್ವಹಣೆಗಾಗಿ ಭಿಕ್ಷಾಟನೆಯನ್ನು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇತ್ತೀಚೆಗೆ ಹಲವಾರು ಕಾರಣಗಳಿಂದ ಇವರು ತಮ್ಮ ಸಾಂಪ್ರದಾಯಿ ಕಸುಬನ್ನು ಬಿಡುತ್ತಿದ್ದಾರೆ. ಈ ಮೇಲೆ ತಿಳಿಸಿದ ಗೊಲ್ಲ ಸಮುದಾಯದ ಪಂಗಡಗಳಲ್ಲಿ ಕಾಡುಗೊಲ್ಲ ಮತ್ತು ಊರುಗೊಲ್ಲರು ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದರೆ ಉಳಿದ ಪಂಗಡದವರು ಅಲ್ಪಸಂಖ್ಯಾತರಾಗಿದ್ದು, ಅತ್ಯಂತ ಹಿಂದುಳಿದ ಮತ್ತು ಅಲಕ್ಷಿತ ಸಮುದಾಯದವರಾಗಿದ್ದಾರೆ.

ಕರ್ನಾಟಕದ ಬಹುತೇಕ ಗೊಲ್ಲ ಜನಾಂಗದವರು ತಮ್ಮದೇ ಆದ ವಿಶಿಷ್ಟವೂ ಆದಂತಹ ನೆಲೆ ಅಥವಾ ವಸಾಹತುಗಳನ್ನು (Settlemeṇt) ನಿರ್ಮಿಸಿಕೊಂಡು ಮುಖ್ಯ ಹಳ್ಳಿಗಳಿಂದ ಬಹುದೂರ ವಾಸಿಸುತ್ತಾರೆ. ಇವರು ವಾಸಿಸುವ ಜಾಗಕ್ಕೆ ಅಥವಾ ಪ್ರದೇಶಕ್ಕೆ ಅಥವಾ ನೆಲೆಗೆ ಗೊಲ್ಲರಹಟ್ಟಿ, ಗೊಲ್ಲರ ದೊಡ್ಡಿ, ಗೊಲ್ಲರ ಕೇರಿ, ಗೊಲ್ಲರ ಓಣಿ ಗಳೆಂದು ಕರೆಯುತ್ತಾರೆ. ಗೊಲ್ಲ ಜನಾಂಗದ ನೆಲೆಗಳು ಭಾರತೀಯ ಸಮಾಜದ ಸಂದರ್ಭದಲ್ಲಿ ಮತ್ತು ಸಾಂಸ್ಕೃತಿಕವಾಗಿಯೂ ಅಸ್ಮಿತತೆಯನ್ನು ಪಡೆದುಕೊಂಡಿವೆ. ಗೊಲ್ಲರ ಹಟ್ಟಿಗಳು ಒಂದು ರೀತಿಯ ಪುಟ್ಟ ಗಣರಾಜ್ಯಗಳಂತಿರುತ್ತವೆ. (little republics) ಇವರು ವಾಸಿಸುವ ನೆಲೆಗಳು (settlemeṇt) ದಿಣ್ಣೆಗಳೋ ಅಥವಾ ನೀರು ನೆರಳು ಇಲ್ಲದ ಬಟ್ಟಂ ಬಯಲು ಪ್ರದೇಶಗಳೋ ಆಗಿರುತ್ತವೆ. ಈ ಹಟ್ಟಿಗಳು ಸರ್ಕಾರದ ದಾಖಲೆಯಲ್ಲಿ ಇರುವುದಿಲ್ಲ. ರಾಜ್ಯದ ಗೊಲ್ಲರ ನೆಲೆಗಳಿಗೆ ಯಾವುದೇ ರೀತಿಯ ರಸ್ತೆಯನ್ನು ಒಳಗೊಂಡಂತೆ ಮೂಲಸೌಕರ್ಯಗಳು ಇರುವುದಿಲ್ಲ. ಈ ಹಟ್ಟಿಗಳು ಡಾಂಬರು ರಸ್ತೆಯನ್ನೇ ಕಂಡಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಗೊಲ್ಲರ ಹಟ್ಟಿಗಳಲ್ಲಿರುವ ಬಹುತೇಕ ಮನೆಗಳು ಹುಲ್ಲಿನ ಗುಡಿಸಲುಗಳಾಗಿದ್ದು, ತೆಂಗಿನಗರಿ ಅಥವಾ ಅಂಜಿ ಹುಲ್ಲಿನಿಂದ ಕಟ್ಟಲ್ಪಟ್ಟಿರುತ್ತದೆ. ತಮ್ಮ ಗುಡಿಸಲುಗಳ ಪಕ್ಕದಲ್ಲಿಯೇ ಕುರಿ ಮತ್ತು ದನದ ರೊಪ್ಪ (ನೆಲೆಗಳನ್ನು ನಿರ್ಮಿಸಿ ಕೊಂಡಿರುತ್ತಾರೆ.)

ಒಟ್ಟಾರೆ ಹೇಳುವುದಾದರೆ ಕರ್ನಾಟಕದಲ್ಲಿ ಗೊಲ್ಲ ಜನಾಂಗದವರು ಇಂದಿಗೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂದಿಗೂ ಮೂಲಸೌಕರ್ಯಗಳಿಂದ ವಂಚಿತರಾಗಿ ಈಗಲೂ ಬೆಟ್ಟಗುಡ್ಡಗಳಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಸಾಂಪ್ರದಾಯಿಕ ಕಸಬು ಪಶುಪಾಲನೆಯನ್ನು ಜೊತೆಗೆ ಕುರಿ ಸಾಕಣೆಯನ್ನು ತಮ್ಮ ಪ್ರಧಾನ ಸಾಂಪ್ರದಯಿಕ ಕಸುಬನ್ನಾಗಿಸಿ ಕೊಂಡಿದ್ದಾರೆ.

ದನ, ಕರುಗಳನ್ನು ಸಾಕಿ ಅವುಗಳ ಹಾಲು, ಮೊಸರು ತುಪ್ಪವನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಗೊಲ್ಲ ಜನಾಂಗದ ಪ್ರತಿಯೊಬ್ಬ ಕುಟುಂಬಸ್ಥನೂ ಕುಲಕಸುಬಾಗಿ ಸಾಂಕೇತಿಕವಾಗಿಯಾದರೂ ಒಂದೆರಡು ಎತ್ತುಗಳು ಮತ್ತು ಹಸುಗಳನ್ನು ಸಾಕುವುದನ್ನು ನಾವು ಕಾಣಬಹುದು. ಇವುಗಳಿಂದ ಆದಾಯ ಮತ್ತು ಸೇವೆಯನ್ನು ನಿರೀಕ್ಷಿಸದಿದ್ದರೂ ತಮ್ಮ ಕುಲದ ಸಂಕೇತವಾಗಿ ಮತ್ತು ಬುಡಕಟ್ಟಿನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಲು ಅವರಿಗರಿವಿಲ್ಲದಂತೆಯೇ ಹಸು ಮತ್ತು ಎತ್ತುಗಳನ್ನು ಪಾಲನೆ ಪೋಷಣೆ ಮಾಡಿಕೊಂಡು ಬರುತ್ತಿದ್ದಾರೆ. ಸಾಮಾನ್ಯವಾಗಿ ಇವರಿಗೆ ದನಕರುಗಳ ಬಗ್ಗೆ ಎಷ್ಟು ಕಾಳಜಿ ಮತ್ತು ಪ್ರೀತಿ ಇರುತ್ತದೆ ಎಂದರೆ ಇವರಿಗೆ ತಿನ್ನಲು ಊಟವಿಲ್ಲದಿದ್ದರೂ, ದನಕರುಗಳಿಗೆ ಹೊಟ್ಟೆ ತುಂಬ ಮೇವನ್ನು ಕೊಟ್ಟು ತಾವು ಉಪವಾಸ ಮಲಗುತ್ತಾರೆ. ಇಂತಹ ಸಂದರ್ಭವನ್ನು ಬರಗಾಲದ ಸಮಯದಲ್ಲಿ ನೋಡಬಹುದು. ಕ್ಷಾಮಾ ತಲೆದೋರಿದಾಗ

ಜನರು ಮನೆಗೊಬ್ಬರಂತೆ ತಂತಮ್ಮ ರಾಸುಗಳೊಂದಿಗೆ ಬೇರೆ ಹುಲ್ಲುಗಾವಲುಗಳಿರುವ ಪ್ರದೇಶಗಳಿಗೆ ವಲಸೆ ಹೋಗಿ ತಮ್ಮ ದನಕರುಗಳನ್ನು ಸಲಹಿಕೊಂಡು ಬರುತ್ತಾರೆ. ಇಂತಹ ಸನ್ನಿವೇಶವನ್ನು ನಾವು ಜುಂಜಪ್ಪ ಮತ್ತು ಎತ್ತಪ್ಪ ಕಾವ್ಯಗಳಲ್ಲಿ ನೋಡಬಹುದು.

ಇತ್ತಿಚೆಗೆ ಕಾಡುಗಳ ನಾಶ (ಗೋಮಾಳಗಳ)ಮತ್ತು ಕೃಷಿ ಚಟುವಟಿಕೆಗಳಿಂದಾಗಿ ಕುರಿ ಸಾಕಣೆ ತುಂಬ ಕಷ್ಟದಾಯಕವಾಗಿ ಕಾಣುತ್ತದೆ. ಕ್ರಮೇಣವಾಗಿ ಕುರಿ ಸಾಕುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಜೊತೆಗೆ ನಗರೀಕರಣ ಕೈಗಾರಿಕೀಕರಣ ಮತ್ತು ಶಿಕ್ಷಣದಿಂದಾಗಿ ಜನಾಂಗದ ಯುವಕರು ಇತ್ತೀಚೆಗೆ ಆಧುನಿಕ ಕಸುಬಿನ ಕಡೆವಾಲುತ್ತಿದ್ದಾರೆ, ಇದಕ್ಕೆ ಮುಖ್ಯ ಕಾರಣಗಳೆಂದರೆ ಕುರಿಸಾಕಣೆ ಕಷ್ಟದ ಕೆಲಸ ಮತ್ತು ಕಳಂಕಿತಕೆಲಸ ವಲ್ಲದಿದ್ದರೂ ಪ್ರತಿಷ್ಠೆ (prestige) ದೃಷ್ಠಿಯಿಂದ ಕೆಲಮಟ್ಟದ ಉದ್ಯೋಗವಾದ್ದರಿಂದ ಸಮಾಜದ ಸ್ತರದಲ್ಲಿ ಎನ್ನತ ಸ್ಥಾನ ಪಡೆಯಲು ಅಷ್ಟೇನು ಲಾಭದಾಯಕವಲ್ಲದ ಆದರೆ ವೃತ್ತಿ ಘನತೆಯ (occupational prestige) ದೃಷ್ಟಿಯಿಂದ ಪ್ರತಿಷ್ಠಿತವಾದುದು ಎಂದು ನಿರ್ಧರಿಸಲ್ಪಟ್ಟಿರುವ 'ಕೃಷಿ' ಕೆಲಸದಲ್ಲಿ ತೊಡಗಲು ಪ್ರಾರಂಭಿಸಿದ್ದಾರೆ. ಇದಕ್ಕೆ ಪೂರಕವಾಗಿ ಸಾಮಾಜಿಕ ಸ್ತರದಲ್ಲಿ ಮೇಲೇರಲು ಹೊಸ ಸಾಮಾಜಿಕ ಪರಿಸರವನ್ನು ಹೊಂದಲು ಮತ್ತು ತಮ್ಮ ರೀತಿ ನೀತಿ, ಪದ್ದತಿ, ರೂಢಿ, ವೇಷ-ಭೂಷಣ ಆಚರಣೆ, ಊಟೋಪಚಾರಗಳಲ್ಲಿ ಬದಲಾವಣೆ ತಂದುಕೊಳ್ಳಲು ಪ್ರಾರಂಭಿಸಿದ್ದರಿಂದ ಸಾಂಪ್ರದಾಯಿಕ ಉದ್ಯೋಗವಾದ ಕುರಿ ಸಾಕಣೆ ಮತ್ತು ಪಶುಪಾಲನೆ ಕ್ರಮೇಣ ಈ ಜನಾಂಗದಲ್ಲಿ ಕಡಿಮೆಯಾಗುತ್ತಿದೆ. ಇನ್ನು ಗೊಲ್ಲ ಜನಾಂಗ ವ್ಯವಸಾಯದಲ್ಲಿ ತುಂಬ ಹಿಂದುಳಿದವರಾಗಿದ್ದಾರೆ. ಇವರಲ್ಲಿ ಜಮೀನು ಇರುವವರು ತುಂಬ ಕಡಿಮೆ. ಇದ್ದರೂ ಸಣ್ಣ ಪ್ರಮಾಣದ ಇಡುವಳಿದಾರ ರಾಗಿರುತ್ತಾರೆ. ಅಂದರೆ ಇವರಲ್ಲಿ ಸಣ್ಣ ರೈತರು ಮತ್ತು ಅತೀ ಸಣ್ಣ ರೈತರೂ ಹಾಗೂ ಕೃಷಿ ಕಾರ್ಮಿಕರೇ ಹೆಚ್ಚು. ಭೂ ಒಡೆಯರು ಈ ಜನಾಂಗದಲ್ಲಿ ಇಲ್ಲವೇ ಇಲ್ಲ. ರಾಜ್ಯದ ೩ನೇ ಹಿಂದುಳಿದ ವರ್ಗವು ರಾಜ್ಯದೆಲ್ಲೆಡೆ ೯೦ ತಾಲ್ಲೂಕುಗಳಲ್ಲಿ ನಡೆಸಿದ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಗೊಲ್ಲ ಜನಾಂಗವು ಅತ್ಯಂತ ಹೆಚ್ಚಿನ ಭೂ ರಹಿತ (landle) ಮತ್ತು ಜಾಗರಹಿತ (siteless) ಜನಾಂಗಗಳಲ್ಲಿ ಒಂದಾದ ಜನಾಂಗವಾಗಿದೆ ಎಂಬುದಾಗಿ ತಿಳಿಸಿದೆ. ಒಂದು ವೇಳೆ ಅಲ್ಲಲ್ಲಿ ಒಬ್ಬೊಬ್ಬರಿಗೆ ಸ್ವಲ್ಪ ಪ್ರಮಾಣದ ಜಮೀನಿದ್ದರೆ ಆ ಜಮೀನು ದಿಣ್ಣೆಯೋ, ಜೌಗು ಪ್ರದೇಶವೋ ಅಥವಾ ನೀರಾವರಿಗೆ ಸಮರ್ಪಕವಲ್ಲದ ಬಂಜರು ಭೂಮಿಯೋ ಮತ್ತು ಕೃಷಿಗೆ ಯೋಗವಲ್ಲದ (non cultivable) ಭೂಮಿಯಾಗಿರುತ್ತದೆ. ಸಾಮಾನ್ಯವಾಗಿ ಇವರ ಜಮೀನುಗಳು ಬಯಲು ಪ್ರದೇಶಗಳಲ್ಲಿರುತ್ತವೆ. ಕಾರಣವೆಂದರೆ ತಮ್ಮ ಕುರಿ ದನಗಳನ್ನು ಮೇಯಿಸಲು ಯೋಗ್ಯವಾದ ಪ್ರದೇಶವಾದ ಬಯಲು ಪ್ರದೇಶಗಳಲ್ಲಿ ನೆಲೆಯೂರಿರುತ್ತಾರೆ. ಇವರಲ್ಲಿ ಕೃಷಿ ಕಾರ್ಮಿಕರ ಸ್ಥಿತಿಗತಿ ತುಂಬಾ ನಿಕೃಷ್ಟವಾದುದಾಗಿದೆ. ಇತ್ತೀಚೆಗೆ ಕೃಷಿ ಚಟುವಟಿಕೆಗಳಿಗೆ ಆಧುನಿಕ

ತಂತ್ರಜ್ಞಾನವನ್ನು ಬಳಸಲು ಪ್ರಾರಂಭಿಸಿದ್ದರಿಂದ ಇವರಿಗೆ ಕೃಷಿ ಜಮೀನಿನಲ್ಲಿ ಕೂಲಿ ಕೆಲಸ ಸಿಗದಂತಾಗಿದೆ. ಇವರಲ್ಲಿ ಕೆಲವರು ಮಕ್ಕಳಾದಿಯಾಗಿ ಪ್ರಬಲ ಜಾತಿಗಳ ಜಮೀನಿನಲ್ಲಿ ಮತ್ತು ಮನೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ಇನ್ನೂ ಇವರಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ಸ್ಥಿತಿ ಹೇಳತೀರದಾಗಿದೆ

ಕರ್ನಾಟಕದ ಪಶುಸಂಗೋಪನ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗ ಗಳೆಂದರೆ ಗೊಲ್ಲರು ಮತ್ತು ಕುರುಬರು ಗೊಲ್ಲರಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರೆಂಬ ಎರಡು ಪ್ರಮುಖ ಪ್ರಭೇದಗಳಿವೆ. ಕುರುಬರಲ್ಲಿಯೂ ಈ ಪ್ರಭೇದಗಳಿವೆ. ಊರುಗಳ ನಿರ್ಮಾಣ ಹಂತದಲ್ಲಿಯೇ ಊರು ಸೇರಿರಬಹುದಾದ ಅಥವಾ ಕ್ರಮೇಣ ಊರುಗಳ ಆಕರ್ಷಣೆಗೆ ಒಳಗಾಗಿ ಒಂದು ಕಡೆ ನೆಲೆ ನಿಂತಿರಬಹುದಾದ ಈ ಊರುಗೊಲ್ಲರು ಮತ್ತು ಊರು ಕುರುಬರು ಈಗಲೂ ಪಶುಸಂಗೋಪನಾ ವೃತ್ತಿಯನ್ನೇ ಅವಲಂಭಿಸಿದ್ದಾರಾದರೂ ಬೇಸಾಯ ದಲ್ಲಿಯೂ ಹಿಂದೆ ಬಿದ್ದಿಲ್ಲ. ಹಾಗೆಯೇ ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ ಕೂಡ. ಹೀಗಾಗಿ ಇವರಲ್ಲಿನ ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಕಾಡುಕುರುಬರು ಮತ್ತು ಕಾಡುಗೊಲ್ಲರ ಜೀವನ ವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾದುದೇ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳು ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡು ಬರುವ ಈ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂ ಪ್ರದೇಶಗಳು ಕೂಡ ಅಷ್ಟೇ ವಿಶಿಷ್ಟವಾಗಿದೆ. ಕುರುಚಲು ಕಾಡುಗಳ ಸಾಮಾನ್ಯ ಗುಡ್ಡ ಬೆಟ್ಟಗಳ ಹುಲ್ಲುಗಾವಲುಗಳೇ ಪ್ರದಾನವಾದ ಈ ಪ್ರದೇಶ ಹಟ್ಟಿಗಳ ಸಂಸ್ಕೃತಿಯನ್ನು ಪೋಷಿಸುತ್ತಾ, ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ ಹಟ್ಟಿಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ. ಈ ಕಾವ್ಯದಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ಒಂದು ಕಡೆ ಈ ಗೊಲ್ಲರನ್ನು ಸಹಿಸದ ಬೇಟೆಗಾರ ಸಮೂಹ ಮತ್ತೊಂದು ಕಡೆ ಇವರ ಹುಲ್ಲುಗಾವಲುಗಳನ್ನು ಕ್ರಮೇಣ ಬೇಸಾಯ ಭೂಮಿಯಾಗಿ ಪರಿವರ್ತಿಸುತ್ತಾ ಬಂದ ಕೃಷಿ ವರ್ಗಗಳು ಇವರ ನಡುವೆ ತಮ್ಮ ಅಸ್ತಿತ್ವಕ್ಕಾಗಿ ಪರದಾಡುವಂತೆ ಕಂಡು ಬರುವುದು ಒಂದು ಅಂಶವಾದರೆ ತಮ್ಮದೇ ಕುಲದ ಇತರೆ ಬೆಡಗುಗಳ ಅಸೂಯೆಯನ್ನು ಗೆಲ್ಲುವುದು ಮತ್ತೊಂದು ಅಂಶ,

ಮಾರನವರ ಗೊಲ್ಲರ ದನಗಳು ಬೆಳೆದು ಹೆಚ್ಚಾಗುವುದನ್ನು ಕಂಬೇರ ಗೊಲ್ಲರು ಸಹಿಸುವುದಿಲ್ಲ. ಜುಂಜಪ್ಪನಿಗೂ ಜುಂಜಪ್ಪನ ಸೋದರ ಮಾವಂದಿರಗೂ ಸದಾ ನಡೆಯುವ ಹೋರಾಟ ಇಂಥದ್ದೇ.

ಜುಂಜಪ್ಪನ ಕಾವ್ಯ ಈ ಎರಡು ಪಾತಳಿಗಳಲ್ಲಿ ಹರಿಯುತ್ತಾ ಹೋಗುತ್ತದೆ. ಕೇವಲ ದನಗಳನ್ನು ನಂಬಿಕೊಂಡು, ಅವುಗಳನ್ನು ಮೇಯಿಸುವ ಕಾಯಕಕ್ಕಾಗಿ ಕಾಡು ಮೇಡು ಅಲೆಯುವ ಅಲೆಮಾರಿ ಜನವರ್ಗವೊಂದರ ಅಂತಂತ್ರಸ್ಥಿತಿಯ ಪ್ರತೀಕವಾಗಿ ಜುಂಜಪ್ಪ ಕಾಣಿಸಿಕೊಳ್ಳುತ್ತಾನೆ. ಅನೇಕ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುವ ಜುಂಜಪ್ಪನ ಅನಾಥತೆ ಕಾಡಿನ ಮಕ್ಕಳ ಕಡುಬಡತನವನ್ನು ನಿವೇದಿಸುತ್ತದೆ. ಮದುವೆಯಾದರೂ ಹೆಂಡತಿಯೊಡನೆ ಕೂಡಿ ಬಾಳಲಾಗದ ಜುಂಜಪ್ಪನ ತಾತ ದೇವರ ದೈಮಾರನ ಸ್ಥಿತಿ ಈ ಅಲೆಮಾರಿಗಳ ಸುಖವಿಲ್ಲದ ಬದುಕನ್ನು ಚಿತ್ರಿಸುತ್ತದೆ. ಬಹುಶಃ ಈ ಸ್ಥಿತಿಯೇ ಹೆಣ್ಣು ಮಕ್ಕಳನ್ನು ಅನುಮಾನಿಸುವ ಮಾನಸಿಕ ಕ್ಲೇಶಕ್ಕೂ ಒಳಗು ಮಾಡುತ್ತಿದೆ. ತನ್ನ ತಂದೆಯ ಅನುಪಸ್ಥಿತಿಯಲ್ಲಿ ಮಕ್ಕಳನ್ನು ಹೆತ್ತ ಜುಂಜಪ್ಪನ ತಾಯಿಯನ್ನು ಸ್ವತಃ ಜುಂಜಪ್ಪನೇ ಅನುಮಾನಿಸಿ ಹಲವು ಪರೀಕ್ಷೆಗಳಿಗೆ ಒಡ್ಡುತ್ತಾನೆ. ಹೆರಿಗೆಯಾದ ಹೆಣ್ಣು ಮಗಳು ಮೂರು ತಿಂಗಳ ಕಾಲ ಪ್ರತ್ಯೇಕವಾಗಿ ಒಂಟಿ ಗುಡಿಸಲಲ್ಲಿ ಬಾಳಬೇಕಾದ ಧಾರುಣ ಸ್ಥಿತಿ ಕಾಡುಗೊಲ್ಲರಲ್ಲಿ ಇಂದಿಗೂ ರೂಢಿಯಲ್ಲಿದೆ.

ಈ ಕಾವ್ಯದ ಮತ್ತೊಂದು ಪ್ರಮುಖ ಅಂಶವೆಂದರೆ ಅವರು ತಮ್ಮ ದನಕರುಗಳಿಗೆ ನೀಡುವ ಪ್ರಾಧಾನ್ಯತೆ. ದನಗಳೇ ಅವರ ಸರ್ವಸ್ವ, ಅವೇ ಅವರ ಮೂಲ ದೈವಗಳು, ನೂರಾರು ರಾಸುಗಳನ್ನು ನೂರಾರು ಹೆಸರುಗಳಲ್ಲಿ ಗುರುತಿಸಿ ತಮ್ಮ 'ಗಣೆ' ಊದಿ ಕರೆಯುವ ಪರಿಯಂತೂ ಮೋಹಕವಾದದ್ದು, ಜುಂಜಪ್ಪನ ಕಾವ್ಯದ ಬಹು ಭಾಗವನ್ನು ಆಕ್ರಮಿಸಿಕೊಂಡಿರುವ ಜುಂಜಪ್ಪನ ನೆಚ್ಚಿನ ಹೋರಿ 'ಬಡಮೈಲ' ಕಾಡುಗೊಲ್ಲರು ತಮ್ಮ ದನಗಳಲ್ಲಿ ಇದ್ದ ನಂಬಿಕೆಗೆ ಪ್ರೀತಿಗೆ ಒಂದು ಪ್ರತೀಕ. ಕಷ್ಟಗಳಿಂದ ಪೊರೆಯಬಲ್ಲ ಗೊಲ್ಲನ ಅನುಪಸ್ಥಿತಿಯಲ್ಲೂ ಇತರೆ ದನಗಳ ಹಿಂಡನ್ನು ನಿಯಂತ್ರಿಸಬಲ್ಲ ಈ ಬಡಮೈಲ ಅನೀತಿಯವರಿಗೆ ಅಸೂಯೆಯವರೆಗೆ ಕುತಂತ್ರಿಗಳಿಗೆ ಸಿಂಹ ಸ್ವಪ್ನ. ಹೋರಿಯ ರೂಪದ ಈ ಪ್ರತಿಮೆ ಜುಂಜಪ್ಪ ಆತ್ಮವಿಶ್ವಾಸ ಮತ್ತೊಂದು ರೂಪ. ಕಡೆಗಣಿಸಿ ಬಿಸಾಡಿದ ಹಸುವಿನ ಕರುವೊಂದನ್ನು ಅಸಾಮಾನ್ಯವಾಗಿ ಬೆಳೆಸಿ ವೈರಿಗಳ ಹುಟ್ಟಡಗಿಸುವ ಜುಂಜಪ್ಪನ ಛಲವಾಗಲೀ ಇಷ್ಟಾಗಿಯೂ ಅದನ್ನು 'ಬಡಮೈಲ' ಎಂದೇ ಕರೆಯುವ ಧ್ವನಿಯಾಗಲೀ ಈ ಕಾವ್ಯದ ಒಂದು ಪರಾಕ್ರಮಿಯಾದರೂ ಒಬ್ಬ ಬಡವ ಎನ್ನುವ ಮತು ಸುಳ್ಳಲ್ಲ. ಅವನು ಅನೇಕ ಹುಲ್ಲುಗಾವಲುಗಳನ್ನು ಗೆಲ್ಲುತ್ತಾನೆ ಚೇಳೂರು ದೊರೆಗಳನ್ನು ಗೆಲ್ಲುತ್ತಾನೆ. ಶ್ರೀಮಂತರಾದ ತನ್ನ ಸೋದರ ಮಾವಂದಿರ ಕುತಂತ್ರವನ್ನು ಬಯಲು ಮಾಡುತ್ತಾನೆ. ಇಷ್ಟೆಲ್ಲದರ ನಡುವೆಯೂ ಅವನೊಬ್ಬ ಅನಾಥನಂತೆಯೇ ಗೋಚರಿಸುತ್ತಾನೆ.

ಆದರೆ ಅವನ ಛಲ ಆತ್ಮವಿಶ್ವಾಸ ಹಾಗೂ ತಾಳ್ಮೆ ಹಾಗೂ ವೃತ್ತಿಯಲ್ಲಿನ ಪ್ರಾಮಾಣಿಕತೆ ಅವನನ್ನು ನಾಯಕನನ್ನಾಗಿಸಿದೆ. ಕಾಡುಗೊಲ್ಲರು ತಮ್ಮನ್ನು ಜುಂಜಪ್ಪನ ಜೊತೆಗೆ ಸಮೀಕರಿಸಿಕೊಳ್ಳುತ್ತಾರೆ. ಆದ್ದರಿಂದಲೇ ಅವನೊಬ್ಬ ಸಾಂಸ್ಕೃತಿಕ ವೀರನಾಗಿ ನಮ್ಮ ಮುಂದಿದ್ದಾನೆ.

೫.೧ ಜುಂಜಪ್ಪನ ಕಾವ್ಯದಲ್ಲಿ ಹಸಿವಿನ ಕಥನ

ಮಧ್ಯ ಕರ್ನಾಟಕದಲ್ಲಿ ಮಾತ್ರ ವಿಶಿಷ್ಟ ವಿಭಿನ್ನ ಬಗೆಯ ಕರ್ನಾಟಕದ ಬೇರೆಲ್ಲೂ ಕಾಣಸಿಗದ ಪಶುಪಾಲಕ ಪರಂಪರೆಯ ಬಗ್ಗೆ ಅಸಂಖ್ಯ ಖಂಡ ಕಾವ್ಯಗಳೊಂದಿಗೆ, ಕಾಡುಗೊಲ್ಲ ಬುಡಕಟ್ಟಿಗೆ ಸೇರಿದ ಎತ್ತಪ್ಪ ಮತ್ತು ಜುಂಜಪ್ಪ ಎಂಬ ಎರಡು ಜನಪದ ಮಹಾಕಾವ್ಯಗಳು ಸಿಗುತ್ತವೆ. ಹಲವು ರಾತ್ರಿಗಳವರೆಗೂ ಹರಿಯುವ ವಿಸ್ತೀರ್ಣವುಳ್ಳ ಈ ಕಾವ್ಯಗಳು ಅಲೆಮಾರಿ ಬದುಕಿನ ಪಶುಪಾಲಕ ಸಂಸ್ಕೃತಿಯ ಏಳುಬೀಳುಗಳ ಹಸಿವು ಬಡತನದ ಚಿತ್ರಣವನ್ನು ಒಳಗೊಂಡಿವೆ. ಜೊತೆಗೆ ಆ ಜನಾಂಗದ ಸಾಂಸ್ಕೃತಿಕ ಕೋಶಗಳೂ ಆಗಿವೆ. ಕಾಡುಗೊಲ್ಲರ ಸಂಸ್ಕೃತಿಯ ಅಪ್ಪಟ ರೂಪವಾಗಿ ಅನಾವರಣಗೊಳ್ಳುವ ಜುಂಜಪ್ಪನ ಕಥೆಯಲ್ಲಿ ತೆರೆದುಕೊಳ್ಳುವ ಹಸಿವು, ಬಡತನ ಸ್ತ್ರೀ ಸಂಕಟಗಳು ಗ್ರಾಮೀಣ ಭಾರತದ ಇಂದಿನ ಸ್ಥಿತಿಗತಿಗೆ ಹಿಡಿದ ಕೈಗನ್ನಡಿಯಾಗಿದೆ. ಜುಂಜಪ್ಪನ ಸಾಕ್ಷಿ ಪ್ರಜ್ಞೆಯ ನೆಲೆಯಲ್ಲಿ ಬಯಲು ಗೊಳ್ಳುವ ಹಸಿವಿನ ಧಾರುಣ್ಯತೆ ಜುಂಜಪ್ಪನ ಕಾವ್ಯ ಪ್ರಾರಂಭದಲ್ಲಿ 'ಗೊಲ್ಲರ ಕುಲದ ಹುಟ್ಟಿನ ಸಂದು' ಎಂಬ ಭಾಗದಲ್ಲಿ ಬರುವ ಸಾತಮ್ಮನ ಸಂಕಟಗಳೊಂದಿಗೆ ತೆರೆದುಕೊಳ್ಳುವ ಕಾವ್ಯ ಹೀಗೆ ಶುರುವಾಗುತ್ತದೆ. ಗಂಡನ ಮುಖಪರಿಚಯ ತಿಳಿಯದ ಸಾತಮ್ಮನ ಮದುವೆ ಕಬ್ಬಿಣದ ಬಾಕುವಿನ ಜೊತೆ ನಡೆದಿರುತ್ತದೆ. ಗಂಡನ ಮನೆಯಲ್ಲಿ ಉಳಿದ ಮಾವಂದಿರುಗಳ ಸೇವೆ ಮಾಡುವ ಸ್ಥಿತಿ ಬಂದೊದಗಿಬಿಟ್ಟಿರುತ್ತೆ.

"ಬೆಳಿಗ್ಗೆ ಎದ್ದು ಕಸ ಮುಸುರೆ ಬಾಚಬೇಕಾಯ್ತುಮ್ಮ
ಆ ಮೇಲೆ ನೆಲವಲೆ ಸಾರಿಸಿ ಗುಡಿಸಿ
ಇವುರಿಗೂ ನೀರ ಕಾಸಿ ಸ್ನಾನಮಾಡಿಸಿ
ಮಾಡಿ ಬಟ್ಟೆಗಳ ಕೊಟ್ಟು
ಅಡಿಗೆ ಮಾಡಿ ಊಟಕ್ಕಿಟ್ಟು ಲೇಪುದಿಂಬಾಕಬೇಕು
ವಾರುಗಿತ್ತಿಯರಿಗು ಮಾವುಗಳ್ಗಿ
ಲೇಪುದಿಂಬುಗಳಾಕಿದರೆ ಅವುರವುರು
ಗಂಡ ಹೆಂಡತಿಗಳೆಲ್ಲ ಜತೆಯಲ್ಲಿ ಮುನಿಗಿದ್ದಾಗ
ಈಯಮ್ಮ ಅವರಿಗೆ ತಾಂಬೂಲ ಕೊಟ್ಟು
ನಿದ್ರೆ ಬರವರಿಗೂ ವಾರುಗಿತ್ತಿಯರಿಗು ಮಾವುಗಳಿಗೂ

ಕಾಲುಗಳಿಗಿಸಕಬೇಕಣ್ಣ ಗಳಿಗಾಗೋ ॥
ವಾರುಗಿತ್ತಿಯರ ಹಾಗೂ ಮಾವುಗಳ ಸೇವೆಯಲ್ಲಿ ಸಾತಮ್ಮ
ಸೊರಗಿ ಬಾಡಿ ಬಸವಳಿದಳು.
ಇಂತಹ ಸಂದರ್ಭದಲ್ಲಿ ತನ್ನ ಮಾವನಿಗೆ ಈ ರೀತಿಯಾಗಿ ಬೇಡಿಕೊಳ್ಳುತ್ತಾಳೆ.
ಮಾವ ನನ್ನ ಗಂಡನಿಗೆ ಸ್ವಲ್ಪ ಊಟ ತಂಗಡೋಗಿ
ಬುತ್ತಿ ಇಟ್ಟು ಬತ್ತೀನಿ
ಸರಿ ನನ್ನ ಗಂಡ ಇರೋ ಜಾಗ ತೋರಿಸಿರಿ
ಅಂತ ಕೇಳಿದ್ಲು ಸಾತಮ್ಮ
ಇವನೇನು ಮಾಡ್ದ
ಹಿರೇಮಾವ ಪಟ್ಟೆದಟ್ಟೇನು
ಇವಳ ಗಂಡಿರೋ ಜಾಗ ತೋರಿಸಿಕೊಟ್ಟರೆ
ದಿನಾ ಹೋಗಾದು ಬರಾದೇ ಸರಿಯಾಗ್ತತೆ
ಈ ಕೆಲಸ ಎಲ್ಲಾ
ನಮ್ಮ ಹೆಂಡ್ತೇರು ಮಾಡಬೇಕಾಗುತ್ತೆ
ಗಂಡ ಇರೋ ಜಾಗ ತೋರಸಬಾರ್ದು ಇವ್ಳಿಗೆ ಅಂತೇಳ್ಬಿಟ್ಟು
ಏನಮ್ಮಾ
ನಿನ್ನ ಗಂಡ ಇರೋ ಜಾಗಕ್ಕೆ
ಹೋಗಾಕ್ಕೆ ನಿನ್ನ ಕೈಲಿ ಸಾಧ್ಯವಿಲ್ಲ
ವಿಪರೀತ ಹುಲಿ ಕರಡಿಗಳು ಸಾರಂಗ
ಘೋರ ಅರಣ್ಯದಲ್ಲಿ ನಿನ್ನ ಗಂಡ ಇರಾದು
ಸರಿ ದನಕಾಯ್ಕಂಡು
ಅರಣ್ಯದಲ್ಲವನೆ ಗಡ್ಡೆ ಗೆಣಸು ತಿಂದಕಂಡು
ಬೆಂದಿದ್ದು ಅವನು ತಿಂಬೋದಿಲ್ಲ
ಹೋಗಬೇಡ ಕಣಮ್ಮ
ಅಲ್ಲಿ ಹುಲಿಕರಡಿಗಳ ಕಾಟ ಅಂದೇಳ್ದ"[೧]

(ಮ.ಸಂ-೫೪)

ಆಗ ಸ್ವಾರ್ಥ ಮನಸ್ಥಿತಿಯುಳ್ಳ ಅವಳ ಮಾವ ಸಾತಮ್ಮ ತನ್ನ ಗಂಡನ ಬಳಿಗೆ ಹೋಗಿಬಿಟ್ಟರೆ, ನಮ್ಮ ಸೇವೆ ಮಾಡುವವರು ಯಾರು ಇಲ್ಲವಾಗಿ ಬಿಡುತ್ತಾರೆ. ಅವಳು ಮಾಡುವ ಕೆಲಸವನ್ನು ತಮ್ಮ ಹೆಂಡತಿಯರು ಮಾಡಬೇಕಾಗುತ್ತದೆ ಎಂದು ತಿಳಿದ ಆಕೆಯ

ಮಾವ, ಸಾತಮ್ಮನನ್ನು ಕುರಿತು ಈ ರೀತಿಯಾಗಿ ಹೇಳುತ್ತಾನೆ. ನಿನ್ನ ಗಂಡ ಇರುವ ಜಾಗಕ್ಕೆ ಹೋಗುವುದಕ್ಕೆ ನಿನ್ನಿಂದ ಅಸಾಧ್ಯವಾದದ್ದು. ಅಲ್ಲಿ ವಿಪರೀತ ಕಾಡುಪ್ರಾಣಿಗಳು ಇರುತ್ತವೆ. ಅಂತ ಘೋರವಾದ ಅರಣ್ಯದಲ್ಲಿ ನಿನ್ನ ಗಂಡ ಇರುವುದು ಎಂದು ಹೇಳುತ್ತಾನೆ. ಅಲ್ಲಿ ದನಗಳನ್ನು ಕಾಯ್ದುಕೊಂಡು ಗೆಡ್ಡೆಗೆಣಸು ತಿಂದುಕೊಂಡು ಇದ್ದಾನೆ. ಅವನಿಗೆ ಬೇಯಿಸಿದ ಆಹಾರ ಅಂದರೆ ಆಗದು ಅಲ್ಲಿಗೆ ನೀನು ಹೋಗಬೇಡ ಎಂದು ಅವಳ ಮಾವ ಹೇಳುತ್ತಾನೆ. ಆಗ ಸಾತಮ್ಮ ತುಂಬ ದುಃಖಿತಳಾಗುತ್ತಾಳೆ. ರಾತ್ರಿ ಪೂರ ಯೋಚನೆ ಮಾಡುತ್ತಾಳೆ. ಅನ್ಯರ ಸೇವೆ ಮಾಡಿಕೊಂಡು ಅವಮಾನ ಅನುಬವಿಸುವುದಕ್ಕಿಂತ ತಾನು ಕಾಡಲ್ಲಿ ವಾಸವಾಗಿರುವ ತನ್ನ ಗಂಡನ ಬಳಿಗೆ ಹೋಗುವುದು ಸರಿ ಎಂದು ಭಾವಿಸಿಕೊಳ್ಳುತ್ತಾಳೆ.

"ಕಾಡಿನೊಳಗೆ ಹುಲಿಕರಡಿಗಳೆ ತಿಂದಾಕಲೇಳು ನನ್ನ
ಇನ್ನಾಕಿರಬೇಕಂದು ಸಾತಮ್ಮ
ಬೆಳಗ್ಗೆ ಆಗಾಲೆ ಮುಂಗೊಳಿ ಕೂಗುವಾಗಲೇ ಎದ್ದು
ನೆಲಒಲೆ ಸಾರಿಸಿ ಗುಡಿಸ್ಯಾವುಳಣ್ಣ
ತಾಯಿನೇ ಸಾತಮ್ಮ
ಸರಿಸಿ ಗುಡಿಸ್ಯಾಳೇ
ಎಲ್ಲಾ ತೈನಮಮಾಡಿ
ಇವರಿಗೂ ನೀರು ಕಾಸೆರುವುಳೊ
ಸಾತೆಮ್ಮ ಶಂಕರನೆ
ನೀರನು ಕಾಸೆರುದು
ಎರಡೂ ವಾರಗಿತ್ತೆಗಿಗೂ ಮವುಗಳಿಗೆ
ಅಡಿಗೆ ಮಾಡಿ ಊಟಕ್ಕಿಟ್ಟು
ತಾಂಬೂಲವಾಕ್ಕೆಂಡಾಗಲೆ
ಕೈಕಾಲುಗಳಿಸಿಕವುಳೆ
ಗಂಡನಿಗೆ ಬುತ್ತಿ ಹೊತ್ತುಗಂಡು
ಬುತ್ತಿ ಗೂಡನೆ ತಕ್ಕಂಡು
ಹೋಗುತ್ತಾಳೆ ಅಯಮ್ಮನು
ಗಂಡಿರುವ ಸ್ಥಳಕ್ಕೆ ಗಳಿಗಾಗೋ ॥"[೨]

(ಪು.ಸಂ-೫೬)

ಕಾಡಿನೊಳಗೆ ಹುಲಿ ಕರಡಿಗಳು ನನ್ನ ತಿಂದು ಹಾಕಲಿ. ತಾನು ಅನ್ಯರ ಸೇವೆ ಕಾಡಿಕೊಂಡು ಅವಮಾನ ಅನುಭವಿಸುವುದಕ್ಕಿಂತ ಸಾಯುವುದೇ ಲೇಸು ಎಂದು, ಸಾತೆಮ್ಮ ಎಂದಿನಂತೆ

ಮುಂಜಾನೆ ಎದ್ದು ನೆಲ, ಒಲೆಯನ್ನು ಸಗಣಿಯಿಂದ ಸಾರಿಸಿ ಎಲ್ಲರೂ ಸ್ನಾನಮಾಡಲು ನೀರು ಕಾಯಿಸಿದಳು, ಅಡಿಗೆ ಮಾಡಿ ಎಲ್ಲರಿಗೂ ಊಟಕ್ಕಿಟ್ಟು, ತಾಂಬೂಲಕೊಟ್ಟು, ಕೈ, ಕಾಲು ನೀವಿ, ಗಂಡನಿಗೆ ಬುತ್ತಿ ತೆಗೆದುಕೊಂಡು, ಗಂಡನಿರುವ ಜಾಗಕ್ಕೆ ಹೊರಟುಬಿಡುತ್ತಾಳೆ. ಗಂಡನ ಮುಖ ಕಾಣದ ಸಾತೆಮ್ಮ ಕಾಡಲ್ಲಿ ತುಂಬ ಅಲೆಯುತ್ತಾಳೆ. ಎಲ್ಲೂ ನರಮನುಷ್ಯರ ಸುಳಿವಿಲ್ಲ.

ಆಗಲೆ ಕಣಿಯನ್ನ ಹೇಳುತಾಳೆ
ಮಾರಮ್ಮ ಶಂಕರನೆ
ಕೇಳು ಕೇಳೆ ಸಾತಮ್ಮ
ನಿನ್ನಯ ಗಂಡನು
ಹುಟ್ಟಿದುದಕೆ ಬೆಳೆದುದಕ್ಕೆ
ಇಪ್ಪತ್ತು ನಾಲ್ಕು ವರುಷ
ಮದುವೆನೆ ಆಗಿದಿ ನೀನು
ನರಮಾನುವುರ ಮಕವನ್ನ
ತಲೆಯತ್ತಿ ನೋಡಿದವುನಲ್ಲವಮ್ಮ ಅವುನು
ಕಾಡಿನೊಳಗೆ ಸೇರಿಕೊಂಡ
ಗೆಡ್ಡೆಗೆಣಸು ತಿಂದುಕಂಡು
ಹಣ್ಣು ಹಂಪ್ಲು
ಕಾರೆ ಹಣ್ಣು ಕವುಳೀ ಹಣ್ಣು ತಿಂದಕಂಡು
ಕಾಲಕಳುದವುನವುನು
ಕಾಡೀನಾಗುಳು ಹುಲಿಯಂತೆ
ಅವು ನಮ್ಮ ನಿನುಗಂಡೋ
ಹೋಗಿ ಅವುನೆದಿರಿಗೆ
ನೀನು ನಿಂತಗ ಬ್ಯಾಡವೆ ಸಾತೆಮ್ಮ

(ಪು.ಸಂ-೫೬)

ಕಣಿಯ ವೇಷದಲ್ಲಿ ಬಂದಂತ ಮಾರಮ್ಮ, ಸಾತೆಮ್ಮನಿಗೆ ನೆರವಾಗುತ್ತಾಳೆ. ಕಾಡಿನೊಳಗೆ ಸೇರಿಕೊಂಡಿರುವ ನಿನ್ನ ಗಂಡ, ಕಾಡಿನ ಗೆಡ್ಡೆಗೆಣಸು ತಿಂದುಕೊಂಡು, ಹಣ್ಣು ಹಂಪಲು, ಕಾರೆಹಣ್ಣು, ಕವುಳೀ ಹಣ್ಣು ತಿಂದುಕಂಡು ಜೀವನ ಮಾಡುತ್ತಿದ್ದಾನೆ. ನೀನು ಹೋಗಿ ಅವನ ಎದುರು ನಿಲ್ಲಬೇಡ, ಬುತ್ತಿಯನ್ನು ಇಟ್ಟು ಪೊದೆಯ ಮರೆಯಲ್ಲಿ ನಿಂತು ಬಿಡು ಎಂದು ಸೂಚನೆಯನ್ನು ನೀಡುತ್ತಾಳೆ ಮಾರಮ್ಮ ಅದರಂತೆ ಸಾತಮ್ಮ ಮಾಡುತ್ತಾಳೆ.

"ಅವಾಗ ಹೊರಟನು ಸ್ವಾಮಿ
ದೇವರು ಕರುಣದಿಂದ
ಆಯಮ್ಮ ಬುತ್ತೀನಗೂಡೆ
ಹೊತಗಂಡು
ಗಂಡನ ಹತ್ತುರುಕೆ
ಹೋಗೆವಳೆ ಸಾತಮ್ಮ
ದೂಡ್ಡೂಡಿ ಬಾಕಾಲೂಳೆಗೆ
ಬುತ್ತಿಗೂಡೆ ಇಳಿಸವುಳಣ್ಣ
ಇಳಿಸಿ ಬೇಲಿ ಪೊದೆಯಾನೆ
ಮರೆಯಲ್ಲಿ ಹೋಗಿ ನಿಂತವುಳೊ॥
ಆಗಲೆ ಸ್ವಾಮಿ
ತಲೆಯೆತ್ತಿ, ನೋಡಿದುನಣ್ಣ
ಶಂಕರ ಹುಟ್ಟಿದಗ ಬೆಳುದಾಗಿಂಟ
ತಾಯಾಲು ಬಿಟ್ಟಾಗಂಟ
ಕಾರೇಹಣ್ಣು ಕವುಳಿಹಣ್ಣು
ಕಾಡಿನಾಗುಳು ಗೆಡ್ಡೆ ಗೆಣಸು ತಿಂದುಕಂಡಿದ್ದೆ
ಈವತ್ತು ಮುಸುರೆ ನಾನೆಂಗೂಟ ಮಾಡುಲೆಂದು
ನಿಂತೆ ಮಾಡುತಾನೋ
ಮಾರುಮುತ್ತಣ್ಣ ಶಿವುನಿಗ
ಆಗನಾನು ಊಟ ಮಾಡಲಿಲ್ಲ
ಅಂದೂರು ಅವಳು
ಬಾವಿಗೊ ಕೆರಿಗೊ ಬಿದ್ದು ಸತ್ತುರೂ
ಸ್ತ್ರೀ ಹತ್ಯ ಶಿಶು ಹತ್ಯಗೋ ಹತ್ಯಕು ನಾನು ಒಳಗಾಗುತ್ತೀನಿ
ಸ್ತ್ರೀ ಯಳನ ಕೊಲ್ಲುಬಾರದೆಂದು
ಶಿವುನೇಳೆವುನಣ್ಣ
ಇದೇನು ಮಾಡಲಿ ಸ್ವಾಮಿ
ಅಂದೇನೆ, ಮಹಾದೇವ
ಪರಮೇಶ್ವರನೇ ನೀನೇ ದಿಕ್ಕು ನನಗಂದೆದ್ದು

ಹೋಗಿ ಬುತ್ತಿ ಇಟಗಂಡು ಊಟಮಾಡ್ಯವುನೋ

(ಪು.ಸಂ-೬೦)

ತನ್ನ ಗಂಡ ಊಟ ಮಾಡುವವರೆವಿಗೂ ಸಾತಮ್ಮ ಬಿಡಲಿಲ್ಲ.

ಹೀಗೆ ಕಥನ ಮುಂದುವರಿಯುತ್ತದೆ.

ಸೂರ್ಯ ಅಸ್ತಮಾಯ ಆಗೋವರಗೂ ಓಡೋದ್ರು

ಗಂಡ ಹೆಂಡತಿ ಇಬ್ರೂನು

ದನಗಳು ಆಯಪ್ಪನ ಹಿಂದೆ ಹೋಗಲಿಲ್ಲ

ಹುಟ್ಟಿದಾಗಿಂದ ಮೇಸಿದ್ದ ದನ ರೋಪ್ಪದ್ನಾಗೆ ಅವೆ

ಹೋದ ಅಂತ ಹೋಗಲಿಲ್ಲ

ಅಣ್ಣ ತಮ್ಮಗಳೂ ಹೋಗಲಿಲ್ಲ

ಕೂಡಿದ್ದ ಜೀವ ಆಗಿದ್ದಕೆ

ಈಯಮ್ಮ ಬೆನ್ನತಿ ಹೋದ್ಲು

ಸೂರ್ಯ ಮುಣಕಿದ ಮೇಲೆ ಹಿಂದಿರುಗಿ ನೋಡ್ತನೆ

ಹಿಂದೆನೆ ಬರುತ್ತಾ ಇದ್ಲು ಆಯಮ್ಮ

ಶಂಕರಾ

ನಾನಾಳಿದು ದನುಗಳು ಬರಲಿಲ್ಲ

ಹಿಂದೆ ಮುಂದೆ ಹುಟ್ಟಿದ ಅಣ್ಣ ತಮ್ಮಗಳು ಬರಲಿಲ್ಲ

ನಮ್ಮಪ್ಪಗೆ ನಾನೊಬ್ಬನೆ ಮಗ

ಇನ್ಯಾರವರು ಅಣ್ಣತಮ್ಮಗಳು

ಸಿಕ್ಕಪ್ಪನು ಮಕ್ಕಳು ಇದ್ರೆಷ್ಟು ಬಿಟ್ರೆಷ್ಟು

ಶಂಕರ

ಅವುರವುರು ಸಂಪಾದನೆ ಮಾಡಿರೋ

ವಜ್ರವೈಡೂರ್ಯ ನನಗೆ ಬ್ಯಾಡ

ಈ ದನುಗಳೂ ಬ್ಯಾಡ ಅಂತೇಳಿ

ಆ ಸಾತೆಮ್ಮನ ಮೇಲೆ ಕರುಣೆ ಉಂಟಾಯ್ತು ಆವಾಗ

ಆವಾಗ ಒಡೋಗಿ ಬಾಚಿ ತಬ್ಬಿಕಂಡು

ಗೋಳಾಡಿ ಗಂಡ ಹೆಂಡತಿ ಇಬ್ರೂನು

ಅಲ್ಲಿ ಮುತ್ತಗದು ಸೊಪ್ಪು ಬಂದ್ರೆ ಸೊಪ್ಪು ಕಡುದು

ಸೊಪ್ಪಿನ ಗುಡ್ಲು ಕಟ್ಟಬಿಟ್ಟು

ಇಬ್ಬರೂ ಕಾಲವರಣೆ ಮಾಡೋದಕೆ ಅರಣ್ಯದಲ್ಲಿ
ಸೊಪ್ಪಿನ ಗುಡಿಸಲು ಕಟ್ಟಿ
ಕಾರೆಹಣ್ಣು ಕವಳೆ ಹಣ್ಣು ತಿಂದು ಕಂಡು
ಕಾಲಾವರಣ ಮಾಡಿಕೊಂಡು
ಗಂಡ ಹೆಂಡತಿ ಇಬ್ಬರು
ಆ ಗುಡುಲೊಳಿಗೆ
ಇರುವರಣ್ಣಾ ಗಳಿಗಾಗೋ"[೩]

(ಪು.ಸಂ-೬೩)

ತನ್ನ ಅಣ್ಣ ತಮ್ಮಂದಿರು, ಬಂಧುಬಳಗ ಯಾರು ತನ್ನ ಕಷ್ಟಗಳಿಗೆ ನೆರವಾಗಲಿಲ್ಲ. ನಾನು ಸಾಕಿದ್ದ ದನಗಳು ಬರಲಿಲ್ಲ. ಅವರುಗಳು ಮಾಡಿರುವ ಸಂಪಾಧನೆ, ವಜ್ರ ವೈಡೂರ್ಯ, ಯಾವುದು ನನಗೆ ಬೇಡ. ತನ್ನ ಹಿಂದೆ ಬಂದ ಸಾತೆಮ್ಮನ ಮೇಲೆ ಕರುಣೆ ಬಂದು ಓಡೋಗಿ ಬಾಚಿ ತಬ್ಬಿಕೊಂಡನು ಮಾರುಮುತ್ತಣ್ಣ.

ಇಬ್ಬರೂ ಕಾಡಿಗೆ ಬಂದು ಮುತ್ತುಗದ ಸೊಪ್ಪು ಕಡಿದು, ಸೊಪ್ಪಿನ
ಸೊಪ್ಪಿನ ಗುಡಿಸಲನ್ನು ಹಾಕಿಕೊಂಡು ಜೀವನ ಮಾಡುತ್ತಾರೆ.
ಸೊಪ್ಪಿನ ಗುಡಿಸಲು ಕಟ್ಟಿ
ಕಾರೆಹಣ್ಣು ಕವಳೆ ಹಣ್ಣು ತಿಂದುಕಂಡು
ಕಾಲವರಣ ಮಾಡಿಕೊಂಡು
ಗಂಡಹೆಂಡತಿ ಇಬ್ಬರು
ಆ ಗುಡುಲೊಳಿಗೆ
ಇರುವರಣ್ಣಾ ಗಳಿಗಾಗೋ ॥

(ಪು.ಸಂ-೬೩)

ಅವರ ದಿನನಿತ್ಯದ ಆಹಾರ ಆ ಕಾಡಲ್ಲಿ ಸಿಗುವಂತ ಕಾರೆಹಣ್ಣು ಕವಳೆ ಹಣ್ಣು ತಿಂದುಕೊಂಡು ಕಾಲಹರಣ ಮಾಡಿಕೊಂಡು ಬದುಕುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಸಾತೆಮ್ಮ ಗರ್ಭವತಿ ಯಾಗುತ್ತಾಳೆ. ಒಂದು ಗಂಡು ಮಗುವಿಗೆ ಜನ್ಮವನ್ನು ನೀಡುತ್ತಾಳೆ. ಸೀತೆ ಗರ್ಭವತಿಯಾಗಿ ಕಾಡು ಸೇರಿದಾಗ ವಾಲ್ಮೀಕಿ ಮಹರ್ಷಿಗಳ ಆಶ್ರಯ ಲಭಿಸುತ್ತದೆ. ಆದರೆ, ಸಾತೆಮ್ಮನಿಗೆ ಆ ಕಾಡಿನೊಳಗೆ ತನ್ನ ಗಂಡನನ್ನು ಬಿಟ್ಟರೆ, ಬೇರೆ ಯಾರ ಆಶ್ರಯವು ಲಭಿಸುವುದಿಲ್ಲ. ಕಾಡೊಂದೇ ಆಶ್ರಯವಾಗಿರುತ್ತದೆ. ಇಂತಹ ಸ್ಥಿತಿಯಲ್ಲಿ ಮೂರು ತಿಂಗಳ ಆಗತಿದ್ದಂತೆ ಸೂತಕ ಕಳಕಂಡು

ಗಂಡ ಹೆಂಡತಿ ಇಬ್ಬರೂ ಒಂದೇ ಗುಡಿಸಲಲ್ಲಿ
ಕಾಲಾವರಣ ಮಾಡೋದಕೆ ರೆಡಿಯಾದ್ರು
ಒಂದೇ ಗುಡಿಸಲಲ್ಲಿ ಇರುವಾಗ
ಈಯಪ್ಪ ಹಣ್ಣೂ ಹಂಪಲು ಬಿಡಿಸಕೆಂಬಂದು
ಸಾತೆಮ್ಮ ಒಬ್ಬಳಿಗೆ ಕೊಟ್ಟು
ಈಯಪ್ಪ ತಿಮ್ಮದಂಗೆ ಸುಮ್ನೆ ಇರನು
ಆಗ ಆಯಮ್ಮ ನೋಡಿದ್ಲು ಸ್ವಾಮಿ
ಬಿಡಿವಸಿದ ಹಣ್ಣೆಲ್ಲ ತಂದು ನನಗೇ ಕೋಡ್ತೀರ
ನೀವು ತಿನ್ನುದಿಲ್ಲಾ
ನಿಮ್ಮ ಹೊಟ್ಟೆಗೆ ಆಧಾರಬ್ಯಾಡವೇ ಶಂಕರಾ
ಬ್ಯಾಡಾ ಸ್ವಾಮಿ
ಬಿಡಿಸಿದ ಹೆಣ್ಣೆಲ್ಲ ತಂದು ನನಗೇ ಕೋಡ್ತೀರ
ನೀವು ತಿನ್ನುದಿಲ್ಲಾ
ನಿಮ್ಮ ಹೊಟ್ಟೆಗೆ ಆಧಾರಬ್ಯಾಡವೇ ಶಂಕರಾ
ಬ್ಯಾಡಾ ಸ್ವಾಮಿ
ನಡೀರಿ ಇಬ್ಬರೂ ಬಿಡಿಸಿಕಂಡು ತಿಂಬಾನ ಅಂತೇಳಿಬಿಟ್ಟು

ಕಾಡಿನ ಬದುಕಿನಲ್ಲಿ ಅಲ್ಲಿನ ಹಣ್ಣು ಹಂಪುಲು ವ್ಯಕ್ತಿಯ ಆಹಾರದ ಮೂಲವಾಗಿರುತ್ತದೆ. ಅದರಂತೆ ಮೂರುಮುತ್ತಣ್ಣ, ಸಾತಮ್ಮ ಪ್ರತಿದಿನ ಹಸಿವನ್ನು ನೀಗಿಸಲು ಕಾಡಿನ ಹಣ್ಣು ಹಂಪಲುಗಳೇ ಅನಿವಾರ್ಯವಾಗಿರುತ್ತದೆ. ಆಗಾಗಿ ಸಾತಮ್ಮನಿಗೆ ಮೂರು ತಿಂಗಳು ಆಗುತ್ತಿದ್ದಂತೆ ಸೂತಕ ಕಳೆದುಕೊಂಡು ಗಂಡ ಹೆಂಡತಿ ಇಬ್ಬರು ಒಂದೇ ಗುಡಿಸಿಲಿನಲ್ಲಿ ಕಾಲಕಳೆಯುತ್ತಿರುತ್ತಾರೆ. ಮೂರು ಮುತ್ತಣ್ಣ ಪ್ರತಿದಿನ ಸಾತಮ್ಮನಿಗೆ ತಿನ್ನಲು ಕಾಡಿನ ಹಣ್ಣು ಹಂಪಲುಗಳನ್ನು ತಂದುಕೊಡುತ್ತಾನೆ. ತಾನು ತಿನ್ನದೆ ಎಲ್ಲವನ್ನು ಸಾತಮ್ಮನಿಗೆ ನೀಡುತ್ತಾನೆ. ಇದನ್ನು ಕಂಡು ಸಾತಮ್ಮ

ಬಿಡಿಸಿದ ಹಣ್ಣೆಲ್ಲ ತಂದು ನನಗೇ ಕೋಡ್ತೀರ
ನೀವು ತಿನ್ನುದಿಲ್ಲಾ
ನಿಮ್ಮ ಹೊಟ್ಟೆಗೆ ಆದಾರಬ್ಯಾಡವೇ ಶಂಕರಾ
ಬ್ಯಾಡ ಸ್ವಾಮಿ

ನಡೀರಿ ಇಬ್ಬರೂ ಬಿಡಿಸಿಕಂಡು ತಿಂಬಾನ ಅಂತೇಳಿ ಬಿಟ್ಟು ಇಬ್ಬರು ಕಾಡಿನಲ್ಲಿ ಹಣ್ಣು ಬಿಡಿಸಲು ಹೋಗುತ್ತಾರೆ. ಆಗ ಸಾತೆಮ್ಮ ಮುಂದಲ ಗಿಡದಲ್ಲಿ ಹೆಣ್ಣು ಚೆನ್ನಾಗಿದ್ದಾವೆ ಸ್ವಾಮಿ

ಎಂದು ತನ್ನ ಗಂಡನಿಗೆ ಹೇಳಿದಳು. ಅಲ್ಲಿ ಹೋಗಿ ತಿನ್ನಲು ನೋಡಿದರೆ ಅಲ್ಲಿಂದ ಮುಂದೆ ಇದ್ದಗಿಡದಲ್ಲಿ ಇನ್ನು ಪರಿಮಳದ ಹಣ್ಣು ಕಾಣಿಸ್ತವೆ. ಹೀಗೆ ಮುಂದೆ ಮುಂದೆ ಹೋಗುತ್ತಾರೆ. ಗುಡಿಸಿಲಿನಲ್ಲಿ ಇದ್ದ ಮಗುವಿನ ಜ್ಞಾನ ಇಬ್ಬರಿಗೂ ಮರೆತು ಹೋಯಿತು. ಹೀಗಾಗಿ ಮಾರಮುತ್ತಣ್ಣ, ಸಾತೆಮ್ಮ ಕಾಡಿನ ಬದುಕಿನಲ್ಲಿ ಕಷ್ಟ, ದುಃಖಗಳ ನಡುವೆ ಹಸಿವಿನ ದಿನಗಳನ್ನು ಕಳೆದದ್ದು ಜಾಸ್ತಿ. ಅವರಿಬ್ಬರ ಹೊಟ್ಟೆಗೆ ಕಾಡಿನ ಹಣ್ಣುಗಳು ಬಿಟ್ಟರೆ ಬೇರೆ ಗತಿಯಿಲ್ಲ. ಈಗಲೂ ಕೆಲವು ಸಮುದಾಯಗಳು ಹೊಟ್ಟೆ ತುಂಬಿಸಿಕೊಳ್ಳಲು ಕಾಡಿನ ಆಶ್ರಯ ಪಡೆದಿವೆ. ಅಕ್ಕಿ ಪಿಕ್ಕಿ ಜನಾಂಗ ಹೊಲ, ಗದ್ದೆಗಳಲ್ಲಿ ಬಿದ್ದಿರುವ ಭತ್ತದ ಕಾಳುಗಳನ್ನು ಆಯ್ದು ತಂದು ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದಾರೆ. ಪಡಿತರ ಚೀಟಿ ಸರ್ಕಾರದಿಂದ ಇವತ್ತಿಗೂ ದೊರಕದೆ ಈ ಜನಾಂಗ ಹಸಿವಿನ ಸಮಸ್ಯೆಯನ್ನು ಹೆದರಿಸುತ್ತಿದ್ದಾರೆ.

ನಿಜವಾದ ಬಡತನ, ಹಸಿವನ್ನು ಎದುರಿಸಿದವಳು ಜುಂಜಪ್ಪನ ತಾಯಿ ಚಿನ್ನಮ್ಮ ತನಗೆ ಮಕ್ಕಳ ಫಲ ಕೋರಿ ಶಿವನನ್ನು ಕುರಿತು ತಪಸ್ಸು ಮಾಡುತ್ತಾಳೆ. ಶಿವ ಪ್ರತ್ಯಕ್ಷವಾಗಿ ಮೂರು ಗಂಡು ಮಕ್ಕಳನ್ನು ನೀಡುತ್ತಾನೆ. ಅಷ್ಟು ಸಾಲದ ಚಿನ್ನಮ್ಮ ಮೇಲೊಂದು ಹೆಣ್ಣು ಮಗುವನ್ನು ಬೇಡುತ್ತಾಳೆ. ಆಗ ಶಿವನು ಮೂರುಗಂಡು ಮಕ್ಕಳ ಹಿಂದೆ ಒಂದು ಹೆಣ್ಣು ಮಗುವು ಹುಟ್ಟಿದರೆ, ಸಾಕಷ್ಟು ಕಷ್ಟ ಅನುಭವಿಸಬೇಕಾಗುತ್ತದೆ. ಎಂದು ಹೇಳುತ್ತಾನೆ ಶಿವ. ಆದರೆ ಚಿನ್ನಮ್ಮ ಒಪ್ಪದೆ ತನಗೊಂದು ಹೆಣ್ಣುಮಗುವು ಬೇಕೆಂದು ಹಟ ಹಿಡಿಯುತ್ತಾಳೆ. ಶಿವ ಚಿನ್ನಮ್ಮನಿಗೆ ಮೂರು ಗಂಡು ಮಕ್ಕಳ ಜೊತೆಗೆ ಒಂದು ಹೆಣ್ಣು ಮಗುವನ್ನು ಕೊಡುತ್ತಾನೆ.

"ಬ್ಯಾಡಾವೆ ಯಾರ್‍ರಿಮುಂಡೆ
ಬುದ್ದಿ ಐತೆ ನಿನಗೆ
ಗಂಡು ಮಕ್ಕಳು ಹುಟ್ಟಿದು
ಮೂರು ವರುಷಾಕ್ಕೊಂದು
ಹೆಣ್ಣು ಮಗುವು ಹುಟ್ಟುತ್ತೈತೆ
ಹೆಣ್ಣುಮಗು ಹುಟ್ಟಿದು
ಮೂರು ವರುಷಕು ನಿನ್ನ
ಗಂಡುಗು ಮರುಣುವಮ್ಮ
ಗಂಡ ಸತ್ತು ಮೂರು ವರುಷಕೆ
ಅಮ್ಮ ಭಂಗ ಬಡತನ ಬರುತ್ತೈತೆ
ಓರಯೂರು ಪ್ಯಾಟೀಗೆ
ಸೌದೇಸೆ ಹೊರುಬೇಕಮ್ಮ

ಮಕ್ಕಳುನ ಸಾಕದುಕೆ ನೀನು
ಹುಟ್ಟಂತ ಸೀರೆಯಮ್ಮ
ನಿಲುಬೆರೆಸ್ಯಗೆ ಉದುರೋಗುತ್ತೈತೆ
ತ್ಯಾಗುದೆಲೆ ಇಸ್ತ್ರ ಹಚ್ಚಿಗಂಡು
ತ್ಯಾಗದ ಎಲೆ ಉಟುಗಾಬೇಕು ನೀನಮ್ಮ
ಒಣಗಿದು ಒಣಿಕ್ಯಾಗೆ
ಒಣನಾರು ತೆಗೀಬೇಕು
ಸತ್ತ ಗಂಡನ್ನ ಎಬ್ಬರಿಸಿ
ಮಾತಾಡಿಸಬೇಕು
ನಿನ್ನ ಹೊಟ್ಟೆಗೆ ಹುಟ್ಟಿದ ಮಗನೆ
ನಿನ್ನಗೂ ಕಷ್ಟ ಕೊಡುತ್ತಾನೆ."[೪]

(ಪು.ಸಂ-೧೪೦)

ಮೂರು ವರ್ಷ ಕಳೆಯಿತು. ಅದೇ ತುಂಬಿದ ಮನೆ ಮಾರಿ ಬಡಿದಂಗಾಗಿ ಖಾಲಿ ಖಾಲಿಯಾಯಿತು. ತಿನ್ನಕೆ ಉಣ್ಣಾಕೆ ಏನೂ ಇಲ್ಲದಂಗೆ ಆಯಿತು. ಹೀಗೆ ಒಂದಿಷ್ಟು ದಿನ ಇದ್ದರು. ಕಾಡಿನಾಗೆ ಕಕ್ಕೆ ಸೊಪ್ಪು ಬಿಕ್ಕೆ ಸೊಪ್ಪು ತಂದು ಬೇಯಿಸಿ ಕೊಟ್ಟು ಹಸಿವು ಇಂಗಿಸುತ್ತಿದ್ದಳು ಚೆನ್ನಮ್ಮ. ನಾದಿನಿಯರ ಮನೆಯರಲ್ಲಿ ಸೇರಕ್ಕಿ, ಸೇರು ಬ್ಯಾಳೆ ಹೀಗೆ ಸಾಲ ಮಾಡಿ ಮಕ್ಕಳ ಹೊಟ್ಟೆ ತುಂಬಿಸುತ್ತಾ ಬಂದಳು. ಬರುಬರುತ್ತಾ ಬಡತನ ಜಾಸ್ತಿ ಆಯಿತು. ಆದರೂ ಭಂಗ ತೀರಲಲ್ಲ. ಬಡತನ ಹೋಗಲಿಲ್ಲ. ಒಂದು ದಿನ. ಜುಂಜಪ್ಪ ಕೇಳಿದ. ಅಮ್ಮ ಪರಮೇಶ್ವರ ಹೇಳಿದ ಮೂರು ಗಂಡಿನಿಂದ ಒಂದು ಹೆಣ್ಣು ಬೇಡ. ಪಡಬಾರದ ಪಾಡು ಪಡುತೀಯ ಅಂತಾ ನೀನು ಕೇಳಲಿಲ್ಲವೆ. ಈಗ ಬಡತನ ಬಂತು ಅಂತ ಶೋಕ ಮಾಡಿದರೆ ಬಂದ ಭಾಗ್ಯವೇನು? ಸರೀಕರಿಗೆ ತಮ್ಮ ಭಂಗದ ಬಾಳ ತೋರಬಾರದು ಎಂದು ತಾಯಿಗೆ ಹೇಳಿದನು. ಆಗ ತನ್ನ ಮಗ ಜುಂಜಪ್ಪನ ಅಪ್ಪಣೆಯಂತೆ ಚೆನ್ನಮ್ಮ ಮನೆಯನ್ನು ಬಿಟ್ಟು ಹಿರಿಯೂರು ಕಾಡಿನ ಭಾಗಕ್ಕೆ ಬರುತ್ತಾರೆ. ಮಂಡಗಳ್ಳಿ ಕಡಿದು ಒಂದು ಮೂಗುತ್ತದ ತಾವ ಬೇಲಿ ಹಾಕಿದರು. ಮುತ್ತುಗದ ಎಲೆ ತಂದು ರಪ್ಪ ಬಗ್ಗಿಸಿದರು. ಮಡಿಕೆ ಕುಡಿಕೆ ಹೊಂದಿಸಿಕೊಂಡು ಕಾಡಿನ ಸೊಪ್ಪು ಕೊಯ್ದು ತಂದು ಮಕ್ಕಳಿಗೆ ಬೇಯಿಸಿಕೊಟ್ಟು ತಾನೊಂದು ತುತ್ತು ತಿಂದಳು. ಹೀಗೆ ಕಾಲ ಹಾಕತೊಡಗಿದಳು.

ಕಾಡಿನಲ್ಲಿ ಬೇಲಿ ಹಾಕಿಕೊಂಡು ಅಡವಿ ಸೊಪ್ಪು ತಂದು ಉಪ್ಪುಕಾರವೂ ಇಲ್ಲದಂತೆ ಬೇಯಿಸಿ ಮಕ್ಕಳಿಗೆ ತಿನ್ನಿಸುತ್ತ, ಕಾಲಹರಣ ಮಾಡಿತೊಡಗಿದಳು. ಅದಕ್ಕೂ ಸ್ವಾಮಿ ಸುಮ್ಮನಾಗಲಿಲ್ಲ. ಬೇಯಿಸಿದ ಸೊಪ್ಪು ವಿಷವಾಯಿತು. ಏನನ್ನೂ ಅರಿಯದ ಮಕ್ಕಳು ತಾಯಿ ಎಲೆ ಮೇಲೆ

ಹಾಕುತ್ತಿದ್ದಂತೆ ಬಾಯಿಗೆ ಹಾಕಿಕೊಂಡವು. ಬಾಯೆಲ್ಲ ಇಕ್ಕಟ್ಟೆ ವಿಷ. ಆಚೆಗೆ ಉಗಿದುಬಿಟ್ಟವು. ಜುಂಜಪ್ಪ ನೋಡಿದನು. ತಾಯಿಗೆ ಹೇಳುತ್ತಾನೆ. 'ಏನಮ್ಮ ಬಡತನ ಬರಬಹುದು. ಭಂಗ ಬರಬಹುದು. ಹೆತ್ತ ಮಕ್ಕಳಿಗೆ ವಿಷ ಹಾಕೋ ಬುದ್ದೀನೂ ಬರುತ್ತಾ? ಬಡತನ ಬಂತು ಅಂತಾ ಹೆತ್ತ ಮಕ್ಕಳನ್ನು ಸಾಯಿಸಾಕೆ ನೋಡುತೀಯ? ಎಂದು ಹೇಳುತ್ತಾನೆ. ಆಗ ಚೆನ್ನಮ್ಮ ಗೊಳೋ ಅಂತ ಅಳುತ್ತಾಳೆ. ಕೊನೆಗೆ ಅಡವಿ ಸೊಪ್ಪು ಮಡುವಿನ ನೀರಾಗೆ ಮಕ್ಕಳು ಬೆಳಕಾತಾವೆ. ಯಾರ ಹಂಗೂ ಬ್ಯಾಡ ಅಂಬ್ರಲೇ ನಾನು ಕಾಡಿಗೆ ಬಂದೆನಪ್ಪ, ನಾನು ಮಕ್ಕಳ ಸಾಯಿಸಿ ಹೊಟ್ಟೆ ಹೊರೆಯೋ ಮಗಳಲ್ಲಪ್ಪ ನಿಮ್ಮ ಪಾದವೇ ಸಾಕ್ಷಿ ಎಂದು ಹೇಳುತ್ತಾಳೆ.

ಮತ್ತೆ ಹಸಿವಿನ ಸಂದರ್ಭ ಬರುವುದು 'ಮೈಲಣ್ಣನ ಹುಲ್ಲು ನೀರು ಹುಡುಕಾಟ' ಭಾಗದಲ್ಲಿ ಮಾರಣ್ಣ, ಮೈಲಣ್ಣ, ಪಂಚ ಕಲ್ಯಾಣಿ ಜೊತೆಗೆ ಬಡಮೈಲ ಈ ಎಲ್ಲರೂ ಕೂಡಿಕೊಂಡು ಏಳು ಲಕ್ಷ ದನಗಳನ್ನು ಮೇಯಿಸಿಕೊಂಡು ಕಾಲ ಹಾಕ್ತಾ ಇರುವಾಗ ಒಂದು ದಿನ ಪಂಚಕಲ್ಯಾಣಿ ಭವಿಷ್ಯ ನುಡಿತು. ಅದು ಏನೆಂದರೆ 'ಅಣ್ಣ ಜುಂಜಣ್ಣ ಬರಗಾಲ ಬಂದು ನೀರು ನಿಡಿ ಇಲ್ಲದಂಗೆ ಆಗುತ್ತೆ. ಈಗ ಒಂದು ಭರಣಿಯಲ್ಲಿ ಬವಸವನ ಪತ್ರನೂ ಇನ್ನೊಂದು ಭರಣಿಯಲ್ಲಿ ಒಂದಿಷ್ಟು ನೀರನ್ನು ಮಡಿಕೊಂಡು ಬಿಡಪ್ಪ ಅಂತು ಆಗ ಜುಂಜಪ್ಪ ಒಪ್ಪಿಕೊಂಡ. ಹೀಗೆ ದನಗಳ ಸಹವಾಸದಲ್ಲಿ ಮೇಯಿಸುವ ಭರದಲ್ಲಿ ಪಂಚ ಕಲ್ಯಾಣಿ ಹೇಳಿದ ಮಾತನ್ನು ಮರೆತುಬಿಟ್ಟ ಜುಂಜಪ್ಪ. ಭೀಕರ ಬರಗಾಲ ಬಂದು ಬಿಡುತ್ತೆ. ಬರಗಾಲ ಅಂದ್ರೆ ಅಂತಿಂತ ಬರಗಾಲವಲ್ಲ. ಭೂಮಿಯ ಮೇಲೆ ಹಸಿರು ಅನ್ನೋದು ಕಾಣಲೇ ಇಲ್ಲ. ನೀರು ಅನ್ನೋದು ಇಲ್ಲವೇ ಇಲ್ಲ. ಕೆರೆ ಕಟ್ಟೆಗಳೆಲ್ಲಾ ಒಣಗಿ ಒಂದೊಂದು ಗೇಣುದ್ದ ಬಿರುಕು ಬಿದ್ದವು. ಇಂಥ ಕಾಲದಲ್ಲಿ ಜುಂಜಪ್ಪ ಯೋಚನೆ ಮಾಡಿದನು. ಸೂರ್ಯ ಹುಟ್ಟಿದ ಕೂಡಲೇ ದನಗಳು ಎದ್ದು ಹುಲ್ಲು ನೀರಿಗೆ ತಡಕಾಡುತ್ತಿವೆ. ಅದಕ್ಕೆ ಸೂರ್ಯ ಹುಟ್ಟುವುದೇ ಬೇಡ ಎಂದು ತಪಸ್ಸಿಗೆ ಕೂತುಬಿಡುತ್ತಾನೆ. ತಮ್ಮ ಮಾರಣ್ಣ, ಮೈಲಣ್ಣರಿಗೆ ಹೇಳುತ್ತಾನೆ. ದನ ಸತ್ತರೂ ಪರವಾಗಿಲ್ಲ ನಾನು ತಪಸ್ಸು ತಿಳಿದು ಎಬ್ಬಿಸಿಕೊಳ್ಳತ್ತೀನಿ, ಆದರೆ ಯಾವುದೇ ಕಾರಣಕ್ಕೂ ದನ ತಿನ್ನಾಕೆ ಹದ್ದು ಕಾಗಿಗೆ ಮಾತ್ರ ಬಿಡಬೇಡಿರಿ ಎಂದು ಹೇಳಿದನು. ಜುಂಜಪ್ಪ ಧ್ಯಾನಕ್ಕೆ ಕುಳಿತುಕೊಳ್ಳುತ್ತಾನೆ. ಮಾರಣ್ಣ, ಮೈಲಣ್ಣ ದನಗಳ ರೊಪ್ಪದ ಸುತ್ತ ಕವಣೆ ಕಲ್ಲು ಹಿಡಿದುಕೊಂಡು ನಿಲ್ಲುತ್ತಾರೆ.

ದನಗಳ ಗೋಳಾಟ ಅರಚಾಟ ಹೇಳತೀರದು. ಅಂಬಾ ಎಂದು ಕೂಗುತ್ತಾ ಕೆಳಕ್ಕೆ ಬೀಳುತ್ತವೆ. ಚಿತ್ರಹಿಂಸೆ ಅನುಭವಿಸುತ್ತಾವೆ. ನೀರಿಲ್ಲ, ಹುಲ್ಲಿಲ್ಲ, ಇಂತಹ ಸಂದರ್ಭದಲ್ಲಿ ಮೈಲಣ್ಣನು ಅಣ್ಣ ಮಾರಣ್ಣನಿಗೂ, ಪಂಚಕಲ್ಯಾಣಿಗೂ, ಬಡಮೈಲರಿಗೂ ಹೇಳಿಬಿಟ್ಟು ಕವಣೆಕಲ್ಲು ಅಲ್ಲೆ ತಂಗಡಿ ಗಿಡದ ಬುಡದಲ್ಲಿ ಮಡಗಿ, ಹುಲ್ಲ ನೀರು ಇರುವಂತ ಜಾಗವನ್ನು ಹುಡುಕಿಕೊಂಡು

ಹೊರಟನು. ಬಂದು ಗೊಂಡಾರಣ್ಯಕ್ಕೆ ಬರುತ್ತಾನೆ. ಕಾರೆಗಿಡ, ಬಂದ್ರೆಗಿಡ, ಮುತ್ತಗದ ಗಿಡ, ತಂಗಡಿಗಿಡ ಮರಡಿ ಗಿಡ, ಬಿಕ್ಕೆ ಗಿಡ ತೂಬರೆ ಗಿಡಗಳನ್ನೆಲ್ಲಾ ಬೇಡುತ್ತಾನೆ. ನೀರು ಹುಲ್ಲು ಇರುವಂತ ಜಾಗ ಹೇಳಿ ಎಂದು ಮೈಲಣ್ಣ ಬಗೆ ಬಗೆಯಲ್ಲಿ ಬೇಡಿಕೊಳ್ಳುತ್ತಾನೆ. ಯಾವ ಮರ ಗಿಡಗಳೂ ಹುಲ್ಲು ನೀರಿನ ಸುಳಿವು ನೀಡಲಿಲ್ಲ. ಹಾಗೆ ಕಾಡಿನಲ್ಲಿ ಬರುತಿರುವಾಗ, ಕಾಡಿನಲ್ಲಿ ಒಂದು ಹುಲಿ ಸಂತತಿ ಬರಗಾಲದ ಪರಿಸ್ಥಿತಿಯಲ್ಲಿ ತಿನ್ನಲು ಊಟವಿಲ್ಲ, ಹಣ್ಣು ಆಹಾರವಿಲ್ಲ, ಹುಲಿಗಳೆಲ್ಲ ಒಂದು ಕಡೆ ಸೇರಿಕೊಂಡು ಯೋಚನೆ ಮಾಡುತ್ತವೆ. ಅಷ್ಟರಲ್ಲಿ ಮೈಲಣ್ಣ ಕೂಗಿಕೊಂಡು ಬರುತ್ತಿರುವ ಸಂಗತಿ ತಿಳಿಯುತ್ತದೆ. ಮೈಲಣ್ಣನನ್ನು ಬಿಟ್ಟರೆ ಆ ಕಾಡಿನೊಳಗೆ ಬೇರೆ ಯಾರು ಇರುವುದಿಲ್ಲ. ಬರಗಾಲ ಬಂದು ಪ್ರಾಣಿಗಳೆಲ್ಲ ಸತ್ತು ಹೋಗಿಬಿಟ್ಟವು. ಇಂತಹ ಸಂದರ್ಭದಲ್ಲಿ ಒಬ್ಬ ಹುಡುಗ ಕಾಡಿನಲ್ಲಿ ಅಡ್ಡಾಡುತ್ತಿರುವುದು ಕಂಡು ವಪ್ಪತ್ತಿನ ಊಟ ಸಿಗುತ್ತೆ ಎಂದು ಹುಲಿಗಳೆಲ್ಲಾ ಕೂಡಿಕೊಂಡು ಮೈಲಣ್ಣನ ಮೇಲೆ ಮುತ್ತಿಗೆ ಹಾಕಿದವು ಮೈಲಣ್ಣನಿಗೆ ಪ್ರಾಣ ಹೋದಂಗಾಯ್ತು. ಬೇಡಿಕೊಳ್ಳತ್ತಾನೆ. ನನ್ನ ದನಗಳು ಹುಲ್ಲು ನೀರಿಲ್ಲದೆ ಸಾಯುತ್ತಿದ್ದಾವೆ. ನಾನು ದನಗಳಿಗೆ ಹುಲ್ಲು ನೀರು ಹುಡುಕಿ, ಅವುಕೆ ಒಂದು ದಾರಿ ತೋರಿಸಿ ಬಂದು ನಿಮಗೆ ಮೇವಾಗುತ್ತೀನಿ ಎಂದು ಹೇಳುತ್ತಾನೆ. ಹೀಗೆ ಕಥನ ಮುಂದುವರಿಯುತ್ತದೆ.

ಮತ್ತೆ ಹಸಿವು, ಬಡತನದ ಪ್ರಸಂಗ ಎದುರಾಗುವುದು ಚಿನ್ನಮ್ಮನ ಸತ್ವಪರೀಕ್ಷೆ ಸಂದು ಎಂದು ಕಥನ ಭಾಗದಿಂದ ಈ ರೀತಿಯಾಗಿ ಪ್ರಾರಂಭವಾಗುತ್ತದೆ. ಮಾವ ಆಲೆಗೌಡ ಸೊಸೆ ಚಿನ್ನಮ್ಮನಿಗೆ ಭಾಗವನ್ನು ಕೊಟ್ಟು ಬೇರೆ ಇರಿಸುತ್ತಾನೆ. ಗಂಡ ಸತ್ತು ಮೂರು ವರ್ಷ ಆಗಿರುತ್ತದೆ. ಬಡತನ ಬಂದು ಚಿನ್ನಮ್ಮ ತನ್ನ ಮಕ್ಕಳೊಂದಿಗೆ ಕಾಡು ಸೇರುತ್ತಾಳೆ.

"ಅಟ್ಟದ ಮೂಡೆ ಆಗದೆ ಭತ್ತವೆಲ್ಲಾ
ಕಲ್ಲು ಮಣ್ಣಾಗಿ ಮಾಯವಾಗೋಗ್ಬಿಡ್ತು
ಮನೆಯೊಳಗೆ
ಭಂಗ ಬಡತನ ಬಂದ್ಬಿಡ್ತು
ಐಶ್ವರ್ಯವೆಲ್ಲಾ ತೂರ್ರೂಗಿಬಿಡ್ತು
ಅವಾಗ ಚಿನ್ನಮ್ಮ
ಹರಹರ ಶಂಕರ
ಮಕ್ಕಳಿಲ್ಲಾ ಎಂದು ಪರಮೇಶ್ವರನಲ್ಲೋಗಿ ವರಪಡ್ದು
ಅರಣ್ಯ ತಿರುಗಾಡಿ ಮೂರು ತಿಂಗಳು
ಮಕ್ಕಳನ್ನು ಪಡಕೊಂಡು ಬಂದೆ
ಇವತ್ತು ನನ್ನ ಮಕ್ಕಳು ಊಟ ಮಾಡ್ಕೊಂಡು ಮನೆಯೊಳಕ್ತಿರೋದಿಕ್ಕೆ

ಅನ್ನವಿಲ್ಲದಂತೆ ಮಾಡಿದುನ್ನಲ್ಲಾ ಶಂಕರ
ವಜ್ರ ವೈಡೂರ್ಯ ಅರಮನೆಯೊಳಗೆ
ಹನ್ನೆರಡು ಕಂಬದ ರಂಗಸಾಲೆ
ಹೊನ್ನಿನ ಕಣಜವೇ ಮಾಯವಾಗೋಗಿದೆ
ಬಂಗ ಬಡತಾನ ಅರಪಾವು ಭತ್ಯ ಮನೆಯೊಳಗಿಲ್ದಂಗೆ ಆಗ್ಬಿಟ್ಟಲ್ಲ
ಇಷ್ಟೊಂದು ಐಶ್ವರ್ಯವೆಲ್ಲಾ
ತೊರ್‍ದು ಹೋಗ್ಬಿಟ್ಟಲ್ಲ
ಇದಕ್ಕೆ ಏನು ಗತಿ ಮಾಡಲಿ ಶಂಕರ"[೫]

(ಪು.ಸಂ-೧೮೯)

ತನಗೆ ಒದಗಿದ ಬಡತನದ ಪರಿಸ್ಥಿತಿಯನ್ನು ಚೆನ್ನಮ್ಮ ಆ ಶಿವನಿಗೆ ಮೊರೆಯಿಡುತ್ತಾಳೆ. ಹಾಗೆ ಮುಂದುವರಿಯುತ್ತಾ

"ಅಂದು ಚೆನ್ನಮ್ಮ
ನೆಲವೊಯ್ದು
ಭಂಡಾರವಾಡುತ್ತಾಳೋ
ನನ್ನ ಮಕ್ಕಳು ಉಳಿಯೋದಿಲ್ಲ
ಎಂಟು ದಿನವಾಗಿತು
ಮಕ್ಕಳು ಊಟಮಾಡಿ
ಇನ್ನೇನು ಮಾಡಲೋ ಶಿವನೇ ಗಳಿಗಾಗೋ ॥
ನನ್ನ ವಾರ್‍ಗಿತ್ತೇರು
ಸಿಕ್ಕಾಲಾಪ್ಪ ದೊಡ್ಡಾಳಪ್ಪನೆಂಡಿಯರು ಮನೆಗಾದ್ರು ಹೋಗಿ
ಒಂದು ಸೇರು ಅಕ್ಕಿಬೇಳೆ ತಂದು
ಮಕ್ಕಳಿಗೆ ಅಡುಗೆ ಮಾಡಾನ
ಊಟಕ್ಕಿಡೆನ ಅಂತ ಹೇಳಿಬಿಟ್ಟು
ಸಿಕ್ಕಾಲಾಪ್ಪನ ಹೆಂಡತಿ ಮನೆಗೆ ಹೊದ್ಲು
ನನ್ನ ಮಕ್ಕಳು ಊಟ ಮಾಡಿ
ಎಂಟು ದಿನಾ ಆತು
ಆ ಸರಿ ಹಸಿಟ್ಟು ನುಚ್ಚು ಮನೆಯೊಳಗಿಲ್ದಂಗಾಗಿ
ಮಕ್ಕಳು ಸತ್ತೋಗೋ ಸಮಯವಾಗಿದೆ

ಏನು ಮಾಡ್ಲಮ್ಮ ಅಂದಳು
ಅವಾಗ ಸಿಕ್ಕಾಲಪ್ಪನ ಹೆಂಡ್ತೆ
ಕೈ ಮೇಲಾಗಿ
ನಿನ್ನಮ್ಮುನು ಕೈ ಅಡಿಯಾಗಿ
ಒಂದು ಸೇರೇ ಬ್ಯಾಳೆ
ಕೊಟ್ಟಳಾಯಮ್ಮ ಗಳಿಗಾಗೋ ॥
ಆ ಅಕ್ಕಿ ಬೇಳೆ ತಂದು ಚಿನ್ನಮ್ಮ
ಅಕ್ಕಿ ನೀರೊಂದು ಮಾಡಿ
ಒಂದೊಲಿಯಾ ಮ್ಯಾಲಿಡುವೋಳು
ಬ್ಯಾಳೆ ನೀರೊಂದು ಮಾಡಿ
ಒಂದೊಲಿಯಾ ಮ್ಯಾಲಿಡುವೋಳು ಚಿನ್ನಮ್ಮಾ॥
ಉಕ್ಕಾಮಳ್ಳ ಬೆಂದಂತ ಅಕ್ಕಿಯಣ್ಣ
ಅನ್ನವಾಗದಂತೆ
ಸ್ವಾರೆ ತುಂಬಾ ಬರಿ ಮಣ್ಣಾಗ್ಯೆತೆಯ್ಯೋ ಗಳಿಗಾಗೋ ॥
ಇನ್ನೇನು ಮಾಡಲಿ ಶಿವುನೇ
ನನ್ನ ಮಕ್ಕಳು ಉಳಿಯೋದಿಲ್ಲೊ
ಅನ್ನ ಅವ್ರುವಿಲ್ಲದೆ
ಹೋದೋರೊ ಮಕ್ಕಳು ಇರುತಾರೇನು ಶಿವುನೇ
ಅಂದೇನೆ ಚಿನ್ನಮ್ಮ
ಶಿವು ಶೋಕ ಮಾಡುತಾಳೋ
ಮಾತಾಯಿ ಮನೆಯೊಳಗೆ"[೬]

(ಪು.ಸಂ–೧೯೩)

ತನಗೆ ಬಂದೊದಗಿದ ಬಡತನದ ಬಾಳನ್ನು ಚಿನ್ನಮ್ಮ ತನ್ನ ಮೈದುನ ಹೆಂಡತಿಯರಿಗೆ ಈ ರೀತಿ ತೋಡಿಕೊಳ್ಳುತ್ತಾಳೆ. ತಿನ್ನುವುದಕ್ಕೆ ಒಂದು ಹಿಡಿ ಅಕ್ಕಿ ಇಲ್ಲದಷ್ಟು ಬಡತನ ಬಂದೊದಗಿದೆ ಎಂದು ದುಃಖಿಸುತ್ತಾಳೆ. ಆಗ ಸಿಕ್ಕಾಲಪ್ಪನ ಹೆಂಡ್ತಿ ಚಿನ್ನಮ್ಮನಿಗೆ ಒಂದು ಸೇರು ಅಕ್ಕಿಯನ್ನು ನೀಡುತ್ತಾಳೆ. ಅದನ್ನು ಮನೆಗೆ ತಂದು ಅನ್ನ ಮಾಡಿದರೆ, ಆ ಅನ್ನ ಮಣ್ಣಾಗಿ ಬಿಡುತ್ತೆ. ಆಗ ಚಿನ್ನಮ್ಮ

ಅನ್ನವಿಲ್ಲದೆ ತನ್ನ ಮಕ್ಕಳು ಹಸಿವಿನಿಂದ ಸಾಯುತ್ತಾರೆ ಎಂದು ಗೋಳಾಡುತ್ತಾಳೆ.

ಅಷ್ಟರಲ್ಲಿ ಜುಂಜಪ್ಪ ಬರುತ್ತಾನೆ.

ಯಾಕಮ್ಮ ಇಷ್ಟೊಂದು ಗೋಳಾಡುತ್ತೀಯ ಎಂದು ಕೇಳುತ್ತಾನೆ. ಆಗ ಚಿನ್ನಮ್ಮ

ಮಗನೇ ನನ್ನ ಮಕ್ಕಳು

ಸರಿ ಪ್ರಪಂಚದಲ್ಲಿ ಮಕ್ಕಳಿಲ್ಲ ಅಂತ ಹೇಳಿಬಿಟ್ಟು

ಪರಮೇಶ್ವರನಲ್ಲೊಗಿ ವರಪಡೆದು

ಮಕ್ಕಳನ್ನು ಪಡಕಂಡೆ

ಆದರೆ ಈ ಭಂಗಾ ಬಡತಾನ ಬಂದುಬಿಡು

ಮೂರು ಗಂಡಿನಿಂದೆ ಒಂದು ಹೆಣ್ಣು ಹುಟ್ಟಿದ ದೆಸೆಯಿಂದ

ಅರಪಾವು ಭತ್ಯ ಅರಮನೆಯೊಳಗಿಲ್ಲ

ಸರಿ ಅಟ್ಟದ ಮೂಡೆ ಅಗೆದು ಭುತ್ತುವೆಲ್ಲಾ ಕಲ್ಲುಮಣ್ಣಾ ಗೈತೆ

ಹನ್ನೆರಡು ಕಂಬದ ರಂಸಾಲೆ

ಹೊನ್ನಿನ ಖಣಜ ಮಾಯವಾಗೈತೆ ಮಗನೇ

ಮಕ್ಕಳು ಊಟ ಮಾಡಿ ಎಂಟು ದಿನವಾತು

ನನ್ನ ಮಕ್ಕಳು ಉಳಿಯೋದಿಲ್ಲಪ್ಪಾ

(ಪು.ಸಂ-೧೯೪)

ಎಂದು ಜುಂಜಪ್ಪನ ಪಾದವಿಡಿದು ಗಟ್ಟಿಯಗಿ ಅಳುತ್ತಾಳೆ. ಆಗ ಜುಂಜಪ್ಪ

ಅಮ್ಮ

ಮೂರೇ ತಿಂಗುಳೇ

ನಮಗೆ ಬಡತನ ಇರದು

ಮೂರು ತಿಂಗಳುವರಿಗೂ ನಾವು

ಅರಮನೆಯೊಳಗೆ ಇದ್ದರೆ

ನಮ್ಮ ಬಡತಾನ ಇಂಗದಿಲ್ಲ ಕಣಮ್ಮ

ಅರಣ್ಯದಲ್ಲೋಗಿ

ಒಂದು ಮೂಗುತ್ತದ ಮುಂದೆ

ಮೂರು ತಿಂಗಳೂವರೆಗೂ

ಅರಮನೆ ಬಿಟ್ಟೋಗಿ ವಾಸ ಮಾಡಬೇಕು.

ವಾಸಮಡಿ

ಅಡವಿ ಸೊಪ್ಪು ತಿನ್ನಬೇಕು.

ಮಡಗಿನಲ್ಲಿ ನೀರು ಕುಡ್ಕಂಡಿರಬೇಕು ತಾಯಿ ನಾವು
ಅರಮನೆಯೊಳಗಿದ್ದರೇ ನಮಗೆ
ನಮ್ಮ ಬಡತಾನ ಇಂಗದಿಲ್ಲ ಕಣಮ್ಮ

(ಪು.ಸಂ-೧೯೪)

ಎಂದು ತಾಯಿ ಚಿನ್ನಮ್ಮನಿಗೆ ಜುಂಜಪ್ಪ ಹೇಳುತ್ತಾನೆ. ಕೊನೆಗೆ ಅರಮನೆಯನ್ನು ತೊರೆದು ತನ್ನ ಮಕ್ಕಳೊಂದಿಗೆ ಚಿನ್ನಮ್ಮ ಕಾಡು ಸೇರುತ್ತಾಳೆ ತಾನು ಬಂಜೆ ಎಂದು ತನ್ನ ಅತ್ತಿಗೆಯರು ಕೊಟ್ಟ ಕಷ್ಟಗಳೆಲ್ಲ ನೆನೆದು ದುಃಖಿಸುತ್ತಾಳೆ.

ಇವತ್ತು ಅರಮನೆ ಬಿಟ್ಟು
ಅರಣ್ಯಕ್ಕೊಗೋ ಸ್ಥಿತಿ ಬಂದ್ಬಿಡ್ತಲ್ಲಪ್ಪ
ಹಿಂದೆ ನಮ್ಮ ಅತ್ತಿಗೆರು ಮೊದ್ಲೆ ಆಡ್ಕೊಂಡಿದ್ದುರು
ನಿಟ್ಟು ನೀರು ಬಂಜೆ
ಅವುಳ್ನ ಆದಿಶಕ್ತಿ ಹೊರದಿಲ್ಲ
ಭೂದೇವತಿ ಕಾಯೋದಿಲ್ಲ
ಎದ್ದು ಬಂಜೆ ಮಕ ನೋಡಬಾರ್ದು
ಅವುಳುಗಳು ಉಚ್ಚೆ ತುಳಿಬ್ಯಾಡ್ದಂತೆ
ನಮ್ಮ ಅತ್ತಿಗೆರು ಅಂದುರು
ಅವುರು ಹಂಗಂದ್ರು ರಾತ್ರಿ ಟೈಂನಲ್ಲಿ
ಮೂರು ತಿಂಗಳು ಅಡವಿಯೊಳಗೊಡಾಡಿ
ಪರಮೇಶ್ವರನ ತಪಸ್ಸು ಮಾಡಿ
ಮಕ್ಕಳನ್ನ ಪಡುದೇ
ಈವತ್ತು ಮಕ್ಕಳನ್ನ ಪಡದುಬುಟ್ಲು
ಸರಿ ಬಡತಾನ ಬಂತು
ತಿಂಬೋಕೆ ಹಿಟ್ಟಿಗೆ ಗತಿಯಿಲ್ಲದೇ
ಅರಣ್ಯಕೊಗ್ಯವುಳಂತೆ ಚಿನ್ನಮ್ಮ ಅಂತ
ನಮ್ಮ ಅತ್ತಿಗೆರಿಗೆ ಗೊತ್ತಾದ್ರೆ
ಎಷ್ಟು ಆಡಕೊಂತರೋ
ಇದಕ್ಕೆ ಏನು ಮಾಡಲಿ ಶಂಕರ ॥

ಹಸಿವು, ಬಡತನ ಹೇಗೆ ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಸಂಬಂಧಗಳಲ್ಲಿ ಅವಮಾನಕ್ಕೆ, ಅಸಹಾಯಕತೆಗೆದೂಡುತ್ತೆ ಎಂಬುದನ್ನು ಚಿನ್ನಮ್ಮನ ಮಾತುಗಳಲ್ಲಿ ಕೇಳಬಹುದು. ಬಂಜೆತನ

ಹೀಗಿ ಮಕ್ಕಳನ್ನು ಪಡೆದರು. ಹಸಿವು, ಬಡತನ ತನ್ನ ಕುಟುಂಬವನ್ನು ಇನ್ನಷ್ಟು ಬಿಕ್ಕಟ್ಟಿಗೆ ಸಿಲುಕಿಸ್ತಿರುತ್ತೆ. ಹಾಗೆ ಮುಂದುವರೆದು ಚಿನ್ನಮ್ಮ ಈ ರೀತಿ ಬೇಡಿಕೊಳ್ಳುತ್ತಾಳೆ.

ಸಿಂತೆ ಮಾರಿ ಮಹಾದೇವಿ
ಸರಿ ಅರಮನೆಗೆ ಬಾಗಿಲಿಗೆ ಶಾಪ ಇಕ್ಕುತಾಳೆ
ಶಂಕರ ನಮ್ಮ ಅಣ್ಣಾಗಳಾದರು
ನಮ್ಮ ತಂಗೀನ ಮಕ್ಕಳ್ನನ್ನು ನೋಡಬೇಕು
ಅಂತ ಮಕ್ಕಳನ್ನು ನೋಡಬೇಕು ಅಂತ ಬಂದೆ
ಹಾಕಿದಾ ಬಾಗ್ಲು ತೆಗದಂತೆ ಕಾಣಲಿ
ಅರಣ್ಯದಲ್ಲಿರತಕ್ಕಂತ ಮಕ್ಕಳ್ಳು
ಅರಮನೆಯೊಳಗಾಡಿದಂತೆ ಕಾಣಲಿ
ಅರಣ್ಯದಲ್ಲಿರತಕ್ಕಂತ ಮಕ್ಕಳು
ಅರಮನೆಯೊಳಗಾಡಿದಂತೆ ಕಾಣಲಿ
ಅರಣ್ಯದಲ್ಲಿರತಕ್ಕಂತ ಮಕ್ಕಳು
ಅರಮನೆಯೊಳಗಾಡಿದಂತೆ ಕಾಣಲಿ
ಹನ್ನೆರಡು ಕಂಬದ ರಂಸಾಲೆ
ಹೊನ್ನಿನ ಬೀಜ ಮಂಟಪಾಗೈತೇ
ಅದು ತುಂಬದಂತೆ ಕಾಣಲಿ
ನಮ್ ಅಣ್ಣಾಗಳ ಕಣ್ಣಿಗೆ
ಅರಮನೆ ಮೇಲೆ
ಬಂಗಾರದ ತೆನೆ ಕೋಟಿ ಬೆಳೆದಿತ್ತು.
ಅರಮನೆ ಮೇಲಿರ್ ತಕ್ಕಂತ
ಬಂಗಾರದ ತೆನೆ ಬೆಳದಂತೆನೆ ಕಾಣಲಿ
ಅಂದು ಶಾಪ ಅರಮನೆಗಿಟ್ಟು ಚಿನ್ನಮ್ಮ

ತನ್ನ ಒಳಗಿನ ಅವಮಾನಗಳನ್ನು ಬಚ್ಚಿಟ್ಟುಕೊಳ್ಳುವ ಪರಿ ಈ ಮೇಲಿನ ಸಾಲುಗಳಲ್ಲಿ ಕಂಡು ಬರುತ್ತದೆ. ಹೊಟ್ಟೆಯೊಳಗೆ ಹಸಿವಿದ್ದರೂ ಹಸಿವಿಲ್ಲದ ಹಾಗೆ ಬದುಕುವ ವಿಚಿತ್ರ ಸ್ಥಿತಿಯಲ್ಲಿ ಚಿನ್ನಮ್ಮ ಇಲ್ಲಿ ಕಂಡು ಬರುತ್ತಾಳೆ. ಆಧುನಿಕ ಕಾಲದ ಸ್ತ್ರೀಯೊಬ್ಬಳ ಹಸಿವು, ಬಡತನದ ಪ್ರತಿನಿಧಿಯಾಗಿ ಇಲ್ಲಿ ಚಿನ್ನಮ್ಮ ಕಂಡು ಬರುತ್ತಾಳೆ. ಮತ್ತೆ ತನ್ನ ದನಗಳೊಂದಿಗೆ ಆಹಾರ, ನೀರಿಗಾಗಿ ಪರಸ್ಥಳಕ್ಕೆ ಸಂಚರಿಸುತ್ತಿದ್ದ ಮಾದಯ್ಯ. ಹಾದಿ ಮೇಲಿನ ಕಥೆಗಳ್ಳು ಬಚ್ಚಿಟ್ಟು ಹಾಡಿಗಾರರನ್ನು ಕೇಳಿಸಿ ತನ್ನ ಮಲ್ಲಾಗಾರರನ್ನು ಪಡೆಯುತ್ತಾ ಬರುತ್ತಾನೆ.

ಇಂತಹ ಸಂದರ್ಭದಲ್ಲಿ ಹಾಗಲವಾಡಿ ಈರಲಿಂಗಮ್ಮ ಎಂಬ ಗಂಡ ಹೆಂಡಿರು ಮಣೆಗಾರರು ದೊಡ್ಡ ಸಂಸಾರ ಹನ್ನೆರಡು ಗಂಡುಮಕ್ಕಳು. ಬಡತನ, ತಿನ್ನಾಕೆ ಏನೂ ಇಲ್ಲದ ಕುಟುಂಬ ಇಂತಹ ಪರಿಸ್ಥಿತಿಯಲ್ಲಿ ಈರಲಿಂಗಪ್ಪ ಯೋಚನೆ ಮಾಡುತ್ತಾನೆ. 'ಅಯೋ ನಮಗೆ ತಿಂಬಾಕ ಅನ್ನವಿಲ್ಲ" ಎಂದು ತಿಳಿದು ದನಗಳನ್ನು ಕಾಯುವುದಕ್ಕೆ ಹೋಗೋ ಆಳುಗಳನ್ನು ಬೇಕಾಗುತ್ತದೆ ಎಂದು ತಿಳಿದು ತನ್ನ ಮಗ ಈರೋಬನನ್ನು ತಂದು ಕಾಡಿನಲ್ಲಿ ಬಿಟ್ಟುಬಿಡುತ್ತಾರೆ. ಆದರೆ ಈರಲಿಂಗಪ್ಪ ತನ್ನ ಮಗನನ್ನು ನೇರವಾಗಿ ಜುಂಜಪ್ಪನ ಬಳಿ ಬಿಡಬಹುದಾಗಿತ್ತು. ಆದರೆ ಇವರು ಮಣೆಗಾರರು. ಜುಂಜಪ್ಪನಿಗೆ ಮೈಲಿಗೆ ಹಾಗುತ್ತೆ ಎಂದು ತಿಳಿದಿದ್ದರು. ಕೊನೆಗೆ ಕಾಡಿನಲ್ಲಿ ಅಳುತ್ತಾ ತಿರುಗುತ್ತಿದ್ದ ಮಗುವನ್ನು ಮಾರಣ್ಣ □ ಮೈಲಣ್ಣರು ಕಂಡರು. ಆ ಮಗುವನ್ನು ತಂದು ಜುಂಜಪ್ಪನ ಬಳಿ ಬಿಡುತ್ತಾರೆ. ಚಿಕ್ಕರೆಂಬ ಹಸುವಿನ ಹಾಲು ಕುಡಿದು ಬದುಕಲು ಅಪ್ಪಣೆ ನೀಡುತ್ತಾರೆ.

"ಚಿನ್ನಮ್ಮ ಮಕ್ಕಳನ್ನು ಕರೆದುಕೊಂಡು ಕಾಡಿಗೆ ಬರುತ್ತಾಳೆ.
ಸುತ್ತಾ ಕಾರೆ ಮುಳ್ಳು ಕವಳಿ ಮುಳ್ಳು ಕಡದು
ಬೇಲಿ ಹಾಕಿದ ಕಿರುವಾಕಿದ
ಕಿರುವನ್ನ ತಿರುವಿ ಸ್ವಾಮಿ ಬೆರಗಾಕಿ
ಮೂಗುತ್ತುದ ಸುತ್ತೂರು ನೋಡಮ್ಮ ತಾಯಿ
ನೀನು ಹುಟ್ಟಿದ ಮನೆಯೊಳಗಿದ್ದೆ
ಕೊಟ್ಟ ಮನೆಯೊಳಗೆ ಇಂತವರಿಗೂ
ಅಷ್ಟಸ್ವರ್ಯದ ಮೇಲೆ ಇದ್ದೆ
ಇವತ್ತು ಬಡತಾನ ಬಂಧ್ಬಿಟ್ಟೈತೆ
ನಾವು ಹುಟ್ಟಿದ ದೆಸೆಯಿಂದ
ನಾನು ನನ್ನ ತಮ್ಮಗಳ್ನು
ನನ್ನ ತಂಗೀನೂ ಮೂರು ತಿಂಗಳೂ
ನಮ್ ಐಶ್ವರ್ಯ ನಮಗೆ ಬರೋವರ್ಗು
ನಾನು ಸಾಕ್ಕ್ಯಂಡು ಬರ್ತೀನಿ
ನಮ್ಮ ಅಣ್ಣುಗಳು ಘನ ಪುಣ್ಯವಂತರು
ಹೋಗಿ ತವರುಮನೆಯೊಳಗಿರಮ್ಮ ನೀನು
ಮೂರು ತಿಂಗಳು ತುಂಬುತಿದ್ದಂಗೆ
ನಮ್ ಐಶ್ವರ್ಯ ನಮಗೆ ಬರ್ತಾಲೇ
ಬಂದು ಕರ್ಕ್ಕೊ ಬರ್ತೀನಿ

ಹೋಗ ತಾಯಿ ಅಂದ
ಚಿನ್ನಮ್ಮನ್ನ ಜುಂಜಪ್ಪ
ಮಗನೇ॥
ಹೆಣ್ಣು ಕೆಟ್ಟು ತವರುಮನೆಗೆ ಹೋಗಬಾರ್ದು ಕಣಪ್ಪ
ಸರಿ ಅಡವಿ ಸೊಪ್ಪು ಮಾಡ್ಲೊಡ್ಡಿ ಕೂಯುವಾಗ
ಹಡದಮ್ಮ ಗುರುತಿಸಿಲಿಲ್ಲವಂತೆ
ಹೋಗುಬಾರ್ದಪ್ಪ
ನಮಗೆ ಎಷ್ಟೇ ಕಷ್ಟ ಬಂದರೂ
ನಿನ್ ಹತ್ರಲೇ ನೀಗಿಸ್ಕೊಂಡಿರಬೇಕು ಮಗನೇ
ಅಂದ್ಲು ಸಿನ್ನಮ್ಮ
ಹೋಗ್ಲಿ ಬಿಡು ತಾಯಿ ಹಂಗಾದ್ರೆ
ಅಂಬ್ತ ಹೇಳಿ ಸುಮ್ಮನೇ ಆದುರು
ಅಂ ಕಿರಿವಿನೊಳಗೆ ಮೂಗುತ್ತದೆ ಮುಂದುಗಡೆ
ಮಾರಣ್ಣ ಮೈಲಣ್ಣ ಸಿಕ್ಕಳ ಮಾರಕ್ಕ
ಅಂಬ ಮಗುವನ್ನ ಮುಂದಿಟ್ಟು ಕೊಂಡು
ಮಹಾತಾಯಿ ಅರಣ್ಯದಲ್ಲಿ ಮಲಗಿದ್ದಳ್ಳು
ಕೈಕಾಲು ಮಕುವನ್ನ
ತೊಳುದವುಳೆ ಸಿನ್ನಮ್ಮ
ಹಣೇಗೆ ವಿಭೂತಿ
ಕೊರಳಿಗೂ ಬಸುವಂಗ
ಧರಿಸ್ಯಾವುಳೋ ಸಿನ್ನಮ್ಮ
ಚಂದ್ರ ಸೂರ್ಯ್ಯಾಧಿಗಳಿಗೆ
ಶರಣಾರ್ತಿ ಮಾಡ್ಯವುಳೇ
ಕೊಡದಲ್ಲಿ ನೀರ ತುಂಬಿಟ್ಟು
ಮಾತಾಯಿ ಸಿನ್ನಮ್ಮ
ಅಡವೀನೇ ಸೊಪ್ಪಣ್ಣ
ಬೆರಿಕೆ ಬೆರಿಕೆ ಸೊಪ್ಪು
ಕೊಯ್ದಿವುಳೋ
ಸಿನ್ನಮ್ಮಗಳಿಗಾಗೋ ॥

ಸೊಪ್ಪು ನೀರೊಂದು ಮಡಿ
ಒಲೆಯ ಮ್ಯಾಲಿಟ್ಟುವುಳೇ
ಉರಿಯನ್ನ ಹಾಕ್ಯವಳೋ
ಸಿನ್ನಮ್ಮ ಸೊಪ್ಪನ್ನೆ
ಬೇಯ್ಸಿವುಳಣ್ಣ
ಮಾರಣ್ಣುನಿಗೊಂದಿಂಡಿಳಿಕೆ
ಮೈಲಣ್ಣುನಿಗೊಂದಿಂಡಿಳಿಕೆ
ಸಿಕ್ಕಳು ಮಾರಕೆಂಬ
ಹೆಣ್ಣು ಮಗುವಿಗೊಂದಿಡಿಳಿಕೆ
ಸಿನ್ನಮ್ಮ ಕೊಟ್ಟವಳೊ
ಮೂಗುತ್ತೆದ ಮರೆಯೊಳಿಕೆ ಜುಂಜಪ್ಪ ಕುತ್ಕಂಡು
ಮಕ್ಕಳು ಕೈಯಾಗಳ ಸೊಪ್ಪನ್ನ ವಾರೆಗಣ್ಣಿನಲ್ಲಿ ನೋಡದ
ವಿಷ ಆಗಿಬಿಡ್ತು
ವಾರೆಗಣ್ಣಿನಲ್ಲಿ ಮಕ್ಕಳು ಕೈಯಾಗಳ ಸೊಪ್ಪನ
ಜುಂಜಪ್ಪ ನೋಡ್ತಿದ್ದಂಗೆ ವಿಷ್ಯ ಆಗ್ಬಿಡ್ತು
ಮಾರಣ್ಣ ಮೈಲಣ್ಣ ಥೂ ಅಂತ
ಕಿರಿವಿನಿಂದಾಚೆಗೆ ಬಿಸಾಕಿದರು ಸೊಪ್ಪನ್ನ
ಏನಮ್ಮ ತಾಯಿ
ಭಂಗ ಬಡತಾನ ಬಂದುಬಿಡ್ತು
ನಮ್ಮ ಮಕ್ಕಳು ಸತ್ತೋಗ್ಲಿ ಎಂದೇಳಿಬಿಟ್ಟು
ವಿಷದ ಸೊಪ್ಪು ತಂದು ಬೇಯಿಸಿ ಕೊಟ್ಟಿದ್ದೀಯಮ್ಮ ಅಂದರು
ಅಂಗಂಬ್ತಲೇ ಸಿನ್ನಮ್ಮ ಗೋಳಾಡಿಬಿಟ್ಲು ಶಂಕರ
ಸೊಪ್ಪು ತಿಂದು ಉಳ್ಕಂತರೆ ನಮ್ಮ ಮಕ್ಕಳು ಅಂದ್ಕೊಂಡಿದ್ದೆ
ಅದನ್ನ ವಿಷ ಅಂತಾ ಬಿಸಾಡಿ ಬಿಟ್ರಲ್ಲಪ್ಪ
ಮಗನೇ ಜುಂಜಪ್ಪ"[೭]

(ಪು.ಸಂ-೧೯೯)

ಹೀಗೆ ಕಾಡಿಗೆ ಬಂದ ಚಿನ್ನಮ್ಮ ಮಕ್ಕಳ ಹೊಟ್ಟೆ ಹಸಿವನ್ನು ನೀಗಿಸಲು ಕಾಡಿನಲ್ಲಿ ಸಿಗುವ ಸೊಪ್ಪುಗಳನ್ನು ಆಶ್ರಯಿಸುತ್ತಾಳೆ. ಪ್ರತಿದಿನದ ಆಹಾರ ಇದೇ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಜುಂಜಪ್ಪ ತನ್ನ ತಾಯಿಗೆ ಸಲಹೆಯೊಂದನ್ನು ನೀಡುತ್ತಾನೆ.

"ಶಿವು ಶೋಕ ಮಾಡುವಾಗ
ಅಮ್ಮ ಹುಲಿಗೆ ಬಡತನ ಬಂದರೆ
ಹುಲ್ಲುನೀರು ಮೇಯಿತಾದೇನಮ್ಮ
ಅದೇನಾಹಾರ ತಿನ್ನುಬೇಕೊ ಅದೇ ತಿನ್ನಬೇಕು
ನನ್ನ ತಮ್ಮಗಳಿಗೂ ತಂಗಿಗೂ ಯಾವತ್ತಾದ್ರು
ಸೊಪ್ಪು ತಿಂದು ರೂಢಿ ಇತ್ತೇನಮ್ಮ
ಆದ್ರಿಂದ ಅವುರು ಸೊಪ್ಪು ತಿಂದಿಲ್ಲ
ಇಷ್ಟಕ್ಕೆ ನೀನು ಸಿಂತೆ ಯಾಕಮ್ಮ ಮಾಡ್ತಿಯಮ್ಮ
ಮತ್ತೆ ಏಳು ಮಾಡಲಿ ಮಗನೇ
ಹಿರಿಯೂರು ಪೇಟೆ
ಇಲ್ಲಿಗೆಮೂರುಗಾವುದ ಆಯ್ತಮ್ಮ
ಒಂದು ಹೊರೆ ಸೌದೆ ಕಡಕೊಂಡು ಹೋಗು
ಸರಿ ಅಲ್ಲೊಬ್ಬ ಕ್ವಾಮಟಿಗ ಶೆಟ್ಟಿ
ಮೂರು ದುಡ್ಡಿಗೆ ಸೌದೆ ಹಾಕಮ್ಮ ಅಂತ ಕೇಳ್ತಾನೆ
ಹೆಚ್ಚಾಗಿ ಮಾರಕೋಗಬ್ಯಾಡ
ಹೆಚ್ಚಾಗಿ ಮಾರದು ನಮಗೆ ಬೇಕೂ ಇಲ್ಲ
ಮೂರು ದುಡ್ಡಿಗೆ ಸೌದೆ ಹಾಕ್ಬಿಡು
ಒಂದು ದುಡ್ಡಿಗೆ ಉಪ್ಪು ಮೆಣಸಿನಕಾಯಿ
ನಿನಗೆ ಬಾಯಿಗೆ ಅಡಿಕೆ ಎಲೆ
ಒಂದು ದುಡ್ಡಿಗೆ ಒಂದು ಪಾವು ಅಕ್ಕಿ
ಒಂದು ದುಡ್ಡಿಗೆ ಒಂದು ಪಾವು ಹಸೀಕಡಲೇ
ಇಷ್ಟು ಮಾತ್ರಾ ತಕ್ಕೊಂಡು ಬಂದ್ಬುಡು
ನಮಗೆ ಮಿಗಿಲಾಗದು ಬೇಕಾಗಿಲ್ಲ ಅಂತ ಹೇಳಿದ
ಆಗಲಿ ಹೇಳಪ್ಪ ನಿನ್ನ ಕರುಣೆ ಏನೈತೋ
ಅದೆಲ್ಲಾ ಆಗಲಿ ಮಗನೆ ಅಂದು ಸಿನ್ನಮ್ಮ"೮

(ಪು.ಸಂ–೨೦೦)

ಹೀಗೆ ಚಿನ್ನಮ್ಮ ಹಿರಿಯೂರು ಪೇಟೆಯಲ್ಲಿ ಸೌದೆ ಹೊರೆಯನ್ನು ಮಾರಿ ಬಂದ ಹಣದಿಂದ ತಮ್ಮ ಮಕ್ಕಳ ಹಸಿವನ್ನು ನೀಗಿಸುತ್ತಾಳೇ. ಇದು ಇವತ್ತಿನ ಗ್ರಾಮಭಾರತದ

ಜೀವನವಾಗಿದೆ. ಬರಗಾಲ ಇಡೀ ದೇಶವನ್ನು ಆವರಿಸಿದೆ. ಜನರಿಗೆ ಕುಡಿಯಲು ನೀರಿಲ್ಲ. ತಿನ್ನಲು ಅನ್ನವಿಲ್ಲದೆ ಜನ ಸಾಯುತ್ತಿದ್ದಾರೆ.

೫.೨ ಮೈಲಾರಲಿಂಗ ಕಾವ್ಯದಲ್ಲಿ ಹಸಿವಿನ ನಿವೇಧನೆ

ಬೇಸಾಯ ಸಂಸ್ಕೃತಿಗಿಂತ ಪಶುಪಾಲನ ಸಂಸ್ಕೃತಿ ತುಂಬ ಪ್ರಾಚೀನವಾದುದು. ಕಾಡಿನಿಂದ ಹೊರಬಿದ್ದ ಸಮುದಾಯಗಳು ತಮ್ಮೊಟ್ಟಿಗೆ ಪ್ರಾಣಿಗಳನ್ನು ಸಾಕುವುದನ್ನು ಪ್ರಾರಂಭಿಸಿದವು. ಆಹಾರದ ದೃಷ್ಟಿಯಿಂದಲೂ ಆರ್ಥಿಕತೆಯ ದೃಷ್ಟಿಯಿಂದಲೂ ಪ್ರಾಣಿಗಳನ್ನು ಸಾಕುವುದು ಉತ್ತಮವಾಗಿದ್ದು. ಪಶುಪಾಲನ ಸಂಸ್ಕೃತಿಯಲ್ಲಿ ಯಾರು ಪಶುಗಳ ಸಂಖ್ಯೆ ಹೆಚ್ಚು ಹೊಂದಿರುತ್ತಿದ್ದರೂ ಅವರು ಸಮಾಜದಲ್ಲಿ ಹೆಚ್ಚಿನ ಗೌರವವನ್ನು ಹೊಂದಿರುತ್ತಿದ್ದರು. ಈ ರೀತಿ ಶ್ರೀಮಂತಿಕೆಯನ್ನು ಅಳೆಯಲಾಗುತ್ತಿತ್ತು. ಯಾರು ಯಾರು ಪಶುಗಳನ್ನು ಸಾಕುತ್ತಿದ್ದರೂ ಅವರೆಲ್ಲಾ ಗೋಪಾಲಕರೇ ಆಗಿದ್ದರು. ಬರುಬರುತ್ತಾ ಸಮುದಾಯದ ಜನರು ಪಶುಗಳ ಒಟ್ಟಿಗೆ ಜೀವಿಸತೊಡಗಿದರು. ಪಶುಗಳು ಬರುಬರುತ್ತಾ ಅವರ ಭಾವಲೋಕದಲ್ಲಿ ದೈವಾರೂಪಗಳಾಗಿ ನಿಂತವು.

"ಕರ್ನಾಟಕದ ಮೂಲಸ್ಥರು ಕುರುಬರು. ಕುರಿಗಳನ್ನು ಸಾಕುವುವವರೇ ಕುರುಬರು. ಇವರು ಮೈಲಾರಲಿಂಗನ ಭಕ್ತರು. ಮೈಲಾರ ಎಂಬುದು ಸ್ಥಳವಾಗಿದ್ದು ಅಲ್ಲಿ ಶಿವಲಿಂಗ ಸ್ಥಾಪನೆಯಾಗಿರುವುದರಿಂದ ಮೈಲಾರಲಿಂಗ ಎಂದು ಹೆಸರಾಯಿತು. ಅನಂತರ ಕುಂಚಟಿಗರು, ಗಂಗಟಕಾರ ಒಕ್ಕಲಿಗರು ಕರ್ನಾಟಕದಲ್ಲಿ ಬಂದವರು. ಕುರುಬರ ಸಮುದಾಯದ ಬಗ್ಗೆ ರನ್ನನ ಗಧಾಯುದ್ಧ ಕಾವ್ಯದಲ್ಲಿ ಭೀಮ ಮತ್ತು ದ್ರೌಪದಿ ಸಂಭಾಷಣೆಯಲ್ಲಿ ಕಂಡುಬರುತ್ತದೆ. ಹಾಗೆಯೇ ಟಿ.ಎಲ್ ನರಸಿಂಹಚಾರ್ ಅವರು ತಮ್ಮ ಕೃತಿಯಾದ ಸಿದ್ಧರಾಮಚರಿತ್ರೆಯಲ್ಲಿ ಕುರುಬರ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಹಾಗೂ ಶಂಭಾಜೋಷಿಯವರ 'ಶಿವರಹಸ್ಯ' ಕೃತಿಯಲ್ಲಿ 'ಮರುದ್ಗಣ' ಎಂಬ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿ ಕುರುಬರು ಔಷದಿಯಗುಣವನ್ನು ಕಂಡುಕೊಂಡು ಹಲವು ಖಾಯಿಲೆಗಳಿಗೆ ಔಷದಿಯನ್ನು ನೀಡುತ್ತಿದ್ದರೆಂದು ಉಲ್ಲೇಖಗೊಂಡಿದೆ."[೯]

ಜೀವರಕ್ಷಣೆಯೇ ಮೈಲಾರಲಿಂಗ ಕಾವ್ಯದ ಆಶಯ ಎಲ್ಲಿಯ ತನಕ ಹಸಿವಿರುತ್ತದೆಯೋ ಅಲ್ಲಿಯ ತನಕ ಬದುಕಿರುತ್ತದೆ. ದಾರಿದ್ರ್ಯವೇ ಹಸಿವು. ಲಿಂಗ ಜೀವ ರಕ್ಷಣೆಯ ಸಂಕೇತರಾಗಿ ಭಗವಂತನ ಪ್ರತಿರೂಪ. ರಾಗಿ ಲಿಂಗಾಕಾರವಾಗಿ ಕಾಣುವುದು. ಇದು ಜನರ ಹಸಿವನ್ನು ನೀಗಿಸುತ್ತದೆ. ದೈವರೂಪವಾಗಿ ಕಂಡುಬರುತ್ತದೆ. ರಾಗಿಯ ಮಹತ್ವವನ್ನು ಕನಕದಾಸರು ತಮ್ಮ ರಾಮಧಾನ್ಯ ಕೃತಿಯಲ್ಲಿ ವಿವರಿಸಿದ್ದಾರೆ. ಜಗತ್ತಿನ ಹಸಿವನ್ನು ನೀಗಿಸಲೆಂದು ರಾಮ ರಾಗಿಯನ್ನು ಸೃಷ್ಟಿಮಾಡಿದನೆಂದು ಪುರಾಣ ತಿಳಿಸುತ್ತದೆ. ರಾಘವನ ಇನ್ನೊಂದು ರೂಪವೇ ರಾಗಿ. ರಾಗಿ ಬಡಜನರ ಹಸಿವನ್ನು ಹೋಗಲಾಡಿಸುವ ಧಾನ್ಯ. ರಾಗಿಯ ಹಿಂದೆ ಹಸಿವವರ

ದೊಡ್ಡ ಸಮುದಾಯವೇ ಇದೆ. ಇನ್ನೊಂದು ಕ್ರಮದಲ್ಲಿ ಯೋಚಿಸಿದಾಗ ಅದು ಶಿವನ ಲಿಂಗದ ರೂಪದಲ್ಲಿ ಕಾಣುವುದು. ಧಾನ್ಯರಳೆಲ್ಲವು ದೈವದ ಸ್ವರೂಪಗಳಾಗಿ ಕಂಡು ಬರುತ್ತವೆ. ಧಾನ್ಯಗಳಲ್ಲಿ ಸಮಾನತೆಯನ್ನು ಕಾಣುತ್ತೇವೆ. ಅವುಗಳನ್ನು ಭೋಗಿಸುವವರಲ್ಲಿ ಸಮಾನತೆ ಕಂಡುಬರುತ್ತಿಲ್ಲ ಅಸಮಾನತೆ ಮನುಷ್ಯ ಸಮಾಜದಲ್ಲಿ ಮಾತ್ರ ಕಂಡುಬರುವುದು. ಉಳಿದಂತೆ ಪ್ರಕೃತಿಯಲ್ಲಿ ಎಲ್ಲವೂ ಸಮಾನವಾಗಿ ಕಂಡುಬರುತ್ತವೆ. ಆದರೆ ಜೈವಿಕ ನೆಲೆಯಲ್ಲಿ ಕೆಲವು ಗಾತ್ರದಲ್ಲಿ, ಎತ್ತರದಲ್ಲಿ, ತೂಕದಲ್ಲಿ ವ್ಯತ್ಯಾಸ ಕಂಡುಬರುತ್ತವೆ.

ಅಸಮಾನತೆಯ ಬಹುಜನ ಸಮುದಾಯದ ಬದುಕಿನ ಭಾಗವಾಗಿ ಮೈಲಾರಲಿಂಗ ಕಾವ್ಯ ಕಂಡುಬರುತ್ತದೆ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ದಟ್ಟವಾಗಿ ಪ್ರಚಲಿತವಾಗಿರುವ ಮೈಲಾರನ ಸಂಪ್ರದಾಯ ತುಂಬಾ ವಿಶಿಷ್ಟವಾದುದು. ಜಾತಿ, ಮತ ಮತ್ತು ವರ್ಗಗಳ ಎಲ್ಲೆ ಮೀರಿದ ಸಂಕೀರ್ಣ ಸಂಪ್ರದಾಯವಿದು. ಇಂಥ ಸಂಕೀರ್ಣ ಮತ್ತು ಸಮೃದ್ಧ ಸಂಪ್ರದಾಯಗಳನ್ನು ಏಕೀಕೃತ ಸೂತ್ರದಡಿಯಲ್ಲಿ ಜೋಡಿಸುವುದು. ದುಸ್ತರವಾದುದು. ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಮೈಲಾರನನ್ನು ತಮ್ಮ ಆರಾಧ್ಯ ದೈವವನ್ನಾಗಿ ಮಾಡಿ ಕೊಂಡಿರುವರು. ಭಕ್ತ ಜೀವನದಲ್ಲಿ ಹಾಸುಹೊಕ್ಕಾಗಿರುವ ಮೈಲಾರದೈವದ ಮಹಾಕಾವ್ಯ ತುಂಬ ಕುತೂಹಲಕರವಾದದು. ಮೈಲಾರನ ದುಷ್ಟ ಸಂಹಾರ, ಶಿಷ್ಟರಕ್ಷಣೆ ಮದುವೆಗಳು, ಪವಾಡಗಳು, ಭಕ್ತರನ್ನು ಮಾಡಿಕೊಳ್ಳಲು ಮಾಡುವ ಹೀಗೆ ಹಲವಾರು ಅಂಶಗಳನ್ನು ಒಳಗೊಂಡಿರುವ ಸುದೀರ್ಘವಾದ ಮಹಾಕಾವ್ಯ ಕನ್ನಡದ ಅತ್ಯುತ್ತಮ ಜನಪದ ಮಹಾಕಾವ್ಯಗಳಲ್ಲೊಂದು.

ದಕ್ಷಿಣ ಒಳನಾಡಿನಲ್ಲಿ ಶ್ರೀಗಿರಿ ಎಂಬ ಪರ್ವತವಿದೆ. ಅಲ್ಲಿ ಅತ್ರಿಕಮುನಿ ಕಪಿಲ ಮುನಿ, ಪುರುಷಮುನಿ, ಜೋಕಮುನಿ ಎಂಬ ಋಷಿಗಳು ಯಜ್ಞ ಮಾಡುತ್ತಿದ್ದರು. ಕೊಂಕಣ ದೇಶದ ಮಣಿಕಾಸುರ, ಮಲ್ಲಾಸುರರೆಂಬ ರಾಕ್ಷಸರು ಯಜ್ಞ ಕೆಡಿಸಲು ಬರುತ್ತಾರೆ. ಋಷಿಗಳು ಅವರ ಕಷ್ಟ ತಡಿಯಲಾರದೆ ಶಿವನನ್ನು ನೆನೆಸಲು ಶಿವನು ಪ್ರತ್ಯಕ್ಷನಾಗಿ ರಾಕ್ಷಸರನ್ನು ಧ್ವಂಸಮಾಡಿ ಭೂಲೋಕದಲ್ಲಿಯೇ ನೆಲೆನಿಂತು ಮೈಲಾರಲಿಂಗ ಎನಿಸಿಕೊಂಡ ಎನ್ನುತ್ತಾರೆ. ಇಂಥ ಮೈಲಾರನ ಅಸ್ತಿತ್ವವನ್ನು ಭಕ್ತರು ಗುರುತಿಸುವ ಪರಿ ವಿಶಿಷ್ಟವಾದುದು. ಕರಿಕಂಬಳಿ, ಕರಿಟೊಪ್ಪಿಗೆ ಧರಿಸಿ, ಕೈಯಲ್ಲಿ ಡಮರುಗ ಹಿಡಿದು ಭಂಡಾ ಹಚ್ಚಿರುತ್ತಾನೆ. ವೀರಭದ್ರನನ್ನು ಸುಲಿದು ಮಚ್ಚಿಗರಿಯಲ್ಲಿ ಮಲೆಹೆಬ್ಬುಲಿಯಂತೆ ಹಾಲುಮತದ ಕುಲದ ಜುಂಬುಲಿಂಗೇಶ್ವರ ನೆನಸಿಕೊಳ್ಳುತ್ತಾನೆ. ಕಪ್ಪಲ ಮುನೀಶ್ವರ, ಅಡ್ಡಗುಡ್ಡರ ಮಲ್ಲ, ಮಹೋಗುಡ್ಡರ ಮಲ್ಲ ಎಂದು ನೂರೆಂಟು ಹೆಸರುಂಟು. ಹಾಲಿನ ಬಟ್ಟೆಯ ಮೇಲೆ ಆಡುತ್ತಾ ತುಪ್ಪದ ಬಟ್ಟೆಯ ಮೇಲೆ ಆಡುತ್ತಾ, ಮುಸುಕಿನ ಬಟ್ಟೆಯ ಮೇಲೆ ಮೆರಗುತ್ತ ಬರುತ್ತಾನೆ. ಆಕಾಶಕ್ಕೆ ಒಂದು ಕಾಲು, ಭೂಮಿಗೆ ಒಂದು ಕಾಲು ನೆಲವಿಲ್ಲದಂತೆ

ನಾಟ್ಯ ಮಾಡಿ ಮೀನಗುಂದಿ ಮಲ್ಲನೆನಿಸಿಕೊಳ್ಳುತ್ತಾನೆ. ಜಲಿಗೆ ಒಡೆದು ವೀರಭದ್ರನನ್ನು ಜಲಗಿ ವಿಭೂತಿ ರುದ್ರಾಕ್ಷಿಯಲ್ಲಿ ಶಿವಲಿಂಗ ಹುಟ್ಟುತ್ತದೆ. ಆ ಲಿಂಗ ಆರು ಖಂಡುಗ ಭಂಡಾರವನ್ನು ಅಡ್ಡ ಧರಿಸಿ ಮೂರು ಖಂಡುಗ ಭಂಡಾರವನ್ನು ಚುಕ್ಕೆ ಇಟ್ಟು, ಮಾಯದ ಕುದುರೆಯೇರಿ ಸಪ್ತ ನದಿಗಳನ್ನು ದಾಟಿ ಮಣಿಮಲ್ಲಪುರವೆಂಬ ಪುರದಲ್ಲಿ ಮಣಿಮಲ್ಲನೆನಿಸಿಕೊಂಡಿದ್ದಾನೆ. ಪಾರ್ವತಿಪುರವೆಂಬ ಪುರದಲ್ಲಿ ಮಣಿಮಲ್ಲನೆನಿಸಿಕೊಂಡಿದ್ದಾನೆ. ಪಾರ್ವತಿದೇವಿ ಮಾಳಮ್ಮಳಾಗಿ ನೆಲೆ ನಿಂತಿದ್ದಾಳೆ. ಉಗ್ರ ಚರ್ಮವನ್ನು ಧರಿಸಿ ಇಹದ ತೊಂಬುಕತ್ತಿ ಭಾರದ ಬಿಲ್ವಾಂಡಧರಿಸಿ ತೊಡೆಯಲ್ಲಿ ಪಾರ್ವತಿಯನ್ನು ತಲೆಯಲ್ಲಿ ಗಂಗೆಯನ್ನು ಧರಿಸಿದ್ದಾನೆ. ಮುನ್ನೂರ ಮೂವತ್ತು ಕೋಟಿ ದೇವತೆಗಳನ್ನು ಪೊಯ್ಯದು, ಆರುನೂರಾರವತ್ತು ಕೋಟಿ ರಾಕ್ಷಸರನ್ನು ಧ್ವಂಸ ಮಾಡಿ ಮಣಿಕಾಸುರ ಮಲ್ಲಾಸುರರೆಂಬ ರಾಕ್ಷಸರನ್ನು ಧ್ವಂಸಮಾಡಿ ಸಪ್ತನದಿಗಳನ್ನು ದಾಟಿ ಮಣಿಮಲ್ಲಾಸುರನೆಂಬ ನಾಮ ಹೊಂದಿದ್ದಾನೆ.

ಮೈಲಾರಲಿಂಗನ ಜಾತ್ರೆಗೆ ಜಾತಿಭೇದವಿಲ್ಲದೆ ಸುತ್ತಲಿನ ಜನರೆಲ್ಲಾ ಸೇರುತ್ತಾರೆ. ಭಾನುವಾರ ಮೈಲಾರನ ವಾರವಾದ್ದರಿಂದ ಊರಜನರು ಸಿಹಿ ಅಡಿಗೆ ಮಾಡಿ ಮಲ್ಲೇಶ್ವರನ ಗುಡಿಗೂ ಮಾಳದ್ದನ ಗುಡಿಗೂ ಮಾಳದ್ವನ ಗುಡಿಗೂ ಒಯ್ಯುವರು. ಅಷ್ಟದಿಕ್ಕಿನ ಜನರು ಎಲ್ಲರೂ ಸೇರುವರು. ದಪ್ಪನಾದ ಸರಪಳಿಯನ್ನು ಕೈಯಲ್ಲಿಯೇ ತುಂಡು ಮಾಡುವ ಪವಾಡ ಪುರುಷರು. ಕುತನಿಯ ಅಂಗಿ, ಕುತನಿಯ ಟೊಪ್ಪಿಗೆ ಕಟ್ಟಿಕೊಂಡಿರುತ್ತಾರೆ. ಹಾಗೆಯೇ ಗೂಟದ ಪವಾಡಗಳನ್ನು ಮಾಡುತ್ತಾರೆ. ಕಾವ್ಯದಲ್ಲಿ ಮೈಲಾರಲಿಂಗನ ಹಲವಾರು ಪವಾಡಗಳು ವರ್ಣಿತವಾಗಿವೆ. ಗೋಮುನಿಕರಣದಲ್ಲಿ ಧರ್ಮಕರ್ತನಾಗಿ ಜನಿಸಿ ಭಂಡಾರಕ್ಕೆ ಕಲಿರಾಯ ಆಗುತ್ತಾನೆ. ಕೋರಿ ಅಂಗಿ ತೊಟ್ಟು ಭಕ್ತರ ಮನೆ ಬಾಗಿಲಲ್ಲಿ ತಿರುಗಾಡಿದ್ದು. ಹನ್ನೆರಡಾಳು ಸೇದೋ ಬಾವಿ ಬಳಿ ಕೂತು ಜಪ ಮಾಡುವವರ ಕೈಯಲ್ಲಿನ ಲಿಂಗ ಮಾಯಮಾಡಿದ್ರು ಭಂಡಾರ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ಅಂಡೆ ಕುರುವತ್ತಿ ತಂದು ಏಳೇಳು ಲೋಕವನ್ನು ಸಲಹಿದ್ದು, ರಾಣಿಬೆನ್ನೂರಿನ ರಾಣಿ ಶೀಲವಂತೆಗೆ ಮಕ್ಕಳ ವರ ಕೊಟ್ಟಿದ್ದು ಆತನ ಪವಾಡಗಳಲ್ಲಿ ಪ್ರಮುಖವಾದವು.

ಪ್ರಸ್ತುತ ಕಾವ್ಯದಲ್ಲಿ ಮಾಳಮ್ಮ ಮತ್ತು ಕೋಮಾಲಿ ಪ್ರಸಂಗ ತುಂಬಾ ರಸವತ್ತಾದದ್ದು, ಬನ್ನಿಹಬ್ಬದಲ್ಲಿ ಬನ್ನಿ ಮುಡಿಯಲು ದೇವರು ಬಂದಾಗ ನೆಣಿಕೇರು ಹಾಲಿನ ಭಾಷೆ ತೆಗೆದುಕೊಳ್ಳುತ್ತಾರೆ. ಆ ಭಾಷೆಗಳು ಗಗನ ಮುಟ್ಟುತ್ತವೆ. ಮಾಳಮ್ಮ ಮಕ್ಕಯ್ಯಗೆ ಮದುವೆ ಆಗುತ್ತದೆ. ಮದುವೆಗೆ ಸೂರ್ಯ ಚಂದ್ರರು ಭೂಮಿಗೆ ಬರುತ್ತಾರೆ. ಬ್ರಹ್ಮನೇ ಬಂದು ಬ್ರಹ್ಮಗಂಟು ಹಾಕುತ್ತಾನೆ. ಎಲ್ಲಾ ಮದುವೆ ಕಾರ್ಯಗಳನ್ನು ಭಕ್ತರು ನಡೆಸುತ್ತಾರೆ. ಮದುವೆ ನಂತರ ದೇವರನ್ನು ಹೊತ್ತುಕೊಂಡು ಊರೊಳಗೆ ಹೋಗುತ್ತಾರೆ. ಯಾವ ಜಾತಿ ಭೇದವಿಲ್ಲದೆ ಎಲ್ಲಾ

ಜನಾಂಗದವರೂ ದೇವರ ಪೂಜೆ ಮಾಡುತ್ತಾರೆ. ನಂಬಿದ ಭಕ್ತರಿಂದ ಶಸ್ತ್ರಪವಾಡ ಮಾಡಿಸುತ್ತಾನೆ. ಹಾಗೂ ಐದು ಬೊಗಸೆ ರಕ್ತ ಪಡೆಯುತ್ತಾನೆ. ನಂತರ ಬನ್ನಿ ಕಟ್ಟಿಗೆ ಬಂದು ಬನ್ನಿ ಮುಡಿಯುತ್ತಾನೆ. ಮಾಳವ್ವನಿಗೆ ಸುಳ್ಳು ಹೇಳಿ ಚಂದ್ರಗಿರಿ ಪಟ್ಟಣಕ್ಕೆ ಕೋಮಾಲಿಯನ್ನು ತರಲು ಮೈಲಾರಲಿಂಗ ಹೋಗುತ್ತಾನೆ. ಈ ಸಂದರ್ಭದಲ್ಲಿ ಮಾಳವ್ವ ಹಾವು ಕಚ್ಚಲಿ, ಹುಲಿ ನುಂಗಲಿ ಎಂದು ಶಪಿಸುತ್ತಾಳೆ. ಈ ಪ್ರಸಂಗ ತುಂಬ ನಾಟಕೀಯವಾದದ್ದು. ಅಲ್ಲಿಗೆ ಬಂದ ಹನುಮಪ್ಪನಿಗೆ ತನ್ನ ಅಳುವಿನ ಕಾರಣ ಹೇಳುತ್ತಾಳೆ ಹನುಮಪ್ಪ ಅವಳಿಗೆ ಮೈಲಾರಲಿಂಗನು ನಿನ್ನ ಮೇಲೆ ಇನ್ನೊಬ್ಬಳನ್ನು ತರಲು ಹೋಗಿದ್ದಾನೆ ಎಂದು ನಿಜ ಹೇಳುತ್ತಾನೆ. ಸಿಟ್ಟಾದ ಮಾಳವ್ವ ಹನುಮಪ್ಪನನ್ನು ಬೈಯ್ಯುತ್ತಾಳೆ.

ಚಂದ್ರಗಿರಿ ಪಟ್ಟಣಕ್ಕೆ ಬಂದ ಮೈಲಾರಲಿಂಗ ಕುಳ್ಳಿಗೆ ಬಂದವರ ಹತ್ತಿರ ಕೋಮಾಲಿ ಏಕೆ ಬಂದಿಲ್ಲ ಎಂದು ಕೇಳುತ್ತಾನೆ. ಆಗ ಅವರು ಅವಳು ನಿನಗೇನಾಗಬೇಕು ಎನ್ನುತ್ತಾರೆ. ನಾನು ಅವಳ ಸೋದರ ಮಾವನಾಗಬೇಕು ಎಂದು ಹೇಳುತ್ತಾನೆ. ಹಾಗೂ ಅವಳ ಮನೆದಾರಿ ಕೇಳುತ್ತಾನೆ. ಆಗ ಅವರು ಬಾಳೆಯ ಬಾಲಕ ಹಾಸಿ ನಿಂಬೆಯ ಎಡಕ ಹಾಸಿ ನಾಗರಬಾವಿಯ ಹತ್ತಿರ ನಿಮ್ಮ ಸೋದರಮಾವ ಬಾವಿ ಹತ್ತಿರ ಇದ್ದಾನೆ ಎಂದು ಹೇಳಿ ಕಳುಹಿಸುತ್ತಾನೆ. ಅವಳು ನನಗೆ ಸೋದರಮಾವ ಇಲ್ಲ ಎಂದು ನಿರಾಕರಿಸುತ್ತಾಳೆ. ಅವಳು ಬಾರದಿದ್ದುದನ್ನು ನೋಡಿ ಅವರ ಮನೆ ಮನೆ ಮೇಲೆ ಬಂಡಾರ ಚೆಲ್ಲುತ್ತಾನೆ. ಕಲ್ಲು ಮಂತ್ರಿಸಿ ಬಾವಿಗೆ, ಅವಳ ಮನೆಗೆ ಉಗ್ಗುತ್ತಾನೆ. ತನ್ನ ತಾಯಿಯ ಹತ್ತಿರ ನೀರಿಗೆ ಹೀಗಬೇಕು. ತಾನು ಎಂದು ಕೋಮಾಲೆ ಹೇಳುತ್ತಾಳೆ. ಆಗ ತಾಯಿ ನೀನು ನೀರಿಗೆ ಹೋಗಬೇಡ ಮನೆಯಲ್ಲಿ ಆಳುಗಳು ಇದ್ದಾರೆ. ಅವರನ್ನು ಕಳಿಸು ಎನ್ನುತ್ತಾಳೆ. ಕೋಮಾಲೆ ಇಲ್ಲ ನಾನು ಹರಕೆ ಕಟ್ಟಿಕೊಂಡಿದ್ದೇನೆ. ಹಾಗಾಗಿ ನಾನೇ ಗಂಗೆ ನೀರಿಗೆ ಹೋಗಬೇಕು ಎನ್ನುತ್ತಾಳೆ. ಎಷ್ಟೇ ಹೇಳಿದರೂ ಸಹ ಬಿಡದೆ ರನ್ನದ ಬಿಂದಿಗೆ ತೆಗೆದುಕೊಂಡು ನೀರಿಗೆ ಬರುತ್ತಾಳೆ. ದೂರದಿಂದಲೇ ನೋಡಿದ ಗೊರವಯ್ಯ ಹತ್ತಿರ ಬಂದು ತನ್ನ ಪ್ರೇಮವನ್ನು ಪರಿಪರಿಯಾಗಿ ತಿಳಿಸುತ್ತಾನೆ. ಆಗ ಅವಳು ನೀನು ಮುದುಕನಾಗಿದ್ದೀಯ. ಅನ್ನ ಬಟ್ಟೆ ಇಲ್ಲ, ಊರೊಳಗೆ ಹೋಗಿ ಬೀಕ್ಷೆ ಬೇಡು ಎನ್ನುತ್ತಾಳೆ. ನೀರು ತುಂಬಿ ಕೊಡ ಎತ್ತಲು ಹೋದಾಗ ಕೊಡ ಮೇಲೆಳಲೇ ಇಲ್ಲ. ಆಗ ಸಹಾಯಕ್ಕೆ ಗೊರವಯ್ಯನನ್ನು ಕರೆದಾಗ ತನ್ನನ್ನು ಮದುವೆಯಾದರೆ ಮಾತ್ರ ಕೊಡ ಎತ್ತುತ್ತೇನೆ ಎನ್ನುತ್ತಾನೆ. ಅಪ್ಪಾ ಕೊಡ ಎತ್ತು ಬಾ ಎಂದಾಗ ನಿಮ್ಮಪ್ಪನಿಗೆ ಅಳಿಯನಾಗಬೇಕು ಎನ್ನುತ್ತಾನೆ. ಅಣ್ಣ ಬಾ ಎಂದು ಕರೆದಾಗ ನಿನ್ನಣ್ಣನೊಂದಿಗೆ ಬಾವಮೈದುನನಾಗಬೇಕು ಎನ್ನುತ್ತಾನೆ. ನನ್ನ ಮದುವೆಯಾಗು ಎನ್ನುತ್ತಾನೆ. ತಲೆ ಬೆಳ್ಳಗಾಗಿದೆ ಹಲ್ಲು ಉದುರಿದ್ದಾವೆ. ಮುದುಕನಾಗಿದ್ದೀಯಾ ನಿನ್ನನ್ನು ಮದುವೆಯಾಗಲಾರೆ ಎನ್ನುತ್ತಾಳೆ. ಅವನ ರೂಪಕ್ಕೆ ಮನ ಸೋತ ಕೋಮಲೆ ಮದುವೆಯಾಗಲು

ಒಪ್ಪುತ್ತಾಳೆ. ಅಲ್ಲಿಯೇ ಭಾಷೆ ಪ್ರಮಾಣಗಳು ನಡೆಯುತ್ತವೆ. ಆದರೆ ಕೋಮಲೆ ನೀರಿಲ್ಲದೆ ಬರೀ ಕೊಡ ತೆಗೆದುಕೊಂಡು ಮನೆಗೆ ಹೋಗುತ್ತಾಳೆ. ಅವಳ ತಾಯಿ ಬಯ್ಯುತ್ತಾಳೆ. ಆಗ ಮೈಲಾರಲಿಂಗ ಕೊಡದಲ್ಲಿ ನೀರು ತುಂಬುವಂತೆ ಮಾಯ ಮಾಡುತ್ತಾನೆ. ಕಾಳಮ್ಮನ ಗುಡಿಯ ಹತ್ತಿರ ಬರಲು ಕೋಮಲೆಗೆ ತಿಳಿಸುತ್ತಾನೆ. ಬೇವಿನ ತೊಪ್ಪಲು ಮುರಿದುಕೊಂಡು ಕಾಳಮ್ಮನ ಗುಡಿ ಸಾರಿಸುತ್ತಾನೆ. ಜಾಡಿಸಿ ಕಂಬಳಿ ಹಾಸಿ ತನಗೆ ಒಂದು ಗೇಣು ಕೋಮಲೆಗೆ ಒಂದು ಗೇಣು, ಹೆಚ್ಚಾದ ಗೇಣುತನ ಮೇಲೆಂದು ತಿಗುಣಿ ಸೊಳ್ಳೆ ಕಾಟ ತಡೆದುಕೊಂಡು ಕೋಳಿ ಕೂಗುವ ತನಕ ಕಾದರೂ ಕೋಮಾಲೆ ಬರುವುದಿಲ್ಲ. ಸಿಟ್ಟು ಬಂದ ಗೊರವ ಅವಳ ಮರ್ಯಾದೆ ತೆಗೆಯಬೇಕು ಎಂದು ಅರಮನೆಗೆ ಬರುತ್ತಾನೆ. ರಾತ್ರಿ ಕೋಮಲೆ ಬರಬೇಕು ಎಂದು ಹೊರಟು ಬರುವಾಗ ರಾತ್ರಿ ಗಸ್ತಿ ಕಾಯುವವರು ಅಗಸೀ ಬಾಗಲಲ್ಲಿ ತಡೆದು ಹಿಂದೆ ಕಳುಹಿಸುತ್ತಾರೆ. ಗೊರವ ಕೋಮಾಲೆಯ ತಿಪ್ಪೆಯಲ್ಲಿ ಸೇರಿಕೊಂಡು ಆಟವಾಡಿಸುತ್ತಾನೆ. ಅವಳು ರಾತ್ರಿ ಬರದಿದ್ದಕ್ಕೆ ಬಯ್ದು ಹೊಡೆಯುತ್ತಾನೆ. ಆಗ ಕೋಮಾಲೆ ಬಸವಣ್ಣ ಗುಡಿ ಹತ್ತಿರ ಇರು ಬರುತ್ತೇನೆ ಎಂದು ಹೇಳುತ್ತಾಳೆ. ತನ್ನ ಅಣ್ಣಂದಿರಿಗೆ ಸುಳ್ಳು ಹೇಳಿ ಕರಿಗಡಬು ಮಾಡಿಕೊಂಡು ಬರುತ್ತಾಳೆ. ಸತ್ತವರ ಹಾಗೆ ಮಲ್ಲ ಬಿದ್ದಿರುತ್ತಾನೆ. ಕೋಮಾಲೆ ಒತ್ತಾಯ ಮಾಡಿ ಎಬ್ಬಿಸುತ್ತಾಳೆ. ಎದ್ದು ಹೋಳಿಗೆಯ ಊಟಮಾಡಿ ಎಂಟು ದಿವಸಕ್ಕೆ ಬರುತ್ತೇನೆ ಎಂದು ಮಾಯವಾಗುತ್ತಾನೆ.

ಗೊರವ ಅತ್ತ ಹೋದ ಮೇಲೆ ಕೋಮಾಲೆ ಮೈಯಲ್ಲಿ ಹುಷಾರಿಲ್ಲದವಳಂತೆ ಸುಮ್ಮನೆ ಇರುತ್ತಾಳೇ. ಆಗ ಅವಳ ತಾಯಿ ವಿಚಾರಿಸಿದಾಗ ನಿಜವಾದ ವಿಷಯವನ್ನು ಹೇಳುತ್ತಾಳೆ. ಎಂಟು ದಿನದ ನಂತರ ಗೊರವನ ವೇಷದಲ್ಲಿ ಮೈಲಾರನು ಕೋಮಾಲೆಯ ಪಟ್ಟಣಕ್ಕೆ ಬರುತ್ತಾನೆ. ಆಗ ಗಸ್ತಿಯವರು ಅವನನ್ನು ಒಳಗಡೆ ಬಿಡುವುದಿಲ್ಲ.ಮೈಲಾರನು ಚಾವಡಿ ಕಟ್ಟೆಯ ಮೇಲೆ ಕುಳಿತು ಹನ್ನೆರಡು ಮಣ ತಂಬಾಕನ್ನು ಚಿಲುಮೆಗೆ ತುಂಬಿ ಹೊಗೆ ಬಿಡುತ್ತಾನೆ. ಆ ಹೊಗೆಯಿಂದ ಗಸ್ತಿಯವರು ಮೂರ್ಛೆ ಬೀಳುತ್ತಾರೆ. ಅವರೆಲ್ಲರ ಗಡ್ಡ ಮೀಸೆಗಳಿಗೆ ಗಂಟು ಹಾಕುತ್ತಾನೆ. ಚಟ್ಟಿ ಅಮಾವಾಸ್ಯೆ ದಿನ ಭಂಡಾರ ಹುಟ್ಟಿದ ದಿನ ಜವಬೂದಿ ಕಾಗದ ಬೂದಿಯನ್ನು ಊರಿಗೆ ಉಗ್ಗಿ ಅತ್ತೆ ಸೊಸೆಗೆ, ತಂದೆ ಮಗನಿಗೆ ಹೀಗೆ ಊರೊಳಗೆ ಕದನ ಹುಟ್ಟಿಸುತ್ತಾನೆ. ಈ ಕದನ ಕುರುಬರಿಗೆ ಕೇಳಿಸುತ್ತದೆ. ಅವರು ಅಗಸಿ ಬಾಗಿಲಿಗೆ ಬಂದು ನೋಡುತ್ತಾರೆ. ಮಲ್ಲನು ಗಸ್ತಿಯವರಿಗೆ ಹಾಕಿದ ಗಡ್ಡ ಮೀಸೆಯ ಗಂಟುಗಳು ಯಾರಿಗೂ ಬಿಚ್ಚಲು ಆಗುವುದಿಲ್ಲ. ಆಗ ಗೊರವನೆ ಬಂದು ಗಂಟುಗಳನ್ನು ಬಿಚ್ಚುತ್ತಾನೆ. ಎಚ್ಚರವಾದ ಗಸ್ತಿಯವರನ್ನು ಯಾರು ಮಾಡಿದ್ದು, ಎಂದು ಕೇಳುತ್ತಾರೆ. ಕುರುಬರು ಒಬ್ಬ ಮುದಿಯ ಎಂದು ಹೇಳುತ್ತಾರೆ. ಆಗ ಸಿಟ್ಟಿನಿಂದ ಕರ್ನಾಗುಂಡು ಮಣಸೆ ಬಲ್ಲು ತರಿಸಿ

ಹೊಡೆಯಲು ಹೇಳುತ್ತಾರೆ. ಗಸ್ತಿಯವರು ಮಲ್ಲನಿಗೆ ಹೊಡೆದ ಏಟುಗಳು ಅವರಿಗೇ ಬೀಳಲು ಆಗ ಅವರು ಹೆದರಿ ಮೈಲಾರಲಿಂಗನಿಗೆ ಶರಣು ಹೋಗುತ್ತಾರೆ.

ಮುಂದೆ ಮಲ್ಲನು ಮುದ್ದಮ್ಮ ಎನ್ನುವವಳ ಮನೆಗೆ ಭಿಕ್ಷೆ ಬೇಡಲು ಬಂದಾಗ, ಅವಳು ಹಾಲು ಕರೆಯುತ್ತಿದ್ದೇನೆ. ಮುಂದೆ ಹೋಗು ಎನ್ನುತ್ತಾಳೆ. ಸಿಟ್ಟು ಬಂದ ಗೊರವ ಎಲ್ಲವನ್ನೂ ಮಾಯಮಾಡುತ್ತಾನೆ. ಹಾರವರ ಮನೆಯಲ್ಲಿಯೂ ಸಹ ಹೀಗೆ ಅವಮಾನವಾಗುತ್ತದೆ. ಅಲ್ಲಿಂದ ಮುಂದೆ ಮಲ್ಲ ಮಡಿವಾಳನ ಮನೆಗೆ ಹೋಗಿ ನಿಲ್ಲುತ್ತಾನೆ. ಆಗ ಮಡಿವಾಳ ಮಲ್ಲನ ಪಾದ ತೊಳೆದು ಪೂಜೆಮಾಡಿ ಭಿಕ್ಷೆ ನೀಡುತ್ತಾನೆ. ಆಗ ಮಲ್ಲ ಭಿಕ್ಷೆ ಬೇಡ ಕಂಬಳಿ ಅಂಗಿಯನ್ನು ಒಗೆದುಕೊಡು ಎನ್ನುತ್ತಾನೆ. ಅಂಗಿಯನ್ನು ಒಗೆಯುವಾಗ ನೀರಿಗೆ ಹಾಕಬಾರದು, ಕಲ್ಲಿಗೆ ಬಡಿಯಬಾರದು ಹಾಗೇ ತೊಳೆಯಬೇಕು ಎಂದು ಕೊಟ್ಟು ಹೋಗುತ್ತಾನೆ. ಊರೋಳಗೆ ಬಟ್ಟೆ ತೊಳೆಯುವ ಮಲ್ಲಿಗೆ ದೇವಿಗೂ ಹೇಳಿ ಹೋಗುತ್ತಾನೆ. ಎಷ್ಟು ಯೋಚನೆ ಮಾಡಿದರೂ ಹೊಳೆಯುವುದಿಲ್ಲ. ಊರವರ ಬಟ್ಟೆ ಹೇರಿಕೊಂಡು ಹೊಳೆಗೆ ಬರುತ್ತಾರೆ. ಬರುವಾಗ ದಾರಿಯಲ್ಲಿ ಮಲ್ಲನು ಮತ್ತೆ ಅಡ್ಡಬಂದು ಅದೇ ರೀತಿ ಹೇಳಿ ಹೋಗುತ್ತಾನೆ. ಊರವರ ಬಟ್ಟೆಗಳನ್ನೆಲ್ಲಾ ತೊಳೆಯುತ್ತಾನೆ. ಗೊರವನ ಅಂಗಿ ಮಾತ್ರ ಉಳಿಯುತ್ತದೆ. ಅವರಿಗೆ ಅಂಗಿಯನ್ನು ಹಿಂದ್ಕೆ ಒಯ್ಯಲು ಹೆದರಿಕೆ ಆಗುತ್ತದೆ. ಆಗ ಹೆಂಡತಿ ತನ್ನ ಶಿರ ಕಡಿಯಲು ಗಂಡನಿಗೆ ಹೇಳುತ್ತಾಳೆ. ರಕ್ತ ನೀರಾಗಿ ಎದೆ ಕೊಬ್ಬು ಸೌಳುಸುಣ್ಣವಾಗಿ ತಲೆವಿದುಡು ಬಿಸಿಲು ಬೀಳುವ ಆರತಿಯಾಗಿಟ್ಟುಕೊಂಡು ಅವರು ಭಕ್ತಿಯಿಂದ ಪರಿಶುದ್ಧವಾದ ಮನಸ್ಸಿನಿಂದ ಕಂಬಳಿಯನ್ನು ಒಗೆಯುತ್ತಾರೆ. ಮಾಯದ ಮಲ್ಲನು ಕಂಬಳಿ ಅಂಗಿಯನ್ನು ಕೇಳಲು ಬಂದಾಗ ಗಂಡಹೆಂಡಿರು ಜೊತೆಯಾಗಿ ಕಂಬಳಿಕೊಡಬೇಕು ಎಂದು ಹೇಳುತ್ತಾನೆ. ಮಡಿವಾಳನು ತನ್ನ ಹೆಂಡತಿ ಊರಿಗೆ ಹೋಗಿದ್ದಾಳೆ. ಎಂಟು ದಿನಕ್ಕೆ ಬರುತ್ತಾಳೆ ಎನ್ನುತ್ತಾನೆ. ಎಂಟನೆ ದಿನಕ್ಕೆ ಬಂದು ಒಯ್ಯುವುದಾಗಿ ಹೇಳುತ್ತಾನೆ. ಎಂಟನೇ ದಿನಕ್ಕೆ ಬಂದ ಗೊರವ ಮಡಿವಾಳನನ್ನು ಹೆಂಡತಿ ಎಲ್ಲಿ ಎಂದು ಕೇಳುತ್ತಾನೆ. ಆಗ ಮಡಿವಾಳ ನಿಜವನ್ನು ಹೇಳುತ್ತಾನೆ. ಆಗ ಮಲ್ಲನು ದೇವರ ಮನೆ ಬಾಗಿಲು ತೆಗೆಯಲು ಹೇಳುತ್ತಾನೆ. ಬಾಗಿಲು ತೆಗೆದಾಗ ಅಲ್ಲಿ ಮಡಿವಾಳನ ಹೆಂಡತಿ ಇರುತ್ತಾಳೆ. ಹೀಗೆ ಅವರ ಭಕ್ತಿಗೆ ಮೆಚ್ಚಿ ವರ ಕೇಳಿ ಕೊಡುತ್ತೇನೆ ಎನ್ನುತ್ತಾನೆ. ಅವರು ಹೊಟ್ಟೆಗೆ ಬಟ್ಟೆಗೆ ಕೊಡು, ಊರೊಳಗೆ ಉದ್ಯೋಗ ಕೊಡು ಮಣಕಾಲಮಟ ನೀರು ಕೊಡು ಎಂದು ಕೇಳುತ್ತಾರೆ. ಹೀಗೆ ಕಾವ್ಯ ಮುಂದುವರಿಯುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯ ನೆಲೆಯಲ್ಲಿ ಕಾಣಿಸಿಕೊಳ್ಳುವ ಮೈಲಾರಲಿಂಗ ಹಸಿವು, ಬಡತನದ ಚೌಕಟ್ಟಿನೊಳಗೆ ಒಬ್ಬ ಕುರುಬರ ಯುವತಿಯ ಪ್ರೇಮಕ್ಕೆ ಮರುಳಾಗಿ ಅವರ ಮನೆಯ ಕುರಿ ಕಾಯಲು ನಿಲ್ಲುತ್ತಾನೆ. ಇಲ್ಲಿ ಹಸಿವು, ಬಡತನ ಪ್ರೇಮ ಒಟ್ಟೊಟ್ಟಿಗೆ ಕಾಣಬಹುದು. ತಳಸಮುದಾಯದ ಒಬ್ಬ

ಯುವಕ, ಯುವತಿಯಲ್ಲಿ ಹಸಿವು, ಬಡತನ ಹೇಗೆ ಆವರಿಸಿಕೊಂಡಿರುತ್ತದೋ, ಅಷ್ಟೇ ಪ್ರಾಮಾಣಿಕವಾದ ಪ್ರೀತಿ ಪ್ರೇಮವು ಇರುತ್ತದೆ. ಇದನ್ನು ಮೇಲ್ವರ್ಗದವರಲ್ಲಿ ಕಾಣಲಾಗದು.

"ಮೈಲಾರಲಿಂಗ ಕಂಬಳಿ ಧರಿಸಿ ಮುರುಕು ಬೆತ್ತವನ್ನು ಹಿಡಿದು ಅಡವಿ ಅರಣ್ಯ ತಿರುಗುತ್ತಾ ಬಂದಾಗ, ಅಲ್ಲಿ ಏಳುಸಾವಿರ ಕುರಿ ಮೇಯಿಸುತ್ತಾ ಕೋಮಾಲೆಯ ಏಳುಜನ ಅಣ್ಣಂದಿರು ಇರುತ್ತಾರೆ. ಅಲ್ಲಿಗೆ ಬರುವ ಹೊತ್ತಿಗೆ ಹಸಿವೆಯಾಗುತ್ತದೆ. ಕುರಿ ಕಾಯುವವರನ್ನು ತಿನ್ನಲು ಏನಾದರೂ ಕೊಡಿ ಎನ್ನುತ್ತಾನೆ. ಅವರು ಕೊಟ್ಟಿದ್ದನ್ನೆಲ್ಲಾ ತಿಂದು ಹಾಲು ಕುಡಿದರೂ ಹಸಿವು ಹಿಂಗುವುದಿಲ್ಲ. ಏಳುಕೊಪ್ಪರಿಗೆ ಅನ್ನ ಮಾಡಿ ತಂದುಕೊಟ್ಟರೂ ಹಸಿವು ಹಿಂಗುವುದಿಲ್ಲ. ಕೊಟ್ಟರೆ ಹೊಟ್ಟೆ ತುಂಬಾ ಕೊಡಬೇಕು ಎಂದು ಮೊದಲೇ ಅಪ್ಪಣೆ ಮಾಡಿರುತ್ತಾನೆ. ಹೀಗಾಗಿ ಅವರು ಮನೆಯಿಂದ ಅಡಿಗೆ ಮಾಡಿ ತಂದರೂ ಅವನ ಹಸಿವು ಹಿಂಗುವುದಿಲ್ಲ. ಕೊನೆಗೆ ಅವರು ಸೋತು ಶರಣಾಗುತ್ತಾರೆ. ಆಗ ಗೊರವ ನಿಮ್ಮ ಋಣ ತೀರಿಸುತ್ತೇನೆ ಎಂದು ಅವರ ಕುರಿಗಳನ್ನು ಮೇಯಿಸಲು ಹೊಳೆ ಕಡೆಗೆಹೊಡೆದುಕೊಂಡು ಹೋಗುತ್ತಾನೆ. ಅಲ್ಲಿ ಬಟ್ಟೆ ಒಗೆದ ಹಾಗೆ ಒಗೆದು ಕೊಂದು ಹಾಕುತ್ತಾನೆ. ಬಂದು ನೋಡಿದ ಕುರುಬರಿಗೆ ನಿಮ್ಮ ತಂಗಿ ಕೋಮಾಲೆ ಇಲ್ಲಿಗೆ ಬಂದರೆ ಬದುಕುತ್ತವೆ ಎಂದು ಹೇಳುತ್ತಾನೆ. ಆದರೆ ಕೊಮಾಲೆ ಬರಲು ಒಪ್ಪುವುದಿಲ್ಲ"[೧೦]

ಕೊನೆಗೆ ಗೊರವನು ಕೋಮಾಲೆಯ ಅಣ್ಣಂದಿರಿಗೆ ನಿಮ್ಮ ತಂಗೀನ ಹಾದಿಯಲ್ಲಿ ಹೊಗುವವನಿಗೆ ಕೊಟ್ಟು ಮದುವೆ ಮಾಡಿಕೊಡಿ ಎಂದು ಹೇಳಿ ಭಂಡಾರ ಉಗ್ಗಿ ಕುರಿಗಳನ್ನು ಬದುಕಿಸುತ್ತಾನೆ. ಮೈಲಾರಲಿಂಗ ಕುರಿಗಳನ್ನು ಬದುಕಿಸಿದನ್ನು ನೋಡಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ತಂಗಿಗೆ ಮೈಲಾರಲಿಂಗನನ್ನು ಉಪಚಾರ ಮಾಡಲು ಹೇಳುತ್ತಾರೆ. ಅವರ ಮನೆಯಲ್ಲಿಯೇ ಕುರಿಗಳನ್ನು ಕಾಯಲು ಇದ್ದು ಮರಿಗಳಿಗೆ ಮಾತು ಕಲಿಸುತ್ತಾನೆ. ಒಂದು ದಿನ ಕೋಮಾಲೆಗೆ ಮರಿಗಳನ್ನು ಕಾಯಲು ಕಳಿಸಬೇಕೆಂದು ಹೇಳುತ್ತಾನೆ. ಅವಳು ಕುರಿಮರಿಗಳನ್ನು ಕಾಯಲು ಹೋದಾಗ ಮರಿಗಳು ಅದೃಶ್ಯವಾಗುತ್ತವೆ. ಹೆದರಿದ ಅವಳಿಗೆ, ತನ್ನನ್ನು ಮದುವೆಯಾದರೆ ಮರಿಗಳನ್ನು ತಂದು ಕೊಡುತ್ತೇನೆ ಎಂದು ಹೇಳುತ್ತಾನೆ. ಅವಳು ಒಪ್ಪುವುದಿಲ್ಲ. ಅವಳ ಅಣ್ಣಂದಿರಿಗೆ ನಿಮ್ಮ ತಂಗಿಯಲ್ಲಿಯೇ ದೋಷವಿದೆ ಎನ್ನುತ್ತಾನೆ. ಅವಳನ್ನು ಹಾದಿಯಲ್ಲಿ ಹೋಗುವವನಿಗೆ ಕೊಟ್ಟು ಮದುವೆ ಮಾಡಿ ಎಂದು ಹೇಳುತ್ತಾನೆ. ಅಂತಹವನನ್ನು ಎಲ್ಲಿ ಹುಡುಕುವುದು ಎಂದು ಅವರು ಆತಂಕ ಪಡುತ್ತಿರುವಾಗ ತನಗೇ ಕೊಡಬೇಕೆಂದು ಹೇಳುತ್ತಾನೆ. ಒಂದು ಹಿಡಿ ಭಂಡಾರ ಚೆಲ್ಲಿ ಕುರಿಗಳನ್ನು ಮರಳಿ ತರುತ್ತಾನೆ. ಅವರು ಕೋಮಾಲಿಯನ್ನು ಕೊಡಲು ಒಪ್ಪುತ್ತಾರೆ.

ನಂತರ ಮೈಲಾರಲಿಂಗ ತನ್ನ ಮದುವೆಗೆ ತಾನೇ ಜವಳಿ, ಕಿರಣಿ ಸಾಮಾನುಗಳನ್ನು

ಕೊಳ್ಳುತ್ತಾನೆ. ಆದರೆ ಕೋಮಾಲೆಯು ಮುದುಕನಾದ ಮಲ್ಲನನ್ನು ಮದುವೆಯಾಗಲು ಇಷ್ಟ ಪಡುವುದಿಲ್ಲ. ಎಂದು ಹೇಳುತ್ತಾಳೆ. ಆಗ ಅವಳ ಅಣ್ಣಂದಿರು ಮಾತು ಕೊಟ್ಟಿದ್ದೇವೆ ಒಪ್ಪಿಕೋ ಎಂದು ಬಲವಂತ ಮಾಡುತ್ತಾರೆ. ಅಷ್ಟೊತ್ತಿಗೆ ಮಲ್ಲನು ಕುರುಬರ ಹತ್ತಿರ ಕುರಿ ಉಣ್ಣೆ ತೆಗೆದುಕೊಂಡು ಏಳು ಕಂಬಳಿ ನೇಯ್ದು ಅದನ್ನು ಒಂದು ಕಟ್ಟನಲ್ಲಿ ಕಟ್ಟಿ ಕೋಮಾಕೆಗೆ ಮಾರಿಕೊಂಡು ಬರಲು ಹೇಳುತ್ತಾನೆ. ಒಂದು ಕಂಬಳಿ ಮಾರಬಾರದು, ಜೋಡಿ ಕಂಬಳಿಗಳನ್ನು ಮಾತ್ರ ಮಾರಬೇಕು ಎಂದು ಕಟ್ಟಪ್ಪಣೆ ಮಾಡುತ್ತಾನೆ. ಚಂದ್ರಗಿರಿ ಸಂತೆಗೆ ಮಾರಲು ಬರುತ್ತಾಳೆ. ಅಲ್ಲಿ ಒಬ್ಬ ಯಜಮಾನ ಒಂಟಿ ಕಂಬಳಿಯ ಬೆಲೆ ಕೇಳುತ್ತಾನೆ. ಅದಕ್ಕೆ ಕೋಮಾಲೆಯು ಏಳಾಣೆಗೊಂದು, ಆದರೆ ಒಂಟಿ ಕಂಬಳಿ ಕೊಡುವುದಿಲ್ಲ ಎಂದು ಹೇಳುತ್ತಾಳೆ. ಇತ್ತ ಗೊರವ ಕೋಟು, ಪೇಟ ಧರಿಸಿ ಕುದುರೆ ಮ್ಯಾಲೆ ಚಂದ್ರಗಿರಿ ಸಂತೆಗೆ ಬರುತ್ತಾನೆ. ಕೋಮಾಲೆಗೆ ಗುರುತು ಸಿಗುವುದಿಲ್ಲ. ತಾನೇ ಬೆಳ್ಳಿ ರೂಪಾಯಿ ಕೊಟ್ಟು ಏಳು ಕಂಬಳಿಕೊಳ್ಳುತ್ತಾನೆ. ಕುದುರೆ ಮೇಲೆ ಕುಳಿತ ನಂತರ ತನ್ನ ನಿಜ ರೂಪ ತೋರಿಸಿ, ಅವಳನ್ನು ಕುದುರೆ ಮೇಲೆ ಕುಳ್ಳರಿಸಿಕೊಂಡು ತನ್ನ ಗುಡ್ಡಕ್ಕೆ ಬರುತ್ತಾನೆ. ಅವಳನ್ನು ಗುಡಿ ಪಕ್ಕಕ್ಕೆ ನಿಲ್ಲಿಸಿ ಗುಡಿಮುಂದೆ ಹೋಗಿ ತನ್ನ ಹೆಂಡತಿ ತುಪ್ಪದ ಮಾಳವ್ವನಿಗೆ ತಂಬಿಗೆ ನೀರು ತರಲು ಹೇಳುತ್ತಾನೆ. ಅವಳು ಬರುವಾಗ ಎರಡು ತಂಬಿಗೆ ನೀರು ತರುತ್ತಾಳೆ. ಆಗ ಗೊರವ ತಾನು ಒಬ್ಬನೇ ಇರುವುದಾಗಿ, ಆದ್ದರಿಂದ ಒಂದೇ ಸಾಕು ಎಂದು ಸುಳ್ಳು ಹೇಳುತ್ತಾನೆ. ಆದರೆ ಮಾಳವ್ವನಿಗೆ ಅವನು ಸುಳ್ಳು ಹೇಳುತ್ತಿರುವುದು ಗೊತ್ತಿರುವುದರಿಂದ ನಿನ್ನ ಜೊತೆಯಲ್ಲಿ ಬಂದಿರುವವಳಿಗೂ ಕೊಡು ಎಂದು ಹೇಳಿ ಒಳಗೆ ಹೋಗುತ್ತಾಳೆ. ಅಲ್ಲಿಂದ ಮಲ್ಲ ಹೆಂಡಿರ ಜೊತೆಯಲ್ಲಿ ಜಗಳವಾಗದಂತೆ ಸಮಾನವಾಗಿ ನೋಡಿಕೊಳ್ಳುತ್ತಾನೆ. ಹೀಗೆ ಕೋಟಿಗೊಬ್ಬ ಶರಣ ಮೈಲಾರಲಿಂಗ ನಾಡಿನಾದ್ಯಂತ ಸಂಚಾರ ಮಾಡುತ್ತಾ ಮೈಲಾರ ಗ್ರಾಮದಲ್ಲಿ ನೆಲೆನಿಂತು ಪವಾಡ ಪುರುಷನೆನಿಸಿಕೊಳ್ಳುತ್ತಾನೆ. ತುಂಗಭದ್ರಾ ನೆಲದಲ್ಲಿ ನೆಲೆನಿಂತು ಯೋಗಿ ಆಗುತ್ತಾನೆ.

"ಮೈಲಾರಲಿಂಗ ಕಾವ್ಯ ಪ್ರಕಟಿಸಿರುವ ಹಲವಾರು ಅಂಶಗಳು ತುಂಬ ಸಾಂಕೇತಿಕವೂ, ಕುತೂಹಲಕಾರಕವೂ ಆಗಿವೆ. ಆದರೆ ಮೈಲಾರಲಿಂಗನ ಪಂಥ ಯಾವುದು ಎಂಬುದನ್ನು ತಿಳಿಯಬೇಕಾದರೆ ಭಾರತದ ಸಾಂಸ್ಕೃತಿಕ ಪರಂಪರೆಯ ಬಗೆಗೆ ತಿಳಿಯಬೇಕಾಗುತ್ತದೆ. ಭಾರತದ ಈ ನೆಲ ತನ್ನ ಸಾವಿರಾರು ವರುಷಗಳ ಚರಿತ್ರೆಯಲ್ಲಿ ಹಲವು ಜನಾಂಗಗಳ ಸಂಸ್ಕೃತಿಗಳ, ಧರ್ಮ ಪಂಥಗಳ ಉದಯಕ್ಕೆ ಕಾರಣವಾಗಿದೆ. ಹಾಗೆಯೇ ಸಂಘರ್ಷ ಮತ್ತು ಪತನಕ್ಕೆ ಎಡೆಮಾಡಿ ಕೊಟ್ಟಿದೆ. ಈ ಸಂಘರ್ಷ ಮತ್ತು ಪತನಗಳ ಪ್ರಕ್ರಿಯೆಯಲ್ಲಿ ಉದಯಿಸಿದ ಹೊಸ ಮಾರ್ಗವೊಂದನ್ನು ಒಪ್ಪಿಕೊಳ್ಳುತ್ತಾ ಬಂದಿದೆ. ಒಪ್ಪಿಕೊಂಡ ಮಾರ್ಗ ಹಳತಾದಂತೆ ಕಥೆ ಮತ್ತೆ ಹೊಸದಾಗಿ ಹೊಸದಾಗಿ ಹುಟ್ಟಿಕೊಂಡ ಹಲವು ಮಾರ್ಗಗಳನ್ನು ಪೋಷಿಸುತ್ತಾ ಬಂದಿದೆ. ಆ ಮೂಲಕ ಇಡೀ ಭಾರತ ಅತ್ಯಂತ ಸಂಕೀರ್ಣವಾದ ಸಾಂಸ್ಕೃತಿಕ ನಾಡಾಗುವಂತಹ

ಹಲವು ಪ್ರಕ್ರಿಯೆಗಳಿಗೆ ಒಳಗಾಗಿದೆ. ಇಂತಹ ಸಾಂಸ್ಕೃತಿಕ ಭಾಗವಾಗಿರುವ ಮೈಲಾರಲಿಂಗನ ಸಂಪ್ರದಾಯ ಬಹುಮುಖವಾದುದಾಗಿದೆ. ವಲಸೆ ಬಂದವರೆಂದು ಹೇಳಲಾದ ಆರ್ಯರು ಇದೇ ನೆಲದ ಮೂಲನಿವಾಸಿಗಳೆಂದು ಹೇಳಲಾಗಿರುವ ದ್ರಾವಿಡರು ಮತ್ತು ಈ ಎರಡು ಜನಾಂಗಗಳ ನಡುವಿನ ಸಂಘರ್ಷ ಹಾಗೂ ಸಮ್ಮಿಲನದಿಂದಾಗಿ ಹುಟ್ಟಿಕೊಂಡ ಹೊಸ ಮಾರ್ಗವನ್ನು ನೋಡಬೇಕಾಗುತ್ತದೆ. ಹೊಸ ಮೌಲ್ಯಗಳನ್ನು ಪಡೆದಂತಹ ಜನಾಂಗಗಳು ಅವುಗಳನ್ನು ಉಳಿಸಿಕೊಳ್ಳಲು ಮತ್ತು ಪ್ರಸಾರ ಮಾಡಲು ತೊಡಗಿದ ಸಂದರ್ಭದಲ್ಲಿ ಸಂಘರ್ಷಗಳ ಹಿನ್ನೆಲೆಯಲ್ಲಿ ಮಧ್ಯಕಾಲೀನ ಕರ್ನಾಟಕದ ಸಂದರ್ಭ ಹಾಗೂ ಮೈಲಾರಲಿಂಗನ ಪಂಥವನ್ನು ಹೆಚ್ಚು ಆಸಕ್ತಿಯಿಂದ ನೋಡಬೇಕಾದ ಅವಶ್ಯಕತೆ ಇದೆ"[೧೧]

ಮೈಲಾರನ ಕಥನ ಅದೊಂದು ಶೈವ ಮಾದರಿಯ ಕಥನಕ್ರಿಯೆ. ಯಾಕೆಂದರೆ ಕ್ಲಾಸಿಕಲ್ ಸಾಹಿತ್ಯ ಸಂಸ್ಕೃತಿಯ ಮಾದರಿಗಳು ಮತ್ತು ನಿಯಮಗಳು ಕಾವ್ಯದಲ್ಲಿ ಕೆಲವೊಂದು ನಿರ್ದಿಷ್ಟ ಅಂಶಗಳನ್ನು ಕಂಡೇ ಕಾಣಬೇಕೆನ್ನುವ ಕಡ್ಡಾಯತೆಯನ್ನು ಹುಟ್ಟು ಹಾಕಿದವು. ಶೈವ ಪ್ರತಿಭೆ ಮೊದಲ ಬಾರಿಗೆ ಈ ಕಡ್ಡಾಯದಿಂದ ಹೊರತಾದ ಕಾಣದ ಅಂಶಗಳ ಬಗ್ಗೆ ಹೆಚ್ಚಿನ ಲಕ್ಷ್ಯವಹಿಸಿತು. ಹರಿಹರನಂತಹ ಭಕ್ತ ಕವಿಗಳಲ್ಲಿ ನಿರೂಪಕ, ಭಕ್ತ, ಶಿವ ಮಾತ್ರ ವಿಶಿಷ್ಟವಾದ ಅಂಶಗಳಾದವು. ಮೈಲಾರ ನಂತಹ ಕಾವ್ಯಗಳು ನಮಗೆ ಇಲ್ಲಿ ಪ್ರಸ್ತುತವಾಗುವುದು. ಮೈಲಾರನಂತಹ ಭಕ್ತ ಕವಿಗಳಲ್ಲಿ ನಿರೂಪಕ, ಭಕ್ತ, ಶಿವ ಮಾತ್ರ ವಿಶಿಷ್ಟವಾದ ಅಂಶಗಳಾದವು. ಇಲ್ಲಿ ಹರಿಹರನಿಗಿಂತ ಭಿನ್ನವಾದ ನಾಲ್ಕನೆಯ ವಾಸ್ತವಾಂಶ ಒಂದು ಇದೆ. ಅದೇ ಬಹಿರಂಗವಾದ ಭೌತಿಕವಿಶ್ವ. ಕಥೆಯಲ್ಲಿ ಹೆಚ್ಚು ಉತ್ಕಟವಾಗಿ ಕ್ರಿಯಾಶೀಲವಾಗಿ ಇದು ಅನಾವರಣಗೊಳ್ಳುತ್ತದೆ. ಹರಿಹರನಲ್ಲಿ ಮರ, ಕಡು, ನಿಸರ್ಗ, ಜೀವವ್ಯಾಪಾರ ಅಷ್ಟು ತೀವ್ರವಾದ ವಾಸ್ತವಗಳಲ್ಲ. ಆತನ ಭಕ್ತಿಯ ಪ್ರವಾಹದಲ್ಲಿ ಇವೆಲ್ಲವೂ ಮಂಜು ಮಂಜಾಗಿ ಕಾಣುತ್ತದೆ.

ಕಾವ್ಯದಲ್ಲಿ ಮೊದಲೇ ಪ್ರಸ್ತಾಪವಾದಂತೆ 'ಕಾಡು' ಕುರುಬರ ಜೀವನದ ಮುಖ್ಯ ಅಂಗ. ಕಾಡಿಲ್ಲದ ಅವರ ಬದುಕೇ ಅಸಾಧ್ಯ. ಬದುಕಿನ ಅವಿಭಾಜ್ಯ ಅಂಗಗಳಾದ ಕಾಡು ಕುಲ, ನಿಸರ್ಗ, ಪ್ರಾಣಿವರ್ಗ ಹಸಿವು, ಬಡತನ, ಎಲ್ಲವೂ ಮೈಲಾರನ ಬದುಕಿನೊಂದಿಗೆ ತಳುಕು ಹಾಕಿಕೊಂಡಿವೆ. ದಾರ್ಶನಿಕತೆಯನ್ನು ದಾಟಿದ ಅದ್ವಯತೆ ಇಲ್ಲಿರುವುದರಿಂದ ಬಹಿರಂಗ ಸತ್ಯವೂ ಇಲ್ಲಿ ಪ್ರಧಾನವಾಗುತ್ತದೆ. ಹೀಗಾಗಿ ಮೈಲಾರ ಮತ್ತು ಆತನ ಪರಂಪರೆ ನಿಮ್ಮಿಲನ ಮಾರ್ಗವಾಗಿ ನಮಗೆ ಕಾಣುತ್ತದೆ. ಕಥೆ ಎಷ್ಟೇ ದ್ವಂದ್ವಗಳನ್ನು ಹೇಳಿದರೂ ಕೊನೆಗೆ ಅವು ಮೈಲಾರನಲ್ಲಿ ಘನೀಕರಣಗೊಂಡು ಸಾಂಸ್ಕೃತಿಕ ಪ್ರತೀಕವಾಗಿ ವಿಸ್ಮಯಕಾರಿಯಾಗುತ್ತದೆ. ಚರಿತ್ರೆಯ ದೃಷ್ಟಿಯಿಂದ ಕುರುಬರು ವಲಸೆಗಾರ ಬುಡಕಟ್ಟು ಎನಿಸುತ್ತದೆ. ಈ ವಲಸೆಗಾರ ಬುಡಕಟ್ಟು ಒಂದು ಕಡೆ ನೆಲೆನಿಂತ ಮೇಲೆ ಅವರ ಸಾಂಸ್ಕೃತಿಕ ವೀರನಾಗಿ ರೂಪುಗೊಂಡವನು

ಮೈಲಾರಲಿಂಗ. ಈ ಮೈಲಾರಲಿಂಗ ನಂತರದಲ್ಲಿ ಸ್ಥಾಪಿತ ಧರ್ಮಗಳಾದ ಬ್ರಾಹ್ಮಣ, ವೀರಶೈವಗಳಂತಹ ಬಹುಸಂಖ್ಯಾತ ಜನಾಂಗದ ದಬ್ಬಾಳಿಕೆ ಪ್ರವೃತ್ತಿಯನ್ನು ಎದುರಿಸಿದ್ದಾನೆ. ದಬ್ಬಾಳಿಕೆ ಪ್ರವೃತ್ತಿಯನ್ನು ಎದುರಿಸುವ ಮೂಲಕ ಉತ್ತರ ಮತ್ತು ಮಧ್ಯ ಕರ್ನಾಟಕದ ಇಡೀ ಕೆಳವರ್ಗದ ಶೂದ್ರ ಸಮುದಾಯವನ್ನು ಒಂದುಗೂಡಿಸಿದ ಕೀರ್ತಿಗೆ ಪಾತ್ರನಾಗುತ್ತಾನೆ. ಮೈಲಾರಲಿಂಗನ ಬಗೆಗೆ ಇರುವ ಕ್ಷೇತ್ರಗಳು, ಆತನ ಬಗ್ಗೆ ಇರುವ ಬೇರೆ ಬೇರೆ ಹೆಸರುಗಳು, ಚರಿತ್ರೆಯ ಶಾಸನಗಳ ಉಲ್ಲೇಖನಗಳು, ತಾಂತ್ರಿಕ ಪಂಥಗಳ ಜೊತೆಗಿರುವ ಸಂಬಂಧಗಳು, ಜನಪದರಲ್ಲಿರುವ ಮೈಲಾರನ ಬಗೆಗಿನ ಒಡಪು, ಗಾದೆ, ಕಾವ್ಯಗಳು, ಕಥೆಗಳು, ಐತಿಹ್ಯಗಳು, ಆಚರಣೆಗಳು, ಜಾತ್ರೆಗಳು, ಶಿಷ್ಟ ಸಾಹಿತ್ಯಗಳ ಉಲ್ಲೇಖಗಳು, ಸ್ಥಳ ಪುರಾಣಗಳು ಮುಂತಾದವುಗಳನ್ನು ಗಮನಿಸಿದಾಗ ಮೈಲಾರಲಿಂಗ ಮೂಲತಃ ಕುರುಬ ಜನಾಂಗದವನು. ತಮ್ಮ ಕುರಿ ಸಾಕಾಣಿಕೆಗಾಗಿ ಇವರು ಅಲೆಮಾರಿ ಜೀವನ ನಡೆಸುತ್ತಿದ್ದರು. ಸಾಂಸ್ಕೃತಿಕ ವಿಕಾಸದಲ್ಲಿ ಕ್ರಮೇಣ ಅಲ್ಲಲ್ಲಿ ಬೀಡು ಬಿಟ್ಟರು.

"ಕುರಿ ಸಾಕಾಣಿಕೆ ಜೊತೆಗೆ ಭೂ ಸಾಗುವಳಿ ಪ್ರಾರಂಭಿಸಿ ಅವರು ತಮ್ಮ ಹಳೆಯ ಅಲೆಮಾರಿ ಜೀವನವನ್ನು ಬಿಟ್ಟುಕೊಟ್ಟರು. ಈ ಸಂದರ್ಭದಲ್ಲಿ ಈಗಾಗಲೇ ನೆಲೆನಿಂತಿದ್ದ ಬುಡಕಟ್ಟುಗಳ ಪ್ರತಿರೋಧವು ಸರ್ವೇಸಾಮಾನ್ಯವಾಗಿದ್ದಿತು. ಅಂತಹ ಸಂದರ್ಭದಲ್ಲಿ ಮೈಲಾರಲಿಂಗನು ಆ ಪ್ರತಿರೋಧಗಳನ್ನು ಹಿಮ್ಮೆಟ್ಟಿಸಿದ್ದಿರಬಹುದು. ಕಾಲಾನಂತರದಲ್ಲಿ ಒಂದೇ ಸ್ಥಳದಲ್ಲಿ ನೆಲೆನಿಂತು ಅವರು ಹಿಂದಿನ ಜನರೊಂದಿಗೆ ಬೆರೆತು ನೆರೆಹೊರೆ ಸಮುದಾಯಗಳಲ್ಲಿ ಜೀವಿಸತೊಡಗಿದರು. ಪ್ರತಿರೋಧವನ್ನು ಎದುರಿಸಿದ ಮೈಲಾರನು ಲೋಕದೇವನಾದನು. ನಂತರ ಪ್ರಸಿದ್ಧಿಯ ಒಂದು ಕಾರಣ ಶಾಕ್ತ ಪಂಥದ ವರ್ಚಸ್ಸು, ಈ ವರ್ಚಸ್ಸಿನ ಪ್ರಭೆ ಮೊದಲು ಆತನ ಪತ್ನಿ ಮಾಳಚಿಯ ಮೇಲೆ ಹರಡಿರಬೇಕು. ಆಕೆ ಶಾಕ್ತದೇವತೆಯಾದ ಬಳಿಕ ಆ ಸಂಪ್ರದಾಯದ ಭಕ್ತರೂ ಆತನನ್ನೂ ತಮ್ಮ ಕಕ್ಷೆಯಲ್ಲಿ ತೆಗೆದುಕೊಂಡು ಘನತೆಗೇರಿಸಿರಬೇಕು. ಶಾಕ್ತಮತದ ಚೌಕಟ್ಟಿಗೆ ಒಳಗಾದ ಬಳಿಕ ಆತನು ಶಿವನ ಭೈರವಾವತಾರವನ್ನು ತಳೆದನು. ಈ ಪಾತ್ರಕ್ಕೆ ಅನುಗುಣವಾಗಿ ಆತನ ವಾಹನಾದಿ ಪರಿಸರದ ಸೃಷ್ಟಿ ಆಯಿತು. ಮೈಲಾರನು ಆವಿರ್ಭವಿಸಿದುದು ಕರ್ನಾಟಕದಲ್ಲಿ. ಆತನ ಸಂಪ್ರದಾಯ ಕರ್ನಾಟಕ ಮಹಾರಾಷ್ಟ್ರ ಮತ್ತು ನೆರೆಯ ಆಂಧ್ರದ ಸ್ವಲ್ಪ ಪ್ರದೇಶಗಳಲ್ಲಿ ಮಾತ್ರ ಹಬ್ಬಿದೆ"[೧೨]

ಹೀಗೆ ಮೈಲಾರಲಿಂಗನ ಬಗೆಗೆ ಕ್ಷೇತ್ರಗಳು, ಆತನ ಬಗ್ಗೆ ಇರುವಬೇರೆ ಬೇರೆ ಹೆಸರುಗಳು, ಚರಿತ್ರೆಯ ಮತ್ತು ಶಾಸನಗಳ ಉಲ್ಲೇಖಗಳು, ತಾಂತ್ರಿಕ ಪಂಥಗಳ ಜೊತೆಗಿರುವ ಸಂಬಂಧಗಳು, ಜನಪದರಲ್ಲಿರುವ ಮೈಲಾರನ ಬಗೆಗಿನ ಒಡಪು, ಗಾದೆ, ಕಾವ್ಯಗಳು, ಕಥೆಗಳು ಐತಿಹ್ಯಗಳು, ಆಚರಣೆಗಳು ತಳವರ್ಗ ಸಮುದಾಯಗಳ ಹಸಿವು ಮತ್ತು ಬಡತನದ ಕಥೆಯನ್ನೇ ಸಾರುತ್ತದೆ.

ಮೈಲಾರಲಿಂಗನ ಕಾವ್ಯವನ್ನು ಪ್ರಸ್ತುತದಲ್ಲಿ ಹೆಚ್ಚಾಗಿ ಗೊರವರು ಹೇಳುತ್ತಾರೆ. ಗೊರವ ಶಬ್ದಕ್ಕೆ ಮೂಲ 'ಗುರು' ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕಿಟೆಲ್ ನಿಘಂಟಿನಲ್ಲಿ ಒಂದು ಬಗೆಯ ಶೈವ ಭಿಕ್ಷುಕರು ಎಂದು ಹೇಳಲಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಗೊರವ ಗೊಗ್ಗಯ್ಯ ಗಡಬಡ್ಡಯ್ಯ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಗ್ವಾರಪ್ಪ, ವಗ್ಗಯ್ಯ, ವಾಗ್ಯ ಎಂದೆಲ್ಲಾ ಕರೆಸಿಕೊಳ್ಳುವ ಗೊರವರು ಇಂದಿಗೂ ಮೈಲಾರಲಿಂಗನ ಆರಾಧಕರಾಗಿ ಜೀವನ ನಡೆಸುತ್ತಿದ್ದಾರೆ. ಶಿವನ ವೇಷಭೂಷಣಗಳನ್ನು ತೊಟ್ಟು ಮನೆ ಮನೆ ತಿರುಗಿ ಭಿಕ್ಷೆ ಬೇಡುತ್ತಾರೆ. ತಿರುಗಿ ಉಣ್ಣುವ ಇವರ ಆರ್ಥಿಕ ಪರಿಸ್ಥಿತಿಯು ತುಂಬಾ ಅದಗೆಟ್ಟಿದೆ. ಇವರ ಸಾಮಾಜಿಕ ಪರಿಸ್ಥಿತಿಯು ತುಂಬಾ ಶೋಚನೀಯವಾಗಿದೆ. ಭಕ್ತಿಯ ನೆಲೆಯಲ್ಲಿ ಪ್ರಭುತ್ವವನ್ನು ಸಾಧಿಸಿದರೆ, ಸಾಮಾಜಿಕ ನೆಲೆಯಲ್ಲಿ ಅತ್ಯಂತ ಶೋಚನೀಯ ಜೀವನ ನಡೆಸುತ್ತಿದ್ದಾರೆ.

"ಜನಪದ ಕಾವ್ಯಗಳ ಅಧ್ಯಯನ ಆರಂಭವಾದುದು ರೊಮ್ಯಾಂಟಿಕ್ ಯುಗದಲ್ಲಿ. ತಮ್ಮ ದೇಶಾಭಿಮಾನವನ್ನು ಎತ್ತಿ ಹಿಡಿಯಲು, ತಮ್ಮವರನ್ನು ಒಗ್ಗೂಡಿಸಲು ತಮ್ಮ ಪರಂಪರೆಯ ಭವ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸಲು ಜನಪದ ಕಾವ್ಯಗಳನ್ನು ಬಳಸಿಕೊಳ್ಳಲಾಯಿತು. ಈ ಕಾವ್ಯವನ್ನು ಮೈಲಾರಲಿಂಗನ ಗೊರವರು ಜಾತ್ರೆ, ಮೈಲಾರಲಿಂಗನ ದೋಣಿಸೇವೆ ಮುಂತಾದ ಆಚರಣೆಗಳ ಸಂದರ್ಭದಲ್ಲಿ ಹಾಡುತ್ತಾರೆ. ಇಲ್ಲಿ ಜಾತ್ರೆಗಳು ನಡೆಯುತ್ತಿದ್ದುದ್ದು ತಳಸಮುದಾಯಗಳು ಹೆಚ್ಚು ಸಂಖ್ಯೆಯಲ್ಲಿ ಕೂಡುತ್ತಿದ್ದ ಸನ್ನಿವೇಶ ಹೊರತು. ಮೇಲ್ವರ್ಗಗಳ ಸಂಖ್ಯೆ ಅಲ್ಪಮಾತ್ರ. ಜಾತ್ರೆ ಕೂಡುವ ಹಿನ್ನೆಲೆಯಲ್ಲಿ ಹಸಿವಿನ ಚಿಂತನೆ ಇದೆ. ಜಾತ್ರೆಗಳಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ಅನ್ನ ಹಾಕುವ ಕಾರ್ಯ ದೊಡ್ಡದಾಗಿರುತ್ತದೆ. ಎಷ್ಟೋ ಸಮುದಾಯಗಳು ಅಲ್ಲಿಗೆ ಆಗಮಿಸುತ್ತಿದ್ದ ಹಿನ್ನೆಲೆ ಹಸಿವಿನ ಹೊಟ್ಟೆ ತುಂಬಿಸಿಕೊಳ್ಳುವುದೇ ಆಗಿರುತ್ತದೆ. ದೈವದ ನೆಲೆಯಲ್ಲಿ ನಡೆಯುವ ಈ ಪರವಗಳು ಹಲವು ತಳಸಮುದಾಯಗಳ ಹಸಿವಿಗೆ ಆಶ್ರಯವಾಗಿರುತ್ತದೆ. ಇದು ಕರ್ನಾಟಕದ ಉದ್ದಗಲಕ್ಕೂ ಇಂದಿಗೂ ನಡೆಯುತ್ತಿವೆ. ಅಸಮಾನತೆಯ ಅಂಚಿನಲ್ಲಿ ಉಸಿರಾಡುವ ತಳಸಮುದಾಯಗಳ ಬಹುಮುಖ್ಯ ಸಮಸ್ಯೆ ಎಂದರೆ ಹಸಿವು. ಮಹಾಭಾರತದ ಕಾಲದಿಂದಲೂ ಸಮಸ್ಯೆಯನ್ನು ಎದುರಿಸುತ್ತಾ ಬಂದಿದ್ದಾವೆ. ಪಂಪನಿಂದ ಹಿಡಿದು ಇಂದಿಗೂ ಈ ಸಮುದಾಯಗಳು ತಮ್ಮ ಹಸಿವಿನ ಕಥನಗಳನ್ನೇ ಸೃಷ್ಟಿಸುತ್ತಲೇ ಇದ್ದಾರೆ. ಹಸಿವಿನ ಹಿನ್ನೆಲೆ ಇಲ್ಲದ ಯಾವುದೇ ಪ್ರದೇಶದ ಕಾವ್ಯ, ಅದು ಕಾವ್ಯವಾಗಲಾರದು"[೧೩]

ಮೈಲಾರ ಲಿಂಗನ ಕಾವ್ಯ, ಮೈಲಾರಲಿಂಗನ ಅತಿಮಾನುಷ ಶಕ್ತಿಯನ್ನು ಜನತೆಗೆ ಸಾರುವ ಪ್ರಯತ್ನಗಳು. ಮೈಲಾರನನ್ನು ದೈವೀಕರಣಗೊಳಿಸುವ ಪ್ರವೃತ್ತಿ ಹಾಗೂ ಸುದೀರ್ಘವಾದ ಅಪ್ರಸ್ತುತ ಪ್ರಸಂಗಗಳು ಕಾವ್ಯದಲ್ಲಿ ಹೇರಳವಾಗಿವೆ. ಕಾವ್ಯವು ಸಂಕೀರ್ಣವಾಗಿದ್ದು, ಕೊನೆಗೆ ದೇವರ ಅವತಾರವೆಂದು ನಮಗೆ ತಿಳಿದು ಬರುತ್ತದೆ. ತಳಸಮುದಾಯದ ಈ ವ್ಯಕ್ತಿಗಳು

ತಮ್ಮ ಅಸಾಧಾರಣ ಪ್ರತಿಭೆಗಳಿಂದ ಜನಕಲ್ಯಾಣಕ್ಕಾಗಿ ತಮ್ಮ ಬದುಕನ್ನು ಮುಡಿಪಿಟ್ಟು ಬದುಕುವ ಕಲೆಯನ್ನು ತೋರಿಸಿಕೊಟ್ಟವರು. ಬದುಕು ಮಾನವೀಯ ನೆಲೆಯಲ್ಲೇ ಸಾಗಬೇಕು ಎಂದು ಹೇಳಿದವರು. ವೈಭೋಗದ ಖಾಸಗಿ ಜೀವನಕ್ಕಿಂತ ಬಹುಸಮುದಾಯಗಳ ಸರಳ ಜೀವನ ಶ್ರೇಷ್ಠತೆಯನ್ನು ಸಾರಿದವರು. ಜುಂಜಪ್ಪ, ಮಂಟೇಸ್ವಾಮಿ, ಮಾದಪ್ಪ, ಮೈಲಾರ ಲಿಂಗ ಹಾಗಾಗಿ ಬಹುಸಮುದಾಯಗಳ ಆರಾಧ್ಯ ದೈವಗಳಾಗಿ ನಿಲ್ಲುತ್ತಾರೆ.

೫.೩ ಮೈಲಾರಲಿಂಗನ ಕಾವ್ಯದಲ್ಲಿ ಹಸಿವಿನ ನೆಲೆಗಳು

ಕಾಡು ಸಂಸ್ಕೃತಿಯಿಂದ, ನಾಡುಸಂಸ್ಕೃತಿಯ ತನಕ ಹಸಿವಿನ ಚರಿತ್ರೆ ವಿಸ್ತಾರಗೊಂಡಿದೆ. ಸಾಗರದಷ್ಟು ಚಾಚಿಕೊಂಡಿರುವ ಹಸಿವಿನ ಸಮುದಾಯಗಳ ವೈಭವ ಚರಿತ್ರೆಯನ್ನು ಕೇವಲ ಇಷ್ಟ ದೈವಗಳ ವರ್ಣನೆಗಳಲ್ಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ತಳಸಮುದಾಯಗಳು ಇಂದಿಗೂ ಹಸಿದುಕೊಂಡೆ ಇವೆ. ಎಲ್ಲಾ ರೀತಿಯ ಅವಕಾಶಗಳಿಂದ ವಂಚಿತಗೊಂಡು ಬದುಕುಳಿದಿದೆ. ಜಾಗತೀಕರಣ ಅವರನ್ನು ಇನ್ನಷ್ಟು ಕುಗ್ಗಿಸುವಕೆಲಸ ಮಾಡುತ್ತಿದೆ. ನಿನ್ನ ಹಸಿವು ನಿನ್ನ ಹಿಂದಿನ ಜನ್ಮದ ಶಾಪ ಎಂದು ಸಾರುತ್ತಾ ಈ ಸಮುದಾಯಗಳಿಗೆ ಸಿಗಬೇಕಾಗಿದ್ದ ಎಲ್ಲಾ ಸೌಲಭ್ಯಗಳನ್ನು ಲೂಟಿ ಮಾಡುತ್ತಿದೆ. ಈ ಲೂಟಿಕೋರ ಬಂಡವಾಳಶಾಹಿಗಳ ಪ್ರವಾಹದಲ್ಲಿ ನಾಡಿನ ತಳಸಮುದಾಯಗಳು ಅಲ್ಲೋಲ ಕಲ್ಲೋಲ ವಾಗುತ್ತಿದ್ದರೂ, ತಾವು ನಂಬಿದ ದೈವದ ನೆಲೆಯಲ್ಲೇ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಈ ನೆಲೆಯಲ್ಲಿ ಮೈಲಾರಲಿಂಗನ ಕಾವ್ಯಮುಖ್ಯವಾಗುತ್ತದೆ. ಈ ಕಾವ್ಯ ಒಂದು ಸಮುದಾಯದ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ ಎಂಬ ನನ್ನ ಭಾವನೆ. ವಿಷಯಕ್ಕೆ ಸಂಬಂಧಪಟ್ಟದನ್ನು ಮಾತ್ರ ಇಲ್ಲಿ ಚರ್ಚಿಸಲಾಗುತ್ತದೆ. ಮೈಲಾರಲಿಂಗನ ಕಾವ್ಯದಲ್ಲಿ ಬರುವ ಹಸಿವಿನ ನೆಲೆಗಳು ಹೀಗೆ ಪ್ರಸ್ಥಾಪಗೊಂಡಿವೆ. ಮೈಲಾರಲಿಂಗನ ಕಾವ್ಯ ಪ್ರಾರಂಭದಲ್ಲಿ ಬರುವ ಹಾಗೆ

"ಮುಪ್ಪಾದೋರಿಗೆ ॥ಮು॥
ಜಯ ॥ಹಿ॥
ತುಪ್ಪನ್ನ ಕೊಡಪ್ಪ ॥ಮು॥
ಜಯ ॥ಹಿ॥
ಹಣ್ಣಾದೋರಿಗೆ॥ ಮು॥
ಜಯ॥ಹಿ॥
ಹಾಲು ಅನ್ನ ಕೊಡು ॥ಮು॥
ಜಯ ॥ಹಿ॥"[೧೪]

(ಪು.ಸಂ–೨೩)

ಹುಟ್ಟಿದ ತಕ್ಷಣ ಹೊಟ್ಟೆ ತುಂಬ ಹಾಲು ಅನ್ನ ಕೊಡು ಶಿವನೆ ಎಂದು ನಮ್ಮ ಜನಪದರು ಕೇಳಿದವರಲ್ಲ. ಸಾವಿನ ಗಳಿಗೆ ಅಂದರೆ ಸಾಯುವುದಕ್ಕಿಂತಮುಂಚೆಯಾದರೂ ನಮ್ಮ ಹೊಟ್ಟೆಗೆ ಹಾಲು ಅನ್ನ ದೇಹಕ್ಕೆ ಬಟ್ಟೆಯನ್ನು ನೀಡು ಎಂದು ಕೇಳುತ್ತಾರೆ. ಆದರೆ ಇಂದು ಅನ್ನ ಭಾಗ್ಯ ಮತ್ತು ಕ್ಷೀರಭಾಗ್ಯ ಮತ ಬ್ಯಾಂಕುಗಳಾಗಿ ಕಾರ್ಯ ನಿರ್ವಹಿಸುತ್ತಿದೆ. ಮತಗಳನ್ನೇ ಕೇಂದ್ರವಾಗಿಟ್ಟುಕೊಂಡು ಇಂದು ಬಡಜನರಿಗೆ ಹಲವು ಭಾಗ್ಯಗಳ ಬರವಸೆಯನ್ನು ನೀಡುತ್ತಿದ್ದಾರೆ ನಮ್ಮ ಸರ್ಕಾರಗಳು. ಪ್ರಭುಗಳ ಆಲೋಚನೆಯಲ್ಲಿ ಜನರಿಗೆ ನೀಡುತ್ತಿರುವ ಭಾಗ್ಯಗಳು ಭಿಕ್ಷೆ ಎಂದು ಭಾವಿಸಿಕೊಂಡಿವೆ. ಇಲ್ಲಿ ಹಾಡುಗಾರ ಮೈಲಾರಲಿಂಗ ಮಹಿಮೆಗಳನ್ನು ಹಾಡುತ್ತಾ ನಮಗೆ ಹಾಲು, ಅನ್ನವನ್ನು ನೀಡು ಶಿವನೆ ಎಂದು ಬೇಡಿಕೊಳ್ಳುತ್ತಾನೆ. ಅದು ಯಾವ ರೀತಿಯಲ್ಲಿ ಎಂದರೆ ಮುಪ್ಪಾದವರಿಗೆ ತುಪ್ಪವನ್ನು ಕೊಡು, ಹಣ್ಣಾದವರಿಗೆ ಅಂದರೆ ಹಸಿವಿನಿಂದ ಕುಗ್ಗಿದವರಿಗೆ ಹಾಲು, ಅನ್ನ ನೀಡು ಎಂದು ಕೇಳಿಕೊಳ್ಳುವ ಸನ್ನಿವೇಷವಾಗಿದೆ. ಕರ್ನಾಟಕ ಗ್ರಾಮ ಸಮಾಜದ ಪರಿಸ್ಥಿತಿಯು ಮೇಲಿನ ಸಾಲುಗಳಂತೆ ಕಂಡುಬರುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಜನರು ಅನ್ನವಿಲ್ಲದೆ ಸಾಯುತ್ತಿದ್ದಾರೆ. ಹಸಿವಿನ ಭೀಕರ ಪರಿಸ್ಥಿತಿಯಿಂದ ಕರ್ನಾಟಕ ಅಥವಾ ಭಾರತ ಮುಕ್ತವಾಗಿಲ್ಲ.

ಏ ಹರಕು ಅಂಗಿಯವನೆ
ಮುರುಕು ಬೆತ್ತದವನೆ
ಒಡಕು ದೋಣಿಯವನೆ ।ಏ। ಮುದಿಮಲ್ಲ
ಬಾ ನನ್ನ ಮ ಗುರುವೆ ॥ಮು॥

(ಪು.ಸಂ–೮೧)

ಹಾಗೆ ಮುಂದುವರಿಯುತ್ತಾ ಮೈಲಾರಲಿಂಗ ಸಾಮಾನ್ಯ ವ್ಯಕ್ತಿಯಾಗಿ ಹರಕು ಅಂಗಿ, ಮುರುಕು ಬೆತ್ತ, ಒಡಕು ಡೋಣಿ, ಬಾ ನನ್ನ ಮಾಗುರುವೆ ಎಂದರೆ ನನ್ನ ಬದುಕಿನ ಸ್ಥಿತಿ ಹೇಗಿದೆ ನೋಡು ಎನ್ನುವ ಪರಿ. ನನ್ನ ಬದುಕೆ, ನಿನ್ನ ಬದುಕು. ಇದಕ್ಕಿಂತ ಹೆಚ್ಚಿನದೇನು ನನಗಿಲ್ಲ ಎಂದು ಭಕ್ತಿಯಲ್ಲಿ ಹೇಳಿಕೊಳ್ಳುವ ಸ್ಥಿತಿ ಇಂದು ನಮ್ಮ ಜನಪದರದಾಗಿದೆ. ಹಸಿವು, ಬಡತನ, ಪ್ರೇಮ ನಮ್ಮ ಮೌಖಿಕ ಸಾಹಿತ್ಯದಲ್ಲಿ ಹೇರಳವಾಗಿ ಕಾಣಬಹುದು. ಈ ನೆಲಯಲ್ಲೇ ಮೈಲಾರಲಿಂಗ ಕುರುಬರ ಯುವತಿಗೆ ಮರುಳಾಗಿ ಅವರ ಮನೆಯಲ್ಲಿ ಕುರಿ ಕಾಯಲು ನಿಲ್ಲುತ್ತಾನೆ. ಹರಕು ಕಂಬಳಿ ಧರಿಸಿ ಮುರುಕು ಜೆತ್ತವನ್ನು ಹಿಡಿದು ಅಡವಿ ಅರಣ್ಯ ತಿರುಗುತ್ತಾ ಬರುವಾಗ

"ಅರಣ್ಯಾ ಅಡವ್ಯಗೆ ಬರುತಾನೆ
ಮುದಿಮಲ್ಲ

ಕುರಿಗಳು ನೋಡ್ಯನಲ್ಲೆ ॥ಹಿ॥
ಏ, ಏಳುಮಂದಿ ಅಣ್ಣತಮ್ಮರೇ
ಈಗ ಇನ್ನು
ಏಳು ಸಾವಿರದ ಕುರಿಹಿಂಡು ॥ಮು॥
ಏಳು ಮಂದಿ ಅಣ್ಣ ತಮ್ಮರೇ
ಈಗ ಇನ್ನು ಏಳುಸಾವಿರದ ಕುರಿಹಿಂಡು ॥ಹಿ॥
ಏಳು ಸಾವಿರದ ಕುರಿಹಿಂಡು
ಈಗ ಇನ್ನು
ಅರ‍್ಯಾಣ ಅಡಿವ್ಯಾಗೆ ಬರುತ್ತಾರೆ ॥ಮು॥
ಕರಿಗಳತಲ್ಲೀಗೆ ಬಂದಾನೆ
ಮೈಲಾರಮಲ್ಲ
ಬಿದ್ದು ಬಿದ್ದಂಗ ಮಾಡುತಾನೆ ॥ಮು॥
ಆ ಕುರುಬಾರು
ಏನಂತಾ ತಾವೆ ಕೇಳುತಾರೊ
ದೇವಾರು ದೇವ ॥ಮು॥
ಆ, ಕರ್ನಾಗುಂಡೂ
ತಮ್ಮಾಗೇನಂತಾ ಹೇಳುತಾನ
ದೇವಾರು ದೇವ ॥ಮು॥
ಏ, ತಮ್ಮಣ್ಣಾ
ಬಿದ್ದು ಬಿದ್ದಂಗ ಈಗ ಮಾಡುತಾನ
ದೇವಾರು ದೇವ ॥ಮು॥
ಏ ರಾವಳಗುಂಡೂ
ಮುದ್ಯಾನ್ನ ಕರಕೊಂಬಾರೋ
ದೇವಾರು ದೇವ ॥ಮು॥
ಏ ಕುರುಬಾರೆ
ಇಟ್ಟಾರೆ ವಟ್ಟೆ ತುಂಬಾ ಇಡಬೇಕೊ
ದೇವಾರು ದೇವ ॥ಮು॥
ಏ ಕುರುಬಾರೆ
ಅರ್ಧ ಹೊಟ್ಟೆಗಳು ಮಾಡಬಾರ್ದು

ದೇವಾರು ದೇವ ॥ಮು॥
ಏ ಮುದಿಯವನೇ
ಏಟು ನೀನಿನ್ನ ಉಂಬಾತೀಯೋ
ದೇವಾರು ದೇವ ॥ಮು॥
ಏ, ತಮ್ಮಯ್ಯ
ಏಳು ಬುತ್ತಿಗಳು ಕೊಡಾ ಹೋಗೋ
ದೇವಾರು ದೇವ ॥ಮು॥
ಏ, ತಮ್ಮಣ್ಣ
ಏಳು ಡಬರಿ ಹಾಲು ಹಿಂಡಿ ಕೊಡೊ
ದೇವಾರು ದೇವ ॥ಮು ॥
ಏ, ತಮ್ಮಣ್ಣ
ಘಮ್ಮಲಿದ್ದರೆ ಕೊಳ್ಳಿಗೆ ಕಟ್ಟಾ ಬೇಕೋ
ದೇವಾರು ದೇವ ॥ಮು॥
ಆ ರಾವಲಗುಂಡೂ
ಏಳು ಬುತ್ತಿಗಳು ಕೊಟ್ಟಾನಲ್ಲಾ
ದೇವಾರು ದೇವ॥ಮು॥
ಆ ರಾವಲಗುಂಡೂ
ಏಳು ಡಬರಿ ಹಾಲು ಕೊಟ್ಟಾನಲ್ಲಾ
ದೇವಾರು ದೇವ.
ಈ ಮುದಿಯವನೆ
ಒಂದೇ ಸುರ್ರಿಗೇ ಸುರುದಾಬಿಟ್ಟಾ
ದೇವಾರು ದೇವ॥ಮು॥
ಏ ಕುರುಬಾರೇ
ಹೊಟ್ಟ್ಯಾದರ ನನಗ ತುಂಬಾಲಿಲ್ಲೋ
ದೇವಾರು ದೇವ ॥ಮು॥
ಏ ಕುರುಬಾರೇ
ಅರ್ಧ ಹೊಟ್ಟೆಗಳೂ ಮಾಡಬಾರ್ದು
ದೇವಾರು ದೇವ ॥ಹಿ॥
ಆ ಕರ್ಣಾಗುಂಡು

ಏಳು ಕಂಡುಗ ಅನ್ನ ಮಾಡಿಸ್ಯಾನ
ದೇವಾರು ದೇವ॥ ಮು॥
ಆ ಕರ್ಣಾಗುಂಡು
ಏಳು ಕೊಡ ಹಾಲು ಹಿಂಡಿಸ್ಯಾನ
ದೇವಾರು ದೇವ ॥ಹಿ॥
ಆ ಕರ್ಣಾಗುಂಡು
ಬಂಡಿಗೆ ತಾನೇ ಏರ್ಯಾನೆಂದ
ದೇವಾರು ದೇವ ॥ಮು॥
ಆ, ಕರ್ಣಾಗುಂಡು
ಬಂಡಿಗೆ ತಾನೇ ಏರ್ಯಾನೆಂದ
ದೇವಾರು ದೇವ॥ಮು॥
ಆ ಕರ್ಣಾಗುಂಡು
ಮುದ್ಯಾನಾ ಮುಂದೆ ಇಳಿಸ್ಯನಾ
ದೇವಾರು ದೇವ ॥ಹಿ॥
ಏ ಮುದಿಯವನೆ
ಎಷ್ಟು ಉಂಬಾತಿ ಉಣ್ಣಾ ಈಗ
ದೇವಾರು ದೇವ ।ಮು॥
ಏ ಮುದಿಯವನೆ
ಮರಯಾದಿ ನಮ್ಮನ್ನ ಕಳದಿದ್ಯಾ
ದೇವಾರಿ ದೇವ ॥ಮು॥"[೧೫]

(ಪು.ಸಂ ೨೮೭-೨೯೬)

ಅಲ್ಲಿ ಏಳು ಸಾವಿರ ಕುರಿ ಮೇಯಿಸುತ್ತಾ ಕೋಮಾಲೆಯ ಏಳುಜನ ಅಣ್ಣಂದಿರು ಇರುತ್ತಾರೆ. ಅಲ್ಲಿಗೆ ಬರುವ ಹೊತ್ತಿಗೆ ಹಸಿವೆಯಾಗುತ್ತದೆ. ಕುರಿ ಕಾಯುವವರನ್ನು ತಿನ್ನಲು ಏನಾದರೂ ಕೊಡಿ ಎನ್ನುತ್ತಾನೆ. ಅವರು ಕೊಟ್ಟಿದ್ದನ್ನೆಲ್ಲಾ ತಿಂದು ಹಾಲು ಕುಡಿದರೂ ಹಸಿವು ಓಂಗುವುದಿಲ್ಲ.ಕೊಟ್ಟರೆ ಏಳು ಕೊಪ್ಪರಿಗೆ ಅನ್ನ ಮಾಡಿ ತಂದು ಕೊಟ್ಟರೂ ಹಸಿವು ಹಿಂಗುವುದಿಲ್ಲ. ಹೊಟ್ಟೆ ತುಂಬ ಕೊಡಬೇಕು ಎಂದು ಮೊದಲೇ ಅಪ್ಪಣೆ ಮಾಡಿರುತ್ತಾನೆ. ಹೀಗಾಗಿ ಅವರು ಮನೆಯಿಂದ ಅಡಿಗೆ ಮಾಡಿ ತಂದರೂ ಅವನ ಹಸಿವು ಹಿಂಗುವುದಿಲ್ಲ ಕೊನೆಗೆ ಅವರು ಸೋತು ಶರಣಾಗುತ್ತಾರೆ. ಆಗ ಗೊರವ ನಿಮ್ಮ ಋಣ ತೀರಿಸುತ್ತೇನೆ ಎಂದು ಅವರ ಕುರಿಗಳನ್ನು ಮೇಯಿಸಲು ಹೊಳೆ ಕಡೆಗೆ ಹೊಡೆದುಕೊಂಡು ಹೋಗುತ್ತಾನೆ. ಅಲ್ಲಿ ಬಟ್ಟೆ

ಒಗೆದ ಹಾಗೆ ಒಗೆದು ಕೊಂದು ಹಾಕುತ್ತಾನೆ. ಬಂದು ನೋಡಿದ ಕುರುಬರಿಗೆ ನಿಮ್ಮ ತಂಗಿ ಕೋಮಾಲೆ ಇಲ್ಲಿಗೆ ಬಂದರೆ ಬದುಕುತ್ತವೆ ಎಂದು ಹೇಳುತ್ತಾನೆ. ಆದರೆ ಕೋಮಾಲೆ ಬರಲು ಒಪ್ಪುವುದಿಲ್ಲ. ಕೊನೆಗೆ ಗೊರವನು ಕೋಮಾಲೆಯ ಅಣ್ಣಂದಿರಿಗೆ ನಿಮ್ಮ ತಂಗೀನ ಹಾದಿಯಲ್ಲಿ ಹೋಗುವವರಿಗೆ ಕೊಟ್ಟು ಮದುವೆ ಮಾಡಿಕೊಡಿ ಎಂದು ಹೇಳಿ, ಭಂಡಾರ ಉಗ್ಗಿ ಕುರಿಗಳನ್ನು ಬದುಕಿಸುತ್ತಾನೆ. ಮೈಲಾರಲಿಂಗ ಕುರಿಗಳನ್ನು ಬದುಕಿಸಿದ್ದನ್ನು ನೋಡಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ತಂಗಿಗೆ ಮೈಲಾರಲಿಂಗನನ್ನು ಉಪಚಾರ ಮಾಡಲು ಹೇಳುತ್ತಾರೆ. ಈ ಭಾಗ ಹಸಿವಿನಿಂದ ಪ್ರಾರಂಭವಾಗಿ ಕೋಮಾಲೆಯ ಪ್ರೇಮದ ತನಕ ಮುಂದುವರಿಯುತ್ತದೆ. ಇಂದಿಗೂ ತಳಸಮುದಾನದ ವಿದ್ಯಾವಂತ ವ್ಯಕ್ತಿಗಳು ತಮ್ಮ ಬದುಕು ಎಷ್ಟೇ ಶೋಚನೀಯವಾಗಿದ್ದರೂ ತಮ್ಮ ವಿದ್ಯೆ, ಬುದ್ಧಿಯಿಂದ ಎಲ್ಲಾ ಕ್ಷೇತ್ರದ ಅವಕಾಶಗಳನ್ನು ಪಡೆಯುವ ಪ್ರಯತ್ನವಾಗಬೇಕು. ಅದು ಅನ್ನ, ಅವಕಾಶವನ್ನು ಪಡೆಯುವ ಪ್ರಯತ್ನವಾಗಬೇಕು. ಅದು ಅನ್ನ ಅವಕಾಶ, ಪ್ರೇಮ ಯಾವುದಾದರೂ ಇರಬಹುದು. ಇಲ್ಲಿ ಮೈಲಾರಲಿಂಗ ತನ್ನ ಮಂತ್ರಶಕ್ತಿಯಿಂದ ಕೋಮಾಲೆಯನ್ನು ಪಡೆಯುವ ಪ್ರಯತ್ನ ಮಾಡಿದ್ದಾನೆ.

ಮೈಲಾರಲಿಂಗನ ಕಾವ್ಯದಲ್ಲಿ ಹಲವಾರು ಪವಾಡಗಳು ವರ್ಣಿತವಾಗಿವೆ. ಗೋಮುನಿ ಕರಣದಲ್ಲಿ ಧರ್ಮಕರ್ತನಾಗಿ ಜನಿಸಿ ಭಂಡಾರಕ್ಕೆ ಕಲಿರಾಯ ಆಗುತ್ತಾನೆ. ಕೋರಿ ಅಂಗಿ ತೊಟ್ಟು ಭಕ್ತರ ಮನೆ ಬಾಗಿಲಲ್ಲಿ ತಿರುಗಾಡಿದ್ದ ಹನ್ನೆರಡಾಳು ಸೇದೋ ಬಾವಿ ಬಳಿ ಕೂತು ಜಪ ಮಾಡುವವರ ಕೈಯಲ್ಲಿನ ಲಿಂಗ ಮಾಯ ಮಾಡಿದ್ದು, ಭಂಡಾರ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ಅಂಡೆ ಕುರುವತ್ತಿ ತಂದು ಏಳೇಳು ಲೋಕವನ್ನು ಸಲಹಿದ್ದು ರಾಣಿಬೆನ್ನೂರಿನ ರಾಣಿ ಶೀಲವಂತೆಗೆ ಮಕ್ಕಳವರ ಕೊಟ್ಟಿದ್ದು ಆತನ ಪವಾಡಗಳಲ್ಲಿ ಪ್ರಮುಖವಾದವು.

ಪ್ರಸ್ತುತ ಕಾವ್ಯದಲ್ಲಿ ಮಳಮ್ಮ ಮತ್ತು ಕೋಮಾಲಿ ಪ್ರಸಂಗ ತುಂಬಾ ರಸವತ್ತಾದದ್ದು. ಬನ್ನಿಹಬ್ಬದಲ್ಲಿ ಬನ್ನಿ ಮುಡಿಯಲು ದೇವರು ಬಂದಾಗ ನೆಣಿಕೇರು ಹಾಲಿನ ಭಾಷೆ ತೆಗೆದುಕೊಳ್ಳುತ್ತಾರೆ. ಆ ಭಾಷೆಗಳು ಗಗನ ಮುಟ್ಟುತ್ತವೆ. ಮಾಳಮ್ಮ ಮಲ್ಲಯ್ಯಗೆ ಮದುವೆ ಆಗುತ್ತದೆ. ಮದುವೆಗೆ ಸೂರ್ಯ ಚಂದ್ರರು ಭೂಮಿಗೆ ಬರುತ್ತಾರೆ. ಬ್ರಹ್ಮನೇ ಬಂದು ಬ್ರಹ್ಮಗಂಟು ಹಾಕುತ್ತಾನೆ ಎಲ್ಲಾ ಮದುವೆ ಕಾರ್ಯಗಳನ್ನು ಭಕ್ತರು ನಡೆಸುತ್ತಾರೆ. ಮಾಳವ್ವನಿಗೆ ಸುಳ್ಳು ಹೇಳಿ ಚಂದ್ರಗಿರಿ ಪಟ್ಟಣಕ್ಕೆ ಕೋಮಾಲಿಯನ್ನು ತರಲು ಮೈಲಾರಲಿಂಗ ಹೋಗುತ್ತಾನೆ. ಈ ಸಂದರ್ಭದಲ್ಲಿ ಮಾಳವ್ವ ಹಾವು ಕಚ್ಚಲಿ. ಹುಲಿ ನುಂಗಲಿ ಎಂದು ಶಪಿಸುತ್ತಾಳೆ. ಈ ಪ್ರಸಂಗ ತುಂಬ ನಾಟಕೀಯವಾದದ್ದು. ಅಲ್ಲಿಗೆ ಬಂದ ಹನುಮಪ್ಪನಿಗೆ ತನ್ನ ಅಳುವಿನ ಕಾರಣ ಹೇಳುತ್ತಾಳೆ. ಹನುಮಪ್ಪ ಆವಳಿಗೆ ಮೈಲಾರಲಿಂಗನು ನಿನ್ನ ಮೇಲೆ ಇನ್ನೊಬ್ಬಳನ್ನು ತರಲು ಹೋಗಿದ್ದಾನೆ ಎಂದು ನಿಜ ಹೇಳುತ್ತಾನೆ.

"ಏ ಕೋಮಾಲಿ ಹತ್ತಿರ ಬಂದರೆ ಮಾಡೋದೇನೆ
ದೇವಾರು ದೇವಾ ॥ ಹಿ॥
ಅನ್ನಾ ಕಾಣದ ಗೊರವಾ
ಊರೊಳಗೆ ಅನ್ನ ಬೇಡಲಿ ಹೋಗು ॥ಮು॥
ಅನ್ನ ಕಾಣದ ಗೊರವಾ
ಊರೊಳಗೆ ಅನ್ನ ಬೇಡಲಿ ಹೋಗು ॥ಮು॥
ಏ, ಅನ್ನ, ನಾನೇನು ಮಡಲಿ
ಕೋಮಾಲಿ ತೋಳಲಿ ಮಲಗಿದ್ದೇನೆ ॥ಹಿ॥
ಆ ಬಟ್ಟೆ ಕಾಣದ ಗೊರವಾ
ಊರೊಳಗೆ ಬಟ್ಟೆ ಬೇಡಲು ಹೋಗೋ ॥ಹಿ॥
ಆ ಬಟೆ ನನೇನು ಮಾಡಲಿ
ಕೋಮಾಲಿ ಪಟ್ಟೆ ಮಂಚಕೆ"೧೬

ಕೋಮಾಲಿಯ ಈ ಪ್ರಸಂಗದಲ್ಲಿ ಮೈಲಾರಿಲಿಂಗನನ್ನು ಅನ್ನ, ಬಟ್ಟೆ ಇಲ್ಲದವನನ್ನು ನಾ ಹೇಗೆ ಮದುವೆ ಮಾಡಿಕೊಳ್ಳಲಿ ಎಂದು ಪ್ರಶ್ನಿಸುತ್ತಾಳೆ.

"ಆ ಮಾಯಿಕಾರನ
ಗಸ್ಥೇರು ಈಗಾ ತರಬ್ಯಾರಲ್ಲ
ದೇವಾರು ದೇವ ॥ಹಿ॥
ಈ ಮಾಯಿಕರ
ಗಸ್ಥೇರ್ನೇನಂತ ಕೇಳುತಾನ
ದೇವಾರು ದೇವ ॥ಮು॥
ಈ ಮಾಯಿಕಾರ
ಗಸ್ಥೇರ್ನೇನಂತ ಕೇಳುತಾನ
ದೇವಾರು ದೇವ ॥ಮು॥
ಏಯ್ ಗಸ್ಥೇರಾ
ಹೊಟ್ಟೆಸವು ನನಗೆ ಬಾಳಾಗೈತೋ
ದೇವಾರು ದೇವ ॥ಮು॥
ಏ ಗಸ್ಥೇರಾ
ನೀರುದಮ್ಮು ನನಗೆ ಬಾಳಾಗೈತೋ
ದೇವಾರು ದೇವ ॥ಹಿ॥

ಏಯ್, ಗಸ್ಥಿರಾ

ಹೊಟ್ಟೆಸವು ನನಗೆ ಬಾಳಾಗೈತೋ

ದೇವಾರು ದೇವ॥ಹಿ॥

ಏ ಗಸ್ಥೇರಾ

ಊರಾಗಾ ನನ್ನ ಬಿಡಾರಪ್ಪ

ದೇವಾರು ದೇವ ॥ಮು॥

ಏ ಗಸ್ಥೇರಾ

ಊರಾಗಾ ನನ್ನ ಬಿಡಾರಪ್ಪ

ದೇವಾರು ದೇವ ॥ಮು॥

ಏ ಗಸ್ಥೇರಾ

ಊರಾಗಾ ನನ್ನ ಬಿಡಾರಪ್ಪ

ದೇವಾರು ದೇವ ॥ಮು॥

ಏ ಗಸ್ಥೇರಾ

ಬೇಡಿಯಾದರೂ ನಾನು ಉಂಬಾತೀನಿ

ದೇವಾರು ದೇವ ॥ಮು॥

ಏ ಮುದಿಯವನೆ

ಊರಾಕಾ ನಿನ್ನ ಬಿಡುದಿಲ್ಲಾ

ದೇವಾರು ದೇವ ॥ಮು॥"[೧೭]

(ಪು.ಸಂ-೨೨೯)

ಎಂಟು ದಿನಗಳ ನಂತರ ಗೊರವನ ವೇಷದಲ್ಲಿ ಮೈಲಾರನು ಕೋಮಾಲೆಯ ಪಟ್ಟಣಕ್ಕೆ ಬರುತ್ತಾನೆ. ಆಗ ಗಸ್ತಿನವರು ಮೈಲಾರಲಿಂಗನನ್ನು ಒಳಗಡೆ ಬಿಡುವುದಿಲ್ಲ. ತನಗೆ ತುಂಬ ಹೊಟ್ಟೆ ಹಸಿದಿದೆ ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಅಷ್ಟೇ ಅಲ್ಲಾ ಹಸಿವಿನೊಂದಿಗೆ ತುಂಬಾ ಬಯಾರಿಕೆ ಆಗಿದೆ. ಕುಡಿಯಲು ನೀರಾದರನ್ನು ಕೊಡಿ ಎಂದರು. ಆ ಗಸ್ತಿನವರು ಮೈಲಾರಲಿಂಗನನ್ನು ಪಟ್ಟಣದ ಒಳಕ್ಕೆ ಪ್ರವೇಶ ಕೊಡುವುದಿಲ್ಲ. ಊರೊಳಗೆ ಭಿಕ್ಷೆ ಬೇಡಿಯಾದರೂ ಉಣ್ಣುತ್ತೀನಿ ಎಂದರು ಅವರು ಬಿಡುವುದಿಲ್ಲ. ಆಗ ಮೈಲಾರನು ಚಾವಡಿ ಕಟ್ಟೆಯ ಮೇಲೆ ಕುಳಿತು ಹನ್ನೇರಡು ಮಣ ತಂಬಾಕನ್ನು ಚಿಲುಮೆಗೆ ತುಂಬಿ ಹೊಗೆ ಬಿಡುತ್ತಾನೆ ಆ ಹೊಗೆಯಿಂದ ಗಸ್ತಿನವರು ಮೂರ್ಛೆ ಬೀಳುತ್ತಾರೆ. ಹೀಗೆ ಪವಾಡಗಳ ಮೂಲಕ ತನ್ನ ಮಹಿಮೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಾನೆ.

ಈ ಕಾವ್ಯ ಭಾಗದಲ್ಲಿ ಗಮನ ಸೆಳೆಯುವ ಮತ್ತೊಂದು ಪ್ರಸಂಗವೆಂದರೆ ಮಡಿವಾಳರ ಸಂಧಿಯಲ್ಲಿ

"ಆ ಮಲ್ಲಿಗೆ ದೇವಿ
ಸ್ವಾಮಿ ಅಂಗಿನಾ ಕೈಯಾಗಿಡದಾಳೆ
ದೇವಾರು ದೇವ ||ಮು||
ಆ ಮಡಿವಾಳ್ರೂ
ಸತಿಯೂ ಪತಿಯೂ ಎನಗೆ ಕೊಟ್ಟರಲ್ಲೋ
ದೇವಾರು ದೇವ ||ಮು||
ಆ ಮಾಯಿಕರ
ಏನೆಂದು ತಾನು ಕೇಳೂತಾನಾ
ದೇವಾರು ದೇವ ||ಮು||
ಆ ಮಾಯಿಕರ
ಏನೆಂದು ತನು ಕೇಳೂತಾನಾ
ದೇವಾರು ದೇವ ||ಮು||
ಏ ಮಡಿವಾಳ್ರೇ
ಏನು ಬೇಡತೀರಿ ಬೇಡಾರೀಗ
ದೇವಾರು ದೇವ ||ಮು||
ಏ ಮಡಿವಾಳ್ರೇ
ಏನೂ ಬೇಡತೀರ ಬೇಡಾರೀಗಾ
ದೇವಾರು ದೇವ ||ಮು||
ಏ ಮಡಿವಾಳ್ರೇ
ಬೇಡಿದ ವರವ ಕೊಡತೀನಿ
ದೇವಾರು ದೇವ ||ಮು||
ಏ ಮಡಿವಾಳ್ರೇ
ಬೇಡಿದ್ದ ವರವ ಕೊಡತೀನಿ
ದೇವಾರು ದೇವ ||ಮು||
ಏ ಮಡಿವಾಳ್ರೆ
ಬೇಡಿದ್ದು ವರವ ನೀಡಾತೀನೋ
ದೇವಾರು ದೇವ ||ಮು||

ಏ ನಮ್ಮ ತಾತಾ
ಹೊಟ್ಟೆ ತುಂಬಾ ಅನ್ನಾ ನಮಗೆ ಕೊಡೋ
ದೇವಾರು ದೇವ ॥ಮು॥
ಏ ನಮ್ಮ ತಾತಾ
ಹೊಟ್ಟೆ ತುಂಬ ಅನ್ನಾ ನಮಗೆ ಕೊಡೋ
ದೇವಾರು ದೇವ ॥ಮು॥
ಏ ನಮ್ಮ ತಾತಾ
ಮೈ ತುಂಬಾ ಬಟೆ ನಮಗೆ ಕೊಡೋ
ದೇವಾರು ದೇವ ॥ಮು॥
ಏ ನಮ್ಮ ತಾತಾ
ಮೈ ತುಂಬಾ ಬಟ್ಟೆ ನಮಗೆ ಕೊಡೋ
ದೇವಾರು ದೇವ ॥ಮು॥
ಏ ನಮ್ಮ ತಾತಾ
ಊರ ತುಂಬಾ ಉದ್ಯೋಗ ನಮಗೆ ಕೊಡೋ
ದೇವಾರು ದೇವ ॥ಮು॥
ಏ ನಮ್ಮ ತಾತಾ
ಮಣಕಾಲಾ ಮಟ್ಟಾನೀರು ಕೊಡೋ
ದೇವಾರು ದೇವ ॥ಮು॥
ಏ ಮಡಿವಾಳ್ರೇ
ಬೇಡಿದ ವರವ ಕೊಟ್ಟೇನೋಗ್ರಿ
ದೇವಾರು ದೇವ ॥ಮು॥
ಈ ಮಾಯಿಕಾರ
ಹಿಂಗೇಳಿ ತಾನೇ ಮಾಯವಾದ
ದೇವಾರು ದೇವ ॥ ಹಿ॥"[೧೮]

(ಪು.ಸಂ ೨೭೬–೨೭೮)

ಮುಂದೆ ಮಲ್ಲನು ಮುದ್ದಮ್ಮ ಎನ್ನುವವಳ ಮನೆಗೆ ಭಿಕ್ಷೆ ಬೇಡಲು ಬಂದಾಗ ಅವಳು ಹಾಲು ಕರೆಯುತ್ತಿದ್ದೇನೆ, ಮುಂದೆ ಹೋಗು ಎನ್ನುತ್ತಾಳೆ. ಸಿಟ್ಟುಬಂದ ಗೊರವ ಎಲ್ಲವನ್ನೂ ಮಾಯ ಮಾಡುತ್ತಾನೆ. ಹಾರವಕೆ ಮನೆಯಲ್ಲಿಯೂ ಸಹ ಹೀಗೆ ಅವಮಾನವಾಗುತ್ತದೆ. ಅಲ್ಲಿಂದ ಮುಂದೆ ಮಲ್ಲ ಮಡಿವಾಳನ ಮನೆಗೆ ಹೋಗಿ ನಿಲ್ಲುತ್ತಾನೆ. ಆಗ ಮಡಿವಾಳ ಮಲ್ಲನ

ಪಾದ ತೊಳೆದು ಪೂಜೆ ಮಾಡಿ ಭಿಕ್ಷೆ ನೀಡುತ್ತಾನೆ. ಆಗ ಮಲ್ಲ ಭಿಕ್ಷೆ ಬೇಡ ಕಂಬಳಿ ಅಂಗಿಯನ್ನು ಒಗೆದುಕೊಡು ಎನ್ನುತ್ತಾನೆ. ಅಂಗಿಯನ್ನು ಒಗೆಯುವಾಗ ನೀರಿಗೆ ಹಾಕಬಾರದು ಕಲ್ಲಿಗೆ ಬಡಿಯಬಾರದು ಎಂದು ಕೊಟ್ಟು ಹೋಗುತ್ತಾನೆ. ಊರೊಳಗೆ ಬಟ್ಟೆ ತೊಳಿಯುವ ಮಲ್ಲಿಗೆ ದೇವಿಗೂ ಹೇಳಿಹೋಗುತ್ತಾನೆ. ಎಷ್ಟು ಯೋಚನೆ ಮಾಡಿದರೂ ಹೊಳೆಯುವುದಿಲ್ಲ. ಊರವರ ಬಟ್ಟೆ ಹೇರಿಕೊಂಡು ಹೊಳೆಗೆ ಬರುತ್ತಾರೆ. ಬರುವಾಗ ದಾರಿಯಲ್ಲಿ ಮಲ್ಲನು ಮತ್ತೆ ಅಡ್ಡಬಂದು ಅದೇ ರೀತಿ ಹೇಳಿ ಹೋಗುತ್ತಾನೆ. ಊರವರ ಬಟೆಗಳನ್ನೆಲ್ಲಾ ತೊಳೆಯುತ್ತಾನೆ. ಗೊರವನ ಅಂಗಿ ಮಾತ್ರ ಉಳಿಯುತ್ತದೆ. ಅವರಿಗೆ ಅಂಗಿಯನ್ನು ಹಿಂದಕ್ಕೆ ಒಯ್ಯಲು ಹೆದರಿಕೆ ಆಗುತ್ತದೆ. ಆ ಹೆಂಡತಿ ತನ್ನ ಶಿರ ಕಡಿಯಲು ಗಂಡನಿಗೆ ಹೇಳುತ್ತಾಳೆ. ರಕ್ತ ನೀರಾಗಿ, ಎದೆ ಕೊಬ್ಬು ಸೌಳು ಸುಣ್ಣವಾಗಿ, ತಲೆ ಮಿದುಳು ಬಿಸಿಲು ಬೀಳುವ ಆರತಿಯಾಗಿಟ್ಟು ಕೊಂಡು ಅವರು ಭಕ್ತಿಯಿಂದ ಪರಿಶುದ್ಧವಾದ ಮನಸ್ಸಿನಿಂದ ಕಂಬಳಿಯನ್ನು ಒಗೆಯುತ್ತಾರೆ. ಮಾಯದ ಮಲ್ಲನು ಕಂಬಳಿ ಅಂಗಿಯನ್ನು ಕೇಳಲು ಬಂದಾಗ ಗಂಡಹೆಂಡಿರು ಜೊತೆಯಾಗಿ ಕಂಬಳಿಕೊಡಬೇಕು ಎಂದು ಹೇಳುತ್ತಾನೆ ಮಡಿವಾಳನು ತನ್ನ ಹೆಂಡತಿ ಊರಿಗೆ ಹೋಗಿದ್ದಾಳೆ ಎಂಟು ದಿನಕ್ಕೆ ಬರುತ್ತಾಳೆ ಎನ್ನುತ್ತಾನೆ. ಎಂಟನೇ ದಿನಕ್ಕೆ ತಾನು ಬಂದು ಒಯ್ಯುವುದಾಗಿ ಹೇಳುತ್ತಾನೆ. ಎಂಟನೆ ದಿನಕ್ಕೆ ಬಂದ ಗೊರವ ಮಡಿವಾಳನನ್ನು ಹೆಂಡತಿ ಎಲ್ಲಿ ಎಂದು ಕೇಳುತ್ತಾನೆ. ಆಗ ಮಡಿವಾಳ ನಿಜವನ್ನು ಹೇಳುತ್ತಾನೆ. ಆಗ ಮಲ್ಲನು ದೇವರ ಮನೆ ಬಾಗಿಲು ತೆಗೆದಾಗ ಅಲ್ಲಿ ಮಡಿವಾಳನ ಹೆಂಡತಿ ಇರುತ್ತಾಳೆ. ಹೀಗೆ ಅವರ ಭಕ್ತಿಗೆ ಮೆಚ್ಚಿಗೆ ವರಕೇಳಿ ಕೊಡುತ್ತೇನೆ ಎನ್ನುತ್ತಾನೆ. ಅವರು ಹೊಟ್ಟೆಗೆ ಅನ್ನ ದೇಹಕ್ಕೆ ಬಟ್ಟೆ ಕೊಡು ಊರೊಳಗೆ ಉದ್ಯೋಗ ಕೊಡು ಮಣಕಾಲಮಟ ನೀರು ಕೊಡು ಎಂದು ಕೇಳುತ್ತಾರೆ.

ಕಾವ್ಯದಲ್ಲಿ ಮೊದಲೇ ಪ್ರಸ್ತಾಪವಾದಂತೆ 'ಕಾಡು' ಕುರುಬರ ಜೀವನದ ಮುಖ್ಯಅಂಗ. ಕಾಡಿಲ್ಲದ ಅವರ ಬದುಕೇ ಅಸಾಧ್ಯ. ಬದುಕಿನ ಅವಿಭಾಜ್ಯ ಅಂಗಗಳಾದ ಕಾಡು ಕುಲ, ನಿಸರ್ಗ, ಪ್ರಾಣಿವರ್ಗ ಎಲ್ಲವು ಮೈಲಾರನ ಬದುಕಿನೊಂದಿಗೆ ತಳುಕು ಹಾಕಿಕೊಂಡಿವೆ. ದಾರ್ಶನಿಕತೆಯನ್ನು ದಾಟಿದ ಅದವಯತೆ ಇಲ್ಲಿರುವುದರಿಂದ ಬಹಿರಂಗ ಸತ್ಯವೂ ಇಲ್ಲಿ ಪ್ರಧಾನವಾಗುತ್ತದೆ. ಹೀಗಾಗಿ ಮೈಲಾರ ಮತ್ತು ಆತನ ಪರಂಪರೆ ನಿಮಿಲನ ಮಾರ್ಗವಾಗಿ ನಮಗೆ ಕಾಣುತ್ತದೆ. ಕಥೆ ಎಷ್ಟೋ ದ್ವಂದ್ವಗಳನ್ನು ಹೇಳಿದರೂ ಕೊನೆಗೆ ಅವು ಮೈಲಾರನಲ್ಲಿ ಘನೀಕರಣಗೊಂಡು ಸಾಂಸ್ಕೃತಿಕ ಪ್ರತೀಕವಾಗಿ ವಿಸ್ಮಯಕಾರಿಯಾಗುತ್ತದೆ.

"ಮೈಲಾರಲಿಂಗ ೧೬-೧೭ನೇ ಶತಮಾನದಲ್ಲಿ ಬದುಕಿದ್ದವನು. ಆ ಕಾಲದ ತಳಸಮುದಾಯದ ಪ್ರತಿನಿಧಿಯಾಗಿ ನಿಲ್ಲುತ್ತಾನೆ"[೧೯]. ೧೬-೧೭ನೇ ಶತಮಾನದಲ್ಲಿ ಇದ್ದಂತ ಗ್ರಾಮ ಭಾರತದ ಹಸಿವು, ಬಡತನದ ಚಿತ್ರವನ್ನು ಕೊಡುತ್ತದೆ. ಈ ಕಾವ್ಯ ಬಿಚ್ಚಿಡುವ ಹಲವಾರು ಸತ್ಯಗಳು ಇಂದಿನ ಆಧುನಿಕ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಭಾರತ

ಆಧುನಿಕವಾಗಿ ಎಷ್ಟೆಲ್ಲಾ ಬದಲಾವಣೆ ಹೊಂದುತ್ತಿದ್ದರೂ ಇವತ್ತಿಗೂ ನಮ್ಮ ಭಾರತದ ಗ್ರಾಮಗಳು ಹಸಿವಿನಿಂದ ಮುಕ್ತವಾಗಿಲ್ಲ. ಆಗಾಗಿ ಮೈಲಾರಲಿಂಗ ಕಾವ್ಯ ಇವತ್ತಿಗೂ ಪ್ರಸ್ತುತವಾಗಿದೆ.

ಅಡಿ ಟಿಪ್ಪಣಿ

೧. ಚಲುವರಾಜು(ಸಂ), **ಜುಂಜಪ್ಪ,** ಪು.ಸಂ ೫೪-೫೨

೨. **ಅದೇ ಪುಸ್ತಕ,** ಪು.ಸಂ-೫೬

೩. **ಅದೇ ಪುಸ್ತಕ,** ಪು.ಸಂ-೫೬

೪. **ಅದೇ ಪುಸ್ತಕ,** ಪು.ಸಂ-೬೦

೫. **ಅದೇ ಪುಸ್ತಕ,** ಪು.ಸಂ-೬೩

೬. **ಅದೇ ಪುಸ್ತಕ,** ಪು.ಸಂ-೧೪೦

೭. **ಅದೇ ಪುಸ್ತಕ,** ಪು.ಸಂ-೧೮೯

೮. **ಅದೇ ಪುಸ್ತಕ,** ಪು.ಸಂ-೧೯೩

೯. **ಅದೇ ಪುಸ್ತಕ,** ಪು.ಸಂ-೧೯೪

೧೦. **ಅದೇ ಪುಸ್ತಕ,** ಪು.ಸಂ-೧೯೪

೧೧. **ಅದೇ ಪುಸ್ತಕ,** ಪು.ಸಂ-೧೯೫

೧೨. **ಅದೇ ಪುಸ್ತಕ,** ಪು.ಸಂ-೧೯೬

೧೩. **ಅದೇ ಪುಸ್ತಕ,** ಪು.ಸಂ-೧೯೯

೧೪. **ಅದೇ ಪುಸ್ತಕ,** ಪು.ಸಂ-೨೦೦

೧೫. ಮಂಜುನಾಥ ಬೇವಿನಕಟ್ಟೆ, **ಮೈಲಾರಲಿಂಗನ ಕಾವ್ಯ,** ಪು.ಸಂ-೨೩

೧೬. **ಅದೇ ಪುಸ್ತಕ,** ಪು.ಸಂ-೮೧

೧೭. **ಅದೇ ಪುಸ್ತಕ,** ಪು.ಸಂ ೨೮೭-೨೯೬

೧೮. **ಅದೇ ಪುಸ್ತಕ,** ಪು.ಸಂ-೨೨೯

೧೯. **ಅದೇ ಪುಸ್ತಕ,** ಪು.ಸಂ ೨೭೬-೨೭೮

❖❖❖

ಅಧ್ಯಾಯ : ಆರು

ಲಿಂಗಸಂಬಂಧಿ ಹಸಿವಿನ ನೆಲೆ

ಅಧ್ಯಾಯ: ಆರು

ಲಿಂಗ ಸಂಬಂಧಿ ಹಸಿವಿನ ನೆಲೆ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ದಕ್ಷಿಣ ಭಾಗಗಳಲ್ಲಿ ಬಹುತೇಕ ಜನರ ಆಡುಮತು ತುಳು. ಪೂರ್ವಕ್ಕೆ ದಟ್ಟವಾದ ಅರಣ್ಯಗಳಿಂದ ಸುತ್ತುವರಿದ ಪಶ್ಚಿಮಘಟ್ಟ. ಪಶ್ಚಿಮಕ್ಕೆ ಅರಬ್ಬಿ ಸಮುದ್ರ. ಇವುಗಳ ನಡುವೆ ಹಲವಾರು ನದಿಗಳಿಂದಾವೃತ್ತವಾದ ನೆಲ ತುಳುನಾಡು. ಈ ಪ್ರದೇಶದ ಮುಖ್ಯ ಆಡುನುಡಿಯಾಗಿ, ಹಾಗೂ ಬೈದ್ಯರು, ಮೊಗವೀರರು, ಬಂಟರು, ವಿವಿದ ವರ್ಗದ ಪರಿಶಿಷ್ಟ ಪಂಗಡಗಳವರು, ಶಿವಳ್ಳಿ ಬ್ರಾಹ್ಮಣರು, ಸ್ಥಾನಿಕ ಬ್ರಾಹ್ಮಣರು, ಪದಾರ್ಥಿಗಳು, ಜೈನರು, ವಿಶ್ವಕರ್ಮರು, ಗೌಡರು, ಪ್ರೊಟೆಸ್ಟೆಂಟರು ಕ್ರೈಸರು, ಗಟ್ಟಿಗಳು, ದೇವಾಡಿಗರು, ಮೂಲ್ಯರು, ಗಾಣಿಗರು, ಪಂಬದರು, ಪರವರು, ನಲಿಕೆಯವರೇ ಮೊದಲದ ಸುಮಾರು ಮೂವತ್ತು ಲಕ್ಷಕ್ಕೂ ಮಿಕ್ಕಿದ ಮಂದಿಯ ತಾಯ್ನುಡಿಯಾಗಿ ಉಳ್ಳ ತುಳು ಭಾಷೆಯು ಮೂಲ ದ್ರಾವಿಢ ಭಾಷೆಯ ಅನೇಕ ಮೌಲಿಕಾಂಶಗಳನ್ನು ಹುದುಗಿಸಿಕೊಂಡಿದೆ. ಭಾಷಾವಿಜ್ಞಾನ ದೃಷ್ಟಿಯಿಂದ ಸಾಕಷ್ಟು ವಿಕಸಿತವಾಗಿದ್ದು, ವೈವಿಧ್ಯಪೂರ್ಣವಾದ ಜನಪದ ಸಾಹಿತ್ಯದ ಕಣಜವನ್ನು ಹೊಂದಿದೆ. ಈ ಭಾಷೆ ತುಳುನಾಡಿನ ನಾನಾ ಸಾಂಸ್ಕೃತಿಕ ಮುಖಗಳನ್ನು ಸಮರ್ಥವಾಗಿ ಬಿಂಬಿಸುವಷ್ಟು ಸಶಕ್ತವೂ ಸಂಪನ್ನವೂ ಆಗಿದೆ. ಬಹುಚರ್ಚಿತವಾದ ಗ್ರೀಕ್ ಪ್ರಹಸನದಲ್ಲಿ ಕಂಡುಬರುವ ವಿಶಿಷ್ಟ ಮಾತುಗಳು ತುಳುವೆಂದು ಸಿದ್ದವಾದಲ್ಲಿ ಈ ಭಾಷೆಗೆ ಹಾಗೂ ಅದು ಬಿಂಬಿಸುವ ಸಂಸ್ಕೃತಿಗೆ ಎರಡು ಸವಿರ ವರ್ಷಗಳ ಇತಿಹಾಸವುಂಟೆಂದು ಹೇಳಬಹುದು. ತಮಿಳಿನ ಸಂಗಂ ಕೃತಿಗಳಲ್ಲಿ ತುಳುನಾಡಿಗೆ ಸಂಬಂಧಪಟ್ಟ ಉಲ್ಲೇಖಿತವಾದ ವಿಚಾರಗಳು ಈ ಅಭಿಪ್ರಾಯಕ್ಕೆ ಪೂರಕವಾಗಿವೆ.

ಆದರೆ ತುಳುವರ ವಿಶಿಷ್ಟ ಸಂಪ್ರದಾಯ ಸಂಜಿಕೆ, ಮೌಲ್ಯಗಳನ್ನು ಪ್ರತಿನಿಧಿಸುವ ಮೌಖಿಕ ಪರಂಪರೆಯ ಪಾಡ್ದನ, ಕಬಿತ ಪ್ರಕಾರಗಳು ಗುಣಾತ್ಮಕವಾಗಿ ಯಾವುದೇ ಭಾಷೆಯ ಜನಪದ ಸಾಹಿತ್ಯಕ್ಕೆ ಕಡಿಮೆಯದಲ್ಲ. ಈ ಸಂಪ್ರದಾಯವನ್ನು ಬಹುತೇಕ ಸಾಹಿತ್ಯಕ್ಕೆ ಕಡಿಮೆಯದಲ್ಲ. ಈ ಸಂಪ್ರದಾಯವನ್ನು ಬಹುತೇಕವಾಗಿ ನಾಟಿಗದ್ದೆಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಸಿರಿ,

ಅಬ್ಬಗ ದಾರಗರಂತಹ ದೈವಗಳನ್ನು ವಿಶಿಷ್ಟ ಸಂದರ್ಭಗಳನ್ನು ತಮ್ಮಲ್ಲಿ ಆವಾಹಿಸಿಕೊಳ್ಳಲು ಸಿರಿಪಾತ್ರ ಧಾರಿಣಿಯರು ಸಿರಿ ಆರಾಧನಾ ಸಂಪ್ರದಾಯಗಳನ್ನು ನಿಯಂತ್ರಿಸುದ ಕುಮಾರರು, ಪಾತ್ರಿಗಳು, ಭೂತ–ದೈವ ಮಾಧ್ಯಮರಾಗಿ ಆರಾಧನಾ ಸಂದರ್ಭದಲ್ಲಿ ಅದರ ಸಂವಹನಕಾರರಾಗಿ ಕಾಣಿಸಿಕೊಳ್ಳುವ ಪರಮ, ಪಂಬದ, ನಲ್ಕೆ (ಪಾಣ) ಯವರು ಮುಂದುವರೆಸಿಕೊಂಡು ಬಂದಿದ್ದಾರೆ. ಇಂತಹ ಮೌಖಿಕ ಸಂಪ್ರದಾಯಗಳಲ್ಲಿ ಲಿಖಿತ ಸಂಪ್ರದಾಯದ ಪೂರ್ವದಲ್ಲಿ ನೆಲೆಗೊಂಡಿದ್ದ ತುಳುವ ಸಾಂಸ್ಕೃತಿಕ ಸಂಕೀರ್ಣವೊಂದರ ಹೊಳಹು ದೊರೆಯುವುದರೊಂದಿಗೆ ಸಮಕಾಲೀನ ಸಮಾಜ ಸ್ಥಿತ್ಯಂತರ ಒಳನೋಟಗಳು ಪ್ರತಿಫಲನಗೊಳ್ಳುತ್ತವೆ. ಇಂತಹ ಪಾಡ್ದನಗಳನ್ನು ಬರಿಯ ಸಾಹಿತ್ಯಕ ಮಾನದಂಡದಿಂದ ನೋಡದೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ದೃಷ್ಟಿಕೋನಗಳಿಂದ ನೋಡಬೇಕಾಗಿದೆ.

ತುಳುನಾಡು ರಾಜಕೀಯವಾಗಿ ಕನ್ನಡದ ಹಲವು ಪ್ರಬಲ ಅರಸುಮನೆತನಗಳಿಂದ ದೀರ್ಘಕಾಲ ಆಳಲ್ಪಟ್ಟದ್ದರಿಂದ, ಕನ್ನಡ ಭಾಷಾ ಸಂಸ್ಕೃತಿಗಳ ವರ್ಚಸ್ಸಿಗೆ ಒಳಗಾಗಿ ಕನ್ನಡತನವನ್ನು ಮೈಗೂಡಿಸಿಕೊಂಡ ತುಳುವರು ಕನ್ನಡಿಗರೇ ಎನಿಸಿದ್ದಾರೆ. ಕನ್ನಡದೊಂದಿಗೆ ಗೌರವ, ಪ್ರೀತಿಯ ಸಂಬಂಧವನ್ನು ಹೊಂದಿಕೊಂಡೇ ಬಾಳಿಬಂದಿದ್ದಾರೆ. ಹಾಗೆಂದು ಸಾಕಷ್ಟು ಪ್ರಮಾಣದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡೂ ಬಂದಿದ್ದಾರೆ. ಸಮನ್ವಯ ಸಂಸ್ಕೃತಿಯ ಅನೇಕ ದೃಷ್ಟಾಂತಗಳನ್ನು ತುಳು ನಾಡಿನಲ್ಲಿ ಕಾಣಬಹುದು. ಇಲ್ಲಿನ ಭಾಷಾ ಸಾಮರಸ್ಯವೂ ಗಮನೀಯವಾದದ್ದು. ಭಿನ್ನ ಭಿನ್ನ ಬಗೆಯ ಪರ್ಯಾಪ್ತವಾದ ಶಾಸ್ತ್ರೀಯ ಅಧ್ಯಯನಗಳಿಗೆ ಬೇಕಾದ ವಿಷಯ ಸಂಪತ್ತಿ ತುಳುನಾಡಿನ ಒಡಲಲ್ಲಿದೆ. ಜನಪದ ಸಾಹಿತ್ಯದ ದೊಡ್ಡ ನಿಧಿಯೇ ಇಲ್ಲಿ ಉಪಲಬ್ದವಿದೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು ಜನಜೀವನದ ವಿಭಿನ್ನ ಧಾರ್ಮಿಕ ಸಾಮಾಜಿಕ ಸಂದರ್ಭಗಳೊಂದಿಗೆ ಇಂದಿಗೂ ಸಾವಯವ ಸಂಬಂಧ ಇರಿಸಿಕೊಂಡಿರುವುದರಿಂದ ಇಲ್ಲಿ ಜನಪದ ಸಾಹಿತ್ಯವು ಸಕ್ರಿಯವೂ ಚಲನಶೀಲವೂ ಆಗಿ ಉಳಿದು ಬಂದಿದೆ. ನಾಗರೀಕತೆಯ ಗಾಳಿ ಬಲವಾಗಿಯೇ ಬೀಸುತ್ತಿದ್ದರೂ, ಇಂದಿಗೂ ತುಳುನಾಡಿನಲ್ಲಿ ಇಲ್ಲಿನ ಅತ್ಯಂತ ಪ್ರಾಚೀನ ಸಂಸ್ಕೃತಿಯ ಕೆಲವು ವಿಶಿಷ್ಟ ಬಿಂಬಗಳನ್ನು ಕಾಣಬಹುದೆಂಬುದು ಬಹುಮುಖ್ಯವಾದ ವಿಚಾರ, ಭೂತಾರಾಧನೆಯಂಥ ಧಾರ್ಮಿಕ ರಂಗಭೂಮಿಯ ಕೆಲವು ಕಲಾಪಗಳಲ್ಲಿ, ಹಾಗೂ ಕೆಲವೊಂದು ಜನಪದ ಕುಣಿತ ಇತ್ಯಾದಿಗಳಲ್ಲಿ ಪ್ರಾಚೀನ ತುಳುನಾಡಿನ ಕೆಲವು ಐತಿಹಾಸಿಕ ಸಂಭವಗಳು ಕಲಾತ್ಮಕವಾಗಿ, ಸಾಂಕೇತಿಕವಾಗಿ ಪುನರಭಿನೀತವಾಗುತ್ತದೆನ್ನಬಹುದು. ಎಂದರೆ, ಸಾಂಸ್ಕೃತಿಕ ಪ್ರವಾಹವು ಇಲ್ಲಿ ಹರಿಗಡಿಯದೆ, ಇಂಗಿಹೋಗದೆ ಹರಿಯುತ್ತಾ ಬಂದಿದೆ ಎಂಬುದನ್ನು ಎಣಿಸಿಕೊಳ್ಳಬೇಕು.

"ತುಳುನಾಡಿನಲ್ಲಿ ವಿಪುಲವಾಗಿ ಬೆಳೆದುಬಂದಿರುವ ಜನಪದ ಸಾಹಿತ್ಯವನ್ನು ಪಾಡ್ದನ (ಅಥವಾ ಸಂಧಿ) ಕಬಿತ (ಹಾಡು) ಒರಲ್ (ಒಂದೆರಡು ಸಾಲಿನ ಚಮತ್ಕಾರದ ಉಕ್ತಿಗಳು),

ಗಾದೆಗಳು ಒಗಟುಗಳು (ಅಜ್ಜಿಕತೆಗಳು, ಐತಿಹ್ಯಗಳು, ವಿವಿಧ ಆಚರಣೆ–ಆರಾಧನೆಗಳ ಸಂದರ್ಭದ ಪ್ರಾರ್ಥನೆಯ ಸೊಲ್ಲುಗಳು, ದೈವದ ನುಡಿಗಟ್ಟುಗಳು, ಕುಣಿತದ ಹಾಡುಗಳು, ಗೆಯ್ಮೆಯ ಹಾಡುಗಳು, ತಮಾಷೆಯ ಪದಗಳು, ಮಕ್ಕಳ ಪದ್ಯಗಳು ಹೀಗೆ ವಿಂಗಡಿಸಬಹುದು. ತುಳುನಾಡಿನ ಬದುಕನ್ನು ಬಹು ಪುರಾತನಕಾಲದಿಂದಲೇ ನಿರ್ದೇಶಿಸುತ್ತ ಬಂದಿರುವ ಭೂತಾರಾದನೆಯ ಸಂದರ್ಭದಲ್ಲಿ ವಿಧಿವತ್ತಾಗಿಯೂ ಇತರ ಸಂದರ್ಭಗಳಲ್ಲಿ ಹವ್ಯಾಸಕ್ಕಾಗಿಯೂ ನಿರೂಪಿಸುವ ವಿಶಿಷ್ಟ ಪಳಮೆಗಳೇ 'ಪಾಡ್ದನ' ಅಥವಾ 'ಸಂಧಿಗಳು. ಇವುಗಳನ್ನು ತುಳುನಾಡಿನ ವಿಶಿಷ್ಟ ಪುರಾಣಗಳೆನ್ನಲು ಅಡ್ಡಿಯಿಲ್ಲ. ದೈವಗಳನ್ನು ಆವೇಶ ಬರಿಸುವ ಕಾರ್ಯಕ್ರಮದ ಅಂಗವಾಗಿ ಸಾಮಾನ್ಯವಾಗಿ ದೈವಸೇವೆಯ ವಿಧಿಯ ಪೂರ್ವರಂಗದಲ್ಲಿ ಆಯಾ ದೈವದ ಹುಟ್ಟುಕಟ್ಟು, ಆಯಭೀರ ಕಲೆಕಾರಣಿಕಗಳನ್ನು ವರ್ಣಿಸುವ ಪಾಡ್ದನಗಳನ್ನು ನಿರ್ದಿಷ್ಟ ದಾಟಿಗಳಲ್ಲಿ 'ತೆಂಬರೆ' ಮೊದಲಾದ ಚರ್ಮವಾದ್ಯದೊಂದಿಗೆ ದೈವಪರಿಚಾರಕರು ಹಾಡುತ್ತಾರೆ. ಆರಾಧನಾ ಸಂದರ್ಭವಿಲ್ಲದೆಯೂ ಇವುಗಳಲ್ಲಿ ಕೆಲವನ್ನು ಹಾಡಬಹುದು."[೧] ದೈವಕಥನಕ್ಕೆ ಹೊರತಾದ ಲೌಕಿಕ ವಸ್ತುಗಳುಳ್ಳ ಪಾಡ್ದನಗಳು ಸಾಕಷ್ಟಿವೆ.

"ಪಾಡ್ದನಗಳು ವೈವಿಧ್ಯಪೂರ್ಣವಾಗಿವೆ. ಅವುಗಳಲ್ಲಿ ಕೆಲವನ್ನು ಜನಪದ ಕಥನ–ಕವನಗಳ(ballad) ಸಮೂಹಕ್ಕೆ ಸೇರಿಸಬಹುದಾದರೆ ಇನ್ನು ಕೆಲವು ಜನಪದ ಮಹಾಕಾವ್ಯ (flok epic) ವರ್ಗಕ್ಕೆ ಸೇರಬಲ್ಲವು. ದ್ರಾವಿಡ ಭಾಷೆಗಳಲ್ಲಿ ಪಾಡ್, ಪಾಟ ಧಾತುಗಳಿಗೆ ಹಾಡು (to sing) ಎಂಬ ಅರ್ಥವಿರುವುದು ನಿಜ. ಆದರೆ ತುಳುವಿನಲ್ಲಿ ಸಾಮಾನ್ಯವಾಗಿ 'ಪಾಡ್' ಎಂಬಧಾತು 'ಹಾಡು' ಎಂಬರ್ಥದಲ್ಲಿ ಪ್ರಯುಕ್ತವಾಗುವುದಿಲ್ಲವನ್ನಬೇಕು. ಹಾಡುವುದಕ್ಕೆ ತುಳುವಿನಲ್ಲಿ ಹೆಚ್ಚಾಗಿ ಪದಪಣುನಿ (ಪದ ಹೇಳುವುದು) ಎಂದೇ ಹೇಳುತ್ತಾರೆ. ಪಾಡ್ದನಗಳನ್ನು ಸಂಧಿಗಳೆಂದೂ ಕರೆಯುತ್ತಾರೆ. ಕೆಲವು ದೀರ್ಘ ಪಾಡ್ದನಗಳು (ಉದಾರಣೆಗೆ ಕೋಟಿಚೆನ್ನಯ್ಯ, ಸಿರಿ) ಬೇರೆ ಬೇರೆ ಸಂಧಿ (ಅಥವಾ ಅಧ್ಯಾಯ) ಕೂಡಿವೆ. ತುಳುವಿನಲ್ಲಿ ಇವುಗಳನ್ನು 'ಸಂದ್', ಗಳೆಂದೂ ಕರೆಯುತ್ತಾರೆ. ಒಂದೇ ಸಂಧಿಯ ಕಥನವೂ ಕ್ರಮೇಣ ಸಂಧಿಯೆಂದು ಹೆಸರನ್ನು ಪಡೆದುದನ್ನು ಕಾಣಬಹುದು."[೨]

ತುಳು ನಾಡಿನ ಹೊಲಗಳಲ್ಲಿ ಪಾಡ್ದನ ಹಾಗೂ ಕಬಿತಗಳನ್ನು ಹಾಡುವ ಕ್ರಮವಿದೆ. ದೈವಗಳಿಗೆ ಸಂಬಂಧಪಟ್ಟ ಕೆಲವು ಪಾಡ್ದನಗಳನ್ನು ದೈವಾರಾಧನೆಯ ಸಂದರ್ಭಗಳಿಗೆ ಹೊರತಾಗಿಯೂ ಹಾಡುವುದಕ್ಕೆ ನಿರ್ಬಂಧವೇನಿಲ್ಲ. ದೈವಗಳ ಪ್ರಸರಣ ಇತ್ಯಾದಿ ಭಾಗಗಳನ್ನು ಹಾಡುವ ವಾಡಿಕೆಯಿಲ್ಲ. ಸ್ವಾರಸ್ಯವಾದ ಮನಮುಟ್ಟುವಂಥ ಕಥಾನಕಗಳಿರುವವುಗಳನ್ನು ಹೆಚ್ಚಾಗಿ ಹಾಡುತ್ತಾರೆ. ನೇಜಿ ಕೀಳುವಾಗ, ನೇಜಿ ನೆಡುವಾಗ ಹಾಗೂ ಗದ್ದೆ ಊಳುವಾಗ ವಿವಿಧ ಹಾಡುಗಳನ್ನು ಹಾಡುವುದಿದೆ. ಕೊಯಿಲಿನ ಸಮಯದಲ್ಲಿ ಮಾತ್ರ ಹಾಡುವ ಕ್ರಮವಿಲ್ಲ.

ವರ್ಷದಲ್ಲಿ ಮೂರು ಬಾರಿ 'ನಾಟಿ' ಇದ್ದರೂ ಹೆಚ್ಚಾಗಿ ಎಣೆಸಲು (ಜೂನ್-ಜುಲೈ ತಿಂಗಳಲ್ಲಿ) ಬೆಳೆಯ ಸಂದರ್ಭದಲ್ಲಿ ಇಂಥ ಹಾಡುಗಳನ್ನು ಹಾಡುತ್ತಾರೆ. ನೇಜಿ ನೆಡುವಾಗ ಹೆಚ್ಚಾಗಿ ಕಬಿತಗಳನ್ನೂ ನೇಜಿ ಕೀಳುವಾಗ ಪಾಡ್ದನಗಳನ್ನೂ ಹಾಡುತ್ತಾರೆ. ಅವಕಾಶವಿದ್ದಷ್ಟು ಕಾಲಾವಧಿಯಲ್ಲಿ ಇಡಿಯ ಪಾಡ್ದನವನ್ನು ಅಥವಾ ಅದರ ಬಹುಭಾಗವನ್ನು ಹಾಡುವುದಿದೆ. ಹೆಂಗಸರ ಗುಂಪಿನಲ್ಲಿ ಒಬ್ಬಾಕೆ ಅಥವಾ ಇಬ್ಬರು ಮಾತ್ರ ಸಂಧಿಗಳನ್ನು ಹಾಡುತ್ತಾರೆ. ಒಬ್ಬಳು ಮೊದಲು ಹಾಡಿದ ಸೊಲ್ಲನ್ನೇ ಇನ್ನೊಬ್ಬಳು ಪುನರಾವರ್ತಿಸುತ್ತಾಳೆ. ಆಯಾಸ ಪರಿಹಾರಕ್ಕಾಗಿ ಮನೋರಂಜನೆಗಾಗಿ ಹಾಗೂ ಕಥನದ ಕುತೂಹಲಕ್ಕಾಗಿ ಸಂಧಿಗಳು ಇಲ್ಲಿ ಬಳಕೆಯಾಗುತ್ತವೆ. ಮೂರ್ತಿಯಂತಹ ಕೆಲಸ ಮಾಡುವಾಗಲೂ ಪಾಡ್ದನ ಹಾಡುವ ವಾಡಿಕೆ ಇತ್ತು. ಮನೆಗಳಲ್ಲಿ ಸಾಮಾನ್ಯವಾಗಿ ರಾತ್ರಿಯ ಹೊತ್ತಿನಲ್ಲಿ ಅಥವಾ ಮಳೆಗಾಲದ ಹಗಲುಗಳಲ್ಲಿ ಮನೋರಂಜನೆಗಾಗಿ ಕತೆಗಳನ್ನು ಹೇಳುವಂತೆಯೇ ಸಂಧಿಗಳನ್ನು ಹಾಡುವ ವಾಡಿಕೆ ಹಿಂದೆ ತುಳುನಾಡಿನಲ್ಲಿತ್ತು. ತುಳುವಿನ ಜನಪದ ಮಹಾಕಾವ್ಯಗಳಾದ ಕೋಟಿಚೆನ್ನಯರ ಸಂಧಿ ಹಾಗೂ ಸಿರಿಗಳ ಸಂಧಿಗಳಲ್ಲದೆ ಇತರ ದೈವಗಳ ಪಾಡ್ದನಗಳನ್ನೂ ಹಾಡುವುದಿತ್ತು. ಈಗಲೂ ಹಳ್ಳಿಯ ಕೆಲವೆಡೆ ಇವುಗಳನ್ನು ಕೇಳಬಹುದು.

"ಜನಪದ ಮೌಖಿಕ ಕಾವ್ಯಗಳಾದ ಪಾಡ್ದಾನಗಳನ್ನು ಬ್ರಾಹ್ಮಣ, ಜೈನ ಮೊದಲದ ಕೆಲವು ವರ್ಗಗಳನ್ನುಳಿದು ಉಳಿದ ಸಮಾಜಗಳಿಗೆ ಸೇರಿದವರು ಹಾಡುತ್ತಾರೆ. ಪಂಬದ, ಪರವ, ನಲ್ಕೆ (ಅಜಲಾಯ) ಪಾಣಾರ ಈ ವರ್ಗದವರ ಭೂತಮಾಧ್ಯಮ ವ್ಯಕ್ತಿಗಳಾಗಿ ಸೇವೆ ಸಲ್ಲಿಸುತ್ತಾರೆ. ಭೂತ ಪುರಾಣಗಳಾದ ಪಾಡ್ದನ ಸಾಹಿತ್ಯ, ಪರಂಪರೆಯನ್ನು ತಲೆಮಾರುಗಳಿಂದ ಉಳಿಸಿಕೊಂಡು ಬಂದವರಲ್ಲಿ ಇವರ ಪಾತ್ರವೇ ಹಿರಿದಾದುದಾಗಿದೆ. ಸಿರಿ, ಕುಮಾರರ ಆವೇಶ ಹೊಂದುವವರು ಬೇರೆ ಬೇರೆ ಬ್ರಾಹ್ಮಣೇತರ ವರ್ಗಗಳಿಗೆ ಸೇರಿದವರು. ಆವೇಶಗೊಳ್ಳುವ ಹೆಚ್ಚಿನ ವ್ಯಕ್ತಿಗಳಿಗೆ ಸಿರಿ ಸಂಧಿಯ ಕೆಲವು ಭಾಗಗಳಾದರೂ ತಿಳಿದಿರುತ್ತದೆ."[3] ಹೊಲದಲ್ಲಿಯೋ ಇತರ ಕಡೆಗಳಲ್ಲಿ. ಈ ಹಾಡುವ ಸಂಧಿಗಳೂ ಹಾಡುವವರಿಗೂ ಜಾತಿಯ ನಿರ್ದಿಷ್ಟತೆಯೇನೂ ಇರುವುದಿಲ್ಲ. ಪಾಡ್ದನಗಳಲ್ಲಿ ದುರಂತಕಥನಗಳೂ ಇವೆ. ಸುಖಾಂತಕಥನಗಳೂ ಇವೆ. ಇವನ್ನು ಹಾಡುವವರು ಹೆಚ್ಚಾಗಿ ಮಹಿಳೆಯರೇ ಆಗಿದ್ದಾರೆ. ರಚಿಸಿದವರೂ ಹೆಚ್ಚಾಗಿ ಮಹಿಳೆಯರೇ ಇರಬಹುದು. ಈ ಜನಪದ ಕವಿಗಳ ಕಲ್ಪನಾವಿಲಾಸದ ಜೊತೆಗೆ ಅವರ ಜೀವನದೃಷ್ಟಿ, ಅನುಭವವ್ಯಾಪ್ತಿ ಚಿತ್ರಕಶಕ್ತಿ ಮೌಲ್ಯ ಪ್ರತಿಪಾದನೆ ಇತ್ಯಾದಿಗಳನ್ನು ಈ ಪಾಡ್ದನಗಳಲ್ಲಿ ಗುರುತಿಸಬಹುದು. ಬದುಕಿನ ಅನೇಕ ಮಗ್ಗುಲುಗಳ ಬಗೆಗೆ, ಮನುಷ್ಯನನ್ನು ವಿಚಲಿತಗೊಳಿಸತಕ್ಕ ರಾಗದ್ವೇಷಗಳನ್ನು ಹೊತ್ತ ನೂರಾರು ಸಂಘರ್ಷ- ಸಮಸ್ಯೆಗಳ ಬಗ್ಗೆ ಪಾಡ್ದನಗಳು ವರ್ಣಿಸಬಹುದು. ಮುಚ್ಚುಮರೆ ಇಷ್ಟಾಗಿ ಕಾಣಿಸದ ಜನಪದ ಘಳಮೆಗಳಾದ ಪಾಡ್ದನಗಳು, ಊಳಿಗಮಾನ್ಯ ಪದ್ಧತಿಯ ಹಿಂದಣ ಜೀವನ ಸಂದರ್ಭಗಳಿಂದ ಮೂಡಿಬಂದ ವ್ಯಕ್ತಿ ಬಿಂಬಗಳನ್ನು ಅತ್ಯಂತ

ನೈಜವಾಗಿ ತೆರೆದು ತೋರಿಸುತ್ತದೆ. ಕೊರಗರ ಕೊಪ್ಪದಿಂದ ತೊಡಗಿ ಅರಸುವಿನ ಅರಮನೆಯ ಬದುಕಿನವರೆಗೂ ವಿಸ್ತರಿಕೊಂಡಿದ್ದು ಜೀವನದ ಹರಹನ್ನು ಪಾಡ್ದನದ ಕವಿಗಳು ತಾವು ಕಂಡಂತೆ ಚಿತ್ರಿಸಿದ್ದಾರೆ.

ತುಳು ನಾಡಿನ ಹಿಂದಣ ಮಂದಿ ಹೇಗೆ ಬದುಕು ಮಾಡಿದರೆಂಬುದನ್ನು ಅವರ ತುಳು ಜೀವನ ಮೌಲ್ಯ, ನಂಬಿಕೆ, ನಡವಳಿಕೆ, ರಂಗುರಸಿಕತೆ ಕಲಾಪ್ರಜ್ಞೆ, ಉಡುಪುತೊಡಪು ಆಭರಣ, ಅಲಂಕಾರ, ಆಟಕೂಟಗಳು, ಮನೆಮಾರು, ಬೇಸಾಯ, ವ್ಯಾಪಾರಸಾಪರ, ಮದ್ದುಮಾಯ, ಮದಿಮೆ ಇತ್ಯಾದಿಗಳನ್ನು ಪಾಡ್ದನಗಳು ವರ್ಣಿಸುತ್ತವೆ. ಜೊತೆಗೆ ಬಡವ ಬಲ್ಲಿದರ ಸಂಘರ್ಷ, ಜಾತಿ ವೈಷಮ್ಯ, ಶೋಷಣೆ ಅತ್ಯಾಚಾರ ಮೊದಲಾದುವನ್ನು ಈ ಸಾಹಿತ್ಯ ತಕ್ಕಷ್ಟು ನಿಚ್ಚಳವಾಗಿಯೇ ಚಿತ್ರಿಸುವುದರಿಂದ ಮಾನವ ಕುಲಶಾಸ್ತ್ರದ ಅಧ್ಯಯನ ದೃಷ್ಟಿಯಿಂದಲೂ ಈ ಸಾಹಿತ್ಯ ಅಪೂರ್ವ ಆಕರ ರಾಶಿಯೇ ಆಗಿದೆ. ಈ ಪಾಡ್ದನಗಳನ್ನು ದೇಶದ ಇತರೆಡೆಯ ಹಾಗೂ ಅನ್ಯದೇಶಗಳ ಜನಪದ ಪುರಾಣಗಳ ಜೊತೆಗೆ ಇಟ್ಟು ಸಮೀಕ್ಷಿಸಿದಾಗ ಇವುಗಳ ಮೌಲ್ಯ ಮಹತ್ವದ ವೇದ್ಯವಾದೀತು. ಇವುಗಳ ಕಥನ ರೋಚಕತೆ, ನಿರೂಪಣೆಯ ವೈಖರಿ, ಭಾಷೆಯ ವಿಲಾಸ, ಕಲ್ಪನೆಯ ಬೆಡಗು, ಅದ್ಭುತರಮ್ಯ ಚಿತ್ರಣ ಮುಂತಾದ ರಾಚನಿಕ ವೈಶಿಷ್ಟ್ಯಗಳನ್ನು ಪರಿಶೀಲಿಸುವುದರ ಜೊತೆಗೆ ಮನುಷ್ಯನ ಮೂಲಭೂತ ಪ್ರವೃತ್ತಿಗಳ ವಿಜೃಂಭಣ, ಬಲಚಲ ದೌರ್ಜನ್ಯಗಳು, ಆಶೋತ್ತರಗಳು, ನೈತಿಕ ಪ್ರಜ್ಞೆ, ಶೋಷಣೆ, ವಿಧಿವಾದ, ದುರಂತ, ಕ್ರೌರ್ಯ, ಕುಬ್ಜತೆ, ಕುರೂಪ ಇತ್ಯಾದಿ ಗುಣಾವಗುಣಗಳನ್ನು ಸಮೀಕ್ಷಿಸಬಹುದಾಗಿದೆ. ಸಾಮಾಜಿಕ ಮನೋವಿಜ್ಞಾನ ಮನುಷ್ಯಕುಲಶಾಸ್ತ್ರ, ಸಾಂಸ್ಕೃತಿಕ ಚರಿತ್ರೆ ಇತ್ಯಾದಿ ಶಾಸ್ತ್ರಗಳ ಬೆಳಕಿನಲ್ಲಿ ಜನಪದ ಕಾವ್ಯಗಳನ್ನು ವಿಶ್ಲೇಷಿಸುವ ಅವಶ್ಯಕತೆ ಇದೆ.

ಬೇರೆ ಬೇರೆ ಮಟ್ಟದ ದೀರ್ಘತೆ, ಶೈಲಿ, ಕಾವ್ಯ ಸ್ವರೂಪ, ಮೌಲ್ಯಗಳಿರುವ ನೂರಾರು ಪಾಡ್ದನಗಳಲ್ಲಿ ಕೆಲವಾದರೂ 'ಜನಪದ ಮಹಾಕಾವ್ಯ' ಎಂಬ ಹೆಸರಿಗೆ ಅರ್ಹವಾಗಿವೆ ಎಂಬುದನ್ನು ಒಪ್ಪಬೇಕಾಗುತ್ತದೆ. ಶಿಷ್ಟಕಾವ್ಯಗಳ ಮಾನದಂಡದಿಂದ ಜನಪದ ಕಾವ್ಯಗಳನ್ನು ಅಳೆಯುವಂತಿಲ್ಲ. "ರಾಷ್ಟ್ರಮಟ್ಟದ ಪುರಾಣ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಗಳಿಗೆ ಸೀಮಿತ ಪ್ರಭಾವ ವಲಯದ 'ಕಿರಿಯ ಸಂಸ್ಕೃತಿ' (little culture)ಯ ಉತ್ಪನ್ನಗಳಾದ ಸಿರಿ, ಕೋಟಿಚೆನ್ನಯದಂಥ ಜನಪದ ಕಾವ್ಯಗಳನ್ನು ಹೋಲಿಸುವಂತಿಲ್ಲ, ಶಿಷ್ಟ ಮಹಾಕಾವ್ಯದ ಬಗೆಗೆ ಅಲಂಕಾರಿಕರು ಬೇಕಾದಷ್ಟು ಲಕ್ಷಣಾದಿಗಳನ್ನು ಹೇಳಿದ್ದಾರೆ. ಆದರೆ ಜನಪದ ಮಹಾಕಾವ್ಯವನ್ನು ನಿರ್ದಿಷ್ಟ ವ್ಯಕ್ತಿಯೊಬ್ಬರು ಉದ್ದೇಶಪೂರ್ವಕವಾಗಿ ನಿರ್ದಿಷ್ಟ ರೀತಿಯಲ್ಲಿ ರಚಿಸುವುದಿಲ್ಲ. ಮೂಲತಃ ಅದು ಒಬ್ಬಾತನ ಸೃಷ್ಟಿಯೆನಿಸಿದರೂ ಅದು ಬಹುಬೇಗನೆ ಸಮಷ್ಟಿಯ ಸೊತ್ತಾಗುತ್ತದೆ, ಮೌಖಿಕ ಪರಂಪರೆಗೆ ಸೇರಿಬಿಡುತ್ತದೆ. ಕಟ್ಟುಪಾಡುಗಳು ವಿಶೇಷವಾಗಿ

ಇಲ್ಲದಿರುವುದರಿಂದ ಕಥನವು ಸಮೃದ್ಧ ಪಾಠಾಂತರಗಳೊಂದಿಗೆ ಬೆಳೆಯುತ್ತಾ ಹೋಗುತ್ತದೆ. ಆದರೆ ಶಿಷ್ಟ ಮಹಾಕಾವ್ಯಗಳಷ್ಟು ಸೂಕ್ಷ್ಮವು ಶಾಸ್ತ್ರಬದ್ಧವೂ ಅಲ್ಲದಿದ್ದರೂ ಜನಪದ ಕಾವ್ಯಗಳಿಗೆ ಅವುಗಳದ್ದೇ ಆದ ರೀತಿನೀತಿ ಲಕ್ಷಣಗಳಿವೆ."[೪] ಜನಪದ ಮಹಾಕಾವ್ಯ ಒಬ್ಬ ಸಾಂಸ್ಕೃತಿಕ ವೀರನ ಅಥವಾ ಧಾರ್ಮಿಕ ನಾಯಕನ ಸುತ್ತ ಹೆಣೆದು ಕೊಂಡು ತನ್ನ ವಿಸ್ತಾರ ಮತ್ತು ವ್ಯಾಪ್ತಿಗಳಿಂದ ಅನೇಕ ಮಜಲುಗಳಲ್ಲಿ ಸಾಗುವುದನ್ನು ಕಾಣಬಹುದು. ಇದು ಒಂದು ಸಾಂಸ್ಕೃತಿಕ ನೆಲಗಟ್ಟಿ ಮೇಲೆ ನಿಂತು ತನ್ನದೇ ಆದ ಧ್ಯೇಯ ಧೋರಣೆಗಳಿಂದ ಕೆಲಸ ಮಾಡುತ್ತದೆ.

೬.೧ ಸಿರಿ ಕಾವ್ಯದ ಚಾರಿತ್ರಿಕ ಹಿನ್ನೆಲೆ

ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳು ರಾಷ್ಟ್ರೀಯ ಚಳುವಳಿಯ ದೃಷ್ಟಿಯಿಂದ ಮಹತ್ತವಾದವು. ತುಳುವಿನ ಆಧ್ಯಯನದಲ್ಲಿ ಮಣ್ಣಿನೊಳಗಿನಿಂದಲೇ ದೇಶೀಯ ಧಾರೆಗಳು ಚಿಮ್ಮಿದ ಸಂದರ್ಭವಿದು. "That was the time when the nationalist movement was at its height in india. To a great extent that movement and the ideology behind it were conditional by a particular rendering of the past in india.. this wave of nationalism intluenced the study of language. Literature and culture".[೫] ಅಂದರೆ ರಾಷ್ಟ್ರೀಯ ಚಳವಳಿಯು ಅದರ ಅತ್ಯುನ್ನತಿಯಲ್ಲಿದ್ದ ಕಾಲವದು. ಭಾರತದ ಗತದ ಬಗ್ಗೆ ರೂಪಿಸಲಾಗಿದ್ದ ಒಂದು ನಿರ್ದಿಷ್ಟ ನಿರೂಪಣೆಯ ಪ್ರಭಾವಕ್ಕೆ ದೊಡ್ಡ ಪ್ರಮಾಣದಲ್ಲಿ ಆ ಚಳುವಳಿ ಮತ್ತು ಅದರ ಹಿಂದಿನ ತಾತ್ವಿಕತೆಗಳು ಒಳಗಾಗಿದ್ದವು. ರಾಷ್ಟ್ರೀಯತೆಯ ಈ ಅಲೆಯು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನವನ್ನು ಪ್ರಭಾವಿಸಿದ್ದುವು.

ಹಾಗೆ ಮುಂದುವರಿದೆ ಪೊಳಲಿ ಶಿನಪ್ಪ ಹೆಗ್ಡೆಯವರು ಸಂಗ್ರಹಿಸಿದ ಸತ್ಯನಪುರದ ಅಕ್ಕರಸು ಪೂಂಜಿದಿಕತೆ ಉಪಲಬ್ದವಾದ ಮೊದಲ "ಸಿರಿ ಪಾಡ್ದನದ ಕತೆ, ಇದು ೧೯೫೨ರಲ್ಲಿ ಮುದ್ರಿತವಾಯಿತು. ಶೀನಪ್ಪ ಹೆಗ್ಡೆಯವರು ಇದನ್ನು ಸಂಗ್ರಹಿಸಿ ಅಕ್ಷರ ರೂಪದಲ್ಲಿ ಎಂದು ದಾಖಲಿಸಿದರೆಂದು ತಿಳಿದುಬಂದಿಲ್ಲ. ಸಂಗ್ರಹಕಾರರ ಚಿಂತನೆ ಮತ್ತು ಆಸಕ್ತಿಗಳನ್ನು ರೂಪಿಸುವಲ್ಲಿ ಸ್ವಾತಂತ್ರ್ಯ ಹೋರಾಟ ಗಾಂಧಿವಾದ, ಸ್ವದೇಶಿ, ಭಾಷಾ ಚಳುವಳಿಗಳೆದರ ಪ್ರಭಾವವಿದೆ. ೧೯೨೮ರಲ್ಲಿ ಉಡುಪಿಯಲ್ಲಿ ಶ್ರೀ ಎಸ್.ಯು.ಪಣಿಯಾಡಿಯವರ ತುಳುಚಳುವಳಿಯಲ್ಲಿ ಹೆಗ್ಡೆ ಮುಖ್ಯಪಾಲು ಪಡೆದಿದ್ದರು. ಪಣಿಯಾಡಿಯವರು ಮದ್ರಾಸಿಗೆ ನಿರ್ಗಮಿಸಿದ ಬಳಿಕ ೧೯೩೯ರಲ್ಲಿ ತುಳುವ ಮಹಾಸಭೆಯ ಕಛೇರಿಯನ್ನು ಅವರು ತಮ್ಮ ಮನೆಗೆ ಸ್ಥಳಾಂತರಿಸಿದರು. ತುಳುವಿನ ಚರಿತ್ರೆ, ಸಂಸ್ಕೃತಿ ಭಾಷಾರೂಪಗಳನ್ನು ಎತ್ತಿ ಹಿಡಿಯುವುದು. ಮತ್ತು ಆ ಮೂಲಕ 'ರಾಷ್ಟ್ರ ಸಂಸ್ಕೃತಿಯನ್ನು ನಿರ್ವಚಿಸುವ ಪ್ರಯತ್ನಗಳು ಈ ತುಳು ಚಳುವಳಿಯಲ್ಲಿದ್ದುವು."[೬]

ಪಂಜೆಯವರು ಕೋಟಿ ಚೆನ್ನಯ್ಯರ ಪಾಡ್ದನದ ಕತೆಯನ್ನು ಹೊಸಗನ್ನಡ ಗದ್ಯದಲ್ಲಿ ನಿರೂಪಿಸಿದ್ದು, ೧೯೨೬ರಲ್ಲಿ ಈ ದಾರಿ ಶೀನಪ್ಪ ಹೆಗ್ಡೆಯವರ ಎದುರು ಇತ್ತು. ಕೋಟಿ ಚೆನ್ನಯ್ಯ ಮತ್ತು ಸಿರಿಪಾಡ್ದನಗಳು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಹೊಸ ಸಂಕಥನವಾದ "ಹೊಸಗನ್ನಡ ಗದ್ಯ"ದ ಆಕರಕ್ಕೆ ಇಳಿದು ಮುದ್ರಣಗೊಂಡವು. ಇದು ತುಳು ಪಾಡ್ದನಗಳ ಇತರ ನಾಯಕ-ನಾಯಕಿಯರಿಗೆ ಸಿಗದ ವಿಸ್ತಾರ ತೆರೆಯುವಿಕೆಗೆ ಬಲವಾದ ಕಾರಣವಾಯಿತು. ಯಕ್ಷಗಾನ, ನಾಟಕ, ಸಿನಿಮಾ ಸಂಶೋಧನೆ, ಕಾದಂಬರಿ ಹೀಗೆ ಈ ಎರಡೂ ಪಾಡ್ದನಗಳೂ ವಿವಿಧ ಸಂಕಥನಗಳಾಗಿ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪಯಣಿಸಿದವು. ಸಿರಿಯು ಬಂಟ ಸಮುದಾಯದವಳು ಕೋಟಿ ಚೆನ್ನಯ್ಯರು ಬಿಲ್ಲವರು. ಈ ಎರಡೂ ಸಮುದಾಯಗಳು ದಕ್ಷಿಣ ಭಾರತದ ನಕಾಶೆಯಲ್ಲಿ ಇಪ್ಪತ್ತನೆಯ ಶತಮಾನದ ಹೊಸ ಆರ್ಥಿಕ ಚಲನೆಗಳ ಜೊತೆ ಬೆಳೆದುದು ಗಮನಿಸಬೇಕಾದ ಇನ್ನೊಂದು ಮುಖ್ಯ ಕಾರಣ.

ಇಪ್ಪತ್ತನೆಯ ಶತಮಾನಕ್ಕೆ ತುಳುವರ ವಲಸೆಯು ಮುಂಬಯಿ ಕಡೆಗೆ ಆದುದರಿಂದ ಅಲ್ಲಿ ತುಳುವರು ತುಳುರಂಗಭೂಮಿಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿದರು. ಮುಂಬೈಯ ತುಳು ರಂಗಭೂಮಿಯ ಎರಡನೆ ತಲೆ ಮಾರಿನ ಉತ್ಪನ್ನಗಳು ಮರಾಠಿ- ಹಿಂದಿ ನಾಟಕಗಳಿಂದ ಪ್ರಭಾವಿತವಾದವು. ರಂಗಭೂಮಿಯ ಈ ಎರಡನೆಯ/ಮೂರನೆಯ ತಲೆಮಾರು ತಮ್ಮ ಬೇರುಗಳನ್ನು ಹುಡುಕುತ್ತಾ,, ತುಳುನಾಡಿನ "ಪರಿಶುದ್ಧ" ರೂಪವೊಂದನ್ನು ತಮ್ಮ ಅಭಿವ್ಯಕ್ತಿಗಳ ಮೂಲಕ ಕಟ್ಟಲು ಯತ್ನಿಸಿದರು. ಮಾದರಿಯಾಗಿ ಗಮನಿಸಿ-ಜಗದೀಶೆಟ್ಟಿ, ಕೆಂಚನ ಕರೆ ಇವರ "ಸತ್ಯದ ಸಿರಿ' ನಾಟಕವು ರಂಗದ ತನ್ನ ಪ್ರಾರ್ಥನೆಯನ್ನು ಆದಿದೈವನಾಗನಿಗೆ ಸಲ್ಲಿಸುತ್ತದೆ. 'ನಾಗಬೇರಮೆರ್, ಇಲ್ಲಿ ಆರಾಧನೆಯಾಗುತ್ತಾರೆ. ವೈಭವ ಇವೆಲ್ಲವನ್ನು ತುಳುವಿನ ಶಕ್ತಿಶಾಲಿ ಪ್ರಧಾನ ಸಂಸ್ಕೃತಿ ಎಂಬುದಾಗಿ ನಾಟಕ ಗ್ರಹಿಸುತ್ತದೆ. ಸಿರಿಯು ಕಾಯಬಿಡುವವರೆಗೆ ಸಾಗುವನಾಟಕ 'ಅಬ್ಬಗ- ದಾರಗ' ಪ್ರಸಂಗವನ್ನು ಆಯ್ದುಕೊಳ್ಳುವುದಿಲ್ಲ.

೬.೨ ಜನಪದ ಮಹಾಕಾವ್ಯವಾಗಿ ಸಿರಿ ಪಾಡ್ದನ

ಸಿರಿ ಪಾಡ್ದನ ತುಳುನಾಡಿನ ಯಾವುದೇ ಒಂದು ನಿರ್ದಿಷ್ಟ ಜಾತಿ, ಜನವರ್ಗದ ಆಶೋತ್ತರವನ್ನು ಬಿಂಬಿಸುವ ಕಾವ್ಯ ಅಲ್ಲ. ಅಂದಿನ ದಕ್ಷಿಣ ಕನ್ನಡ, ಜಿಲ್ಲೆಯ ಉಡುಪಿ, ಕಾರ್ಕಳ, ಬೆಳ್ತಂಗಡಿ, ಮಂಗಳೂರು ಬಂಟವಾಳ ಪರಿಸರದ ತುಳು ಆಡುಮಾತಾಗಿ ಉಳ್ಳ ಮಾತೃಸ್ವರೂಪಿ ಸಂಕೃತಿಯನ್ನು ಅಳವಡಿಸಿಕೊಂಡಿರುವ ಸಮುದಾಯದ ನಡುವೆ ತುಂಬ ಆಪ್ತವಾಗಿ ಶ್ರದ್ಧಾಭಕ್ತಿಗಳಿಂದ ಪರಿಚಲನೆಗೊಳ್ಳುತ್ತಿರುವ ಒಂದು ಮೌಖಿಕ ಇದು. ಮಾತೃಮೂಲೀನ ಕುಟುಂಬದ, ತುಳು ಮಾತೃಭಾಷೆಯ ಕೃಷಿ ನಿರತ, ದೈವತ್ವೀಕರಣ ಹೊಂದಿದ ಬಂಟರ ಜಾತಿಯ ಒಂದು ಕುಟುಂಬದ ಮೂರು ತಲೆಮಾರುಗಳ ಸುತ್ತ ಸಿರಿಯ ಕಥೆ ಹೆಣೆದಿದೆ.

ತುಳುವ ಮಹಿಳೆಯರಿಗೆ ವಿಶೇಷವಾಗಿ ಬಂಟ ಸಮುದಾಯದವರಿಗೆ ಸಿರಿ ಹಾಗೂ ಆಕೆಯ ಬಂಧುಪೀಳಿಗೆ (ಸೊನ್ನೆ, ಗಿಂಡಿ, ಅಬ್ಬಗ, ದಾರಗ) ಅತ್ಯಂತ ಗೌರವದ ದೈವವಾಗಿವೆ. ಸಿರಿಯನ್ನು ಅವರು ತಮ್ಮ ಸಮುದಾಯದ ಮೂಲಸ್ತ್ರೀಯೆಂದು ನಂಬುತ್ತಾರೆ. ಆಕೆ ದೇವರ ಮಗಳೆಂದೂ, ಆಕೆಯಿಂದಲೇ ಮಾತೃಮೂಲೀಯ ಸಂತಾನ ಬೆಳೆದು ಬಂದಿರುವುದಾಗಿಯೇ ನಂಬುತ್ತಾರೆ. ಸ್ಥಳೀಯ ಆರಾಧನಾ ಪ್ರಪಂಚದ ಭೂತಗಳಲ್ಲಿ ಹಾನಿಕಾರಕ ಗುಣವನ್ನು 'ತುಳುವರು ಗುರುತಿಸುತ್ತಾರೆ. ಆದರೆ ಸಿರಿಯನ್ನು ಸಮಾಜದ ಉನ್ನತಕ್ಕೆ ಕಾರಣಳಾದವಳೆಂದೂ ಅವಳ ಕೃಪೆಗೆ ಒಳಗಾದವರಿಗೆ ಕುಟುಂಬದಲ್ಲಿ ಸ್ಥಾನಮಾನ ಗೌರವ ಲಭಿಸುವುದಾಗಿಯೂ ತಿಳಿಸಲಾಗುತ್ತದೆ.

ಈ ಮೌಖಿಕ ಕಾವ್ಯದಲ್ಲಿ ತುಳುವರ ಆದರ್ಶ, ಮೌಲ್ಯ, ಸಂಪ್ರದಯ, ಕುಟುಂಬ ಪದ್ದತಿಗಳು ಕಾವ್ಯಬಂಧದೊಳಗೆ ಹೆಣೆಯಲ್ಪಟ್ಟಿದೆ. ಈ ಕಾವ್ಯವು ದುರಂತದಲ್ಲಿ ಕೊನೆಗೊಳ್ಳುವುದಾದರೂ ಮಾತೃರೂಪಿ ಸಂಸ್ಕೃತಿಯ ವಾರೀಸುದಾರರು ಸಿರಿಯನ್ನು ಇತ್ಯಾತ್ಮಕ ನೆಲಯಲ್ಲೆ ಗ್ರಹಿಸುತ್ತಾರೆ. ಮಾತೃಮೂಲೀಯ ಕುಟುಂಬ ಪದ್ದತಿಯಲ್ಲಿ ಕಣಿಸುವ ಹೆಣ್ಣಿನ ಮೂಲಕ ಸಂತಾನದ ಮೂಂದರಿಕೆ ಒಲ್ಲದ ಗಂಡನ ವಿಚ್ಚೇದನ ಮತ್ತು ಮರುಮದುವೆ, ಸೀಮಂತದ ಮಹತ್ವ ಮುಂತಾದವುಗಳಿಗೆ ಈ ಕಾವ್ಯದ ಮೂಲಕ ಮೂಲವನ್ನು ಕಂಡುಕೊಳ್ಳುತ್ತಾರೆ. ಇಲ್ಲಿನ ಸಿರಿ ನ್ಯಾಯಕ್ಕಾಗಿ ಹಗೂ ವ್ಯವಸ್ಥೆಯ ನಿರಂತರತೆಗಾಗಿ ಸ್ಥಾಪಿತ ವ್ಯವಸ್ಥೆಯನ್ನು ಧಿಕ್ಕರಿಸಿ ನಡೆದ ಹೆಣ್ಣು. ಹುಟ್ಟಿದ ಮನೆ ಸತ್ಯನಾಪುರ ಹಾಗೂ ಮೆಟ್ಟಿದ ಮನೆ ಬಸಲೂರು ಎರಡನ್ನೂ ಹೊಸ ಮೌಲ್ಯವನ್ನು ಸ್ಥಾಪಿಸುವ ಸಲುವಾಗಿ ತ್ಯಜಿಸಿ ಹೊರಟಾಗ ಎರಡು ಮನೆಗಳನ್ನು ಸುಟ್ಟು ಸೂಕರಿಗೊಳಿಸಿದ್ದು, ಗದ್ದೆ ಬಂಜರು ಬೀಳಲೆಂದೂ, ಹಟ್ಟಿಯ ಹಸುಗಳು ಈಯದಿರಲೆಂದೂ ಶಪಿಸಿದುದು ವ್ಯವಸ್ಥೆಗೆ ಪ್ರತಿಭಟನೆ ಹೊಸವ್ಯವಸ್ಥೆಯ ನಿರ್ಮಾಣದ ಸಲುವಾಗಿ ಎಂದು ಅರ್ಥೈಸಬೇಕು.

ಈ ಕಾವ್ಯದಲ್ಲಿ ಸಿರಿಯ ಜನನವು ಅಲೌಕಿಕವಾಗಿ ಚಿತ್ರಿತವಾದರೂ ಮುಂದೆ ಆಕೆ ವೀರರಮಣಿಯಾಗಿ ಗುರುತಿಸಲ್ಪಟ್ಟದು ಸನ್ನಿವೇಶವನ್ನು ಎದುರಿಸುವಲ್ಲಿ ತೋರಿದ "ಧೀಮಂತಿಕೆ" ಹಾಗೂ ಕ್ರಿಯಾತ್ಮಕತೆಯಲ್ಲಿ. ಇಲ್ಲೇ ಅಖಿಲ ಭಾರತೀಯ ಮಹಾಕಾವ್ಯಗಳಿಗೂ ಜನಪದ ಕಾವ್ಯಗಳಿಗೂ ಅಂತರ ಏರ್ಪಡುವುದು (ಭಾರತೀಯ ಮಹಾಕಾವ್ಯಗಳು) ಹೆಣ್ಣಿನ ಕುರಿತು ಆಡಿದಾಗಲೆಲ್ಲ ಅದು ಆಕೆಯ ಪಾತಿವ್ರತ್ಯ, ತಾಯ್ತನ, ಸೌಶೀಲ್ಯಗಳ ವೈಭವೀಕರಣವಾಗಿದ್ದು, ಪುರುಷನ ಹಿತಾಸಕ್ತಿಗಳಿಗೆ ಪೂರಕವಾಗಿರುತ್ತವೆ. ಆದರೆ ಇಲ್ಲಿ ಸಿರಿ ಪಾಡ್ದನ ಹೆಣ್ಣಿನ ಶಕ್ತಿ ಮತ್ತು ಸೃಜನಶೀಲತೆಯ ಮೇಲೆ ಕೇಂದ್ರೀಕೃತವಾಗಿದ್ದು, ಅವಳ ತುಮುಲ, ಪಲ್ಲಟ, ಹೋರಾಟ, ಹಸಿವು, ಬಡತನ, ಅಂತಸ್ಸತ್ವಗಳನ್ನು ಬಿಚ್ಚುತ್ತವೆ. ತುಳುವ ಸಮುದಾಯದೊಳಗೆ ಸಿರಿಯ

ನಡವಳಿಕೆಯನ್ನು ಯಾರು ಆಕ್ಷೇಪಿಸುತ್ತಿಲ್ಲ. ಸತ್ಯ ಮತ್ತು ಸಚ್ಚಾರಿತ್ರ್ಯಗಳ ಪ್ರತೀಕವಾಗಿ ಆಕೆಯನ್ನು ಕಾಣುತ್ತಾರೆ. ಗಂಡ ಕಾಂತಣ ಪೂಂಜನ ನಡವಳಿಕೆಯನ್ನು ನೈತಿಕತೆಯ ಉಲ್ಲಂಘನೆ ಹಾಗೂ ಹೆಣ್ಣಿಗೆ ಮಾಡಿದ ಅಪಚಾರವೆಂದೇ ತಿಳಿಯಲಾಗುತ್ತದೆ. ಅದಕ್ಕೆ ಆತ ಬೆಲೆ ತರುವಂತೆ ಚಿತ್ರಿಸಲಾಗಿದೆ. ರಾಮಯಣ, ಮಹಾಭಾರತ, ಇಲಿಯಡ್ ಮುಂತಾದ ಕಾವ್ಯಗಳಲ್ಲಿನಂತೆ ಇಲ್ಲಿನ ಸಿರಿ ಅಸಾಧಾರಣ ಶಕ್ತಿಶಾಲಿಯಲ್ಲ. ಆದರೆ ಬದುಕನ್ನು ಎದುರಿಸು ಕೌಶಲ್ಯದಿಂದಲೇ ಸಮರ್ಥಳೆನಿಸಿಕೊಳ್ಳುತ್ತಾಳೆ. ಆಕೆ ಇಂದಿಗೂ ಸಮುದಾಯದ ನಡುವೆ ಪೂಜಾರ್ಹ ಗೌರವ ಪಡೆದಿರುವುದು ತನ್ನ ಅಲೌಖಿಕ ಜನನದಿಂದಲ್ಲ. ಅನ್ಯಾಯವನ್ನು, ಅಸತ್ಯವನ್ನು ಪ್ರತಿಭಟಿಸುವಲ್ಲಿ ತೋರಿದ ಎದೆಗಾರಿಕೆಗಾಗಿ ಹಾಗೂ ಸತ್ಯದ ಸ್ಥಾಪನೆಗಾಗಿ ನಡೆಸಿದ ಪ್ರಯತ್ನಕ್ಕಾಗಿ. ಅಂದರೆ ಸಮಾಜದ ದ್ವಂದ್ವಗಳ ನಿರಾಕರಣ ಹಾಗೂ ಹೊಸ ಮೌಲ್ಯಗಳ ಊರ್ಜಿತದಲ್ಲೇ ಆಕೆಯ ಯಶಸ್ಸು..

ಸಿರಿಯ ಬಗ್ಗೆ ಚಾರಿತ್ರಿಕತೆಯನ್ನು ಹುಡುಕುವುದಾದರೆ ಎಸ್.ಎ., ಕೃಷ್ಣಯ್ಯನವರು ಸು. ಕ್ರಿ.ಶ. ೧೪೬೦ ರಿಂದ ೧೪೮೦ರ ಕಾಲದ ನಿಡ್ಗಲ್ ಶಾಸನವನ್ನು ಉಲ್ಲೇಖಿಸಿ 'ಸಿರಿ ಕತೆ' ಈ ಕಾಲದಲ್ಲಿ ನಡೆದಿರಬಹುದುದೆಂದು ಹೇಳುವ ಪ್ರಯತ್ನ ಮಾಡಿದ್ದಾರೆ. ಸಿರಿ ವಿಜಯನಗರೊತ್ತರ ಕಾಲದ ಕತೆ ಎಂಬ ಸೂಕ್ಷ್ಮ ಹೊಳಹುಗಳು ಇದ್ದರೂ ಅದು ಚರಿತ್ರೆ ಪೂರ್ವದ ಆದಿಮ, ಆಚರಣೆಗಳಾದ ಭೂತ ಪ್ರೇತಾದಿಗಳನ್ನು ಸಂಪ್ರೀತಗೊಳಿಸುವ ಆಚರಣೆಗಳನ್ನು ಸೇರಿಕೊಂಡಿವೆ. ಆದರಿಂದ ಸಿರಿಪಠ್ಯ, ಸಿರಿ ಆಚರಣೆ, ಸಿರಿ ಅಧ್ಯಯನಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ ತಲುಪುವ ಫಲಿತಗಳು ಭಿನ್ನವಾಗಿ ಬಿಡುತ್ತದೆ. ಅಂದರೆ ಕಾಲಬದ್ಧವಾದ ಒಂದು ಘಟನೆಯನ್ನು ಸಂಯೋಜಿಸಿಕೊಂಡಿದೆ. ಅದು ರಾಗದ್ವೇಷಗಳು ಇರುವ ಸ್ತ್ರೀ ಪುರುಷ ಪತ್ರಗಳು, ವಿಘಟಿಕ ಸಂಸಾರ, ಆಸ್ತಿ, ವಿವಾದ, ಆಕ್ರೋಶ, ಶಾಪ, ಕೊನೆಗೆ ಮನುಷ್ಯ ವರ್ತನೆಗಳಿಂದ ಬಿಡುಗಡೆಗೊಂಡು ದೈವವಾಗಿ ಬಿಡುವುದು. ಸಿರಿ ಕರ್ನಾಟಕದ ಇತರ ಜನಪದ ಮಹಾಕಾವ್ಯಗಳಿಗಿಂತ ಹೆಚ್ಚು ಆಕರ್ಷಕವಾಗಿರುವುದು ಈ ಲೌಕಿಕ ಸಾಂಸಾರಿಕ ಕಾರಣಗಳಿಂದಲೇ ಮಂಟೇಸ್ವಾಮಿ, ತಿಪ್ಪೇಸ್ವಾಮಿ, ಮಾದಪ್ಪ, ಇವರು ಹುಟ್ಟಿನಿಂದಲೇ ಅತಿಮಾನುಷರು ಅವರಿಗೆ ಸಂಸಾರ ಒಂದು ಸಮಸ್ಯೆಯಾಗಿ ಕಾಡಿಲ್ಲ. ಸಿರಿ ಮನುಷ್ಯನ ಎಲ್ಲ ಕಾಲದ ವರ್ತನೆಗಳ ಕಾವ್ಯವಾದ್ದರಿಂದ 'ಆಕರ್ಷಣೆಯ ಕತೆಯಾಗಿ ಅಧ್ಯನಕಾರರ ಗಮನ ಸೆಳೆದಿದೆ. ಈ ಘಟನೆಯ ನಂತರದ ಕಾಲಘಟ್ಟಕ್ಕೂ ಅನ್ವಯಿಸುವ ಮನುಷ್ಯನ ಆಶಯಾತ್ಮಕತೆಗಳು ಸೇರಿ ಕೊಂಡಿರುವುದರಿಂದ ಚರಿತ್ರೆ ಗೌಣವಾದರೂ ಕತೆ ಜೀವಂತವಾಗಿ ಉಳಿಯುತ್ತದೆ. ಆಚರಣೆಗಳೆಂಬ ಭೂತಕಾಲ, ಕತೆಯೆಂಬ ಚರಿತ್ರೆ, ಮನುಷ್ಯನ ವರ್ತನೆಗಳೆಂಬ ಭವಿಷ್ಯಗಳೆಲ್ಲ ಮೇಳೈಸುವ ಸೂಕ್ಷ್ಮ ಬಂದ ಕಾವ್ಯದ ನೇಯ್ಗೆಯಲ್ಲಿ ಇರುವುದರಿಂದ ದೇಶಕಾಲ ಬದ್ಧವಾದ

ಚಿಂತನಾ ವಿಧಾನಗಳಿಂದ ನುಣಿಚಿಕೊಂಡು ಉಳಿಯುವ ಶಕ್ತಿ ಈ ಕಾವ್ಯಕ್ಕೆ ಇದೆ. ಆದ್ದರಿಂದ ಅಧ್ಯಯನಕಾರರಿಗೆ ಮುಖ್ಯವಾಗುವ ಚರಿತ್ರೆಯ ಹಂಗು ಜನಪದರಿಗೆ ಮುಖ್ಯವಾಗುವುದಿಲ್ಲ.

"ತುಳುನಾಡಿನ ಇತರ ಆರಾಧನಾ ಪ್ರಕಾರಗಳಾದ ಭೂತಾರಾಧನೆ, ನಾಗಾರಾಧನೆ ಹಾಗೂ ಶಿಷ್ಟದೇವತೆಗಳ ಜಾತ್ರೆಗಳೊಂದಿಗೆ ಹೋಲಿಸಿದರೆ ಸಿರಿ ಜಾತ್ರೆಯ ವಿಶಿಷ್ಟತೆ ಮತ್ತು ಅನನ್ಯತೆಗಳು ಸ್ಪಷ್ಟಗಾಗುತ್ತದೆ. ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದು ಸಾಮೂಹಿಕ ಆವೇಶಕ್ಕೆ ಒಳಗಾಗುವುದು, ಅಪರಿಚಿತವಾಗಿರುವ ವಿಭಿನ್ನ ಜಾತಿವರ್ಗದ ಮಹಿಳೆಯರು ಆವೇಶಿತರಾದಾಗ ವೈಯಕ್ತಿಕತೆಯನ್ನು ಕಳೆದುಕೊಂಡು ಸಿರಿ ಕುಟುಂಬದ ಸದಸ್ಯರಾಗಿ ರೂಪಾಂತರಗೊಳ್ಳುವುದು, ಅಲೌಕಿಕ ಮಧ್ಯಂತರ ಜಗತ್ತಿನಲ್ಲಿ ಉಂಟಾಗುವ ಪರ್ಯಾಯ ಬಂಧುತ್ವ, ವಾಸ್ತವ ಬಂದುಕಿನ ನೋವು ಒತ್ತಡಗಳಿಗೆ ಬಿಡುಗಡೆ ಒದಗಿಸುವುದು."[೭] ಮಹಿಳೆಯರ ವಾಸ್ತವ ಬದುಕಿಗೂ ಆರಾಧನೆಗೂ ಇರುವ ಅಂತಃಸಂಬಂಧ ಹಾಗೂ ಸಿರಿ ಮೈದುಂಬುವ ಹೆಣ್ಣುಗಳಿಸುವ ಕೌಟುಂಬಿಕ– ಸಾಮಾಜಿಕ ಗೌರವ ಮನ್ನಣೆಗಳು ಈ ಆರಾಧನೆಯಲ್ಲಿ ಭಾಗವಹಿಸುವ ತಳಸಮುದಾಯದ ಹೆಣ್ಣು ಮಕ್ಕಳ ಬಡತನ, ಹಸಿವು ಹೀಗೆ ಹಲವು ನಿಟ್ಟಿನಿಂದ ಸಿರಿ ಆರಾಧನೆ ಸಂಕೀರ್ಣತೆಯನ್ನು ಪಡೆದುಕೊಂಡು ಸೂಕ್ಷ್ಮ ಅಧ್ಯಯನವನ್ನು ಬಯಸುತ್ತದೆ.

ಲೌಕಿಕ ಅಲೌಕಿಕವನ್ನು ಒಂದುಗೂಡಿಸುವ, ಬದುಕಿನ ಒತ್ತಡಕ್ಕೆ ಒಳಗಾದ ನೂರಾರು ಮಹಿಳೆಯರ ಆವೇಶಗೊಳ್ಳುವ, ಅಲ್ಲಿ ಸೃಷ್ಟಿಯಾಗುವ, ಅಲ್ಲಿ ಸೃಷ್ಟಿಯಾಗುವ ಪರ್ಯಾಯ ಬಂಧುತ್ವ ಹಾಗೂ ಆ ಮೂಲಕ ಪಡೆಯುವ ಸಮಾಧಾನ, ಬಿಡುಗಡೆಗಳನ್ನು ಸಿರಿ ಆರಾಧನಾ ಪ್ರಪಂಚವನ್ನು ಬಹಳ ಸುಲಭವಾಗಿ ಅರ್ಥೈಸುವುದು ಆಗದು. ಅದನ್ನು ಜಾತ್ರೆಯ 'ಬೃಹತ್ ಪಠ್ಯ' ದೊಂದಿಗೆ ಜಾತ್ರೆಯ ಹೊರಗಿನ ಸಾಮಾಜಿಕ ಕೌಟುಂಬಿಕ, ಸಾಂಸ್ಕೃತಿಕ, ಆರ್ಥಿಕ ಸಂದರ್ಭಗಳ ಗ್ರಹಿಕೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಅದಕ್ಕೆ ಉತ್ಸವರೂಪದಲ್ಲಿ ನಡೆಯುವ ಮಹಿಳೆಯ ಆವೇಶ ಮತ್ತು ಸಿರಿ ಸಂದಿಯ ಹಾಡುವಿಕೆ ಈ ವ್ಯವಸ್ಥೆಯ ಒಂದು ಮುಖವಾದರೆ, ಸಿರಿ ಹೆಂಗಸರ ವೈಯಕ್ತಿಕ ಬದುಕಿನ ಇತಿಹಾಸ, ಕುಟುಂಬ ಪದ್ಧತಿ, ಸಿರಿಬಳಗದ ಸದಸ್ಯೆಯಾಗಿ ನೇಮಕಗೊಳ್ಳುವ ದಲಿಯ ಸೇವೆ, ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ವಿಧಿ ನಿಯಮಗಳು ಅನುಭವಿ ಸಿರಿ ಹೆಂಗಸರಿಂದ ಮತ್ತು ಕುಮಾರನ ಸಹಾಯದಿಂದ ಸಿರಿ ಸಂದಿಯನ್ನು ಕಲಿತುಕೊಳ್ಳುವ ಬಗ್ಗೆರ ಇವುಗಳು ಈ ವ್ಯವಸ್ಥೆಯ ಇತರ ಮುಖಗಳಾಗಿವೆ ಎನ್ನುವ ವಿಸ್ತಾರದ ಅರಿವಿರಬೇಕಾಗುತ್ತದೆ.

'ಸಿರಿ' ಪಾಡ್ದನದಲ್ಲಿ 'ಸಿರಿಯ ಕೌಟುಂಬಿಕ, ಸಾಮಾಜಿಕ ಸಂದರ್ಭ, ವಿಚ್ಛೇದನ, ಮರುಮದುವೆ, ಉತ್ತರಾಧಿಕಾರತ್ವ, ಸ್ತ್ರೀತ್ವ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳು ಗಂಡಿನ ಮೋಸ, ಅನ್ಯಾಯ ಪುರುಷ ಪ್ರಭುತ್ವದ ಹೇರಿಕೆಯ ಪ್ರಯತ್ನಗಳು, ಅದರ ವಿರುದ್ಧ ಹೆಣ್ಣಿನ

ಹೋರಾಟ ಮತ್ತು ವಿಜಯಗಳು ದಾಖಲಾಗಿದೆ. ಇದರಿಂದಾಗಿ ಬಂಟ ಸಮುದಾಯದ ಮೂಲ ಹೆಣ್ಣೆಂದು ಗ್ರಹೀತಳಾದ ಸಿರಿಯೊಂದಿಗೆ ತುಳುನಾಡಿನ ಎಲ್ಲ ಮಾತೃರೂಪಿ ಕುಟುಂಬದ ಹೆಣ್ಣುಗಳು ತಮ್ಮ ಸಂಬಂಧವನ್ನು ಕಂಡುಕೊಳ್ಳುತ್ತಾರೆ. ಸಿರಿ (ಪಾಡ್ದನ) ಪುರಾಣದೊಂದಿಗೆ ಗಾಢವಾದ ಸಂಬಂಧವಿರುವ ತುಳುವ ಮಹಿಳೆಯರಿಗೆ ಸಿರಿಯ ಬದುಕು ಮತ್ತು ಹೋರಾಟಗಳು ಆದರ್ಶ ಮಾಧರಿಯಾಗಿರುವಲ್ಲಿ ಸಿರಿ ಪಾಡ್ದನವು ಸಿರಿ ಜಾತ್ರೆಗೊಂದು ಸಂಹಿತೆಯಾಗಿ ಕಾರ್ಯ ನಿರ್ವಹಿಸುತ್ತದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಅನೇಕ ಶೈವದೇವಾಲಯಗಳಲ್ಲಿ ಸಿರಿ ಆರಾಧನೆ ವಾರ್ಷಿಕ ಜಾತ್ರೆಯ ಸ್ವರೂಪದಲ್ಲಿ ನಡೆಯುತ್ತದೆ. ಉಡುಪಿ ಜಿಲ್ಲೆಯ ಪಾಂಗಳ ಕವತ್ತಾರು, ಹಿರಿಯಡಕ, ಬೊಲ್ಯೊಟ್ಟು, ನಂದಳಿಕೆ, ದಕ್ಷಿಣ ಕನ್ನಡ ಜಿಲ್ಲೆಯ ಕಂಡೇವು, ಅತ್ರಿಜಾಲ್, ಹುರುಂಬಿದೊಟ್ಟು, ಕುತ್ರೊಟ್ಟು, ನಿಡಿಗಲ್ಲ್, ಬರ್ಕಿದೊಟ್ಟು, ಜುರೆಗುಡ್ಡೆಗಳು ಪ್ರಮುಖ ಸಿರಿ ಆರಾಧನಾ ಕೇಂದ್ರಗಳು ಮಾರ್ಚ್, ಏಪ್ರಿಲ್, ಮೇ ತಿಂಗಳು ಹುಣ್ಣಿಮೆಯ ರಾತ್ರಿ ಸಿರಿಜಾತ್ರೆ ಜರುಗುವುದು ಬಹುತೇಕ ಸಿರಿಜಾತ್ರೆಗಳು ಶೈವ ದೇವಾಲಯಗಳಲ್ಲಿ ನಡೆಯುವುದಾದರೂ ಶಿಷ್ಟ ದೇವರಿಗೂ ಸಿರಿಗೂ ಯಾವುದೇ ಸಂಬಂಧವಿಲ್ಲ. ಈ ದೇವಾಲಯಗಳು ಮೂಲತಃ ಆಲಡೆ ಅಥವಾ ಬೆರ್ಮರ್ಸ್ಥಾನಗಳಾಗಿವೆ. ಸಿರಿಯ ಆರಾಧಾನಾ ಕೇಂದ್ರಗಳು ಸಂಕೀರ್ಣ ಸ್ವರೂಪದ್ದಾಗಿರುತ್ತದೆ. ಒಂದೆಡೆ ಶೈವ ದೇವಾಲಯ ಹಾಗೂ ಪರಿಹಾರ ದೇವತೆಗಳು ಇನ್ನೊಂದೆಡೆ ಸ್ಥಳದ ಭೂತಗಳು, ಮತ್ತೊಂದು ಸ್ತರದಲ್ಲಿ ಸಿರಿಗುಂಡ, ಸಿರಿ ಬಳಗದ ಮೂರ್ತಿಗಳು. ಹೀಗಾಗಿ ಸಿರಿಜಾತ್ರೆಯ ಆವರಣ ಹಾಗೂ ಆರಾಧನಾ ಪ್ರಕ್ರಿಯೆಗಳು ಸಂಕೀರ್ಣತೆಯನ್ನು ಪಡೆದು ಕೊಳ್ಳುತ್ತದೆ. ಡಾ. ಪೀಟರ್ ಕ್ಲಾಸ್ ಗುರುತಿಸುವಂತೆ, :ಇಲ್ಲಿನ ಶಿವಾರಾಧನೆ ಸಿರಿಯ ಆರಾಧನೆಯನ್ನು ಅತಿಕ್ರಮಿಸಿ ಜರುಗುತ್ತದೆಯೇ ಹೊರತು ಸಿರಿ ಆರಾಧನೆಯ ಒಂದು ಅಂಗವಾಗಿ ನಡೆಯುತ್ತಿಲ್ಲ. ಇದನ್ನು ಒಂದು ಖಾಯಂ ಆರಾಧನಾ ಬಳಗನಾಗಿ ಮಾನ್ಯ ಮಾಡದೆ ದೇವಾಲಯದೊಂದಿಗೆ ಸಂಬಂದವಿರಿಸಿಕೊಂಡ ಹಲವಾರು ದೈವಗಳಲ್ಲಿ ಸಿರಿ ಒಂದು ಎಂಬುದಾಗಿ ಭಾವಿಸುತ್ತಾರೆ. ಇಷ್ಟೊಂದು ವ್ಯಾಪಕ ನೆಲೆಯಲ್ಲಿ ಆರಾಧಿಸಲಾಗುವ ಸಿರಿ ಅಧೀನ ದೈವವಾಗಿ ಆರಾಧಿಸಲ್ಪಡುವ ಸಂಗತಿ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ.

೬.೩ ಸಿರಿ ಪಾಡ್ದನ ಕಾವ್ಯದಲ್ಲಿ ಹಸಿವಿನ ಲೋಕ

ತುಳುನಾಡಿನ ರಾಜಕೀಯ ಹಾಗೂ ಸಾಮಾಜಿಕ ಬದುಕು ಅಲ್ಲಿನ ಮೌಖಿಕ ಕಥನಗಳಾದ ಪಾಡ್ದನಗಳಲ್ಲಿ ಸಮರ್ಥವಾಗಿ ಪ್ರತಿನಿಧಿತವಾಗಿದೆ. ಪಾಡ್ದನಗಳು ಪ್ರಭುತ್ವದ ಮುಖವಾಣಿಯಲ್ಲಿ ಅವು ದುಡಿಯುವ ವರ್ಗಗಳ ಮೌಖಿಕ ರಚನೆ. ಹಾಗಾಗಿ ಅವು ಇಂದು ಜನರ ಚರಿತ್ರೆ ನಿರ್ಮಾಣಕ್ಕೆ ನೇರವಾಗಿ ಬಳಕೆಯಾಗುತ್ತವೆ. ತುಳುನಾಡಿನ ರಾಜ್ಯ ವ್ಯವಸ್ಥೆ, ಶೋಷಣೆ ಮುಂತಾದ ವಿಚಾರಗಳು ಪಾಡ್ದನಗಳಲ್ಲಿ ತುಂಬಿಕೊಂಡಿವೆ. ಜಾಗತಿಕ ಮಟ್ಟದಲಿ ಚರ್ಚೆಗೆ

ಗ್ರಾಸವಾದ ಸಿರಿ ಪಾಡ್ದನ ಈ ನಿಟ್ಟಿನಲ್ಲಿ ಬಹುಮುಖ್ಯವಾದ ಒಂದು ಮೌಖಿಕ ಆಕರ. ಚರಿತ್ರೆಯಲ್ಲಿ ಸಾಮಾನ್ಯವಾಗಿ ರಾಜವ್ಯವಸ್ಥೆಯ ಕುರಿತು ಅಧ್ಯಯನ ನಡೆಸುವಾಗ ಪುರುಷ ಪ್ರಧಾನ ನೆಲೆ ಮುಖ್ಯ ಭೂಮಿಕೆಯಾಗುತ್ತದೆ. ಚರಿತ್ರೆಯಲ್ಲಿ ರಾಜ್ಯವನ್ನಾಳಿದ ರಾಣಿಯರ ಉಲ್ಲೇಖ ಅಲ್ಲೊಂದು ಇಲ್ಲೊಂದಷ್ಟೆ ಸಿಗುವುದರಿಂದ ರಾಜ್ಯವೆಂದರೆ ರಾಜ ಹಾಗೂ ರಾಜನೆಂದರೆ ಪುರುಷ ಎಂಬಂತಾಗಿ ಇಡಿ ವ್ಯವಸ್ಥೆಯ ಪುರುಷ ಪ್ರಧಾನವಾಗಿ ಮಾರ್ಪಟ್ಟಿರುವುದು ಚರಿತ್ರೆ ಪಠ್ಯಗಳಿಂದತಿಳಿದುಬರುತ್ತದೆ. ಚರಿತ್ರೆಯನ್ನು ಅಲಕ್ಷಿತ ನೆಲೆಯಿಂದ ನೋಡುವ ಕ್ರಮ ಆರಂಭವಾದಾಗಿನಿಂದ ಚರಿತ್ರೆಕಾರರು ಚರಿತ್ರೆಯ ಬಹುಸತ್ಯದ ಕಡೆಗೆ ಮುಖ ಮಾಡಲಾರಂಭಿಸಿದರು. ಇದರ ಪರಿಣಾಮವಾಗಿಯೇ ಪಾಡ್ದನಗಳಂಥ ಮೌಖಿಕ ಅಕರಗಳು ಇಂದು ಹೆಚ್ಚು ಚರ್ಚೆಗೆ ಒಳಗಾಗುತ್ತಿರುವುದು. ಅಲಕ್ಷಿತ ಸಮುದಾಯಗಳು ಸಾವಿರಾರು ವರ್ಷಗಳಿಂದ ಅವಮಾನ, ಆಪಾದನೆಗಳಿಂದ ಮುಕ್ತಗೊಂಡಿಲ್ಲ. ಪ್ರಭುಗರ ಪರವಾಗಿ ರೂಪುಗೊಂಡ ಚರಿತ್ರೆಯಲ್ಲಿ ತಳಸಮುದಾಯಗಳ ಬದುಕಿನ ವಿವರಣೆಗಳು ಮುಖ್ಯವಾಗದೆ, ಪ್ರಭುಗಳ ಮೋಜಿನ ವೈಭವದ ಚರಿತ್ರೆ ನಮ್ಮ ಚರಿತ್ರೆ ಬರಹಗಾರರ ಕಣ್ಣಿಗೆ ಕಂಡಿತು. ಪ್ರಭುಗಳ ಚರಿತ್ರೆಗಿಂತ, ತಳಸಮುದಾಯಗಳ ಹಸಿವಿನ ಚರಿತ್ರೆ ದೊಡ್ಡದು ಎಂಬುದು ನನ್ನ ನಂಬಿಕೆ. ಈ ನೆಲೆಯಲ್ಲಿ ಸಿರಿಪಾಡ್ದನ ಕಾವ್ಯದಲ್ಲಿ ಕಂಡು ಬರುವಹಸಿವಿನಲೋಕ ಅದು ತಳಸಮುದಾಯಗಳ ಹಸಿವಿನ ಲೋಕವೇ ಆಗಿದೆ.

'ಹಸಿವಿನ' ಸನ್ನಿವೇಶಕ್ಕೆ ಸಂಬಂಧಪಟ್ಟ ತುಳುನಾಡಿನ ತಳಸಮುದಾಯಗಳ ಮೌಖಿಕ ಸಾಹಿತ್ಯದ ರೂಪಗಳಾದ ಕೆಲವೊಂದು ಪಾಡ್ಧನಗಳನ್ನು ಇಲ್ಲಿ ವಿವೇಚಿಸಬಹುದಾಗಿದೆ. ಪ್ರಸರಣ, ಪ್ರಭಾವದ ಧೃಷ್ಠಿಯಲ್ಲಿ 'ಪಂಜುರ್ಲಿದೈವ'ದಂತೆಯೇ ತುಳುನಾಡಿನಲ್ಲಿ ವಿಶಾಲ ವ್ಯಾಪ್ತಿಯನ್ನು ಪಡೆದ ದೈವ 'ಜುಮಾದಿ.' ಜೊತೆಗೆ ಬೇರೆಬೇರೆ ಜುಮಾದಿಗಳಿಗೆ ಸಂಬಂಧಿಸಿದ ಪಾಡ್ದನಗಳು ನೂರಾರು ಇವೆ. ವೈವಿಧ್ಯಪೂರ್ಣವಾದ ಈ ಕಥಾನಕಗಳು ನೀಡುವ ತುಳುನಾಡಿನ ತಳಸಮುದಾಯಗಳ ಹಸಿವಿನ ಚಿತ್ರಣ ತುಂಬ ವಿಸ್ತಾರದ ವ್ಯಾಪ್ತಿಯುಳ್ಳದ್ದಾಗಿದೆ.

"ಡೆನ್ನಾನ ಡೆನ್ನಾನ ಡೇನ ಡೆನ್ನನಾ ಡೆನ್ನಾನಿಯಾ
ಮೇಲೆ ಮೇಗಿಲೋಕದಲ್ಲಿದ್ದಾರೆ ಸೂರ್ಯನಾರಾಯಣದೇವರು
ಸೂರ್ಯದೇವರ ಮಗಳಾಗಿ ಹುಟ್ಟಿ ಬಳೆದರು
ಏಳೇಳು ಹರಯ ನೆರೆಯುವಾಗ ಮಗಳು ಮೈನೆರೆದಳು
ಏಳು ನೆಲೆಯೊಳಗಿನ ಯಮಗುಂಡದಲ್ಲಿಸಿದರು
ಆಗೆಮದಳು ಮಗಳು ಯಾರಮ್ಮ ಕೇಳಿದಿರಾ ನೀವು
ನನಗೆ ಹಸಿವು ಬಾಯರಿಕೆಯಾಗುತ್ತಿದೆ

ಅಯ್ಯೋ ಮಗಳೆ ಕೇಳಿದೆಯಾ
ನಿನಗೆ ಹಸಿವು ಬಾಯಾರಿಕೆಯಾಗುತ್ತದೆ.
ಅಯ್ಯೋ ಮಗಳೆ ಕೇಳಿದೆಯಾ
ನಿನಗೆ ಹಸಿವು ಬಾಯಾರಿಕೆಯಾಗುವುದಾದರೆ
ನಮ್ಮ ತೆಂಗಿನ ಮರದಲ್ಲಿದೆ ಗೊನೆಗೊನೆ ಸೀಯಾಳ
ಗೊನೆ ಗೊನೆ ಸೀಯಾಳ ಇಳಿಸಿದರು
ಸಿಯಾಳದ ನೀರು ಕುಡಿದಳು ಮಗಳು
ಯಾರಮ್ಮಾ ಕೇಳಿದಿರಾ
ಹೊಟ್ಟೆ ತುಂಬಲಿಲ್ಲ ಅಮ್ಮಾ ಬಾಯಿ ತಣಿಯಲಿಲ್ಲ
ಬಾಯಾರಿಕೆ ಹಸಿವಿನಿಂದ ಎದೆಯೊಡೆಯುತ್ತಿದೆ
ಅಷ್ಟು ಹೇಳಿದ್ದನ್ನು ಕೇಳಿದರು ತಾಯಿ
ಸಾವಿರ ಕುರಿಗಳನ್ನು ಕಳುಹಿಸಿದರು
ಕುರಿ ತಲೆ ತಂದು ಕೊಟ್ಟರು
ಸಾವಿರ ಕುರಿಯ ನೆತ್ತರು ಕುಡಿದ ಮಗಳು
ನನಗಾದರೋ ಬಾಯಿ ತಣಿಯಲಿಲ್ಲ ತಾಯೇ ಎಂದಳು
ಅಯ್ಯೋ ಮಗಳೇ ಅತ್ತ ಹೋಗು.
ಏಳಾನೆ ಮುಳುಗುವ ಕೆರೆಯಿದೆ
ಅಲ್ಲಿಗೆ ಹೋಗಿ ಆಸರು ತಗ್ಗಿಸು ಎಂದರು
ಹರುಷದಿಂದ ಮುತ್ತಿನ ನಗು ನಕ್ಕಳು ಮಗಳು
ಓಡೋಡುತ್ತಾ ಹೋದಳು ಮಗಳು
ಏಳನೆ ಮುಳುಗುವ ಕೆರೆಗೆ ಬೋರಲಾಗಿ ಬಿದ್ದಳು
ಬೊರಲಾಗಿ ಬಿದ್ದ ಮಗಳು ಇಕ್ಕಿದ ಬಾಯಿ ತೆಗೆಯಬೇಕಾದರೆ
ಏಳಾನೆ ಮುಳುಗುವ ಕೆರೆಯ ನೀರು ಬತ್ತಿಹೋಗಿ
ಸಾವಿರ ಮೀನುಗಳ ಬಲಿಯಾಯಿತು
ಮೀನುಗಳ ಬಲಿಬಾರಣೆ ಮಾಡಿದಳು
ಅಲ್ಲಿಂದ ಓಡೋಡುತ್ತಾ ಬಂದಳು
ತಯಿಯ ಬಳಿಗೆ ಬಂದಳು ಮಗಳು
ಯಾರಮ್ಮ ಕೇಳಿದಿರಾ ನೀವು
ಬಾಯ ಆಸರು ಕಳೆಯಲಿಲ್ಲ ಅಮ್ಮ ಹೊಟ್ಟೆ ತುಂಬಲಿಲ್ಲ

ನಡುವಿನ (?) ನರಲೋಕದಲ್ಲಿ ನರಹುಳುಗಳ ಸ್ವರ ಕೇಳುತ್ತದೆ
ನನ್ನನ್ನು ಅಲ್ಲಿಗೆ ಕಳುಹಿರಿ ಎಂದಳು
ಹಾಗಾದರೆ ಮಗಳೇ ಕೇಳಿದೆಯ
ನಾಲ್ವರು ಮುನಿಗಳು ನನ್ನ ಜೋತಿಕೋಲು ಜಪಮಾಲೆ
ಸೆಳೆದೊಯ್ದಿದ್ದಾರೆ
ಅದನ್ನು ತಂದೆಯಾದರೆ ನಿನ್ನನ್ನು ನಡು ನರಲೋಕಕ್ಕೆ ಕಳುಹಿಸುವೆ
ಬೆರಣಿ ಸುಟ್ಟು ವಿಭೂತಿ ಮಾಡಿದಳು ಮಗಳು
ಕೈಯಲ್ಲಿ ತಾಳತಂಬೂರಿ ಬಾಯಲ್ಲಿ ವೀಣೆ
ನಲಿಯುತ್ತ ನಾಲ್ಕಾಟ ಎಣಿಸುತ್ತ ಮೂರಾಟ ವಾಡಿದಳು
ಅಯ್ಯಯ್ಯೋ ತಿರುಕುಳಿ ಕೇಳಿದೆಯ ನಮ್ಮ ಮನೆಗೆ ಹೋಗು
ನಮ್ಮ ಹೆಂಗಸರಿದ್ದಾರೆ ನಿನಗೆ ಭಿಕ್ಷೆ ಕೊಟ್ಟಾರು
ಅಷ್ಟು ಕೇಳಿದಳು ಮಗಳು ಅವರ ಮನೆಗೆ ಬಂದಳು
ಅಂಗಳಕ್ಕೆ ಹೋದಳು ನಲಿಯುತ್ತ ನಾಲ್ಕಾಟ ಎಣಿಸುತ್ತ ಮೂರಾಟವಾಡಿದಳು
ಒಳಗಡೆ ಹೋದರು ಹೆಂಗಸರು
ಬೇಡುವವಳಿಗೆ ಭಿಕ್ಷೆ ತಂದರು
ನಿಮ್ಮ ಭಿಕ್ಷೆ ನನಗೆ ಬೇಡ ಹೆಂಗುಸರೆ
ನಿಮ್ಮ ಗಂಡುಸರೆಂದರು ದಂಡಕೋಲು ಜಪಮಾಲೆ
ವಿಭೂತಿ ಚೀಲ ಕೊಡಬೇಕಂತೆ
ನಾಲ್ವರು ಹೆಂಗಸರೆಂದರು
ನಮ್ಮ ಗಂಡುಸರು ಹೇಳದೆ ನಾವು ಕೊಡಲಾರೆವು
ಅಲ್ಲಿಂದ ಹಿಂದಕ್ಕೆ ತಿರುಗಿ ನಿಂತಳು ಮಗಳು
ಯಾರಯ್ಯ ಮುನಿಗಳು ನೀವು ಕೇಳಿದಿರಾ
ನಿಮ್ಮ ಹಂಗುಸರು ನನಗೆ ಕೊಡುವುದಿಲ್ಲ
ನಾಲ್ವರು ಮುನಿಗಳು ಕರೆದೆಂದರು
ಬೇಡುವವಳಿಗೆ ಭಿಕ್ಷೆ ಕೊಡಿ ನೀವು
ಅದನ್ನು ಕೇಳಿದರು ಹೆಂಗುಸರು
ದಂಡಕೋಲು ಜಪಮಾಲೆ ಕೊಟ್ಟರು
ಅವನ್ನು ಹಿಡಕೊಂಡು ಬಂದಳು ಮಗಳು
ಮುನಿಗಳ ಬಳಿಗೆ ಬಂದಳು

ಯಾರಯ್ಯ ಮುನಿಗಳೇ ಕೇಳಿದಿರಾ ನೀವು
ನನ್ನ ತಾಯಿ ಕೈಯಿಂದ ನೀವು ತಂದಿದ್ದೀರಂತೆ
ಇಂದು ನಿಮ್ಮ ಕೈಯಿಂದ ನಾನು ಒಯ್ಯುವೆ
ಅಷ್ಟು ಹೇಳಿದ್ದನ್ನು ಕೇಳಿದರು ಮುನಿಗಳು
ನಾಲ್ವರು ನಾಲ್ಕು ಕಡೆಗಳಿಂದ ಬಂದರು
ಎಳೆಯಲು ತುಡುಕಲು ಬರುವಾಗ ಮಗಳು
ಅಂಗಾತನೆ ಬಿದ್ದುಕೊಂಡಳು
ನಾಲ್ಕೂವರೆ ಗಾವುದಕ್ಕೆ ನಾಲಗೆ ನೀಡಿದಳು
ನಾಲ್ವರು ಮುನಿಗಳನ್ನು ಮುಕ್ಕಿ ಮುಗಿಸಿದಳು
ಓಡುತ್ತೋಡುತ್ತಾ ಬಂದಳು
ತಾಯಿಯ ಮಡಿಲಿಗೆ ಮಗುಚಿಕೊಂಡಳು
ಅಂದು (ಮುನಿಗಳು) ಕೊಂಡೊಯ್ದು ಸೊತ್ತು ತಂದೆಯಾ
ಎಂದು ಕೇಳಿದರು
ಸೊತ್ತುಗಳನ್ನು ತಾಯಿಯೊಡನೆ ಕೊಟ್ಟಳು ಮಗಳು
ನನಗಾದರೋ ಅಮ್ಮ ಹೊಟ್ಟೆ ತುಂಬಲಿಲ್ಲ ಬಾಯಾರಿಕೆ ಹಿಂಗಲಿಲ್ಲ
ಎನ್ನುವಾಗ ಅಯ್ಯಯ್ಯೋ ಮಗಳೇ ಎಂದರು
ಕಿರುಬೆರಳನ್ನು ಕತ್ತಿರಿಸಿದರು ಅಬ್ಬೆ
ಪಟ್ಟಿ ಸುತ್ತಿ ಮಗಳ ಬಾಯಿಗಿಟ್ಟರು
ತಾಯಿಯ ನೆತ್ತರು ಕುಡಿದ ಮಗಳು
ಹೊಟ್ಟೆ ಬರಬರನೆ ಉಬ್ಬಿತ್ತು
ನಾನೇ ಸೃಷ್ಟಿಸಿ ನಾನೇ ಕೊಲ್ಲುವ ಕಾಲ ಬಂತೆಂದರು
ಹದಿನಾರು ಹೆಡೆಯ ಶಂಖಪಾಲನನ್ನು ತಂದು
ಹೊಕ್ಕುಳ ಸಂದಿನಿಂದ ಕೊರಳ ಕುಳಿಯವರೆಗೆ
ಕಟ್ಟು ಹಾಕಿದರು ತಾಯಿ ಸೂರ್ಯ ನಾರಾಯಣದೇವರು
ಇಂತಹ ಮಗಳನ್ನು ಇಟ್ಟು ಕೊಂಡರೆ ಆಗದೆಂದರು
ಬಾಯಿಗೆ ಬೀಗವಿಕ್ಕಿಸಿದರು ದೇವರು
ನಡುಬೂಡುನರಲೋಕಕ್ಕೆ ಕಳುಹಿಸಿದರು"[೮]

ಹೀಗೆ ಈ ಕಥನವು ಮುಕ್ತಾಯಗೊಳ್ಳುತ್ತದೆ. ಈ ಕಥೆಯು ತಳಸಮುದಾಯಗಳ ನಡುವೆ ಕಾಲಕಾಲಾಂತರದಿಂದ ಮುಂದುವರಿದುಕೊಂಡು ಬಂದಿದೆ. ಹಲವಾರು ತಲೆಮಾರುಗಳ ಹಸಿವಿನ

ಸಮಸ್ಯೆಯನ್ನು ಕಟ್ಟಿಕೊಡುತ್ತದೆ. ಈ ಸಮಸ್ಯೆ ಎಲ್ಲಾ ಕಾಲದಲ್ಲೂ ಜನರನ್ನು ದೈಹಿಕ ಹಾಗೂ ಮಾನಸಿಕ ಹಿಂಸೆಗಳಿಗೆ ಕಾರಣವಾಗಿದೆ. ಹಿಂಸೆ ಹಾಗೂ ಅವಮಾನಗಳಿಗೆ ಗುರಿಮಾಡಿದೆ. ಸಾವಿರಾರು ವರ್ಷಗಳಿಂದ ತಳಸಮುದಾಯಗಳು ಅನುಭವಿಸುತ್ತಾ ಬಂದಿರುವ ಹಸಿವಿನ ಧಾರುಣತೆಯನ್ನು ಈ ಕಥನವು ನಮಗೆ ತಿಳಿಸುತ್ತದೆ. ಸೂರ್ಯ, ಚಂದ್ರಾದಿಗಳು ಹುಟ್ಟಿದ ಕ್ಷಣದಿಂದಲೂ ಹಸಿವು ಎಲ್ಲಾ ಜೀವಿಗಳನ್ನು ಕಾಡುತ್ತ ಬಂದಿದೆ. ಈ ಕಥನದಲ್ಲಿ ಬರುವ ಹೆಣ್ಣುಮಗಳು ತನ್ನ ತಾಯಿಯೊಂದಿಗೆ ಹಸಿವನ ಬಗ್ಗೆ ನಡೆಸುವ ಸಂವಾದ ಹಸಿವಿನ ಧಾರುಣ್ಯತೆಯನ್ನು ಚಿತ್ರಿಸುತ್ತದೆ. ಎಷ್ಟೇ ಅನ್ನ ತಿಂದರು ತುಂಬಲಾರದ ಹೊಟ್ಟೆ ಎಷ್ಟೇ ನೀರು ಕುಡಿದರೂ ತಣಿಯದ ನೀರಿನ ದಾಹ ಈ ಎರಡು ಸ್ಥಿತಿಯನ್ನು ಇವತ್ತಿನ ನಮ್ಮ ಗ್ರಾಮಭಾರತ ಎದುರಿಸುತ್ತಿದೆ. ಹಸಿವಿನಿಂದ ಸಾಯುತ್ತಿರುವ ಮಕ್ಕಳು ಮುದುಕರು ಒಂದು ಕಡೆಯಾದರೆ, ಹನಿ ನೀರಿಗಾಗಿ ಹೋರಾಡುತ್ತಿರುವ ನಮ್ಮ ರೈತಕುಟುಂಬಗಳು, ಈ ಹೋರಾಟಗಳನ್ನು ಧಮನಿಸುತ್ತಿರುವ ರಾಜಕೀಯ ಪಕ್ಷಗಳು ಇವತ್ತಿನ ಹಸಿವಿಗೆ ನಿರ್ದಶನಗಳಾಗಿವೆ. ಹಸಿವಿನ ಅತಿ ಭೀಕರತೆಯನ್ನು ಕಾಣುವುದು ತನ್ನ ತಾಯಿ ಕಿರುಬೆರಳಿನ ನೆತ್ತರವನ್ನು ಕುಡಿದಾಗಲೇ ತನ್ನ ಹೊಟ್ಟೆ ತುಂಬಿತು ಎಂದು ಹೇಳುವ ಮಗಳ ಮಾತಿನಲ್ಲಿ ಹಸಿವಿನ ರೋಚಕತೆ ತುಂಬಿದೆ. ದೈವದ ನೆಲೆಯಲ್ಲಿ ರೂಪಗೊಂಡ ಈ ಕಥನವನ್ನು ಕಟ್ಟಿದವರು ತಳವರ್ಗದವರೇ ಆದುದರಿಂದ ಅವರು ಬದುಕಿನ ಎಲ್ಲಾ ಮಗ್ಗುಲುಗಳನ್ನು ಇಂತಹ ಕಥನಗಳಲ್ಲಿ ಕಟ್ಟಿಕೊಂಡು, ಹಾಡುತ್ತಾ ತಲೆತಲಾಂತರಗಳಿಂದ ಬಂದಿದ್ದಾರೆ.

ತುಳು ನಾಡಿನ ಮತ್ತೊಂದು ಜನಪ್ರಿಯವಾದ ಪಾಡ್ದನನೆಂದರೆ, ಅದು 'ಸಿರಿ ಪಾಡ್ದನ.' ಈ ಕಥನದಲ್ಲಿ ಬಂದಿರುವ ಹಸಿವಿನ ಭಾಗಗಳು ನನ್ನ ಸಂಶೋಧನೆಗೆ ಮತ್ತಷ್ಟು ಆಕರವಾಗಿದೆ. 'ಈ ಕಥನವು ಕೂಡ ತಳಸಮುದಾಯಗಳ ಜೀವನ ಚರಿತ್ರೆಯಾಗಿದೆ. ಮೇಲ್ವರ್ಗದ ಕುಟುಂಬದಲ್ಲಿ ಈ ಕಥೆ ನಡೆದರೂ, ತಳಸಮುದಾಯಗಳ ಬದುಕಿನ ವಿವರಗಳನ್ನು ಚಿತ್ರಿಸುತ್ತದೆ. ತಳಸಮುದಾಯಗಳು 'ಸಿರಿ'ಕಥೆಯನ್ನು ತಮ್ಮ ಬದುಕಿನ ಭಾಗವಾಗಿ ನೋಡುತ್ತಾರೆ. ಇಂದಿಗೂ ಈ ಕಥೆಯನ್ನು ಆರಾಧಿಸುತ್ತಾ ಬಂದಿದ್ದಾರೆ. ದೈವದ ನೆಲೆಯಲ್ಲಿ ಕಂಡುಬರುವ 'ಸಿರಿ' ತಳಸಮುದಾಯಗಳ ಬದುಕಿನ ಹಲವು ಸತ್ಯಗಳನ್ನು ಬಿಚ್ಚಿಡುತ್ತದೆ. ಅದು ಊಳಿಗಮಾನ್ಯ ಪದ್ಧತಿಯಾಗಿರಬಹುದು. ಯಜಮಾನ ಸಂಸ್ಕೃತಿಯ ದಬ್ಬಾಳಿಕೆಯಾಗಬಹುದು. ಲಿಂಗ ತಾರತಮ್ಯತೆ, ದುಡಿಯುವ ವರ್ಗಗಳ ಹಸಿವು ಹಾಗೂ ಬಡತನ ಹೀಗೆ ಹಲವಾರು ವಿಚಾರಗಳ ಬಗ್ಗೆ ಗಮನ ಸೆಳೆಯುತ್ತದೆ. ಸತ್ಯನಾಪುರದ ಅಜ್ಜಂದಿರ ವಿವರಗಳೊಂದಿಗೆ ಈ ಕಥೆ ಬಿಚ್ಚಿಕೊಳ್ಳುತ್ತದೆ. ತಮ್ಮ ಜೀವಿತಾವಧಿಯಲ್ಲಿ ಬಾಳಿ ಬದುಕಿದ ವಿವರಣೆಗಳೊಂದಿಗೆ ಯಜಮಾನ ಸಂಸ್ಕೃತಿ ಚಿತ್ರಣವನ್ನು ಕಟ್ಟಿಕೊಡುತ್ತದೆ.ದುಡಿಯುವ ವರ್ಗ ಶ್ರಮಶಕ್ತಿಯ ಮೇಲೆ ತಮ್ಮ ಬದುಕನ್ನು

ರೂಪಿಸಿಕೊಂಡ ಸತ್ಯಾನಾಪುರದ ಅಜ್ಜಂದಿರು ತಮ್ಮ ಮುಪ್ಪಿನ ಕಾಲದಲ್ಲಿ ಎದುರಾದ ನೋವು, ಸಂಕಟಗಳನ್ನು ಬಿಚ್ಚಿಡುತ್ತಾರೆ. ನಾರಾಯಣ ನಾರಾಯಣ ದೇವೋ.

"ಶತಸಾವಿರ ಕಾಲ ನಡೆದು ಪಟ್ಟವಾಳಿದೆನಲ್ಲ
ಶತಸಾವಿರ ಕಾಲ ನಿಂತು ಪಟ್ಟವಾಳಿದೆನಲ್ಲ
ಶತಸಾವಿರ ಕಾಲ ಕುಳಿತು ಪಟ್ಟವಾಳಿದೆನಲ್ಲ
ಇಂದಿನ ಕಾಲ ಮಲಗಿದ ಮಂಚದಿಂದ
ಏಳಲಾಗದ ಕಾಲ ಬಂದೊದಗಿತಲ್ಲ"[೧೦]

ಈ ಮೇಲಿನ ಅಜ್ಜಂದಿರ ಮಾತುಗಳಲ್ಲಿ ಯಜಮಾನ ಸಂಸ್ಕೃತಿಯ ಅವನತಿಯನ್ನು ಸೂಚಿಸುವಂತಿದೆ. ದುಡಿಯುವ ವರ್ಗ ಈ ಯಜಮಾನ ಸಂಸ್ಕೃತಿಯನ್ನು ವಿರೋಧಿಸಿ, ಪರ್ಯಾಯ ಬದುಕಿನ ಮಾರ್ಗಗಳನ್ನು ರೂಪಿಸಿಕೊಂಡಿತು. ತಮ್ಮ ಹೊಟ್ಟೆ ಬಟ್ಟೆ ದಬ್ಬಾಳಿಕೆಗೆ ಕಾರಣವಾಗಿದ್ದ ತಳಸಮುದಾಯಗಳ ದುಡಿಮೆ, ಇಂದು ಬದಲಾದ ಸಾಮಾಜಿಕ ಸ್ಥಿತ್ಯಂತರಗಳಿಗೆ ಯಜಮಾನ ಸಂಸ್ಕೃತಿ ತನ್ನ ಅವನತಿ ಹೊಂದುತ್ತಾ ಬಂದಿತು. ಇಂತಹ ಅವನತಿಯಸ್ಥಿತಿ ಈ ಸತ್ಯನಾಪುರದ ಅಜ್ಜಂದಿರದು.

"ಹಾಸಿದ ಹಾಸನ್ನು ಮಡಚದಿರುವ ಕಾಲ ಒದಗಿತಲ್ಲ
ನಡೆದು ನಾಲ್ಕು ಹಜ್ಜೆ ಹೋಗಲಾಗುವುದಿಲ್ಲವಲ್ಲ ನನಗೆ
ಓ ಹಿರಿಯವರಿಲ್ಲ ಕಿರಿಯವರಿಲ್ಲ
ಮೊದಲು ಹುಟ್ಟಿದ ಅಕ್ಕಂದಿರಿಲ್ಲ
ಮಗ್ಗುಲಲ್ಲಿನ ಸೊಸೆಯಂದಿರಿಲ್ಲ
ಮೊಣಕಾಲಿನಲ್ಲಿ (ಆಡುವ) ಮೊಮ್ಮಕ್ಕಳಿಲ್ಲ
ಇಂದ್ರಿಯಕ್ಕೆ ಜನಿಸಿದ ಮಕ್ಕಳಿಲ್ಲ
ನಾನು ಸತ್ತುಹೋದ ಕಾಲಕ್ಕೆ"[೯]

ನನ್ನ ಸತ್ಯನಾಪುರದ ಅರಮನೆಯಲ್ಲಿ ನಂದಿದ ನಂದಾದೀಪವನ್ನು ಉರಿಸುವ ಗತಿಗೊತ್ರ ನನಗಿಲ್ಲದಾಯಿತಲ್ಲ.

"ನಾರಾಯಣ ನಾರಾಯಣ ದೇವೋ
ನಾನು ದಾನ ಮಾಡಿದವನು ಧರ್ಮಮಾಡಿದವನು
ಕರ್ಮವನ್ನು ಅನುಭವಿಸುತ್ತಿದ್ದೇನಲ್ಲ !
ಸತ್ಯನಾಪುರದ ಅರಮನೆಗೆ ನನ್ನ ಕಾಲದಲ್ಲಿ
ಸಾವಿರ ದಂಡು ಮಾಡಲು ಹೊಂದಿಸುತ್ತಿದ್ದೆ

ಇಂದು ಸಾವಿರ ಸೀಳು ಮಾಡಲು ಹೊದಿಸುವ ದಿಕ್ಕಿದೆಸೆಯಿಲ್ಲ
ನನ್ನ ಕಾಲದಲ್ಲಿ ಸತ್ಯನಾಪುರದ ಅರಮನೆಗೆ
ಸಾವಿರ ಹೊರೆ ಮುಳಿಹುಲ್ಲು ಹೊದಿಸುತ್ತಿದ್ದೆ.
ಇಂದು ಸಾವಿರ ಸೂಡಿ ಮುಳಿ ಹೊದಿಸುವ ದಿಕ್ಕುದೆಸೆಯಿಲ್ಲ
ಎಂದು ಚಿಂತೆಯಲ್ಲಿ ಬೇಯುತ್ತಿದ್ದರು ಅಜ್ಜರು”[೧೦]

ಇದು ಸತ್ಯಾನಾಪುರದ ಅಜ್ಜಂದಿರ ಅವಸಾನದ ಸ್ಥಿತಿ. ಇಲ್ಲಿ ಇನ್ನೊಂದು ವಿಷಯ ನನ್ನ ಗಮನ ಸೆಳೆಯುತ್ತದೆ. ಅಜ್ಜಂದಿರು ತಾವು ದಾನ ಮಾಡಿದವರು, ಧರ್ಮಮಾಡಿದವರು ಎಂದು ಪ್ರಸ್ತಾಪಿಸುತ್ತಾರೆ. ಇಲ್ಲಿ 'ದಾನದ ಬಗ್ಗೆ ನನ್ನ ಅನಿಸಿಕೆ ಈ ರೀತಿಯದಾಗಿದೆ. ಪ್ರಭುತ್ವಶಾಹಿ ವ್ಯವಸ್ಥೆಯಲ್ಲಿ 'ದಾನ' ಶ್ರಮಜೀವಿಗಳ ದುಡಿಮೆಯ ಫಲವಾಗಿರುತ್ತದೆ. ಶ್ರಮಜೀವಿಗಳ ಶ್ರಮದ ಫಲವನ್ನು ಪ್ರಭುತ್ವಶಾಹಿಗಳು 'ದಾನ'ದ ಹೆಸರಿನಲ್ಲಿ ನೀಡಿದಾಗ ಅದು ಪ್ರಭುಗಳ ದಾನ, ಧರ್ಮ ಹೇಗಾಗುತ್ತದೆ? ಹಿಂದೆ ತಳವರ್ಗಗಳ ಶ್ರಮದ ಫಲ ಅರಮನೆ ಸೇರುತ್ತಿತ್ತು. ಪ್ರಭು ಅದನ್ನು ವಿನಿಯೋಗಿಸಿ ಉಳಿದುದನ್ನು ಅದೇ ದುಡಿಯುವ ವರ್ಗಕ್ಕೆದಾನವಾಗಿ ನೀಡುತ್ತಿದ್ದ, ಕೆಲವೊಮ್ಮೆ ನೀಡದೇ ಇರಬಹುದು. ಇಂತಹ ಪರಿಸ್ಥಿತಿಯಲ್ಲಿ ತಳಸಮುದಾಯಗಳು ಹಸಿವಿನಿಂದಲೇ ಬಳಲುತ್ತಿದ್ದವು. ತಮ್ಮ ಶ್ರಮದ ಫಲವನ್ನು ಇನ್ನ್ಯಾರಿಗೋ ಕೊಟ್ಟು ತಾವು ಉಪವಾಸ ಪಡುತ್ತಿದ್ದ ದುಡಿಯುವ ವರ್ಗ ನಮ್ಮ ಚರಿತ್ರೆಯ ಒಳಗೆ ಕಾಣಲಾಗದಾಗಿದೆ. ಹೀಗೆ ಕಥೆಯು ಮುಂದುವರಿಯುತ್ತದೆ.

“ಆ ವೇಳೆ ಬಡಗು ಲಂಕೆಲೋಕನಾಡ ಜಯವುಳ್ಳ ಬ್ರಹ್ಮರು
ವಿಭೂತಿಯ ನೀಟನಾಮ ಎಳೆದುಕೊಂಡರು
ಹೆಗಲಿಗೆ ಜೋಳಿಗೆ ಹಾಕಿಕೊಂಡರು
ಮಾಯದ ಹಿಂಗಾರದ ಹೊಂಬಾಳೆ ಇಟ್ಟುಕೊಂಡರು
ಕಾಲಿಗೆ ಉಲಿಗೆಜ್ಜೆ ಕಟ್ಟಿಕೊಂಡರು
ಕೈಯ್ಯಲ್ಲಿ ತಂಬೂರಿ ಹಿಡಿದುಕೊಂಡರು
ಬಾಯಲ್ಲಿ ಕೊಳಲು ಊದಿದರು
ನಾಲ್ಕು ಮನೆ ಬೇಡುತ್ತಾ ಮೂರು ಮನೆ ಯಾಚಿಸುತ್ತಾ
ಬಡಬ್ರಾಹ್ಮಣನ ವೇಷ ಆದರಂತೆ
ಹಾಡುತ್ತಾ ಹಾಡುತ್ತಾ ಬಂದರು
ಸತ್ಯನಾಪುರದ ಅರಮನೆಯ ನಡುವಂಗಳದಲ್ಲಿ ನಿಂತರು
ಕೈಯಲ್ಲಿ ತಂಬೂರಿ ಮೀಟಿದರು ಬಾಯಲ್ಲಿ ಕೊಳಲು ಊದಿದರು
ಯಾರಪ್ಪಾ ಯಾರೀ ಅರಮನೆಯಲ್ಲಿ

ನನಗೆ ದಾನ ಕೊಡಿ ಧರ್ಮ ನೀಡಿ
ಎಂದು ಅಳುತ್ತದೆಹಲುಬುತ್ತದೆ ಬಡಬ್ರಾಹ್ಮಣ
ನಾರಾಯಣ ನಾರಾಯಣ
ಇದೊಂದು ಅರಮನೆಯಲ್ಲಿ ಹಸಿವು ನೀರಡಿಕೆಗೆ ಅನ್ನ ನೀರು ನೀಡುವವರು
ಯಾರೂ ಇಲ್ಲವೇ ಎಂದು ಅರಚುತ್ತದೆ ಬ್ರಾಹ್ಮಣ
ಆ ಸದ್ದು ನಡುಮನೆಯ ಮಂಚದಲ್ಲಿದ್ದ ಅಜ್ಜರಿಗೆ ಕೇಳಿಸಿದಂತೆ
ಬಿರ್ಮಾಳ್ವರು ಮಲಗಿದ ಮಂಚದಲ್ಲೇ ಬೆಚ್ಚಿಬಿದ್ದರು"[೧೧]

ಈಗಿನ ಪರಿಸ್ಥಿತಿಯಲ್ಲಿ ಸತ್ಯನಾಪುರದ ಅಜ್ಜರಿಗೀಗೆದ್ದು ಓಡಾಡಲು ಆಗುತ್ತಿಲ್ಲ ತೆಂಕಣ ಮನೆಯ ಹಗ್ಗ ಇಳಿಸಿದ ಬೆಳ್ಳಿಮಾಡಕ್ಕೆ ಬಂದರು. ಹೀಗೆ ಕಥಾನಕವು ಮುಂದುವರಿಯುತ್ತದೆ. ಈ ಸಿರಿ ಕಾವ್ಯವನ್ನು ಆರಾಧಿಸುವಂತ ತಳಸಮುದಾಯಗಳು ಇಂದಿಗೂ ಹಸಿವು, ಬಡತನದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆಗಾಗಿ ಸಿರಿ ಕಾವ್ಯವು ಇಂದಿಗೂ ಪ್ರಸ್ತುತವಾಗಿದೆ. ಸಿರಿ ಭಂಟಸಮುದಾಯದ ಕುಲದೈವವಾದರೂ, ತಳಸಮುದಾಯಗಳ ಭಾವನಾತ್ಮಕವಾದ ಸಂಬಂಧಗಳ ದೈವವಾಗಿದೆ.ತಮ್ಮ ಸಾಮಾಜಿಕ ಪರಿಸ್ಥಿತಿಗಳು ಹೇಗೆ ಇದ್ದರು, ಸಿರಿ ದೈವವನ್ನು ಮೈತುಂಬಿಕೊಂಡು, ಮೇಲ್ವರ್ಗದವರ ಬದುಕಿನ ಆಗು-ಹೊಗುಗಳಿಗೆ ಸ್ಪಂದಿಸುವಂತಾಗಿದೆ. ದೈವದ ನೆಲೆಯಲ್ಲಿ ತಮ್ಮ ಬದುಕುಗಳನ್ನು ಸರಿಪಡಿಸಿಕೊಳ್ಳುವ ಬದಲು ತಳಸಮುದಾಯಗಳು ವೈಜ್ಞಾನಿಕವಾಗಿ ಆಲೋಚಿಸ ಬೇಕು.ಶಿಕ್ಷಣ ಕಲಿತು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹೆಮ್ಮರವಾಗಿ ಬೆಳೆಯಬೇಕಾಗಿದೆ.

೬.೪ ಎಲ್ಲಮ್ಮನ ಕಾವ್ಯದಲ್ಲಿ ಹಸಿವಿನ ಲೋಕ

ನಮ್ಮ ಇಡೀ ಜನಪದ ಸಾಹಿತ್ಯದ ಬಹುಭಾಗವೆಲ್ಲ ಮಹಿಳೆಯರ ಬದುಕಗೆ ಸಂಬಂಧಿಸಿದ್ದಿದೆ. ಈ ಸಾಹಿತ್ಯ ಸೃಷ್ಟಿಯ ಹಿಂದೆ ಮಹಿಳೆಯರೇ ಹೆಚ್ಚಿನ ಶ್ರಮ ವಹಿಸಿದ್ದಾರೆ. ಅದರಲ್ಲೂ ಕಥೆ, ಗೀತೆಗಳ ಸೃಷ್ಟಿಯಲ್ಲಿ ಮಹಿಳೆಯರು ಅತ್ಯಂತ ಎಚ್ಚರಿಕೆ, ಸೂಕ್ಷ್ಮ, ಪ್ರತಿಭಟನೆ ಇತ್ಯಾದಿಗಳ ರೂಪದಲ್ಲಿ ಪುರುಷ ಪ್ರಧಾನ ಸಂಸ್ಕತಿಗೆ ಪ್ರತಿಸವಾಲನ್ನೊಡ್ಡುವ ಪ್ರಯತ್ನ ಮಾಡಿದ್ದಾರೆ. ಬಹುತೇಕ ಜನಪದ ಕಾವ್ಯಗಳು ಮಹಿಳೆಯ ಬದುಕಿನ ಸುತ್ತಾ ಹೆಣೆಯಲ್ಪಟ್ಟಿರುತ್ತದೆ. ತನ್ನ ಬದುಕಿನುದ್ದ ಅನುಭವಿಸಿದ ಬಡತನ, ಹಸಿವು, ದೈಹಿಕ, ಮಾನಸಿಕ ಹಿಂಸೆಗಳ ವಿಚಾರಗಳೇ ತುಂಬಿರುತ್ತದೆ. ಈ ಎಲ್ಲಾ ನೋವುಗಳನ್ನು ಹೊರ ಹಾಕಲು ಸಾಧ್ಯವಾದದ್ದು ಈಕಥೆ, ಗೀತೆಗಳ ಮೂಲಕ, ಜಗತ್ತಿನ ಯಾವುದೇ ಸಾಹಿತ್ಯವನ್ನು ನೋಡಿದಾಗ ಅದರ ಮುಕ್ಕಾಲು ಪಾಲು ಮಹಿಳೆಯ ಬದುಕಿನ ಯಾತನೆಯೇ ಆಗಿರುತ್ತದೆ. ಅದರಲ್ಲೂ ತಳಸಮುದಾಯಗಳ ಮಹಿಳೆಯರ ಪಾತ್ರ ದೊಡ್ಡದು. ಹಾಗಾಗಿ ಮಹಿಳೆಯರ ಎದೆಯಾಳದಿಂದ ಹುಟ್ಟಬಂದ ಕಥೆಗಳಲ್ಲಿ ಮಹಿಳೆ ಚಾರಿತ್ರಿಕವಾಗಿ ಅನುಭವಿಸಿದ ನೋವು, ಸಂಕಟ, ಯಾತನೆಗಳ ಜೊತೆಗೆ ಹಸಿವು, ಬಡತನದ ಬಾಳ್ವೆಯೇ ಆಗಿರುತ್ತದೆ.

ಮಹಿಳೆ ಕೇಂದ್ರಿತ ಕಾವ್ಯಗಳಾದ 'ಎಲ್ಲಮ್ಮನ ಕಥೆ' 'ಬಾಲನಾಗಮ್ಮ' 'ಕೆರೆ ಹೊನ್ನಮ್ಮ' ಹೀಗೆ ಇನ್ನೂ ಹಲವಾರು ಕಥನ ಕಾವ್ಯಗಳಲ್ಲಿ ಹಸಿವು ಬಡತನದ ಸ್ಥಿತಿಗತಿಗಳು ಹೇರಳವಾಗಿ ನಮಗೆ ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ 'ಬಾಲನಾಗಮ್ಮನ ಕಥನವನ್ನು ನೋಡಿದಾಗ ಆ ಕಾವ್ಯದ ಆಳದಲ್ಲಿ ಹಸಿವು, ಬಡತನದ ಧಾರುಣ್ಯತೆಯೇ ತುಂಬಿರುತ್ತದೆ.

"ಏಳು ಜನ ಮಕ್ಕಳವರೀಗ್ಹುಟ್ಯರೋ
ಸತ್ತೆವಂತೇರು ಮೂರು ದಾರೀಲಿ
ಅಯ್ಯ ಹೆಣ್ಣುಮಕ್ಕಾಳು ಏಳು ಮಕ್ಕಳವರಿಗ್ಹುಟ್ಯಾ
ಅಯ್ಯ ಹಿರಿಯೋಳೆಂಬುವಳೆ ಚಂದ್ರಸೇನು ಮಾರಾಣಿ
ಅಯ್ಯ ಕಿರಿಯೋಳೆಂಬುವಳೆ ಬಾಲುನಾಗಮ್ಮ
ಅಯ್ಯ ಏಳು ಜನ ನೋಡಿ ಹೆಣ್ಣುಮಕ್ಕಾಳು
ಅಯ್ಯ ಹುಟ್ಟಿದೇಳೇ ದಿನವೆ ತುಂಬೀತು
ಅಯ್ಯ ಏಳೂ ತಿಂಗಾಳು ಅವರೀಗೆ ತುಂಬೀತು
ಏಳೂ ವರುಷಾವೆ ಅವರೀಗೆ ತುಂಬೀತು
ಅಯ್ಯ ಹುಟ್ಟದೇಳು ವರುಷಾಕೆ ತಾಯಿತಂದೆ ಮರಣಾಮ."[೧೨]

ಸತುವಂತೆಯಾದ ಬಾಲುನಾಗಿ ಸಿವಸಿವಾ, ಅಕ್ಕಂದಿರ ಕೇಳಿರಮ್ಮ, ನಾವು ಹಟ್ಟಿದ ಏಳದಿನ ತುಂಬಿ ಏಳ ವರುಷವೆ ಕಳೆಯಿತು, ಏಳು ವರುಷಕೆ

"ತಾಯಿ ತಂದೆ ಮರಣವಾಗಿ ಹೋದ ಮ್ಯಾಲೆ
ಅಮ್ಮ ಇರುಲೆಬಾರದೊ ಇವ ಪಟ್ಟಾಣ
ಅಮ್ಮ ರಾಜಾರಿಲ್ಲಾದ ದೊರಿತಾನ ಆಗೀತೊ
ಅಮ್ಮ ಪುರುಷರಿಲ್ಲಾದ ರಾಜ್ಯಾವೆಆಗೀತೋ
ಅಮ್ಮ ಪಟ್ಟಾಣ ಬೇಡ ನಮಗೀ ಪಟ್ಟಾಣ
ಅಮ್ಮ ಪಟ್ಟಾಣ ಬೇಡಾವೊ ಪಾಳ್ಯ ಬೇಡಾವೊ
ಅಮ್ಮ ಬಿಟ್ಟು ನಡೀರಮ್ಮ ಮತ್ತೊಂದು ಕಾಡೀಗೆ"[೧೩]

ಏನಮ್ಮ ತಂಗಿ ಬಾಲುನಾಗಿ, ಇಂಥ ಮಾತಾಡಬೋದೇನೆ? ತಾಯಿ ತಂದೆ ತೀರ್ಹೋಗಬಟ್ಟರಂದು ಪಟ್ಟಣವನ್ನೇಬಿಟ್ಟು ಪಾಳ್ಯವನ್ನು ಬಿಟ್ಟು

"ಪರರ ಕಾಡಿನ ವಾಸ ಮಾಡುಲೇನೆ ?
ಅಮ್ಮ ಅನ್ನಾವಿಲ್ಲದ ರಾಜ್ಯ ದೊರಿತಾನ
ಅಮ್ಮ ಕಾಡಿನಲ್ಲಿ ಏನು ವಾಸಾವ ಮಾಡುಲಮ್ಮ

ಹಾಗಂದ ಮತೀಗೆ ಸತುವಂತೆಯಾದ ಬಾಲನಾಗಿ, ಕೇಳರಮ್ಮ
ಕರ್ಮ ಕಳಿಯುವಾ ತನಕ ಕಾಡಿನಲ್ಲಿ
ಅಮ್ಮ ಕರ್ಮ ಕಳಿಯಾಲಿ ಧರ್ಮ ಬರಲಿ
ಅಮ್ಮ ಬಿಟ್ಟು ನಡೀರಮ್ಮ ಬಿದರಿಹಿಂಡೆ ಕಾಡಿಗೆ
ಅಮ್ಮ ಆರು ಮಂದಕಧೀರು ಜತೆಗೂಡಿ ಹೊರುಟಾರೊ
ಅಮ್ಮ ಪಟ್ಟಣ ಬಿಡುವಾರು ಪಾಳ್ಯ ಬಿಡುವಾರೋ
ಅಮ್ಮ ಬಿಟ್ಟಿ ಬಂದಾರು ಬಿದರಿಹಿಂಡೆ ಕಾಡೀಗೆ
ಅಮ್ಮ ಬಿದರಿಹಿಂಡೆ ಕಾಡಿನಲ್ಲಿ ಏನ ಮಾಡಾಲಿ"೧೪

ಆರು ಮಂದಿ ಅಕದೀರು ತಂಗಿ ಬಾಲನಾಗಿ ಬಿದರಿಹಿಂಡೆ ಕಾಡಿಗೆ ಕರ್ಕೊಂಡು ಬಂದಿದ್ದೀಯ. ಭೂಮಿ ಮ್ಯಾಲಿದ್ರೆ ಹುಲಿ ಕರಡಿ ಭಯ, ಕಳ್ಳರ ಕಾಟ

"ಅಮ್ಮ ಎಲ್ಲಿ ವಾಸಾವ ನಾವೀಗ ಮಾಡಲಿ
ಅಮ್ಮ ಕಳ್ಳರ ಕಾಟವು ನರುರ ಕಾಟಾವು
ಅಮ್ಮ ಹುಲಿಕರಡಿ ಕಾಟ ನಮ್ಮೀಗೆ ಭಯಮ್ಮ
ಎಲ್ಲಿ ವಾಸಾವ ನಾವೀಗ ಮಾಡಲಿ ?
ಅಯ್ಯ ಏಳೂ ಬಿದರ ಮೆಳೇಯ ಸೇರಿದಾರೊ
ಅಯ್ಯ ಬಿದರಮಳೆಯಲ್ಲಿ ವಾಸಾವೊ
ಅಯ್ಯ ಅನ್ನವಿಲ್ಲಾದೆವನುವಾಸ ಮಾಡಾರೊ
ಅಯ್ಯ ಸತುವಂತೆ ನೋಡೊ ಬಾಲುನಗಮ್ಮ
ಅಯ್ಯ ಆರುಮಂದಕದೀರು ಸಿವನೆ ಎಂದಾರು
ಪಾಸಿ ಜಲ್ಮಾವೊ ಹೆಣ್ಣು ಜಲ್ಮಾವೊ
ಅಯ್ಯ ಬಿದುರಕ್ಕಿ ತಿಂದು ವಾಸ ಮಡಲೇನೆ?
ಬಾಲುನಾಗಿ ಅನ್ನ ಉಂಡು ರಾಜ್ಯವಾಳುತ ಇದ್ದಂಥವ್ರು ಕಾಡಿಗೆ
ಕರಕೊಂಡು ಬಂದು ಬಿದರಕ್ಕಿ ತಿಂದು ವಾಸವನ್ನು ಮಡುಸ್ಥೆ
ಅಮ್ಮ ಸತಿವಂತೆ ಕೇಳೆ ತಂಗಿ ಬಾಲನಾಗಿ
ಅಮ್ಮ ನಮ್ಮ ಕರ್ಮಾವೊ ಕಣೆ ಸಿವನ ಮರ್ಮಾವೊ
ಅಮ್ಮ ಉಟ್ಟ ಸೀರೆಗಾಳು ಹರುದೆ ಹೋದಾವು
ಅಮ್ಮ ಇಟ್ಟಂಥ ಕುಬುಸ ಹರುದೆ ಹೋದಾವು
ತಾಯಿ ಹುಟ್ಟಿದ ನಿರವಣಿಕೆ ವಾಸಾವ ಮಾಡುಲೇನೆ
ಅಮ್ಮ ನರುರು ಕಣಿದಂಗೆ ಇಲ್ಲಿ ಇರಬೌದು

ತಾಯಿ ಮ್ಯಾಲೆ ಸೂರ್ಯ ಚಂದ್ರ ನೋಡುತ್ತ ಇರುವಾರೋ
ಅಮ್ಮ ಯ್ಯಾವ ರೀತಿಲಿ ಮರುವು ಕಲಿಯಾಲಿ ?
ಅಮ್ಮ ಅಕ್ಕ ಏಳೂ ಮರು ಮಂಡೆ ಮಾನಮುಚ್ಚೀರೆ
ಅಮ್ಮ ಕರ್ಮ ಕಳಿಯಾಲಿ ಧರ್ಮ ಸಿಕ್ಕೋದು"೧೫

ಈ ರೀತಿಯಲ್ಲಿ ಏಳು ಮಂದಿ ಅಕ್ಕದ್ದೀರು ಬಿದಿರಮಳೆಯಲ್ಲಿ ವಾಸವನ್ನು ಮಾಡುತ ಇರುವೋರು. ಸತ್ಯವಂತೆಯಾದ ಬಾಲುನಾಗಿ ಆರುಮಂದಿ ಅಕ್ಕಂದಿರು ನೀನು ಮಾತು ಕೇಳಿ ಬಾಲುನಾಗಿ ರಾಜ್ಯವನ್ನು ಬಿಟ್ಟು ಬಂದೆವು. ಅನ್ನ ತಿನ್ನೊದಿಲ್ಲ. ಬಿದರಕ್ಕಿಯನ್ನು ತಿಂದು ವಾಸವ ಮಡಲಾರೆವು

"ಅನ್ನ ನೀರು ಬಿಟ್ಟು ನವು ಪ್ರಾಣ ಬಿಡುತೀವಿ
ಅಮ್ಮ ನಮ್ಮ ದೊಷಾವು ನಿನ್ನೀಗೆ ಇರುಲಮ್ಮ
ಅಯ್ಯ ಆರುಮಂದಿ ಅಕದೀರು ಮಾತಾಡಿ ಮಲಿಗ್ಯಾರೊ
ಅಮ್ಮ ಸತುವಂತೆ ನೋಡೊ ಬಾಲುನಾಗಮ್ಮ"೧೬

ಸಿವಸಿವ ತಂದೆ ತೀರಿದ, ತಾಯಿ ತೀರಿದರೂಂತ ಕರಕೊಂಡು ಈ ಬಿದಿರ್ಥಿಂಡೆ ಕಾಡಿಗೆ ಬಂದಿದ್ದಾಯ್ತು. ಬಿದಿರ್ಥಿಂಡೆ ಕಾಡಿನಲ್ಲಿ ನಂ ಅಕ್ಕಂದೀರು ಅನ್ನ ನೀರನ್ನು ಬಿಟ್ಟು ಮಾಕಾಡೆ ಮಲಿಗವ್ರೆ. ಆ ದೋಷವೆಲ್ಲ ನಿನಗೆ ಬಂದಂತಾಯ್ತು. ಯಾವ ರೀತಿಲಿ ಕರುಮಕಳೆಯಲಿ ಬಾಲನಾಗಮ್ಮ ಈ ಕಥನವು ಬಹಳ ಪ್ರಸಿದ್ದವಾದ ಕಥೆಯಾಗಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದಲೆಲ್ಲಾ ರೂಢಿಯಲ್ಲಿದೆ. ಸ್ತ್ರೀಯರಿಗೆ ಹಾಗೂ ಸ್ತ್ರೀ ಮನಸ್ಸಿನವರಿಗೆ ಪ್ರಿಯವಾದ ಕಥೆ, ಇದರಲ್ಲಿ ರಾಜರಾಣಿ ನಗರದ ಹೆಸರುಗಳಿದ್ದರೂ ಸಾಮಾಜಿಕ ಅಂಶ ಹೇರಳವಾಗಿದೆ. ಈ ಕಾವ್ಯದಲ್ಲಿ ಏಳುಜನ ಹೆಣ್ಣುಮಕ್ಕಳು ಹುಟ್ಟಿದ ಏಳುವರ್ಷಕ್ಕೆ ತಾಯಿ ತಂದೆಯ ವರನ್ನು ಕಳೆದುಕೊಳ್ಳುತ್ತಾರೆ. ಅವರದು ರಾಜನಿಲ್ಲದ ಪಟ್ಟಣವಾಗುತ್ತದೆ. ಅಂತ ರಾಜ್ಯದಲ್ಲಿ ಇರಬಾರದೆಂದು ಬಾಲನಾಗಮ್ಮ ತನ್ನ ಆರು ಮಂದಿ ಅಕ್ಕಂದಿರನ್ನು ಬಿದಿರು ಹಿಂಡು ಕಾಡಿಗೆ ಕರೆದುತರುತ್ತಾಳೆ. ಅಲ್ಲಿ ಬಿದಿರು ಮಳೆಯಲ್ಲಿ ವಾಸವಾಗುತ್ತದೆ. ಊಟ ಬಟ್ಟೆಗೆ ತೊಂದರೆಯಾಗುತ್ತದೆ. ಮಾನರಕ್ಷಣೆಗೆ ಕಷ್ಟವಾಗಿ ಆ ಕಾಡಿನಲ್ಲಿ ಅನ್ನ ನೀರು ಬಿಟ್ಟು ಅಕ್ಕಂದಿರು ಬಾಳಬೇಕಾಗುತ್ತದೆ. ಇದೇ ಪರಿಸ್ಥಿತಿ ಇವತ್ತಿನ ಗ್ರಾಮಭಾರತದಲ್ಲಿ ಕಾಣುತ್ತೇವೆ. ಆಗಾಗಿ ಈ ಕಾವ್ಯ ಇವತ್ತಿಗೂ ಪ್ರಸ್ತುತವಾಗಿದೆ. ಜನಪದರು ಇಲ್ಲಿ ಬಾಲನಾಗಮ್ಮನನ್ನು ರಾಜ, ರಾಣಿಯ ಮಗಳೆಂದು ಹಾಡು ಕಟ್ಟಿದ್ದಾರೆ. ಆದರೆ ಬಾಲನಾಗಮ್ಮ ಮೇಲುನೋಟಕ್ಕೆ ರಾಜ ರಾಣಿಯ ಮಗಳಾದರೂ ಸಾಮಾಜಿಕ ನೆಲೆಯಲ್ಲಿ ತಳಸಮುದಾಯದ ಹೆಣ್ಣು ಮಗಳ ಹಸಿವು, ಬಡತನ ನೋವು, ತೊಳಲಾಟಗಳನ್ನು ಬಾಲನಗಮ್ಮನ ಪಾತ್ರದಲ್ಲಿ ಕಾಣಬಹುದು. ಇಂದಿನ ನಮ್ಮಹಳ್ಳಿಗಳ ಕೆಳವರ್ಗದ ಹೆಣ್ಣುಮಕ್ಕಳ ಬದುಕು ಬಾಲನಾಗಮ್ಮನ ಬದುಕಿಗಿಂತ ಭಿನ್ನವೇನು ಇಲ್ಲ? ಈ ಕಾವ್ಯವನ್ನು ಹಾಸನ ಜಿಲ್ಲೆಯ

ವೃತ್ತಿಗಾಯಕ ಗೊಲ್ಲರ ಸೂರಪ್ಪ ಹಾಡಿದ್ದಾನೆ. ಈ ಕಾವ್ಯವನ್ನು ವಿವರವಾಗಿ ಹಾಡುವ ಕಲಾವಿದರಿದ್ದಾರೆ. ಇವರೆಲ್ಲ ಕೆಳವರ್ಗವರಾಗಿದ್ದು, ತಮ್ಮ ಹೊಟ್ಟೆ ಬಟ್ಟೆಗೆ ಈ ವೃತ್ತಿಯಲ್ಲಿ ತೊಡಗಿದ್ದಾರೆ.

ಜಗತ್ತಿನಲ್ಲಿ ಮೌಖಿಕ ಸಾಹಿತ್ಯದಷ್ಟು ವಿಸ್ತಾರವಾದ ಸಾಹಿತ್ಯ ಮತ್ತೊಂದು ಇಲ್ಲ. ಒಬ್ಬೊಬ್ಬ ಜನಪದನ ಬದುಕು ಒಂದೊಂದು ಮಹಾಕಾವ್ಯ ಇದ್ದಂತೆ. ಅರಮನೆಯ ಸಂಸ್ಕೃತಿಗಿಂತ ತಳಸಮುದಾಯಗಳ ಸಂಸ್ಕೃತಿ ವಿಭಿನ್ನ, ವಿಶಿಷ್ಟತೆಯುಳ್ಳದಾಗಿದೆ. ಈ ನೆಲದ ಮಹಿಳೆಯರ ಬದುಕಿನ ಸಂಕೀರ್ಣತೆ, ಬೇರೆ ಯಾವ ದೇಶದ ಜನಪದ ಸಾಹಿತ್ಯದಲ್ಲೂ ಕಾಣಲಾಗುವುದಿಲ್ಲ ಎಂಬ ನಂಬಿಕೆ ನನ್ನದಾಗಿದೆ. ಪುರಾಣ ಪ್ರಸಿದ್ದವಾದ ಎಲ್ಲಮ್ಮನ ಕಥೆ ಇಂದಿಗೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿರುವಂತೆ ದೇವತೆ, ಎಲ್ಲಮನ ಹುಟ್ಟು ಬೆಳವಣಿಗೆ ಜಮದಗ್ನಿಯೊಡನೆ ವಿವಾಹವಾಗುವ ಪ್ರಸಂಗವನ್ನು ರೂಪಿಸುತ್ತದೆ. ಚೌಡಿಕೆ ಸುಬ್ಬಯ್ಯ ವೃತ್ತಿಗಾಯಕ ಹಾಡಿರುವ ಎಲ್ಲಮ್ಮನ ಕಥೆ ಪದ್ಯಕ್ಕಿಂತ ಹೆಚ್ಚಾಗಿ ಗದ್ಯದಲ್ಲಿದೆ. ಇದರಲ್ಲಿ ಧಾರ್ಮಿಕ ಹಿನ್ನೆಲೆ ದಟ್ಟವಾಗಿದೆ. ಎಲ್ಲಮ್ಮನ ಕಥೆ ಪ್ರಾರಂಭವಾಗುತ್ತದೆ. ಈ ಎಲ್ಲಮ್ಮ ಅಂತಂದ್ರೆ ಈ ಕಲಿಯುಗದಲ್ಲಿ ಹೇಗೆ ಉತ್ಪತ್ತಿಯಾದಳು? ಯಾರ ಮಗಳು?

"ಇವಳ ಜಾತಿಭೇದವ ಸ್ವಾಮಿ ಕಂಡವರಿಲ್ಲ
ಮಂಗಳವಾರದವಳೆ ಮಾಯಕತಾವ್ವ
ಬುಧುವಾರದವಳೆ ನೀ ಬುದ್ದಿವಂತಲ್ಲೆ
ಬೆಸ್ತವಾರದವಳೇ ನೀ ವರಕಲಕ್ಷ್ಮಿ ಕಾಣೆ
ಶುಕ್ರವಾರದವಳೆ ನೀ ಸೂತ್ರಲಕ್ಷ್ಮಿ ಕಾಣೆ
ಸನಿವಾರದವಳೆ ನೀ ಪಂಚಂಗಿದೇವಿ
ಆಯತವಾರದವಳೆ ನೀ ಆದಿಲ್ಕಷ್ಮವ್ವ
ಸೋಮವಾರದವಳೆ ನೀ ಸರಸ್ವತಿಯಾದೆ"[೧೭]

ಒಂದು ಗ್ರಾಮದಲ್ಲಿ ಒಬ್ಬ ಬಡ ಬ್ರಾಹ್ಮಣ ಯಾವುದೋ ಊರಿನಿಂದ ಬಂದು ಸೇರಿಕೊಂಡಿದ್ದ. ಆತನಿಗೆ ಪುತ್ರ ಸಂತಾನವಿರಲಿಲ್ಲ. ಆ ಬಡಬ್ರಾಹ್ಮಣ ಒಂದು ದಿನ ತೀರಿಕೊಂಡ, ಕಾಲವಾಗಿ ಹೊಂಟೋದ. ಊರ ಮನೆಯಲ್ಲಿ ಬಂದು ಆಗ ಪಟೇಲ್ರು, ಶಾನುಭೋಗ್ರು ಇದ್ದು, ಸ್ವಾಮಿ ನಾವ್ರು ಯಾವುದೋ ಊರಿನಿಂದ ಬಂದು ನೀಂಗ್ರಾಮದಲ್ಲಿ ಸೇರಕೊಂಡ್ವಿ ಆಪತ್ತಿನಿಂದಕಾಪಾಡಿದ ನೀವ್ರು ತಂದೆ ತಾಯಿಗಳಾಗಿದ್ರಿ, ನನ್ನ ಪತಿಯಾಗಿದ್ದವರು ಕಾಲವಾಗಿ ಹೋದ್ರು ನನಗೆ ಎರಡ ಗಾಡಿ ಹಳ್ಳಿ ಸೌದೆ, ಒಂದು ಗಾಡಿ ಸಿರಿಗಂಧುದ ಸೌದೆಕೊಡಬೇಕು. ಅಂತೇಳಿ ಹೆಂಡತಿಯಾಗಿದ್ದವಳು ಹೋಗಿ ಕೇಳತಿದ್ದಾಳೆ. ಸೌದೆ ಹದಮಾಡಿ ಗಂಡನ್ನ ಹೋತ್ಕೊಂಡು ಹೋಗು ಕಾಲಕ್ಕೆ ಅಲ್ಲಿಗೆ ಎಲ್ಲಮ್ಮ ಬಂದ್ಲು. ಒಂಬತ್ತೊರುಸುದ ಬಾಲೆ. ಗಂಗಾಮಾತೆ ಮಗಳು.

ಈಸ್ವುರ ವರದಿಂದ ಹುಟ್ಟಿದಂಥವಳು. ಅಮ್ಮ ಯಾತಕ್ಕೆ ನಾಲ್ವರು ಹೊತ್ಕೊಂಡ ಹೋಯ್ತಾರೆ? ಒಬ್ರೊ ಗಡಗೆ ಹಿಡಕೊಂಡ ಹೊಯ್ತಾರೆ? ಏನ ವಿಚಾರ ಎಂದು ಕೇಳಿದ್ಲು ಅಮ್ಮ ಒಬ್ಬ ಬಡ ಬ್ರಾಹ್ಮಣ. ಈ ಗ್ರಾಮದಲ್ಲಿ ಬಂದು ಸೇರಕೊಂಡಿದ್ದ. ಕಾಲವಾಗಿ ಹೊರಟೋದ. ಅದಕ್ಕೆ ಗ್ರಾಮದವರೆಲ್ಲ ಸೇರಬುಟ್ಟು ಅವ್ನ ಸುಯೊದ್ನ ಮಡೋದಕೆ ಹೋಗತಾವ್ರೆ. ಓಹೋ ಇರಬೌದು. ಸಾಯಂಕಾಲ ಬಂದು ಈ ಮಗು ಮಲೀಕಂಡು ಯೋಚ್ನೆಮಾಡತು. ನಾನು ಒಬ್ಬು ತಾಯಿಗೆ ಒಬ್ಬು ಮಗಳು. ಯಾರಗಾರು ಕೊಟ್ಟು ಲಗ್ನ ಮಾಡುದ್ರೆ ಈ ಮಧ್ಯೆ ಕಾಲದಲ್ಲಿ ನನಗಂಡ ಸತ್ತೋಗಬುಟ್ಟೆ

"ನಾನು ಮುಂಡೆ ಆಗಬುಡತೀನಲ್ಲ
ಅಂತ ಯೋಚ್ನೆ ಮಾಡಬುಟ್ಟು
ಸಾವಿಲ್ಲದ ಗಂಡುನ್ನ ನಾನು ಸೇರಬೇಕಯ್ಯ
ರಾಮ ಸೀತಾರಾಮ ರಘುರಾಮ ಅಯೋಧ್ಯಾರಾಮಾ"[೧೮]

ಹೀಗೆ ಎಲ್ಲಮ್ಮನ ಕಥೆಯು ಮುಂದುವರಿಯುತ್ತದೆ. ಕೆಳವರ್ಗದ ಹೆಣ್ಣುಮಗಳಾದ ಎಲ್ಲಮ್ಮ ಸಾವಿಲ್ಲದ ಗಂಡನನ್ನು ಮದುವೆಯಾಗಲು ಏಳುಗುಡ್ಡ ದಾಟಿ ಸೌದತ್ತಿ ಗ್ರಾಮಕ್ಕೆ ಬರುತ್ತಾಳೆ. ಅಲ್ಲಿ ಮಾತಂಗಿ ಮನೆಗೆ ಬರುತ್ತಾಳೆ. ತನ್ನ ಮನೆಗೆ ಬಂದ ಎಲ್ಲಮ್ಮನನ್ನು ಮಾತಂಗಿ ನೀನು ಯ್ಯಾರು? ಎಂದು ಕೇಳಿದಾಗ 'ಸಾವಿಲ್ಲದ ಗಂಡನ್ನ ನನಿಗೆ ತೋರುಬೇಕವ್ವ' ಎಂದು ಹೇಳುತ್ತಾಳೆ. ಮುಂದೆ ಎಲ್ಲಮ್ಮ ಜಮದಗ್ನಿಯನ್ನು ಮದುವೆಯಾಗುತ್ತಾಳೆ. ಈ ಕಥಾನಕವನ್ನು ಎಲ್ಲಮ್ಮನ ಭಕ್ತರು ಹಾಡಿಕೊಂಡು ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಎಲ್ಲಮ್ಮನ ಕಥೆಯು ಧಾರ್ಮಿಕ ನೆಲೆಯಲ್ಲಿ ಕಂಡುಬಂದರು ಎಲ್ಲಮ್ಮನನ್ನು ಆರಾಧಿಸುವ ತಳಸಮುದಾಯಗಳು ಇವತ್ತಿಗೆ ಹಸಿವು, ಬಡತನದಿಂದ ಮುಕ್ತಗೊಂಡಿಲ್ಲ. ಕರ್ನಾಟಕದ ಧಾರ್ಮಿಕ ಸಂಪ್ರದಾಯಕ್ಕ ಸೇರಿದ ವಿಶಿಷ್ಟ ವೃತ್ತಿ ಗಾಯಕರಾದ ಚೌಡಿಕೆಯವರು ಸವದತ್ತಿ ಎಲ್ಲಮ್ಮನ ಭಕ್ತರಾಗಿದ್ದಾರೆ. ಕರ್ನಾಟಕದ ರಾಯಚೂರು, ಬೆಳಗಾವಿ, ಬಳ್ಳಾರಿ ಧಾರವಾಡ, ತುಮಕೂರು ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ವ್ಯಾಪಕವಾಗಿಯೂ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಅಪರೂಪಕ್ಕೂ ಚೌಡಿಕೆಯವರು ಕಂಡುಬರುತ್ತಾರೆ. ಈ ಜಿಲ್ಲೆಗಳಲ್ಲಿ ವಾಸಮಾಡುವ ಎಲ್ಲಮ್ಮನ ಭಕ್ತರು ತಳಸಮುದಾಯದವರಾಗಿದ್ದು, ಇವತ್ತಿಗೂ ಅವರ ಬದುಕು ದಾರುಣ್ಯತೆಯಿಂದ ಕೂಡಿದೆ.

❖❖❖

ಅಧ್ಯಾಯ : ಏಳು

ಸಮಾರೋಪ

ಅಧ್ಯಯನದ ಫಲಿತಗಳು ಮತ್ತು ಸಾಧ್ಯತೆಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ: ಏಳು

ಸಮಾರೋಪ

ಜಾನಪದ ಮಾನವನ ಜೀವನದ ಸರ್ವಮುಖ ಕ್ರಿಯೆಗಳ ಅಭಿವ್ಯಕ್ತಿಯ ಸಮೀಕೃತ ರೂಪ. ಸಂಸ್ಕೃತಿಯ ಜೀವಂತ ಪಳೆಯುಳಿಕೆ, ಈ ಪಳೆಯುಳಿಕೆಗಳ ವಿವಿಧ ಮುಖದ ವಿಶ್ಲೇಷಣೆ ಮಾನವ ಜನಾಂಗದ ಸಮಗ್ರ ವಿಕಾಸ ವಿವೇಚನೆಗೆ ನೆರವಾಗಬಲ್ಲದು. ಬಹುಸಂಸ್ಕೃತಿಗಳ ಶ್ರಮದ ಮೇಲೆ ಕಟ್ಟಿಕೊಂಡ ರಾಜ ಸಂಸ್ಕೃತಿಗೆ ದೀರ್ಘಕಾಲದ ಇತಿಹಾಸವಿದೆ. ಪ್ರಭುಗಳ ವೈಭವದ ಚರಿತ್ರೆಯಲ್ಲಿ ಬಹುಸಮುದಾಯಗಳ ಬದುಕು ಛಿದ್ರವಾಗಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ನಮ್ಮ ದೇಶದ ಮಹಾಕಾವ್ಯಗಳಾದ ರಾಮಾಯಣ ಮಹಾಭಾರರದ ಕಾಲದಿಂದಲೂ ಇದು ಮುಂದುವರಿದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ತಳಸಮುದಾಯಗಳ ಬದುಕಿನ ಎಲ್ಲಾ ಮಗ್ಗುಲುಗಳನ್ನು ಚಿತ್ರಿಸುವ ಜನಪದ ಕಾವ್ಯಗಳನ್ನು ಮೂಲೆಗುಂಪು ಮಾಡಿ, ರಾಮಾಯಣ ಮತ್ತು ಮಹಾಭಾರತಗಳು ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವಂಥ 'ಮಹಾಕಾವ್ಯಗಳು' ಎಂಬ ಸಾರ್ವತ್ರಿಕ ಅಭಿಪ್ರಾಯ ನಮ್ಮದಾಗಿದೆ. ಇಡೀ 'ಭಾರತಕ್ಕೆ ಒಂದು ಸಂಸ್ಕೃತಿ ಎಂಬ ಏಕಮುಖೀ ಚಿಂತನೆಯೂ ಇದಕ್ಕೆ ಕಾರಣವಿರಬಹುದು. ಆದರೆ ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ. ಅದರಲ್ಲೂ ಭಾರತದಂಥ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂ ಪ್ರದೇಶವಾಗಿದ್ದು, ಕೆಲವು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತಿದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು, ಅಲ್ಲಿನ ಜನ, ಅವರ ಆಚಾರ ವಿಚಾರಗಳು ರೂಢಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ನೂರಾರು ಸಂಸ್ಕೃತಿ ವಿಶೇಷಗಳು ನಮ್ಮ ಕಣ್ಣಮುಂದೆ ಮೂಡುತ್ತದೆ.

ನೆಲದಗುಣ ಪಡೆದ ಆಯಾ ವರ್ಗಗಳ ಉಸಿರಿನೊಡನೆ ಬೆಳೆದು ಬಂದ ಸಾಂಸ್ಕೃತಿಕ ವಿಶೇಷಗಳ ಹಲವು ಘಟಕಗಳೇ 'ಭಾರತೀಯ ಸಂಸ್ಕೃತಿಯ ಜೀವಕೋಶಗಳು. ಈ ನಂಬಿಕೆಯ ಹಿನ್ನೆಲೆಯಲ್ಲಿ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಮ್ಮ ಜನಪದ ಮಹಾಕಾವ್ಯಗಳ

ಅಧ್ಯಯನ ಮುಖ್ಯವಾಗುತ್ತವೆ. ರಾಮ, ಕೃಷ್ಣ, ಶಿವ ಮುಂತಾದ ಅಖಿಲ ಭಾರತದ ಮಟ್ಟದ ದೈವಗಳಂತೆಯೇ, ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಕುಮಾರರಾಮ, ಮಾಳಿಂಗರಾಯ, ಗಾದ್ರಿಪಲ, ಸೇವಾಲಾಲ್ ಇವರಂಥ ಸ್ಥಳೀಯ ಸಾಂಸ್ಕೃತಿಕ ವೀರರು ನಮ್ಮ ಅಧ್ಯಯನಕ್ಕೆ ಮುಖ್ಯ ರಾಗಬೇಕು. ಇವರ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಒಳಪದರವನ್ನು ಹಾಗೂ ಮರೆತ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದಂಥವು ರಾಜಮಹಾರಾಜರ ಆಳ್ವಿಕೆಯ ವಿಧಾನಗಳೇ ನಮ್ಮ ಭವ್ಯ ಇತಿಹಾಸ ಎಂದು ಸಾರುತ್ತ ಬಂದಿರುವ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ ಕೆಲಸವಾಗಬೇಕಾಗಿದೆ.

ನನ್ನ ಅಧ್ಯಯನದ ವಿಷಯ 'ಜನಪದ ಮಹಾಕಾವ್ಯಗಳಲ್ಲಿ ಹಸಿವಿನ ಕಥನ' ಎಂಬುದಾಗಿದೆ. ಈ ವಿಷಯದ ಅಧ್ಯಯಕ್ಕೆ ಜನಪದ ಕಾವ್ಯಗಳಾದ ಮಂಟೇಸ್ವಾಮಿ, ಮಲೆಮಾದೇಶ್ವರ, ಜುಂಜಪ್ಪನ ಕಾವ್ಯ ಮೈಲಾರಲಿಂಗ ಕಾವ್ಯ, ಎಲ್ಲಮ್ಮನ ಕಾವ್ಯ, ಸಿರಿ ಪಾಡ್ದನ ಕಾವ್ಯಗಳನ್ನು ಮೂಲವಾಗಿ ಇಟ್ಟುಕೊಳ್ಳಲಾಗಿದೆ.. ಜೊತೆಗೆ ಹಸಿವಿಗೆ ಸಂಬಂಧಿಸಿದಂತೆ ಚರಿತ್ರೆಯ ಪ್ರಮುಖ ಕೃತಿಗಳು, ವಿದೇಶಿಯ ಲೇಖನಗಳು, ಸಮಕಾಲೀನ ಬರಹಗಾರರ ಕೃತಿಗಳೆಲ್ಲ ಆಧಾರವಾಗಿಟ್ಟುಕೊಂಡು ಸೂಕ್ಷ್ಮವಾಗಿ ಅಭ್ಯಸಿಸಿ 'ಹಸಿವಿನ ಧಾರುಣ್ಯತೆಯನ್ನು ತಳಸಮುದಾಯಗಳ ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಅಧ್ಯಯನದಲ್ಲಿ ಎಂಟು ಅಧ್ಯಾಯನಗಳನ್ನಾಗಿ ಮಾಡಿಕೊಳ್ಳಲಾಗಿದೆ.

ಮೊದಲನೇ ಅಧ್ಯಯನದಲ್ಲಿ ಅಧ್ಯಾಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಸ್ವರೂಪವನ್ನು ಕುರಿತು ಹೇಳಲಾಗಿದೆ.

ಎರಡನೇ ಅಧ್ಯಯನದಲ್ಲಿ ಜನಪದರ ಹಸಿವಿನ ಅರ್ಥ, ವ್ಯಾಖ್ಯಾನ, ತತ್ವ ಕುರಿತು ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ದೇಶಿ ಕಾವ್ಯಗಳಾದ ರಾಮಾಯಣ, ಮತ್ತು ಮಹಾಭಾರತದಲ್ಲಿ ಹಸಿವಿನ ಸಂಕ್ಷಿಪ್ತ ನೋಟ ಎಂಬ ವಿಷಯವನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಹಸಿವಿನ ದಲಿತ ನೆಲೆ ಎಂಬ ಶೀರ್ಷಿಕೆ ಅಡಿಯಲ್ಲಿ ಜನಪದ ಮಹಾಕಾವ್ಯಗಳಾದ 'ಮಂಟೇಸ್ವಾಮಿ, ಕಾವ್ಯ' ಹಾಗೂ 'ಮಲೆಮದೇಶ್ವರ' ಕಾವ್ಯಗಳನ್ನಿಟ್ಟು ಕೊಂಡು ಅವುಗಳಲ್ಲಿ ಕಂಡು ಬರುವ ಹಸಿವಿನ ಹಪಹಪಿಕೆಯನ್ನು ಸ್ತ್ರೀ ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಹಸಿವಿನ ಪಶುಪಾಲಕ ನೆಲೆ ಎಂಬ ಶೀರ್ಷಿಕೆ ಅಡಿಯಲ್ಲಿ ಜನಪದ ಮಹಾಕಾವ್ಯಗಳಾದ 'ಜುಂಜಪ್ಪನ ಕಾವ್ಯ' ಹಾಗೂ 'ಮೈಲಾರಲಿಂಗ' ಕಾವ್ಯಗಳೊಳಗಿನ ಹಸಿವಿನ ನೋಟಗಳನ್ನು ಗುರುತಿಸಿ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಹಸಿವಿನ ಲಿಂಗ ಸಂಬಂಧಿ ನೆಲೆ ಎಂಬ ಶೀರ್ಷಿಕೆಯಲ್ಲಿ ಜನಪದ ಮಹಾಕಾವ್ಯಗಳಾದ 'ಎಲ್ಲಮ್ಮನ ಕಾವ್ಯ' ಹಾಗೂ 'ಸಿರಿ ಪಾಡ್ದನ' ಕಾವ್ಯಗಳಲ್ಲಿ ಕಂಡುಬರುವ ತಳಸಮುದಾಯಗಳ ಹಸಿವಿನ ಹಪಹಪಿಕೆಯನ್ನು ಸ್ತ್ರೀ ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಈ ಒಟ್ಟು ಕಾವ್ಯಗಳ ಅಧ್ಯಯನದಿಂದ ತಿಳಿದುಬಂದ ಹಸಿವಿನ ವಿವಿಧ ನೆಲೆಗಳು ಹಾಗೂ ಹಸಿವಿನ ಪರಿಣಾಮಗಳು ಮತ್ತು ಸಂಶೋಧನೆಯ ಫಲಿತಗಳು ಮತ್ತು ಸಾಧ್ಯತೆಗಳು ಕುರಿತು ಚರ್ಚಿಸಲಾಗಿದೆ.

ಅಧ್ಯಯನದ ಫಲಿತಗಳು ಮತ್ತು ಸಾಧ್ಯತೆಗಳು

ನಮ್ಮ ಸಮಾಜ ಬಹು ಸಮುದಾಯಗಳಿಂದ ಕೂಡಿದೆ. ಈ ಬಹುಸಮುದಾಯಗಳ ಸಂಸ್ಕೃತಿಯೊಳಗೆ ಬಹುದೈವಗಳ ಆರಾಧನೆಯನ್ನು ಕಾಣುತ್ತೇವೆ. "ಸಾವಿರಾರು ವರ್ಷಗಳಿಂದ ಈ ಸಮುದಾಯಗಳು ತಮ್ಮ ಇಷ್ಟದ ದೈವಗಳನ್ನು ಆರಾಧಿಸುತ್ತಾ ಬಂದಿದ್ದಾರೆ. ತಮ್ಮ ಬದುಕಿನ ಎಲ್ಲಾ ಆಗುಹೋಗುಗಳಿಗೆ ಈ ದೈವಗಳೇ ಕಾರಣ ಎಂಬ ನಂಬಿಕೆಯನ್ನು ಈ ಸಮುದಾಯಗಳು ಇವತ್ತಿಗೂ ಇಟ್ಟುಕೊಂಡಿದೆ. ಆ ಸಮುದಾಯಗಳ ಏಳ್ಗೆ, ಯಶಸ್ಸನ್ನು ಬಯಸಿದ ವ್ಯಕ್ತಿಗಳೇ ಕಾಲಾಂತರಗಳಲ್ಲಿ ದೈವಗಳಾಗಿ ರೂಪುಗೊಂಡಿರುವುದನ್ನು ಕಾಣುತ್ತೇವೆ. ಈ ವ್ಯಕ್ತಿಗಳು ಸಾಮಾನ್ಯರ ನಡುವೆ ಹುಟ್ಟಿ ಅಸಮಾನ್ಯರಾಗಿ ಬೆಳೆದದ್ದು ವಿಸ್ಮಯ. ಈ ಅಸಮಾನ್ಯ ವ್ಯಕ್ತಿಗಳು ಅಯಾಯ ಸಮುದಾಯಗಳ ಸಾಂಸ್ಕೃತಿಕ ವೀರರಾಗಿ (cultural hero) ಕಂಡುಬರುತ್ತಾರೆ. ಈ ಮಹಾಪುರುಷರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಸಮುದಾಯಗಳ ಪರನಿಂತು ತಮ್ಮ ಬದುಕಿನುದ್ದಕ್ಕೂ ಹೋರಾಟ ಮಾಡಿದವರು. ಹಾಗೂ ಸಾವಿರ ವರ್ಷಗಳ ಹಿಂದೆ ಸಮುದಾಯಗಳ ನಡುವೆ ಸಾಮರಸ್ಯವನ್ನುಂಟು ಮಾಡುವುದು ಜಾತಿ ಮತ, ಧರ್ಮ, ಲಿಂಗ ಇವುಗಳ ನಡುವೆ ಏಕತೆಯನ್ನು ಉಂಟು ಮಾಡಲು ಬಯಸುತ್ತದೆ. ತಳವರ್ಗದ ಸಮುದಾಯಗಳೆಲ್ಲ ದುಡಿಯುವ ವರ್ಗವಾಗಿದೆ. ಇಲ್ಲಿಯ ತನಕ ಈ ಕೆಲವರ್ಗದ ಸಮುದಾಯಗಳು ಮೇಲ್ವರ್ಗದವರ ಉನ್ನತಿಗೆ ತಮ್ಮ ಶ್ರಮ, ಪ್ರತಿಭೆಯನ್ನು ವ್ಯಯಮಾಡಿದ್ದು ಇತಿಹಾಸದುದ್ದಕ್ಕೂ ಕಾಣಬಹುದು."[1] ಕೆಳಸಮುದಾಯದ ಶ್ರಮದಿಂದಲೇ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡ ಪ್ರಭುತ್ವಶಾಹಿವರ್ಗ ಈ ಸಮುದಾಯಗಳ ಉನ್ನತಿಗೆ ಅಭಿವೃದ್ಧಿಗೆ ಸಹಕರಿಸಲೇ ಇಲ್ಲ. ದುಡಿಯುವ ವರ್ಗಗಳ ಶ್ರಮದ ಮೇಲೆ ತಮ್ಮ ಅಧಿಕಾರ, ರಾಜ್ಯಗಳ ವಿಸ್ತಾರ, ಅದಕ್ಕೆ ತಕ್ಕಂತೆ ತಮ್ಮ ವೈಭವದ ಚರಿತ್ರೆಯನ್ನು ರೂಪಿಸಿಕೊಂಡು ಬಂದಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣುತ್ತೇವೆ. =ಬಹಳ ವಿಸ್ತಾರವಾದ ದುಡಿಯುವ ವರ್ಗಗಳ ಬದುಕು, ಪ್ರಭುತ್ವಶಾಹಿಗಳ ಹಿಡಿತದಲ್ಲಿ ಚೂರು ಚೂರು ಆಗಿರುವುದನ್ನು ಕಾಣುತ್ತೇವೆ. ಈ ವಿಚಾರಗಳು ಚರಿತ್ರೆಯ ಪುಟಗಳಲ್ಲಿ ಮೂಡಿಬಾರದಿರುವುದೇ ಭಾರತೀಯ ಇತಿಹಾಸದ ದುರಂತದ ಕಥೆಯಾಗಿದೆ. ಪ್ರತಿಯೊಬ್ಬ

ರಾಜ ಸಾಮ್ರಾಜ್ಯ ವಿಸ್ತರಣೆ, ಅಧಿಕಾರ, ಯುದ್ಧಗಳ ನಡುವೆ ಕೆಳವರ್ಗಗಳ ಬದುಕಿನ ಧಾರುಣ್ಯತೆಯ ಕಡೆಗೆ ಗಮನ ಹರಿಸಲಿಲ್ಲ. ಎಲ್ಲಾ ರೀತಿಯ ಶೋಷಣೆಗಳೊಂದಿಗೆ ಕೆಳಸಮುದಾಯಗಳು ಸಾಮ್ರಾಜ್ಯಶಾಹಿಗಳ ಕಣ್ಮರೆಯೊಳಗೆ ಕತ್ತಲಿನ ಚರಿತ್ರೆಯಾಗಿ ಉಳಿದು ಬಿಟ್ಟವು. ಆ ಕತ್ತಲಿನ ಚರಿತ್ರೆಯೊಳಗೆ ನೊಂದು ಬೆಂದ ಕೆಳಸಮುದಾಯಗಳು ತಮ್ಮ ಪಾಡುಗಳಿಗೆಲ್ಲಾ ಧ್ವನಿಗೂಡಿಸುತ್ತಾ ಆ ಧ್ವನಿಗಳೆಲ್ಲಾ ಹಾಡುಗಳಾಗಿ, ಆ ಹಾಡುಗಳೆಲ್ಲಾ ಜನರ ಪಾಡಾಗಿ, ಆ ಪಾಡುಗಳೆಲ್ಲಾ ಕಥನಗಳಾಗಿ, ಅದು ಮೌಖಿಕ ಸಾಹಿತ್ಯದ ವಿಸ್ತರಣೆಗೆ ಕಾರಣವಾಯಿತು.

ತಮ್ಮ ಸಮುದಾಯದ ಏಳ್ಗೆಗೆ ದುಡಿದವರೆಲ್ಲ ಜನಪದರ ಕಾವ್ಯಕ್ಕೆ ನಾಯಕರಾದರು. ಆ ನಾಯಕರ ಬಗ್ಗೆ ಹಲವಾರು ಕಥೆಗಳು ರೂಪುಗೊಂಡವು. ಆ ಎಲ್ಲಾ ಕಥೆಗಳು ಇವತ್ತು ವಿಸ್ತಾರವಾಗಿ ಜನಪರವಾದ ಮಹಾಕಾವ್ಯಗಳಾಗಿ ಬೆಳೆದವು. ಮಂಟೇಸ್ವಾಮಿ ಕಾವ್ಯ, ಮಲೇ ಮಾದೇಶ್ವರ ಕಾವ್ಯ, ಜುಂಜಪ್ಪ ಕಾವ್ಯ ಮೈಲಾರ ಲಿಂಗಕಾವ್ಯ, ಎಲ್ಲಮ್ಮ ಕಾವ್ಯ, ಸಿರಿಕಾವ್ಯ ಹೀಗೆ ಹತ್ತಾರು ಕಾವ್ಯಗಳು ಸೃಷ್ಠಿಯಾದವು. ಸಾವಿರಾರು ವರ್ಷಗಳ ಹಿಂದೆ ಕೆಳವರ್ಗದ ಸಮಾಜದೊಳಗೆ ರೂಪಗೊಂಡ ಈ ಕಾವ್ಯಗಳು ಅಂದಿನ ಸಮಾಜದ ಕೆಳವರ್ಗದ ಸಮುದಾಯಗಳ ಬಡತನ, ಹಸಿವಿನ ಧಾರುಣ್ಯತೆಗಳನ್ನು ಕಟ್ಟಿಕೊಡುತ್ತವೆ. ಹೀಗೆ ಚರಿತ್ರೆಯೊಳಗೆ ನಿರ್ಲಕ್ಷಕ್ಕೆ ಒಳಪಟ್ಟ ತಳಸಮುದಾಯಗಳ ಬದುಕಿನ ಧಾರುಣ್ಯತೆಗಳನ್ನು ಚಿತ್ರಿಸುವ ಈ ಜನಪದ ಮಹಾಕಾವ್ಯಗಳು ತಳಸಮುದಾಯಗಳ ಹಸಿವಿನ ಚರಿತ್ರೆ ಎಂದರೆ ತಪ್ಪಾಗಲಾರದು. ಸಾವಿರಾರು ವರ್ಷಗಳ ಹಿಂದೆ ರೂಪುಗೊಂಡ ಈ ಕಾವ್ಯಗಳಲ್ಲಿ ಮೂಡಿಬಂದಿರುವ ತಳಸಮುದಾಯಗಳ ಹಸಿವು, ಬಡತನದ ದಾರುಣ್ಯತೆಯು, ಇವತ್ತಿನ ಆಧುನಿಕ ಸಮಾಜದಲ್ಲಿ ಮುಂದುವರಿದುಕೊಂಡು ಹೋಗುತ್ತಿರುವುದು ಶೋಚನಿಯ ಸಂಗತಿಯಾಗಿದೆ.

ಸಮಗ್ರ ರಾಷ್ಟ್ರದ ಅಭಿವೃದ್ಧಿಗೆ ಹೊಸ ಹೊಸ ಯೋಜನೆಗಳನ್ನು ನಮ್ಮ ಸರ್ಕಾರಗಳು ಹಾಗೂ ಅರ್ಥಶಾಸ್ತ್ರಜ್ಞರು ರೂಪಿಸುತ್ತಿಲ್ಲವೆ ಎಂಬ ಪ್ರಶ್ನೆಗಳು ಎಲ್ಲರ ಕಣ್ಣೆದುರು ಬರುತ್ತವೆ. ಇಲ್ಲಿಯ ತನಕ ರೂಪಿಸಿದ ಯೋಜನೆಗಳಿಂದ ಜನಸಮುದಾಯದಕ್ಕೆ ಅನುಕೂಲವಾಗಿದೆಯೇ? ಎಂಬುದನ್ನು ವಿಚಾರ ಮಾಡಬೇಕಾಗಿದೆ. ಅನುಕೂಲವಾಗಿದ್ದರೆ ಸಮಾಜದಲ್ಲಿ ಯಾಕೆ ದಿನದಿಂದ ದಿನಕ್ಕೆ ಗಂಭೀರವಾದಂತ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಪ್ರತಿದಿನ ಸರ್ಕಾರದ ವಿರುದ್ಧ ನಡೆಯುತ್ತಿರುವ ಹೋರಾಟಗಳ ಅರ್ಥವೇನು? ಜನಪರವಾದ ಯೋಜನೆಗಳೆಲ್ಲವೂ ಕಾರ್ಯಗತಗೊಂಡಿವೆಯೇ? ಈ ನಾಡಿನ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅವಶ್ಯಕತೆಗಳು ಪೂರ್ಣಗೊಂಡಿವೆಯೇ ಹೀಗೆ ಹಲವಾರು ಸಮಸ್ಯೆಗಳು ಈ ಅಧ್ಯಯನದಿಂದ ತಿಳಿದುಬರುತ್ತದೆ. ಇವತ್ತು ರೂಪುಗೊಳ್ಳುವ ಯೋಜನೆಗಳು ಕೆಳಸಮುದಾಯಗಳ ತನಕ ಪ್ರಾಮಾಣಿಕವಾಗಿ ತಲುಪಿದರೆ ಎಲ್ಲಾ ಸಮುದಾಯಗಳ ಮೂಲಭೂತ ಸಮಸ್ಯೆಗಳಿಂದ ಮುಕ್ತವಾಗುವ ಸಾಧ್ಯತೆಗಳಿವೆ.

ಹಾಗೆ ನೋಡಿದರೆ ಮಂಟೇಸ್ವಾಮಿ, ಮಾದಪ್ಪ, ಜುಂಜಪ್ಪ, ಮೈಲಾರ ಲಿಂಗ, ಎಲ್ಲಮ್ಮ ಸಿರಿ ಎಲ್ಲರೂ ತಳಸಮುದಾಯಗಳ ಸಾಂಸ್ಕೃತಿಕ ವೀರರಾಗಿದ್ದಾರೆ. ಇವರೆಲ್ಲ ತಮ್ಮ ಸಮುದಾಯಕ್ಕೋಸ್ಕರ ತಮ್ಮ ಜೀವನವನ್ನು ಮುಡಿಪಾಗಿಟ್ಟವರು. ಲೋಕ ಸಂಚಾರ ಕೈಗೊಂಡವರು. ತಮ್ಮ ಬದುಕಿನುದ್ದಕ್ಕೂ ಜನಸೇವೆಯಲ್ಲಿ ತೊಡಗಿದವರು. ಜನರ ಕಷ್ಟ ಸುಖಗಳಿಗೆ ಭಾಗಿಯಾದವರು. ತಮ್ಮ ಬದುಕಿಗಿಂತ, ತಮ್ಮ ಸಮುದಾಯದ ಹಿತಕ್ಕೆ ದುಡಿದವರು. ತಮ್ಮ ಬದುಕಿನುದ್ದಕ್ಕೂ ಪ್ರಾಮಾಣಿಕತೆಯನ್ನು ತೋರಿಸುತ್ತಾ ಎಲ್ಲರಲ್ಲೂ ಜೀವನ ಪ್ರೀತಿ ತುಂಬಿದವರು. ಅಧಿಕಾರಕ್ಕೆ ಆಸೆಪಟ್ಟವರಲ್ಲ. ಆಸ್ತಿವಿಸ್ತಾರದ ವ್ಯಾಮೋಹಕ್ಕೆ ಒಳಗಾದವರಲ್ಲ. ಹಿಂಸೆಯನ್ನು ವಿರೋಧಿಸಿದವರು. "ಸಮಾಜದಲ್ಲಿ ಸಮಾನತೆಯನ್ನು ಬಯಸಿದವರು. ಜಾತಿ, ಧರ್ಮ, ಲಿಂಗಗಳ ನಡುವೆ ಏಕತೆಯನ್ನು ಕಂಡು ಮಾನವತೆಯನ್ನು ಸಾರಿದವರು. ಹಾಗಾಗಿ ಇವತ್ತಿಗೂ ಈ ಕಾವ್ಯಗಳುಸಮುದಾಯಗಳ ಮದ್ಯೆ ಜೀವಂತವಾಗಿ ನಿಂತಿವೆ. ಕಾವ್ಯಗಳ ಅಧ್ಯಯನದಿಂದ ಮೂಡಿಬಂದ ಆಲೋಚನೆಗಳು, ಕರ್ನಾಟಕದ ಇವತ್ತಿನ ಪರಿಸ್ಥಿತಿಗಳಿಗೆ ಉಪಯೋಗದ ದಾರಿಗಳಾಗಬಹುದು ಎಂಬುದು ನನ್ನ ನಂಬಿಕೆ. ಇಂತಹ ಸತ್ಯಗಳ ಮೇಲೆ ಕರ್ನಾಟಕದ ಘನತೆ, ವೈಭವತೆ ಉತ್ತಮ ಸಾರ್ವಜನಿಕ ಬದುಕು ನಿರ್ಮಾಣ ಮಾಡಬಹುದು. ಈ ಕಾವ್ಯಗಳ ಅಧ್ಯಯನದಿಂದ ಮೂಡಿಬಂದ ಫಲಿತಾಂಶಗಳು ಈ ಕೆಳಕಂಡಂತೆ ಇವೆ.

೧. ಸಾವಿರಾರು ವರ್ಷಗಳ ಹಿಂದೆ ರೂಪಿತಗೊಂಡ ಜನಪದ ಮಹಾಕಾವ್ಯಗಳಲ್ಲಿನ ತಳಸಮುದಾಯಗಳ ಹಸಿವು, ಬಡತನದ ದಾರುಣ್ಯತೆಗಳು ಇವತ್ತಿಗೂ ಅದೇ ಪರಿಸ್ಥಿತಿಯನ್ನು ನಮ್ಮ ಗ್ರಾಮಗಳು ಎದುರಿಸುತ್ತಿವೆ.

೨. ಧಾರ್ಮಿಕ ನೆಲೆಯಲ್ಲಿ ತಮ್ಮ ಇಷ್ಟ ದೈವವನ್ನು ಪೂಜಿಸುತ್ತಾ ಬಂದಿರುವ ತಳವರ್ಗದ ಸಮುದಾಯಗಳು ಇವತ್ತು ಆಧುನಿಕ ಸಮಾಜದಲ್ಲಿ ಭಿಕ್ಷೆಯನ್ನು ಬೇಡುತ್ತಾ, ತಮ್ಮ ಇಷ್ಟ ದೈವವನ್ನು ಆರಾಧಿಸುತ್ತಾ ತಮ್ಮ ಜೀವನವನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ.

೩. ಮೇಲ್ವರ್ಗದವರು ಆರಾಧಿಸುವ ದೈವಗಳು, ಕೆಳವರ್ಗದವರ ದೈವಗಳಾಗಿದ್ದು ಬಹುಸಂಖ್ಯೆಯ ಸಮುದಾಯಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳದ ದೆಸೆಯಲ್ಲಿ ಕೆಳವರ್ಗದ ದೈವಗಳು ಮೇಲ್ವರ್ಗದ ಆರಾಧನೆಗೆ ಕಾರಣವಾಗಿವೆ.

೪. ಜಗತ್ತಿನಲ್ಲಿ ನಡೆದ ಯುದ್ಧಗಳು ಜನಸಾಮಾನ್ಯರ ಬದುಕನ್ನು ಸರಿಪಡಿಸಲಿಲ್ಲ. ಇನ್ನಷ್ಟು ಅಪಾಯಕ್ಕೆ ಸಿಲುಕಿಸಿದವು. ಇವತ್ತಿನ ಯುದ್ಧಗಳು ಅದೇ ಪರಿಸ್ಥಿತಿಯನ್ನು ಉಂಟುಮಾಡುತ್ತಿವೆ.

೫. ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳು ಗ್ರಾಮಗಳ ಹಸಿವು, ಬಡತನವನ್ನು ನಿವಾರಣೆ ಮಾಡುವಲ್ಲಿ ಸೋತಿವೆ.

೬. ಆಧುನಿಕ ಸಮಾಜದಲ್ಲಿ ಯಂತ್ರಗಳು ಸಮಾಜದ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುತ್ತಿಲ್ಲ. ಮತ್ತಷ್ಟು ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗಿವೆ.

೭. ಪ್ರಜಾಪ್ರಭುತ್ವದಲ್ಲಿ ಜನಪರವಾದ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬಾರದೇ ನೆಲಕಚ್ಚುತ್ತಿವೆ.

೮. ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಿಗೊಂಡಿರುವ ಹಸಿವು, ಬಡತನದ ವಿಚಾರಗಳು ಇವತ್ತಿನ ಸಮಾಜದಲ್ಲಿ ದೊಡ್ಡ ಸಮಸ್ಯೆಯಾಗಿ ರೂಪುಗೊಂಡಿದೆ.

೯. ಹಿಂದೆ ನಮ್ಮ ಜನಪದರು ತಮ್ಮ ಬದುಕಿನ ಹಸಿವು ಬಡತನವನ್ನು ಮೌಖಿಕ ಸಾಹಿತ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ಆದರೆ ಆಧುನಿಕ ಸಾಹಿತ್ಯದಲ್ಲಿ ಈ ವಿವರಣೆಗಳು ಹೆಚ್ಚಾಗಿ ಕಂಡುಬರುತ್ತಿವೆ.

೧೦. ಚರಿತ್ರೆಯಲ್ಲಿ ರಾಜರ ವೈಭವದ ಚರಿತ್ರೆಯನ್ನು ಕಾಣುತ್ತೇವೆ. ಆದರೆ ತಳವರ್ಗಗಳ ಹಸಿವಿನ ಚರಿತ್ರೆ ಕಾಣದಾಗಿದೆ.

೧೧. ಹಿಂದೆ ತಳಸಮುದಾಯಗಳ ಹಸಿವು ಮತ್ತು ಬಡತನಕ್ಕೆ ಪ್ರಭುಗಳು ಕಾರಣವಾದರೆ, ಇವತ್ತು ಸಾಮ್ರಾಜ್ಯಶಾಹಿಗಳು ಕಾರಣವಾಗಿದ್ದಾರೆ.

೧೨. ತಳವರ್ಗದ ಮಹಾಕಾವ್ಯಗಳ ನಾಯಕರು ತಮ್ಮ ಸಮುದಾಯದ ಏಳ್ಗೆಯನ್ನು ಬಯಸಿದರೆ, ಇವತ್ತಿನ ನಾಯಕರು ತಮ್ಮ ಏಳ್ಗೆಯನ್ನು ಬಯಸುತ್ತಾರೆ. ಆಗಾಗಿ ಸಮಾಜದಲ್ಲಿ ಹಸಿವು ಮತ್ತು ಬಡತನದ ಸಂಖ್ಯೆ ಹೆಚ್ಚಾಗಿದೆ.

೧೩. ರಾಮಾಯಣ ಮತ್ತು ಮಹಾಭಾರತದ ಕಾಲದಿಂದಲೂ ತಳಸಮುದಾಯಗಳಬದುಕನ್ನು ಕಡೆಗಣಿಸಿರುವುದನ್ನು ಕಾಣುತ್ತೇವೆ. ತಳಸಮುದಾಯಗಳ ಶ್ರಮದ ಫಲದಿಂದ ಪ್ರಭುತ್ವಶಾಹಿಗಳು ತಮ್ಮ ಜೀವನವನ್ನು ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ.

೧೪. ಜಾಗತೀಕರಣ ನಮ್ಮ ದೇಶದ ಹಸಿವು, ಬಡತನವನ್ನು ನಿವಾರಿಸಲು ಸಾಧ್ಯವಾಗುತ್ತಿಲ್ಲ ಇನ್ನಷ್ಟು ಹೆಚ್ಚಿಸುತ್ತಿದೆ.

೧೫. ಮಹಾಕಾವ್ಯಗಳಲ್ಲಿ ಬರುವ ನಾಯಕರೆಲ್ಲ ಜಾತಿ, ಧರ್ಮ, ಮತಲಿಂಗ ತಾರತಮ್ಯವಿಲ್ಲದೆ. ಇಡೀ ಸಮುದಾಯಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟವರು.

೧೬. ಇವತ್ತಿನ ಜನನಾಯಕರೆಲ್ಲ ಸಮುದಾಯಗಳ ಮಧ್ಯೆ ಜಾತಿ, ಧರ್ಮ, ಮತ, ಲಿಂಗಗಳ ನಡುವೆ ತಾರತಮ್ಯ ಉಂಟುಮಾಡಿ ತಮ್ಮ ಏಳ್ಗೆಯ ಬಗ್ಗೆ ಗಮನ ಕೊಟ್ಟಿರುವುದು ಕಂಡು ಬರುತ್ತದೆ.

೧೭. ಜನಪದ ಮಹಾಕಾವ್ಯಗಳು ಸಮುದಾಯಗಳ ಪರನಿಲ್ಲುವಂತವು ಪ್ರಭುತ್ವಶಾಹಿ ನೆಲೆಯಲ್ಲಿ ರೂಪುಗೊಂಡ ಕಾವ್ಯಗಳು ತಮ್ಮ ಸ್ವಾರ್ಥ ನೆಲೆಯಲ್ಲಿ ನಿಲ್ಲವಂತವು.

೧೮. ಜನಪದ ಮಹಾಕಾವ್ಯಗಳು ಮಾನವೀಯ ನೆಲೆಯಲ್ಲಿ ನಿಂತರೆ ಶಿಷ್ಟ ಮಹಾಕಾವ್ಯಗಳು ಸ್ವಾರ್ಥದ ನೆಲೆಯಲ್ಲಿ ನಿಲ್ಲುತ್ತವೆ.

೧೯. ಆಧುನಿಕತೆಯ ಎಲ್ಲಾ ಸಮಸ್ಯೆಗಳಿಗೆ ನಮ್ಮ ಜನಪದ ಸಾಹಿತ್ಯದಲ್ಲಿ ಪರಿಹಾರವಿದೆ ಎಂಬ ನನ್ನ ನಂಬಿಕೆ.

೨೦. ಆಧುನಿಕತೆಯ ಸೃಷ್ಟಿಸುತ್ತಿರುವ ಸಮಸ್ಯೆಗಳಿಗೆ ಎಂದಿಗೂ ಪರಿಹಾರವಿಲ್ಲ ಆದರೆ ಜನಪದರ ಬದುಕಿನಲ್ಲಿ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿದೆ.

೨೧. ಆಧುನಿಕತೆಯು ಸೃಷ್ಟಿಸುವ ಒತ್ತಡಗಳಿಗೆ, ನಮ್ಮ ಮೌಖಿಕ ಸಾಹಿತ್ಯದಲ್ಲಿ ಪರಿಹಾರವಿದೆ.

೨೨. ಜನಪದ ಮಹಿಳೆ ತ್ಯಾಗಮಹಿ, ಬದುಕಿನಲ್ಲಿ ಆತ್ಮವಿಶ್ವಾಸವುಳ್ಳವಳಾಗಿದ್ದಾಳೆ. ಆಧುನಿಕ ಮಹಿಳೆ ಸ್ವಾರ್ಥಮಹಿ ಬದುಕಿಗೆ ವಿಮುಖಳಾದವಳು."[೨]

"ಸಾವಿರಾರು ವರ್ಷಗಳ ಹಿಂದೆ ಇದ್ದ ಕೆಳಜಾತಿಗಳ ಸಾಮಾಜಿಕ ಪರಿಸ್ಥಿತಿಗಳು ಇಂದಿಗೂ ಹಾಗೆ ಮುಂದುವರಿದುಕೊಂಡು ಹೋಗುತ್ತಿವೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಾಕಷ್ಟು ಈ ಸಮುದಾಯಗಳ ನಡುವೆ ಬದಲಾವಣೆಗಳಾಗಬೇಕಾಗಿದೆ. ಇಂದಿಗೂ ಈ ಸಮುದಾಯಗಳು ಶೈಕ್ಷಣಿಕವಾಗಿ ಹಿಂದಿಳಿದಿವೆ. ಕೆಳಜಾತಿಗಳ ಆರ್ಥಿಕ ಪರಿಸ್ಥಿತಿಗಳು ಅದಗೆಟ್ಟಿರುವುದಕ್ಕೆ ಹಲವಾರು ಸಮಸ್ಯೆಗಳಿಗೆ ಕಾರಣವಾಗಿವೆ."[೩] ಸರ್ಕಾರದಿಂದ ಇವರಿಗೆ ಸಿಗಬೇಕಾಗಿದ್ದ ಸೌಲಭ್ಯಗಳು ಇಂದು ಸಿಗುತ್ತಿಲ್ಲ. ಸಾಮಾಜಿಕವಾಗಿ ಸಾಕಷ್ಟು ಅವಮಾನಗಳನ್ನು ಇಂದಿಗೂ ಎದುರಿಸುತ್ತಿವೆ. ಜಾತಿ ರಾಜಕಾರಣದೊಳಗೆ ಇವರು ಬಲಿಪಶುಗಳಾಗಿದ್ದಾರೆ. ಈ ಸಮುದಾಯದಿಂದ ಬಂದ ರಾಜಕಾರಣಿಗಳು ಸ್ವಾರ್ಥಿಗಳಾಗಿಬಿಟ್ಟಿದ್ದಾರೆ. ತನ್ನ ಸಮುದಾಯದ ಅಭಿವೃದ್ಧಿಗಿಂತ ತನ್ನ ಅಭಿವೃದ್ಧಿಯ ಕಡೆಗೆ ಗಮನವಿಟ್ಟು ಸರ್ಕಾರಿ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಮಲ ಹೊರುವುದರ ಮೂಲಕ, ಶ್ರೀಮಂತರ ತೋಟಗಳಲ್ಲಿ ಜೀತಮಾಡುತ್ತಾ ಹೊಟ್ಟೆ, ಬಟ್ಟೆ ತುಂಬಿಸಿಕೊಳ್ಳುತ್ತಿರುವ ಕೆಳಜಾತಿಯವರು ಇವತ್ತಿಗೂ ವಾಸಿಸಲು ಮನೆಯಿಲ್ಲ. ಕುಡಿಯಲು ನೀರಿಲ್ಲ, ಇನ್ನುಳಿದ ಸೌಲಭ್ಯಗಳು ಕನಸಿನ ಮಾತಾಗಿದೆ. ಹಸಿವು, ಬಡತನದಿಂದ ನಮ್ಮ ಗ್ರಾಮಗಳು ಮುಕ್ತಗೊಂಡಾಗ ಮಾತ್ರ ಅದು ನಿಜವಾದ ಅಭಿವೃದ್ಧಿ, ಗಾಂಧಿ ಕಂಡ ಕನಸಿನ ಭಾರತವಾಗಿತ್ತದೆ. ಎಲ್ಲರ ಕನಸಿನ ಭಾರತವಾಗುತ್ತದೆ.

ಅಡಿ ಟಿಪ್ಪಣಿ

೧. ವೆಂಕಟೇಶ ಇಂದ್ವಾಡಿ, ಜನಪದ ಕಾವ್ಯ – ಸಾಂಸ್ಕೃತಿಕ ಮುಖಾಮುಖಿ, ಪು.ಸಂ–೧೪

೨. ನವಡ ಸುಭಾಶ್ಚಂದ್ರ(ಅನು), ಕ್ಲಾಸ, ಪು.ಸಂ–೧೦೬

೩. ನಾಗೇಗೌಡ.ಎಚ್.ಎಲ್., ಕಾಳಿಂಗರಾಯ ಮತ್ತು ಇತರ ಕಥನ ಕಾವ್ಯಗಳು ಪು.ಸಂ ೮೧–೮೪

❖❖❖

ಪರಾಮರ್ಶನ ಗ್ರಂಥಗಳು

೧. ಅಪ್ಪಗೆರೆ ತಿಮ್ಮರಾಜು, ಚೆಲ್ಲಿದರು ಮಲ್ಲಿಗೆಯ(ಸಂ), ಕನ್ನಡ ಪ್ರಕಾಶನ, ಬೆಂಗಳೂರು, ೨೦೦೯

೨. ಅಮೃತ ಸೋಮೇಶ್ವರ, ತುಳು ಪಾಡ್ದನ ಸಂಪುಟ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩. ಕ.ರಾ.ಕೃ., ಜನಪದ ಕಥನ ಗೀತೆಗಳು(ಸಂ), ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೫೮

೪. ಕನ್ನಡ ಜಾನಪದ ಸಾಹಿತ್ಯ ಜನಪದ ಕಲೆಗಳು, ಚೇತನ ಬುಕ್ ಹೌಸ್, ಮೈಸೂರು.

೫. ಕಾಡು ಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೬. ಕಾಳೇಗೌಡ ನಾಗವಾರ, ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೫

೭. ಕ್ಯಾತನಹಳ್ಳಿ ರಾಮಣ್ಣ, ಫ್ಲಿಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಚೇತನ ಬುಕ್ ಹೌಸ್, ಮೈಸೂರು-೨೪

೮. ಕ್ಯಾತನಹಳ್ಳಿ ರಾಮಣ್ಣ, ಜಾನಪದ ಕ್ಷೇತ್ರ ಕಾರ್ಯದ ಹಾದಿಯಲ್ಲಿ, ಚೇತನ ಬುಕ್ ಹೌಸ್, ಮೈಸೂರು.

೯. ಗದ್ದಗೀ ಮಠ, ಕನ್ನಡ ಜಾನಪದ ಗೀತೆಗಳು(ಸಂ), ಧಾರವಾಡ ವಿಶ್ವವಿದ್ಯಾಲಯ, ೧೯೬೩

೧೦. ಗಿರಡಿ ಗೋವಿಂದರಾಜು, ಜನಪದ ಕಾವ್ಯ(ಸಂ), ಧಾರವಾಡ ವಿಶ್ವವಿದ್ಯಾಲಯ, ೧೯೭೨

೧೧. ಗುರುಲಿಂಗಯ್ಯ.ಎಂ., ಕರ್ನಾಟಕದ ಗೊಲ್ಲ ಸಮುದಾಯ, ಸಮಾಜೋ-ಸಾಂಸ್ಕೃತಿಕ ಅಧ್ಯಯನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.

೧೨. ಗುರುಮೂರ್ತಿ. ಕೆ.ಜಿ., ಕರ್ನಾಟಕದ ಜಾನಪದ ಹಬ್ಬಗಳು ಮತ್ತು ಅವುಗಳ ಸಾಂಸ್ಕೃತೀಕರಣ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೧೩. ಚಕ್ಕೆರೆ ಶಿವಶಂಕರ್, ಉತ್ತರ ಕರ್ನಾಟಕದ ಜನಪದ ಕಥೆಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೧೪. ಚಂದ್ರಶೇಖರ ಕಂಬಾರ, ಮತಿಘಟ್ಟ ಕೃಷ್ಣಮೂರ್ತಿ(ಸಂ), ಜನಪದ ಸಾಹಿತ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೫. ಚಂದ್ರಶೇಖರ ಕಂಬಾರ, ನಮ್ಮ ಜಾನಪದ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೦

೧೬. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ (ಸಂ-೧, ೨), ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೭. ಚೆನ್ನಣ್ಣ ವಾಲಿಕಾರ(ಸಂ), ಗುಲ್ಬರ್ಗ ಜಿಲ್ಲೆಯ ಮೊಹರಂ ಪದಗಳು, ಮೈಸೂರು, ೧೯೮೩

೧೮. ಚಕ್ಕೆರೆ ಶಿವಶಂಕರ್, ಜಾನಪದ ಪ್ರವೇಶ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೯. ಚಕ್ಕೆರೆ ಶಿವಶಂಕರ್, ಜಾನಪದ ತಿಳುವಳಿಕೆ, ಸಾಗರ್ ಪ್ರಕಾಶನ, ಬೆಂಗಳೂರು.

೨೦. ಚಿದಾನಂದ ಮೂರ್ತಿ.ಎಂ.,(ಸಂ), ಗ್ರಾಮೀಣ, ಬಾಪ್ಕೋ ಪ್ರಕಾಶನ, ಬೆಂಗಳೂರು, ೧೯೭೬

೨೧. ಚಿನ್ನಸ್ವಾಮಿ, ನಮ್ಮ ಗ್ರಾಮಗಳು ಅಂದು-ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಚಂದ್ರ ಕಾಳೇನಹಳ್ಳಿ, ಮಂಟೇಸ್ವಾಮಿ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨೩. ಚಿಕ್ಕಣ್ಣ(ಸಂ), ವೀರ ಜುಂಜಪ್ಪ ಸಮಗ್ರ ಕಥಾವಳಿ, ಯಣ್ಣ ಕಡ್ಲಿ, ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ತುಮಕೂರು.

೨೪. ಚೇನಹಳ್ಳಿ ಸಿದ್ದಲಿಂಗಪ್ಪ(ಸಂ), ಸ್ತ್ರೀವಾದಿ ಜನಪದ ಕಥೆಗಳು, ಪ್ರೇಮ ಪ್ರಕಾಶನ, ದಾವಣಗೆರೆ.

೨೫. ಜಯಪ್ಪಗೌಡ.ಡಿ.ಎಲ್., ನವಭಾರತ ಬುನಾದಿ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫

೨೬. ಜಯಲಕ್ಷ್ಮಿ ಸಿತಾಪುರ, ನಮ್ಮ ಸುತ್ತಿನ ಜನಪದ ಕಥನ ಗೀತೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

೨೭. ಜವರೇಗೌಡ.ದೇ.,(ಸಂ), ಜಾನಪದ ಅಧ್ಯಯನ,ಮೈಸೂರು, ೧೯೭೬

೨೮. ತಪಸ್ಸಿಕುಮಾರ್.ನಂ., ಜಾನಪದ ಎಂದರೇನು? ಮೈಸೂರು.

೨೯. ನಾವಡ.ಎ.ವಿ., ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ನಾಗೇಗೌಡ.ಎಚ್.ಎಲ್(ಸಂ), ಚಾರಿತ್ರಿಕ ಜನಪದ ಕಥನ ಕಾವ್ಯಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೩೧. ನಾಗೇಗೌಡ.ಎಚ್.ಎಲ್., ಪದವೇ ನಮ್ಮ ಎದೆಯಲ್ಲಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೨. ನಾಗೇಗೌಡ.ಎಚ್.ಎಲ್., ಲಿಂಗಯ್ಯ.ಡಿ(ಸಂ), ಕಾಳಿಂಗರಾಯ ಮತ್ತು ಇತರ ಕಥನ ಕಾವ್ಯಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೩೨. ನಾಗೇಗೌಡ.ಎಚ್.ಎಲ್.,ಚಕ್ಕೆರೆ ಶಿವಶಂಕರ್(ಸಂ), ಕನ್ನಡ ಜನಪದ ಕಥನ ಕಾವ್ಯ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೩೪. ನಾಗೇಗೌಡ.ಎಚ್.ಎಲ್(ಸಂ), ಕನ್ನಡ ಜನಪದ ಕಥೆಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೩೫. ತಿಪ್ಪೇರುದ್ರ ಸ್ವಾಮಿ.ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

೩೬. ನಾಗರಾಜ.ಡಿ.ಆರ್., ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಸಾಗರ, ಶಿವಮೊಗ್ಗ.

೩೭. ನಿಂಗಣ್ಣ ಸಣ್ಣಕ್ಕಿ(ಸಂ), ಕವಿ ಬಾಲಗೋಪಾಳ ಲಾವಣಿಗಳು, ಪ್ರಸಾರಾಂಗ, ಧಾರವಾಡ ವಿಶ್ವವಿದ್ಯಾಲಯ, ಧಾರವಾಡ. ೧೯೭೪

೩೮. ಪರಮಶಿವಯ್ಯ.ಜಿ.ಶಂ(ಸಂ), ಕನ್ನಡ ಜನಪದ ಕಥೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦

೩೯. ಪರಮಶಿವಯ್ಯ.ಜಿ.ಶಂ(ಸಂ), ಕನ್ನಡದ ಒಗಟುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೭

೪೦. ಪರಮಶಿವಯ್ಯ.ಜಿ.ಶಂ(ಸಂ), ಜಾನಪದ ಖಂಡ ಕಾವ್ಯಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೮

೪೧. ಪರಮಶಿವಯ್ಯ.ಜಿ.ಶಂ(ಸಂ), ಜಾನಪದ ಕಾವ್ಯ ಕಥೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

೪೨. ಪರಮಶಿವಯ್ಯ.ಜಿ.ಶಂ., ದಕ್ಷಿಣ ಕರ್ನಾಟಕದ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

೪೩. ಪರಮಶಿವಯ್ಯ.ಜಿ.ಶಂ(ಸಂ), ದೊಂಬಿದಾಸರ ಲಾವಣಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

೪೪. ಪರಮಶಿವಯ್ಯ.ಜಿ.ಶಂ., ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬

೪೫. ಪರಮಶಿವಯ್ಯ.ಜಿ.ಶಂ., ಉತ್ತರ ಕರ್ನಾಟಕದ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೬. ಫೆಡರಿಕ್ ಎಂಗೆಲ್ಸ್, ಕುಟುಂಬ, ಖಾಸಗಿ ಆಸ್ತಿ, ಹಾಗೂ ರಾಜ್ಯ ಇವುಗಳ ಉಗಮ, ಪ್ರಗತಿ ಪ್ರಕಾಶನ, ಮಾಸ್ಕೋ. ೧೯೮೦

೪೭. ಪೀಟರ್ ಜೆ. ಕ್ಲಾಸ್(ಮೂಲ), ನಾವಡ ಶುಭಾಶ್ಚಂದ್ರ.ಎ.ವಿ(ಅನು), ತುಳುವ ದರ್ಶನ, ಪ್ರಾದೇಶಿಕ ವ್ಯಾಸಂಗ, ಕುಂದಾಪುರ

೪೮. ಬೋರಲಿಂಗಯ್ಯ.ಹಿ.ಚಿ(ಸಂ), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೯. ಬಿಪಿನ್ ಚಂದ್ರ(ಮೂಲ), ಗೋಪಾಲರಾವ್.ಎಚ್.ಎಸ್(ಅನು), ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೦. ಮರುಳಸಿದ್ದಪ್ಪ.ಕೆ(ಸಂ), ಲಾವಣಿಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೫೧. ಮಂಜುನಾಥ ಬೇವಿನಕಟ್ಟಿ, ಮೈಲಾರಿ ಲಿಂಗ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫೨. ಮಲ್ಲಿಕಾರ್ಜುನ.ರೆ.ಲಠ್ಠೆ(ಸಂ), ಜಾನಪದ ಕಾವ್ಯದಲ್ಲಿ ಜೀವನ ಧರ್ಮ, ಪ್ರಸಾರಾಂಗ, ಧಾರವಾಡ ವಿಶ್ವವಿದ್ಯಾಲಯ, ಧಾರವಾಡ, ೧೯೭೦

೫೩. ಮುಜಾಫರ್ ಅಸ್ಸಾದಿ, ಇನ್ನೊಂದು ಮುಖ, ಕೆ. ಎಸ್. ಮುದ್ದಪ್ಪ, ಸ್ಮಾರಕ ಟ್ರಸ್ಟ್, ಬೆಂಗಳೂರು.

೫೪. ಮಾಸ್ತಿ ವೆಂಕಟೇಶ್ ಅಯ್ಯಂಗಾರ್(ಸಂ), ಕರ್ನಾಟಕ ಜನಪದ ಜೀವನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೩೭

೫೫. ಮೊಗಳ್ಳಿ ಗಣೇಶ್, ಜಾಗತೀಕರಣ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫೬. ರಾಜೇಂದ್ರ.ಡಿ.ಕೆ(ಸಂ), ಜಾನಪದ ಸಮೀಕ್ಷೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦

೫೭. ರಾಜಶೇಖರ.ಪಿ.ಕೆ., ಮಲೆ ಮಾದೇಶ್ವರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೫೮. ರಾಮಚಂದ್ರ ಗುಹ(ಮೂಲ), ರಂಗನಾಥ ರಾವ್.ಜಿ.ಎನ್(ಅನು), ಬಾಪೂ ನಂತರದ ಭಾರತ(ಸಂ–೧), ವಸಂತ ಪ್ರಕಾಶನ, ಬೆಂಗಳೂರು.

೫೯. ರಾಮಚಂದ್ರೇಗೌಡ.ಹಿ.ರೆ., ಜನಪದ ಧರ್ಮ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೬೦. ರಾಮಚಂದ್ರೇಗೌಡ.ಹಿ.ರೆ., ಜನಪದ ಸಂಸ್ಕೃತಿ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೬೧. ಲಿಂಗಯ್ಯ.ಡಿ., ಬಯಲು ಸೀಮೆಯ ಜನಪದ ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳುರು.

೬೨. ಲಿಂಗಣ್ಣ.ಸಿಂ.ಪಿ., ಉತ್ತರ ಕರ್ನಾಟಕದ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ.

೬೩. ವಿವೇಕ ರೈ, ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೪. ವಿಷಕಂಠ ರಾವ್.ಎನ್., ಸ್ವಾತಂತ್ರ್ಯ ಸಮರದ ಲಾವಣಿಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೬೫. ವೆಂಕಟರಾಜು ಪುಣಿಂಚಿತ್ತಾಯ, ತುಳು ನಡೆನುಡಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೬೬. ವೆಂಕಟೇಶ ಇಂದ್ವಾಡಿ(ಸಂ), ಸಿರಿ ಜನಪದ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೬೭. ಶಂಕರನಾರಾಯಣ.ತಿ.ನಂ.,ಜಾನಪದ ಸಮೀಕ್ಷೆ ವಿಶ್ಲೇಷಣೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬೮. ಶಾರದಾ.ಬಿ.ಎನ್., ಸಮಾಜವಾದವೇ ಪರ್ಯಾಯ, ಸಂಬುದ್ಧ ಪ್ರಕಾಶನ, ಬೆಂಗಳೂರು, ೨೦೦೪

೬೯. ಶಿವರಾಮ ಕಾರಂತ(ಸಂ), ಜಾನಪದ ಗೀತೆಗೆಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬

೭೦. ಶಿವರುದ್ರಪ್ಪ.ಜಿ.ಎಸ್(ಸಂ), ಕರ್ನಾಟಕ ಜಾನಪದ, ಕರ್ನಾಟಕ ಜಾನಪದ ಪರಿಷತ್, ಬೆಂಗಳೂರು, ೧೯೮೩

೭೧. ಶ್ರೀಮತಿ.ಎಚ್.ಎಸ್., ಪ್ರಾಚೀನ ಭಾರತದ ಚರಿತ್ರೆ, ಬೆಳ್ಳಿ ಚುಕ್ಕಿ ಪುಸ್ತಕಾಲಯ, ೧೯೯೮

೭೨. ಶ್ರೀಕಂಠ ಕೂಡ್ಲಿಗೆ(ಸಂ), ಜಾನಪದದ ವಿವಿಧ ಮುಖಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೭೩. ಸನ್ ಪ್ರಭಾ(ಸಂ), ಜಾನಪದ ಗೀತೆಗಳು, ಅಂಕಿತ ಪ್ರಕಾಶನ, ಬೆಂಗಳೂರು.

೭೪. ಸ್ವಾಮಿ.ಬಿ.ಎಸ್., ಕನ್ನಡ ಜನಪದ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು.

೭೫. ಸೋಮಶೇಖರ್ ಇಮ್ರಾಪುರ(ಸಂ), ಜಾನಪದ ವಿಜ್ಞಾನ, ಪ್ರಸಾರಾಂಗ, ಧಾರವಾಡ ವಿಶ್ವವಿದ್ಯಾನಿಲಯ, ಧಾರವಾಡ, ೧೯೭೯

೭೬. ಸಿದ್ಧಲಿಂಗಯ್ಯ, ಗ್ರಾಮ ದೇವತೆಗಳು, ಅಂಕಿತ ಪ್ರಕಾಶನ, ಬೆಂಗಳೂರು.

೭೭. ಸಿಂಪಿ ಲಿಂಗಣ್ಣ(ಸಂ), ಜಾನಪದ ಸಾಹಿತ್ಯ (ಸಂ.) ಧಾರವಾಡ ವಿ. ವಿ., ೧೯೨೮

೭೮. ಸಿಂಪಿ ಲಿಂಗಣ(ಸಂ), ಜೀವನ ಸಂಗಾತಿ ಲಾವಣಿಗಳು, ಪ್ರಸಾರಾಂಗ, ಧಾರವಾಡ ವಿಶ್ವವಿದ್ಯಾನಿಲಯ, ಧಾರವಾಡ, ೧೯೩೩

೭೯. ಹೆಗಡೆ.ಎಲ್.ಆರ್(ಸಂ), ತಿಮ್ಮಕ್ಕನ ಪದಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೮೦. ಹೆಗಡೆ.ಎಲ್.ಆರ್(ಸಂ), ಗುಮ್ಮಟ ಪದಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮

೮೧. ಹೆಬ್ಬಾಲೆ ಕೆ. ನಾಗೇಶ್, ಅರಳವ್ವ, ರುಚಿರ ಪ್ರಕಾಶನ, ಹೊಸಪೇಟೆ, ಬಳ್ಳಾರಿ ಜಿಲ್ಲೆ

ಇಂಗ್ಲೀಷ್ ಪರಾಮರ್ಶನ ಗ್ರಂಥಗಳು

೧. Albro.M., Globalization Knowledge & Society, London, 1990

೨. Arnason.J.P., Nationalism, Golobalisation & Modernity Theory, Culture & Society, 1990.

೩. Chandrashekar Kambara, Original & Development of Kannada Folk Theatre

೪. Chase Dunn, L. Bererly Huills, Socialist Station the world System, L.A. Stage, 1981

೫. Durkheim E. Socialism, Newyork, Collier Books, 1962\

೬. D. D. Kosambi, An Intorduction to Standy of Indian History, Bombay, Bombay, 1956

೭. D. D. Kosambi, 1976 The Culture & Civilization, New Delhi

೮. D. D. Kosabmi, Myth and Reakity, Bombay, 1956

೯. E.V.Ramasami, Politics God Calcutta and Man Periyar Madras, 1993

೧೦. Featherstone M. Londone & Newburg Park, Global Village, Travelling, Global Culture & Identity, Calif Stage, 1990

೧೧. Nirmal Kumar Bose, Cultural Anthrology New Delhi, 1961

೧೨. Parvathamma, And Religion New Delhi, 1961

೧೩. Peasants the Economists 14 December, 'Economist', 1991

೧೪. Sankar Sen Guptha, Folklore Research in India, 1965

೧೫. Soltax (E), Horizon of Anthropology, Horizons London, 1965

೧೬. Saki, Making History, Vimukthi Prakashana, Shvamogga, 1998

೧೭. The Capitalist Revolution, Newyork Basic Books, Berger P. L., 1986

ಪತ್ರಿಕೆಗಳು

೧. ಕರ್ನಾಟಕ ಭಾರತಿ, ಧಾರವಾಡ

೨. ಜಾನಪದ ಗಂಗೋತ್ರಿ, ಬೆಂಗಳೂರು

೩. ಜಾನಪದ ಜಗತ್ತು, ಬೆಂಗಳೂರು

೪. ಜಾನಪದ, ಮೈಸೂರು

ಕನ್ನಡ ವಿಶ್ವವಿದ್ಯಾಲಯ

ಶಾಸನ ಅಧ್ಯಯನ ವಿಭಾಗ